
ಸಂವಾದ



ಸಂವಾದ ಪ್ರಕಾಶನ
ಮಲ್ಲಾಡಿಹಳ್ಳಿ, ಚಿತ್ರದುರ್ಗ-೫೭೭ ೫[illegible]೧

ಕೃತಜ್ಞತೆಗಳು

ಸಂವಾದದ ಈ ಕಾವ್ಯ ವಿಶೇಷಾಂಕದ ಮುದ್ರಣದ ವೆಚ್ಚಕ್ಕಾಗಿ ಹೊಳಲ್ಕೆರೆ ತಾಲ್ಲೂಕಿನ ಶ್ರೀ ಜಿ. ಹೆಚ್. ನಂಜುಂಡಪ್ಪ ಮತ್ತು ಸಹೋದರರು ಅವರ ತಂದೆ ದಿ॥ ಹನುಮಲಿ ಗೋವಿಂದಪ್ಪಗೌಡರ ಹೆಸರಿನಲ್ಲಿ ರೂ. 5,000/- ಹಣದ ಸಹಾಯ ನೀಡಿದ್ದಾರೆ. ನಾವು, ಸಂವಾದದ ಗೆಳೆಯರು, ಈ ಸಹೃದಯ ಸಹೋದರರಿಗೆ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ.

ಸಂವಾದ

೩೫-೩೬

ಕಾವ್ಯ ವಿಶೇಷಾಂಕ

ಸಂವಾದ ಪ್ರಕಾಶನ ಮಲ್ಲಾಡಿಹಳ್ಳಿ
ಚಿತ್ರದುರ್ಗ ಜಿಲ್ಲೆ ೫೭೭ ೫೩೧

ಸಂವಾದ

ಸಾಹಿತ್ಯಕ ಸಾಂಸ್ಕೃತಿಕ ಸಂಕಲನ

- ನಮ್ಮ ಸಾಹಿತ್ಯ ಸಾಂಸ್ಕೃತಿಕ ಬದುಕಿನ ಸ್ಪಂದನಕ್ಕೆ
- ವಸ್ತುನಿಷ್ಠ ಸತ್ಯದ ಆವಿಷ್ಕಾರಕ್ಕೆ

ಸಂಪಾದಕ

ರಾಘವೇಂದ್ರ ಪಾಟೀಲ

ಮುಖಪುಟ : ಶಂಕರ ಪಾಟೀಲ

ಚಂದಾವಿವರ :

ಆಜೀವ ಚಂದಾ : ರೂ. ೪೦೦/-(ವ್ಯಕ್ತಿಗಳಿಗೆ); ರೂ. ೫೦೦/-(ಸಂಸ್ಥೆಗಳಿಗೆ)

ವಾರ್ಷಿಕ ಚಂದಾ : ರೂ. ೪೦/- (ವ್ಯಕ್ತಿಗಳಿಗೆ); ರೂ. ೫೦/- (ಸಂಸ್ಥೆಗಳಿಗೆ)

ಮುದ್ರಣ, ಪ್ರಕಾಶನ ಹಾಗೂ ಸಂಪಾದನೆ :

ಸಂವಾದ ಪ್ರಕಾಶನ ಮಲ್ಲಾಡಿಹಳ್ಳಿ ಚಿತ್ರದುರ್ಗ ಜಿಲ್ಲೆ ೫೭೭ ೫೩೧

ಲಕ್ಷ್ಮಿ ಮುದ್ರಣಾಲಯ

ಚಾಮರಾಜ ಪೇಟೆ

ಬೆಂಗಳೂರು-೧೮

ದೂರವಾಣಿ : ೬೬ ೧೩ ೧೨೩

ಸಂಪಾದಕನ ಟಿಪ್ಪಣಿಗಳು.....

ಸಂವಾದದ ಈ ಸಂಚಿಕೆ ನಿಮ್ಮ ತಾಳ್ಮೆಯನ್ನು ಪರೀಕ್ಷಿಸುವಷ್ಟರಮಟ್ಟಿಗೆ ತಡವಾಗಿ ಬರುತ್ತಿರುವುದಕ್ಕೆ ದಯವಿಟ್ಟು ನನ್ನನ್ನು ಕ್ಷಮಿಸಿರಿ. ಹೀಗೆ ತಡವಾದುದಕ್ಕೆ ನನ್ನ ವೈಯುಕ್ತಿಕ ಜವಾಬ್ದಾರಿಯನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಇದು ನನ್ನೊಬ್ಬನಿಂದಲೇ ಆದದ್ದಲ್ಲ. ನನಗೊಬ್ಬನಿಗೇ ಸಂವಾದವನ್ನು ಇಷ್ಟು ತಡಮಾಡುವ ಶಕ್ತಿ ಇಲ್ಲ. ನನ್ನ ಶಕ್ತಿಯೊಂದಿಗೆ ನಮ್ಮ ಲೇಖಕ ಮಿತ್ರರ ಶಕ್ತಿಯೂ ಸೇರಿದೆ. ಒಂದಿಷ್ಟು ಜನ ನಮ್ಮ ಗೆಳೆಯರು ಕಳಿಸಲಿದ್ದ ಲೇಖನಕ್ಕಾಗಿ ಕಾಯಬೇಕಾಯಿತು. ಅವರು ಬರೆಯಲಿದ್ದದ್ದು ಮುಖ್ಯ ವಿಷಯಗಳ ಬಗೆಗಾದ್ದರಿಂದ ಮತ್ತು ಸಂಚಿಕೆಯು, ಈ ವಿಷಯಗಳನ್ನು ಕುರಿತ ಲೇಖನಗಳಿಲ್ಲದಿದ್ದರೆ, ಅಪೂರ್ಣವಾಗುತ್ತದೆನ್ನುವ ಭಾವನೆಯಲ್ಲಿ ಈ ಲೇಖನಗಳಿಗಾಗಿ ಕಾಯಬೇಕಾಯಿತು. ಇದರಿಂದ ಸಂಚಿಕೆಯು ಹೊರಬರುವಲ್ಲಿ ಕನಿಷ್ಟ ಮೂರು ತಿಂಗಳಷ್ಟಾದರೂ ತಡವಾಗಿದೆ. ಅಂತೂ ಈಗ ಪ್ರಕಟಗೊಂಡು ನಿಮ್ಮ ಕೈಸೇರುತ್ತಿದೆ.

ಈ 'ನಿಯತಕಾಲಿಕೆ'ಯ ಬಗೆಗೆ ಒಂದೆರಡು ಮಾತು ಬೆಳೆಸಬಹುದೇನೋ. ಸಾಹಿತ್ಯಕ 'ಲಿಟಲ್ ಮೆಗಝಿನ್' ಒಳಗೊಂಡಿರುವ ಪ್ರಮುಖ ತುಮುಲ ನಿಯಮಿತತನದ ಬಗೆಗೇ ಇದೆ. ಬಂದ ಲೇಖನಗಳನ್ನು ಹೊಂದಿಸಿ ಸಮಯಕ್ಕೆ ಸರಿಯಾಗಿ ಮೂರುಮೊಳ ನೇಯುವದು ಒಂದು ರೀತಿ. ಇನ್ನೊಂದು ರೀತಿಯೆಂದರೆ ಒಂದು ಸಂಚಿಕೆಯನ್ನು ಸಂಪೂರ್ಣವಾಗಿ ಪರಿಭಾವಿಸಿ ಅದರಲ್ಲಿ ಒಳಗೊಳ್ಳಬೇಕಾದ ವಿಷಯಗಳನ್ನು ಗುರುತಿಸಿಕೊಂಡು ಆ ವಿಷಯಗಳ ಬಗೆಗೆ ಹೊಸತನ್ನು ಹೇಳಬಲ್ಲವರಿಂದ ಬರೆಸಿದ ಲೇಖನಗಳನ್ನು ಒಳಗೊಳ್ಳುವದು. ಮೊದಲನೆಯ ರೀತಿ ಸಂಚಿಕೆಗಳ ಗುಣವನ್ನು ಬಾಧಿಸುವಂತಹದಾಗಿದ್ದು ಸಂಪಾದಕನಿಗೆ ಅನಾಕರ್ಷಕವಾದದ್ದು. ಎರಡನೆಯ ರೀತಿ ಆಕರ್ಷಕವಾದದ್ದು, ಸಂಚಿಕೆಗಳ ಗುಣಮಟ್ಟದ ದೃಷ್ಟಿಯಿಂದ ಹೆಚ್ಚು ಉತ್ತಮವಾದುದೂ ಆಗಿರುತ್ತದಾದರೂ ಪ್ರಕಟಣೆಯ ನಿಯಮಿತತನವನ್ನು ಬಾಧಿಸುವಂತಹದು. ಯಾವದೇ ಸಾಹಿತ್ಯಕ ಪತ್ರಿಕೆಯೂ ಇವೆರಡೂ ರೀತಿಗಳನ್ನು ಅವಲಂಬಿಸಬೇಕಾಗುತ್ತದೆ. ಆದರೆ ಗುಣಮಟ್ಟದ ಬಗೆಗೆ ಹೊಂದಾಣಿಕೆ ಮಾಡಿಕೊಳ್ಳದೇ ಮೊದಲಿನ ರೀತಿ ಸಾಧ್ಯವಾಗಬೇಕು ಮತ್ತು ನಿಯಮಿತತನಕ್ಕೆ ಬಾಧೆ ಬರದಂತೆ ಎರಡನೆಯ ರೀತಿ ಸಾಧ್ಯವಾಗಬೇಕೆನ್ನುವದು ಆದರ್ಶವಾದ ಕಲ್ಪನೆ. ಸಂವಾದ ಇಂತಹದನ್ನು ಆಶಿಸುತ್ತದೆ. ಮೊದಲಿನ ರೀತಿಯ ಬಗೆಗಿನ ಇಂತಹ ಆಸೆ ಆಗಾಗ ಕೈಗೂಡುತ್ತ ಸಂವಾದಕ್ಕೆ ಲಾಭವಾಗಿದೆ. ಆದರೆ ಎರಡನೆಯ ರೀತಿಯ ಬಗೆಗಿನ ಆಸೆ ನಮ್ಮ ಕೈಗೂಡುತ್ತಿಲ್ಲ. ಇದಕ್ಕೆ ಕಾರಣವೆಂದರೆ ನಾವು-ಅಂದರೆ ಲೇಖಕರು- ಇಂಥ ಮಾಧ್ಯಮದ ಬಗೆಗೆ ಹೆಚ್ಚಿನ ನಂಬಿಕೆಯನ್ನು ಹೊಂದದಿರುವದು. ಈ ಲಿಟಲ್‌ಮೆಗಝಿನ್‌ಗಳು ಚಿಂತನೆಯ ಅನುಭವಮಂಟಪಗಳಾಗಲು ಸಾಧ್ಯವಾಗದಿರುವುದು ಇಂಥ ನಿರಾಸಕ್ತಿಯ ಮೂಲಕವೇ. ಇಂಥ ಸಂದರ್ಭದಲ್ಲಿ ಸಂವಾದದ ಹಾರೈಕೆಗಳು ಇಷ್ಟೇ- ಕನ್ನಡದ ಲೇಖಕರೆಲ್ಲ ಭಾಗವಹಿಸುತ್ತ ಉತ್ಕೃಷ್ಟವಾದ ಸಂವಾದ ಏರ್ಪಡುತ್ತ

ಜೀವಂತವಾದ ಚಿಂತನೆಗಳು ಮೂಡಿಬರಲಿ ಮತ್ತು ಇಂಥ ಚಿಂತನೆಗಳು ಇಲೆಕ್ಟ್ರಾನಿಕ್ ಮೀಡಿಯಗಳ ಸದ್ದು ಗದ್ದಲಗಳ ನಡುವೆಯೂ ನಮ್ಮ ಸಮಾಜದ ಮನಸ್ಸನ್ನು ತಲುಪಲು ಸಾಧ್ಯವಾಗಲಿ ಎಂದು.

●

ಸಂವಾದದ ಈ ವಿಶೇಷ ಸಂಚಿಕೆ ಕಾವ್ಯವನ್ನು ಕುರಿತಾದುದು. ಈ ಸಂಚಿಕೆಯಲ್ಲಿ ಇತ್ತೀಚಿನ ಕನ್ನಡ ಕವಿತೆಯ ಒಂದು ವರ್ಣಪಟ್ಟಿಕೆ (spectrum) ಯಲ್ಲದೆ ಕಾವ್ಯ ಮೀಮಾಂಸೆ, ವಿಮರ್ಶೆಗಳು, ಕಾವ್ಯದ ಬಗೆಗಿನ ರಸಿಕರ ಸ್ಪಂದನೆಗಳು, ಅಲ್ಲದೆ 'ಇಂದಿನ ಸಂದರ್ಭದಲ್ಲಿ' ಕವಿಗಳು ತಮ್ಮ ಸೃಜನಶೀಲನೆಲೆಯಲ್ಲಿ ಎದುರಿಸುವ ಸವಾಲುಗಳನ್ನು ಕುರಿತಾದ ವೈವಿಧ್ಯಮಯವಾದ ಟಿಪ್ಪಣಿಗಳಿವೆ. ಇವು ಕವಿತೆಯನ್ನು ಓದಿ ಆನಂದಿಸುವ ಬಗೆಗೆ, ಕವಿತೆಯ ವ್ಯಕ್ತಿತ್ವವನ್ನು ಪರಿಭಾವಿಸುವ ಬಗೆಗೆ ಪ್ರಯೋಜನಶೀಲವಾದ ಭೂಮಿಕೆಯೊಂದನ್ನು ನಿರ್ಮಿಸುತ್ತವೆ ಎಂದು ನಂಬಿದ್ದೇನೆ. ಇವುಗಳ ಮೂಲಕ ಜೀವನವನ್ನು ಪರಿಭಾವಿಸುವ ನಮ್ಮ ದೃಷ್ಟಿಕೋನದಲ್ಲಿ ಕೂಡ ಗುಣಾತ್ಮಕವಾದ ವಿಕಾಸ ಸಾಧ್ಯವಾಗಬೇಕು. ಇವೆಲ್ಲವುಗಳು ಮೂಡಿಸುವ 'ನಾವೆ'ಯು ಬರೀ ಕಾವ್ಯಲೋಕದತ್ತಲಿನ ಪ್ರಯಾಣಕ್ಕಲ್ಲ-ಬದುಕಿನ ಸಮಗ್ರತೆಯ ದರ್ಶನದತ್ತಲಿನ ಪ್ರಯಾಣಕ್ಕೆ. ಕಾವ್ಯದ ಏಣಿಯ ಒಂದು ತುದಿ ನೆಲಕ್ಕೆ ಊರಿಕೊಂಡಿದ್ದರೆ ಇನ್ನೊಂದು ತುದಿ ಕೈಲಾಸದಲ್ಲಿನ ಮುಕ್ಕಣ್ಣನನ್ನು ಮುಟ್ಟಿರುತ್ತದೆ. ಒಂದು ಮಿತಿಯಲ್ಲಿ ಇಂಥ ಏಣಿಯೊಂದು ಈ ಕಾವ್ಯಸಂವಾದದಲ್ಲಿ ನಿರ್ಮಾಣಗೊಂಡಿದೆ ಎನ್ನುವದು ನಮ್ಮ ನಂಬಿಕೆ.

●

ಕವಿ ಪು.ತಿ.ನ. ಮತ್ತು ಪ್ರೊ॥ ಅ.ನ.ಮೂರ್ತಿರಾಯರಿಗೆ ಕರ್ನಾಟಕದ ಅತ್ಯುನ್ನತ ಸಾಹಿತ್ಯ ಪುರಸ್ಕಾರವಾದ ಪಂಪ ಪ್ರಶಸ್ತಿ ದೊರೆತಿದೆ. ಇದಲ್ಲದೆ ಪು.ತಿ.ನ. ಅವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಫೆಲೋಶಿಪ್‌ನ ಗೌರವ ಲಭ್ಯವಾಗಿದೆ. ಡಾ॥ ಯು.ಆರ್. ಅನಂತಮೂರ್ತಿಯವರಿ ಮಾಸ್ತಿ ಸಾಹಿತ್ಯ ಪ್ರಶಸ್ತಿ ಮತ್ತು ಪಿ.ಲಂಕೇಶ್ ಅವರಿಗೆ ಕಾರಂತ ಪ್ರಶಸ್ತಿ ದೊರೆತಿವೆ. ಇಷ್ಟೆಲ್ಲ ಸಿಹಿ ಘಟನೆಗಳ ಬಗೆಗೆ ಸಂವಾದವು ಸಂತೋಷ ಪಡುತ್ತ ಈ ಎಲ್ಲ ಹಿರಿಯಸಾಹಿತಿಗಳಿಗೆ ಅಭಿನಂದನೆಗಳನ್ನು ಸೂಚಿಸುತ್ತದೆ.

●

ಸಂವಾದದ ಈ ವಿಶೇಷಾಂಕದೊಂದಿಗೆ ಆರನೆಯ ಸಂಪುಟ ಪೂರ್ಣಗೊಳ್ಳುತ್ತಿದೆ. ಈ ಸಂಚಿಕೆಯೊಂದಿಗೆ ವಾರ್ಷಿಕ ಚಂದಾದಾರರ ಚಂದಾ ಕೊನೆಗೊಳ್ಳುತ್ತದೆ. ಚಂದಾದಾರ ಗೆಳೆಯರೆಲ್ಲ ತಮ್ಮ ಚಂದಾ ನವೀಕರಿಸಬೇಕೆಂದು ವಿನಂತಿಸುತ್ತೇವೆ. ನಿಮ್ಮ ವೈಯುಕ್ತಿಕ ಚಂದಾ ನವೀಕರಿಸುವುದಲ್ಲ ನಿಮ್ಮ ಗೆಳೆಯ ಗೆಳತಿಯರನ್ನು ಸಂವಾದದ ಚಂದಾದಾರರಾಗಿಸಬೇಕೆಂದು ಕೇಳಿಕೊಳ್ಳುತ್ತೇವೆ ಸಂವಾದಕ್ಕೆ ಚಂದಾದಾರರಾಗುವುದೆಂದರೆ ಅದಕ್ಕೆ ಬರೀ ಪ್ರೋತ್ಸಾಹ ನೀಡಿದಂತಲ್ಲ ಸಹಾಯಮಾಡಿದಂತಲ್ಲ. ಅದು ಸಂವಾದದಂತಹ ಪ್ರಯತ್ನದ ಸಹಭಾಗಿತ್ವವನ್ನು ಪಡೆದಂ ದಯವಿಟ್ಟು ಬನ್ನಿ. ಕೈಗೊಡಿಸಿ.

ಇಂತೀ ವಂದನೆಗಳೊಂದಿಗೆ, ನಿಮ್ಮ,

ಸಂಪಾದಕ

ಪರಿವಿಡಿ

ಭಾಗ : ೧ : ಮೀಮಾಂಸೆ : ವಿಮರ್ಶೆ: ರಸಿಕಸ್ಪಂದನೆ

೧. ಉಲಿಯ ಉಯ್ಯಲೆ : ಅಭಿವ್ಯಕ್ತಿ ಸ್ವರೂಪ ಮತ್ತು ಸಮಸ್ಯೆಗಳು/ ಓ.ಎಲ್. ನಾಗಭೂಷಣ ಸ್ವಾಮಿ/೩

೨. ಪುನರ್ಲಿಖಿತ ಭಾರತೀಯ ಕಾವ್ಯಶಾಸ್ತ್ರದತ್ತ/ ಪ್ರೊ॥ ಕೃಷ್ಣರಾಯನ್/೧೨

೩. ಪಿಂಛಾ ಆಡಿಸಬಾರದು/ ಎಸ್. ಮಂಜುನಾಥ್/ ೨೨

೪. ಕನ್ನಡ ನವೋದಯದ ಪ್ರಕೃತಿದರ್ಶನ/ಡಾ॥ ಡಿ. ಆರ್. ನಾಗರಾಜ/೨೫

೫. ಕನ್ನಡ ನವ್ಯ ಕವಿತೆಯಲ್ಲಿಯ ಮನೋಧರ್ಮ-ಒಂದು ಟಿಪ್ಪಣಿ/ ಡಾ॥ ಶಾಂತಿನಾಥ ದೇಸಾಯಿ/೩೭

೬. ಬಂಡಾಯ ಕಾವ್ಯ ಸ್ವರೂಪ-ಒಂದು ಪರಿಚಯ/ಡಾ॥ ಆರ್ಕೆ ಮಣಿಪಾಲ/೪೬

೭. ರಸಿಕ ಸ್ಪಂದನೆ : ಡಾ॥ ರಾಜೀವ ತಾರಾನಾಥ/ಎವಿನ್. ಮುಕುಂದ/ಡಾ॥ ರಾಜಾರಾಮ ಹೆಗಡೆ/ ಜಿ.ಎನ್. ಮಲ್ಲಿಕಾರ್ಜುನಪ್ಪ/ಎಂ.ಜಿ. ಎಸ್. ಶಾಸ್ತ್ರಿ/೫೪

ಭಾಗ : ೨ : ಕಾವ್ಯ ಮಾಧ್ಯಮನಾದ ಕವಿ

೮. ಯಾವ ರೂಟ್ಸ್? ಯಾರು ಅನುಮೋದಿಸುತ್ತಿರುವ ಸಂವಹನಶೀಲತೆ?/ ಡಾ॥ ಕೆ.ವಿ. ತಿರುಮಲೇಶ್/೬೩

೯. ನವ್ಯತೆಯ ಗೀಳು../ಡಾ॥ ಎಚ್.ಎಸ್. ವೆಂಕಟೇಶಮೂರ್ತಿ/೬೭

೧೦. ನನ್ನ ಕಾವ್ಯ ಪ್ರತಿಮೆಗಳು/ಸುಬ್ರಾಯ ಚೊಕ್ಕಾಡಿ/೬೯

೧೧. ಕಾವ್ಯ ಕಾರಣ/ಜಯಂತ ಕಾಯ್ಕಿಣಿ/೭೩

೧೨. ನಾನೇನೋ ನನ್ನ ಕಾವ್ಯವೂ ಅದೇ/ಬಿ.ಆರ್. ಲಕ್ಷ್ಮಣರಾವ್/೭೬

೧೩. ಮುಟ್ಟಿ ಇಡುವ ಶಬ್ದ.. ಸೋಸಿಹೋಗುವ ಸಿದ್ಧಾಂತ/ ಎಸ್. ಮಂಜುನಾಥ/೭೮

೧೪. ನಾವೆ ಯಾವುದಕ್ಕಾ ಕಾವ್ಯಜಗಕೆ/ವೈದೇಹಿ/೮೦

೧೫. ಕಾವ್ಯವೆಂದರೆ/ಸವಿತಾ ನಾಗಭೂಷಣ/೮೭

೧೬. ನಾನು, ನನ್ನ ಕಾವ್ಯ/ ಆನಂದ ಝುಂಜರವಾಡ/೮೯

೧೭. ಹಿಂಗೆ ಬದುಕುತ್ತಾ ಬರೆಯುತ್ತಿರುವಾಗ/ಚಂದ್ರಶೇಖರ ತಾಳ್ಯ/೯೦

೧೮. ಮಿತವಾದ ಕ್ಷೇತ್ರದಲಿ ಲಯಬದ್ಧ ಕುಣಿತ/ಚಿಂತಾಮಣಿ ಕೊಡ್ಲೆಕೆರೆ/೯೩

೧೯. ಏನೋ ಹೇಳಬೇಕೆಂಬ ತಹ ತಹಿಕೆ/ಸರಜೂ ಕಾಟ್ಕರ್/೯೫

೨೦. ಕಾವ್ಯ-ಸಂವಹನಶೀಲತೆ.. ಇತ್ಯಾದಿ/ಶಂಕರ ಕಟಗಿ/೯೭

ಭಾಗ : ೩: ಕಾವ್ಯ ಗುಚ್ಛ : ಇತ್ತೀಚಿನ ಕನ್ನಡ ಕಾವ್ಯ

೨೧. ಆಚಾರ್ಯ ಅಡಿಗ/ಜಿ.ಪಿ. ಬಸವರಾಜು/೧೦೧

೨೨. ಈ ಕಾವ್ಯ ಗುಚ್ಛಕ್ಕೊಂದು ಚೌಕಟ್ಟು/ರಾಘವೇಂದ್ರ ಪಾಟೀಲ/೧೦೫

೨೩. ಕವಿತೆಗಳು/೧೧೧

ಕೆ.ವಿ. ತಿರುಮಲೇಶ್/೧೧೧. ಸಿದ್ಧಲಿಂಗಯ್ಯ/೧೧೨. ಎಚ್.ಎಸ್. ವೆಂಕಟೇಶಮೂರ್ತಿ/೧೧೫. ಎಚ್.ಎಸ್. ಶಿವಪ್ರಕಾಶ/೧೧೭. ಬಿ.ಆರ್. ಲಕ್ಷ್ಮಣರಾವ್/೧೧೯. ಸುಬ್ರಾಯ ಚೊಕ್ಕಾಡಿ/೧೨೨. ಸ. ಉಷಾ/೧೨೪. ಸವಿತಾ ನಾಗಭೂಷಣ/೧೨೬ ವೈದೇಹಿ/೧೩೦. ಎಸ್. ಮಂಜುನಾಥ/೧೩೨. ಆನಂದ ಝುಂಜರವಾಡ/೧೩೪. ಜಯಂತ ಕಾಯ್ಕಿಣಿ/೧೩೬. ಪ್ರತಿಭಾ ನಂದಕುಮಾರ/೧೩೮. ಚಂದ್ರಶೇಖರ ತಾಳ್ಯ/೧೪೦. ಶಂಕರ ಕಟಗಿ/೧೪೨. ಕೆ.ಬಿ. ಸಿದ್ದಯ್ಯ/೧೪೫. ಎಚ್.ಎಸ್. ಮುಕ್ತಾಯಕ್ಕ/೧೪೭. ಹೇಮಾ ಪಟ್ಟಣಶೆಟ್ಟಿ/೧೪೯. ಎಚ್.ಎಸ್. ಭೀಮನಗೌಡರ/೧೫೨. ಎಂ.ಆರ್. ಕಮಲ/೧೫೪. ಸರಜೂ ಕಾಟ್ಕರ್/೧೫೫ . ಚಿಂತಾಮಣಿ ಕೊಡ್ಲೆಕೆರೆ/೧೫೭. ಎಚ್. ಡುಂಡಿರಾಜ/೧೫೮. ಸ. ರಘುನಾಥ/೧೫೯. ಲಕ್ಷ್ಮೀಶ್ ತೊಳ್ಪಾಡಿ/೧೬೦. ಹಾ.ಮ. ಕನಕ/೧೬೨. ಎಲ್.ಎನ್. ಮುಕುಂದರಾಜ/೧೬೩

ಮೀಮಾಂಸೆ : ವಿಮರ್ಶೆ : ರಸಿಕಸ್ಪಂದನೆ

ಮಾತು ಜ್ಯೋತಿ, ಆ ಹರಳು-ಧೂಮ, ರಸಸಲಿಲ, ಭಾವಗಾಳಿ
ಕವಿಯೊಳಾಗಿ ಕಟ್ಟಿತ್ತು ಕಾವ್ಯ ನವ ಮೇಘರೂಪತಾಳಿ ॥
ಸ್ಥಾಯಿ ಅಲ್ಲಿ ಸಂಚಾರದಲ್ಲಿ ರಸ ಪಾಕವಾಗಿ ಬಂತು
ಮೆರೆವಹಾಗೆ ಆ ಸುಟ್ಟಕಾಮ ಪ್ರದ್ಯುಮ್ನನಾಗಿ ನಿಂತು ॥

– ಅಂಬಿಕಾತನಯದತ್ತ

ಉಲಿಯ ಉಯ್ಯಲೆ :
ಅಭಿವ್ಯಕ್ತಿ-ಸ್ವರೂಪ ಮತ್ತು ಸಮಸ್ಯೆಗಳು

– ಓ.ಎಲ್. ನಾಗಭೂಷಣ ಸ್ವಾಮಿ

ಗೆಳೆಯ ರಾಮುವಿನೊಡನೆ ಅಲ್ಲಮನ ವಚನಗಳನ್ನು ಓದುತ್ತಿರುವಾಗ ಆತ ಈ ವಚನದತ್ತ ನನ್ನ ಗಮನವನ್ನು ಸೆಳೆದ 'ಉಲಿಯ ಉಯ್ಯಲೆ' ಎಂಬ ರೂಪಕವು ಅಭಿವ್ಯಕ್ತಿಯನ್ನು ಕುರಿತ ನನ್ನ ಯೋಚನೆಗಳಿಗೆಲ್ಲ ತಟ್ಟನೆ ಒಂದು ಕೇಂದ್ರವನ್ನು ಒದಗಿಸಿತು.

ಕಾವ್ಯ, ಕಾವ್ಯ ಮೀಮಾಂಸೆ ಮತ್ತು ವಿಮರ್ಶೆಗಳೆಲ್ಲ ಸ್ವತಂತ್ರವಾದ ಸಂಕಥನಗಳು (ಇಂಗ್ಲೀಷಿನಲ್ಲಿ discourse ಎನ್ನುತ್ತಾರಲ್ಲ ಅದು) ಎಂದೇ ತಿಳಿದಿದ್ದೇನೆ. ಈ ಮೂರೂ ಸಂಕಥನಗಳು ಪರಸ್ಪರ ಪೂರಕವಾಗಿರಬಹುದು, ಆದರೆ ಆಗಿರಲೇ ಬೇಕಿಲ್ಲ. ಈ ಸಂಗತಿ ನಮ್ಮ ಹಳೆಯ ಕಾವ್ಯ ಮೀಮಾಂಸಕರಿಗೆ ಸ್ಪಷ್ಟವಾಗಿ ತಿಳಿದಿತ್ತೆಂದೇ ಅವರು ತಮ್ಮ ಕಾವ್ಯ ತತ್ವಗಳನ್ನು ಯಾವುದೇ ಒಂದು ಕಾವ್ಯಕ್ಕೆ ಅನ್ವಯಿಸಲು ಹೋಗಲಿಲ್ಲ. ಕಾವ್ಯಗಳಿಗೆ ವ್ಯಾಖ್ಯಾನ ಬರೆದವರು ಸಾಮಾನ್ಯವಾಗಿ ಕಾವ್ಯಮೀಮಾಂಸೆ ಬರೆಯಲಿಲ್ಲ.

ಭಾಷೆಯ ಮಾಧ್ಯಮದಲ್ಲಿ ಅಭಿವ್ಯಕ್ತವಾಗುವ ಸಂಕಥನಗಳು ತಮ್ಮ ತಮ್ಮ ವಿಧಾನದಲ್ಲಿ ಸತ್ಯ- ಅರ್ಥಗಳನ್ನು ಹುಡುಕುತ್ತಿರುತ್ತವೆ, ತಮ್ಮವೇ ಆದ ಪರಿಭಾಷೆ, ನಿರೂಪಣಾವಿಧಾನ, ಸಂಪ್ರದಾಯಗಳನ್ನು ಹೊಂದಿರುತ್ತವೆ, ಉಲಿಯ ಉಯ್ಯಲೆಯಲ್ಲಿ ತೂಗುತ್ತಿರುತ್ತವೆ. ಉಯ್ಯಲೆಯ ತೂಗು ನಿಜವೇ ಹೊರತು ಅದು ಯಾವುದಾದರೊಂದು ತುದಿಯನ್ನು ಮುಟ್ಟಿ ನಿಲುಗಡೆಯನ್ನು ಕಾಣುವುದಲ್ಲ. ಹಾಗೆ ನಿಲುಗಡೆಯನ್ನು ಕಂಡರೆ ಅದು ಉಯ್ಯಲೆಯೇ ಅಲ್ಲ.

ನಮಗೆ ಸಂಸ್ಕೃತದ ಕಾವ್ಯ ಮೀಮಾಂಸೆಯ ಪರಿಚಯವಿದೆ, ಪಾಶ್ಚಾತ್ಯ ಕಾವ್ಯ ಚಿಂತನೆಗಳು ಮೂಡಿಸಿರುವ ಬೆರಗು ಮತ್ತು ಕೀಳರಿಮೆಗಳೂ ಇವೆ. ಅಲ್ಲಮನ ಮಾತಿನಲ್ಲಿ ಹೇಳಬೇಕೆಂದರೆ ಇಂದಿನ ದಿನ ಹಿಂದಿನ ಅನಂತವನ್ನೂ ಮುಂದಿನ ಅನಂತವನ್ನೂ ಒಳಗೊಂಡಿರುವ ದಿನ. ಇಂದು ಇಂಗ್ಲಿಷಿನ ಮುಖಾಂತರ ನಾನು ಪಡೆದ ತಿಳಿವು ಕನ್ನಡವನ್ನು ಬೇರೆ ರೀತಿಯಲ್ಲಿ ನೋಡುವುದಕ್ಕೆ ಪ್ರಚೋದಿಸಿ, ಕನ್ನಡವು ಸಂಸ್ಕೃತದ ತಿಳಿವನ್ನು ಬೆರೆಸಿಕೊಂಡೂ ಹೊಸ ಉಲಿಯಾಗಿರುವುದನ್ನು ಕಲಿಸಿದೆ. ಮುಂದಿನ ಅನಂತವೆಂದರೆ ಕನ್ನಡವು ಹೇಗೆ ಕಾವ್ಯ ಚಿಂತನೆಗೆ ತನ್ನದೇ ಭಾಷೆ-ಪರಿಭಾಷೆಗಳನ್ನು ರೂಪಿಸಿಕೊಂಡಿದೆ ಎಂಬುದನ್ನು ಗುರುತಿಸಿ ಕನ್ನಡದ್ದೇ ಕಾವ್ಯ ಮೀಮಾಂಸೆಯನ್ನು ಕಟ್ಟಿಕೊಳ್ಳುವ ಕೆಲಸ. ಕನ್ನಡ ಕಾವ್ಯ ಮೀಮಾಂಸೆ

ಯೆಂದರೆ ಕಾವ್ಯ, ಅಭಿವ್ಯಕ್ತಿ, ಕವಿ, ಕೃತಿ, ಓದುಗ, ಸಮಾಜ ಇಂಥ ಮೂಲ ವಿಷಯಗಳ ಬಗೆಗೆ ಕನ್ನಡವೇ ರೂಪಿಸಿಕೊಂಡಿರುವ ಸಂಕಥನ.

ಕನ್ನಡ ಕಾವ್ಯ ಮೀಮಾಂಸೆಯ ಸಂಕಥನವು ಗ್ರೀಕ್ ಅಥವ ಸಂಸ್ಕೃತ ಕಾವ್ಯಮೀಮಾಂಸೆಗಳ ಮಾದರಿಯಲ್ಲೇ ಇರಬೇಕಾಗಿಲ್ಲ ಮತ್ತು ಇಲ್ಲ. ಆದರೆ, ಗ್ರೀಕರನ್ನೂ ಸಂಸ್ಕೃತ ಚಿಂತಕರನ್ನೂ ಕಾಡಿದ ಪ್ರಶ್ನೆಗಳು ಕನ್ನಡ ಮನಸ್ಸನ್ನೂ ಕಾಡಿವೆ. ಕವಿರಾಜ ಮಾರ್ಗದಿಂದ ಹಿಡಿದು ಇವತ್ತಿನ ವರೆಗೂ ಕನ್ನಡ ಮನಸ್ಸು ಕಾವ್ಯ ಮೀಮಾಂಸೆಯ ಪ್ರಶ್ನೆಗಳನ್ನು ಕುರಿತು ಚಿಂತಿಸಿದೆ. ಶತಮಾನಗಳ ಅಂತರ ಇಲ್ಲಿ ಮುಖ್ಯವಲ್ಲ. ಪ್ರತಿಯೊಂದು 'ಇಂದು' ಎಲ್ಲ ನಿನ್ನೆಗಳನ್ನೂ ಎಲ್ಲ ನಾಳೆಗಳನ್ನೂ ಒಳಗೊಂಡಿದೆ ಎಂಬಂತೆ ನಮ್ಮ ಕವಿಗಳು ಕಾವ್ಯ ಚಿಂತನೆಯ ವಾಗ್ವಾದಗಳನ್ನು ನಡೆಸಿಕೊಂಡು ಬಂದಿದ್ದಾರೆ. ಅಲ್ಲಮ-ಬೇಂದ್ರೆ, ಅಡಿಗ-ಪಂಪರ ಸಂವಾದವನ್ನು ಕಲ್ಪಿಸಿಕೊಳ್ಳುವ ಪ್ರತಿಭೆ ನಮಗೆ ಬೇಕಷ್ಟೆ. ಅಥವ ಈ ಎಲ್ಲ ಕವಿಗಳ ಸಂವಾದದ ಸಭಾಂಗಣ ನಮ್ಮ ಪ್ರಜ್ಞೆಯಾದಾಗ ಕನ್ನಡ ಕಾವ್ಯ ಚಿಂತನೆಯ ಸ್ವರೂಪ ಸ್ಪಷ್ಟವಾಗುತ್ತದೆ.

ಮನುಷ್ಯನ ಚಿಂತನೆಗಳಲ್ಲಿ ಅ-ಪಾರ ಅ-ನಂತ ವೈವಿಧ್ಯವಿರುವಂತೆ ಕಂಡರೂ ಆ ಚಿಂತನೆಗಳೆಲ್ಲವನ್ನೂ ರೂಪಿಸುವ ತಾತ್ತ್ವಿಕ ನಿಲುವುಗಳು ಮಾತ್ರ ಪರಿಮಿತವಾದವುಗಳೇ ಆಗಿವೆ. ವ್ಯಕ್ತಿಗೆ ಮಾತ್ರ ಸತ್ಯತ್ವವುಂಟೆಂದೂ ವಸ್ತುವಿಗೆ ಸತ್ಯತ್ವವಿಲ್ಲವೆಂದೂ ಒಂದು ನಿಲುವು. ವಸ್ತುವಿಗೆ ಸತ್ಯತ್ವವುಂಟು, ವ್ಯಕ್ತಿ ಇಲ್ಲದೆಯೂ ವಸ್ತು ಇರಬಲ್ಲದು ಎಂಬುದು ಎರಡನೆಯ ನಿಲುವು. ವ್ಯಕ್ತಿ ಮತ್ತು ವಸ್ತುಗಳೆರಡಕ್ಕೂ ಸತ್ಯತ್ವವುಂಟೆಂಬುದು ಮೂರನೆಯ ನಿಲುವು. ವ್ಯಕ್ತಿ ಮತ್ತು ವಸ್ತುಗಳು ಬೇರೆ ಬೇರೆಯಲ್ಲ ಎಂಬುದು ನಾಲ್ಕನೆಯದು. ವ್ಯಕ್ತಿ ಮತ್ತು ವಸ್ತುಗಳ ಸಂಬಂಧವನ್ನು ಕುರಿತೂ ಅಷ್ಟೆ. ವ್ಯಕ್ತಿ-ವಸ್ತು ಎರಡೂ ಭಿನ್ನ, ಭಿನ್ನವಲ್ಲ, ಮತ್ತು ಭಿನ್ನವೆಂಬಂತೆ ಕಂಡರೂ ಐಕ್ಯವನ್ನು ಸಾಧಿಸಬಹುದು ಎಂಬ ನಿಲುವುಗಳಿವೆ. ಸಾಮಾನ್ಯಮನುಷ್ಯನ ಮನಸ್ಸು ಇವುಗಳಲ್ಲಿ ಯಾವುದಾದರೊಂದು ನಿಲುವಿನಲ್ಲಿ ಶಾಶ್ವತವಾಗಿ ವಿರಮಿಸುವುದು ಕಷ್ಟವೆಂದು ತೋರುತ್ತದೆ. ಒಮ್ಮೆ ಇದು, ಇನ್ನೊಮ್ಮೆ ಅದು-ಮನುಷ್ಯನ ಮನಸ್ಸು ಉಲಿಯ ಉಯ್ಯಲೆಯಲ್ಲಿ ಜೀಕುತ್ತಲೇ ಇರುತ್ತದೆ. ಈ ಸೀಮಿತ ಸಂಖ್ಯೆಯ ನಿಲುವುಗಳ ಮಿಶ್ರಣ ಚಿಂತನೆಗಳ ವೈವಿಧ್ಯಮಯ ರೂಪಗಳಿಗೆ ಕಾರಣವಾಗಿದೆ.

ಸತ್ಯತ್ವವನ್ನು ವಸ್ತುವಿನಲ್ಲಿ ಮಾತ್ರ ಕಾಣುವ ಕಣ್ಣಿಗೆ ಕವಿ-ಕೃತಿ-ಓದುಗ-ಸಮಾಜ ಇವೆಲ್ಲವೂ ಬೇರೆ ಬೇರೆಯಾಗಿಯೇ ಕಾಣುತ್ತವೆ. ಮುಖ್ಯವಾಗಿ ಡೆಕಾರ್ಟೆಯು subject-object ಗಳ ಭಿನ್ನತೆಯನ್ನು ಪ್ರತಿಪಾದಿಸಿದನಂತರದ ಪಾಶ್ಚಾತ್ಯ ಚಿಂತನೆಗಳಲ್ಲಿ ಇದು ಎದ್ದು ಕಾಣುತ್ತದೆ. ಹೀಗೆ ಒಂದೊಂದು ಅಂಶಗಳನ್ನೂ ಬೇರೆ ಬೇರೆಯಾಗಿ ನೋಡುವುದರಿಂದ ಹುಟ್ಟುವ ಕಾವ್ಯಮೀಮಾಂಸೆ ಒಂದು ಬಗೆಯದು. ಇದರಲ್ಲಿ ಶಿಸ್ತು, ತಾರ್ಕಿಕತೆ, ತತ್ವನಿಷ್ಠತೆಗಳು ಎದ್ದು ಕಾಣುತ್ತವೆ. ಅಧ್ಯಯನ ವಸ್ತುವನ್ನು ಪ್ರತ್ಯೇಕಗೊಳಿಸಿ ಪರಿಶೀಲಿಸುವುದು ಮುಖ್ಯವಾಗಿ ನಮಗೆ ಪರಿಚಿತವಾಗಿರುವ ವಿಜ್ಞಾನದದ ದಾರಿಯೂ ಹೌದು. ನ್ಯೂಟನ್ನನ ವಿಶ್ವಕಲ್ಪನೆ ಹೀಗೇ ಇರುವಂಥದು. ಪರಿಶೀಲಿಸುವ ವ್ಯಕ್ತಿ ತನ್ನನ್ನು ಇಲ್ಲಗೊಳಿಸಿಕೊಂಡು, 'ವ್ಯಕ್ತಿ ನಿರಪೇಕ್ಷ'ವಾಗಿ ವಸ್ತುವನ್ನು ಅಧ್ಯಯನ ಮಾಡಬಹುದೆಂದು ಈ ದೃಷ್ಟಿ ನಂಬುತ್ತದೆ. ಇದಕ್ಕೆ

ಪ್ರತಿಯಾಗಿ ಐನ್‌ಸ್ಟೀನನ ವಿಶ್ವಕಲ್ಪನೆ ಇದೆ. ನೋಡುವ ವ್ಯಕ್ತಿ ಮತ್ತು ಅವನು ನೋಡುತ್ತಿರುವ ವಸ್ತು ಬೇರೆ ಬೇರೆಯಾಗಿರಲು ಸಾಧ್ಯವಿಲ್ಲ, ನೋಡುತ್ತಿರುವ ವ್ಯಕ್ತಿಯ ನಿಲವು ನೋಟವನ್ನೂ ಪರಿಣಾಮಿಸುತ್ತದೆ ಎಂಬುದು ಇನ್ನೊಂದು ಬಗೆಯ ವಿಜ್ಞಾನವನ್ನೇ ಹುಟ್ಟಿಸುತ್ತದೆ. ಭಾರತದಲ್ಲೂ ಕನ್ನಡದಲ್ಲೂ ಈ ಎರಡೂ ಬಗೆಯ ವ್ಯಕ್ತಿ-ವಸ್ತು ಸಂಬಂಧಗಳ ನಿಲುವಿನಿಂದ ಮೂಡಿರುವ ಚಿಂತನೆಗಳಿವೆ.

ಕಾವ್ಯವನ್ನು ಕುರಿತಂತೆ ಸಂಸ್ಕೃತದಲ್ಲಿ ನಡೆದ ಚಿಂತನೆಗಳು ಸ್ಥೂಲದಿಂದ ಸೂಕ್ಷ್ಮದ ಕಡೆಗೆ ಚಲಿಸಿದ್ದನ್ನು, ಹಾಗೆ ಚಲಿಸಿ ಒಂದು ನಿಲುಗಡೆಗೆ ಬಂದದ್ದನ್ನೂ ಕಾಣುತ್ತೇವೆ. ೨೦ರ ದಶಕದ ಮಧ್ಯಭಾಗದಿಂದ ಪಾಶ್ಚಾತ್ಯರಲ್ಲೂ ಕಾವ್ಯ ಚಿಂತನೆಯು ಭಾಷಾ ಸ್ವರೂಪದ ಚಿಂತನೆಯಾಗಿ, ಭಾಷೆಯ ಸೂಕ್ಷ್ಮಗಳ ಪರಿಶೀಲನೆಗೆತೊಡಗಿ, ಶಬ್ದ-ಅರ್ಥ-ಸಂವಹನೆಗಳ ಸ್ವರೂಪದ ತಾತ್ವಿಕ ಪ್ರಶ್ನೆಗಳನ್ನು ಎದುರಿಸುತ್ತಿದೆ ಈಗ.

ಅಭಿವ್ಯಕ್ತಿ ಎಂದರೇನು? ಅದು ಕವಿಯ ವ್ಯಕ್ತಿತ್ವದ ಅಭಿವ್ಯಕ್ತಿಯೇ? ಭಾವನೆಗಳ ಅಭಿವ್ಯಕ್ತಿಯೇ? ಭಾಷಿಕ ವ್ಯವಸ್ಥೆಗಳ ಸಾಧ್ಯತೆಯ ಅಭಿವ್ಯಕ್ತಿಯೇ? ಕವಿಯ ವ್ಯಕ್ತಿತ್ವ ಎಂದರೇನು? ಅಭಿವ್ಯಕ್ತಿ ಎಂಬುದು ಓದುಗನಿಗೂ ಸಂಬಂಧಿಸಿದ್ದಲ್ಲವೇ? ಕೃತಿಯ ಸ್ವರೂಪವೇನು? ಕವಿ-ಕೃತಿ-ಓದುಗ ಸಂಬಂಧವನ್ನು ಗ್ರಹಿಸುವುದು ಹೇಗೆ? ಅಭಿವ್ಯಕ್ತಿಯ ಸಮಸ್ಯೆಗಳಾವುವು?-ಇಂಥ ಮೂಲ ಪ್ರಶ್ನೆಗಳನ್ನು ಕುರಿತು ಕನ್ನಡ ಚಿಂತನೆಯನ್ನು, ಅಲ್ಲಮನನ್ನು ಕೇಂದ್ರವಾಗಿಟ್ಟುಕೊಂಡು ಗುರುತಿಸಲು ಪ್ರಯತ್ನಿಸುತ್ತೇನೆ. ಅಲ್ಲಮನಲ್ಲಿ ಕಾವ್ಯ ಮೀಮಾಂಸೆಯ ಸಂಕಥನವನ್ನು ಗುರುತಿಸಲು ನನಗಿರುವ ಸಂಸ್ಕೃತ ಮತ್ತು ಪಾಶ್ಚಾತ್ಯ ಕಾವ್ಯಮೀಮಾಂಸೆಗಳ ಅಲ್ಪ ಪರಿಚಯ ಸಹಾಯ ಮಾಡಿದೆ. ಕಾವ್ಯ ಮೀಮಾಂಸೆ ಅಲ್ಲಮನ ಉದ್ದೇಶವಲ್ಲ. ನಿಜ. ಆದರೆ ಅವನ ವಚನಗಳಿಂದ ನಾವು ಭಾಷೆ, ಶಬ್ದ, ಅರ್ಥ ಮುಂತಾದ ವಿಚಾರಗಳನ್ನು ಕುರಿತಂತೆ ಚಿಂತನೆಯ ಒಂದು ವಿನ್ಯಾಸವನ್ನು ಗುರುತಿಸಿ ರೂಪಿಸಿಕೊಳ್ಳಲು ಸಾಧ್ಯ. ಹೀಗೆ ಕನ್ನಡ ಚಿಂತನೆಯನ್ನು ಗುರುತಿಸಿಕೊಳ್ಳಲು ಸಹಾಯ ಮಾಡದಿದ್ದರೆ 'ತೌಲನಿಕ ಅಧ್ಯಯನ' ಎಂಬ ಮಾತಿಗೆ ಅರ್ಥವಿಲ್ಲ.

ಕನ್ನಡದಲ್ಲಿ ಅಧ್ಯಯನ ವಸ್ತುವೇ ಪ್ರಮುಖವಾಗಿರುವ ಕಾವ್ಯ ಚಿಂತನೆ ಇರುವಂತೆ ಇಡೀ ಸಾಹಿತ್ಯ ಪ್ರಕ್ರಿಯೆಯನ್ನು ಅಖಂಡವಾಗಿ ನೋಡುವ ಚಿಂತನೆಗಳೂ ಇವೆ. ಇತ್ತೀಚಿನ ದಿನಗಳಲ್ಲಿ 'ವೈಜ್ಞಾನಿಕತೆ'ಗೆ, ಬಹುಶಃ ಅನಗತ್ಯವಾದ, ಮನ್ನಣೆ ದೊರೆತು ಅಖಂಡತೆಯನ್ನು ಕುರಿತ ಚಿಂತನೆಯ ಧಾಟಿಯು ಮರವೆಗೆ ಸಂದಿದೆ. ಅಲ್ಲಮನ ಈ ವಚನವನ್ನು ನೋಡಿ:

೧. ಗುರು ಶಿಷ್ಯ ಸಂಬಂಧವನಱಿಸಲೆಂದು ಹೋದರೆ
ತಾನೆ ಗುರುವಾದ
ತಾನೆ ಶಿಷ್ಯನಾದ
ತಾನೆ ಲಿಂಗವಾದ
ಗುಹೇಶ್ವರ

ಗುರು, ಶಿಷ್ಯ, ಲಿಂಗ, ಇವು ಬೇರೆ ಬೇರೆಯಲ್ಲ ಎಂಬ ಮಾತನ್ನು ಕವಿ-ಕೃತಿ- ಓದುಗ ಸಂಬಂಧಕ್ಕೂ ಅನ್ವಯಿಸಿಕೊಳ್ಳಬಹುದು. ಕುವೆಂಪು ಪ್ರತಿಪಾದಿಸುವ 'ಪೂರ್ಣ ದೃಷ್ಟಿ'ಯನ್ನೂ ಕವಿ-ಕೃತಿ-ಓದುಗ ಪ್ರಕ್ರಿಯೆಯ ವಿವರಣೆಯನ್ನಾಗಿಯೇ ನೋಡಲು ಸಾಧ್ಯ. 'ನಿನ್ನ ಮುಖ ಸ್ಪರ್ಶವೇ ಸಾಕು, ಹೊಸ ಸೃಷ್ಟಿಯೆ ಬರಬಹುದು' ಎಂಬ ಬೇಂದ್ರೆ ಮಾತು ಇಂಥದೇ. 'ಒಂದೊಂದು ಕವನವೂ ಭರವಸೆಯ ವ್ಯವಸಾಯ-/ಅಜ್ಞಾತದ ತಳಕ್ಕಿಳಿದು ಬಂದವನ ಭಾಗ್ಯ' ಎಂಬ ರಾಮಚಂದ್ರ ಶರ್ಮರ ಮಾತೂ ಇಂಥದೇ. ಬರೆಯುವ ವರೆಗೆ ಬರೆಯು ಬೇಕಾದ ಕವನ ಕವಿಗೆ ಅಜ್ಞಾತ ಹೇಗೋ ಹಾಗೆಯೇ ಓದುವವರೆಗೆ ಆ ಕವನ ಓದುಗನಿಗೂ ಅಜ್ಞಾತವೇ. ಅಜ್ಞಾತಕ್ಕೆ ಕೈಗೊಳ್ಳುವ ಯಾನ ಕವಿಗೆ ಭರವಸೆಯ ವ್ಯವಸಾಯವೇಕೆಂದರೆ ಅಜ್ಞಾತವಾದ್ದು ಮಾತಿನರೂಪ ಪಡೆದು ಅವ್ಯಕ್ತವು ವ್ಯಕ್ತವಾದೀತೆಂಬ ಭರವಸೆಯಿಲ್ಲದೆ ಕವನ ರಚನೆ ಸಾಧ್ಯವೇ ಇಲ್ಲ. ಹಾಗೆಯೇ ಕವನದ ಓದಿನ ಮೂಲಕ ತನ್ನ ಪ್ರಜ್ಞೆಯಲ್ಲಿ ಅವ್ಯಕ್ತವಾಗಿದ್ದದ್ದು ಅಭಿವ್ಯಕ್ತವಾಗುತ್ತದೆಂಬ ಭರವಸೆಯೇ ಎಲ್ಲ ಓದಿನ ಕ್ರಿಯೆಯ ಹಿಂದಿರುವ ಮೂಲ ಪ್ರಚೋದನೆ. ಅಭಿವ್ಯಕ್ತಿಯ ಆಸೆ ಕೇವಲ ಕವಿಯದು ಮಾತ್ರವಲ್ಲ, ಓದುಗನದೂ ಹೌದು. 'ಅಭಿನವ ಭಾರತಿ'ಯಲ್ಲಿ ಅಭಿವ್ಯಕ್ತಿ ಎಂಬ ಪರಿಕಲ್ಪನೆಯನ್ನು ವಿವರಿಸಿರುವುದೇ ಹೀಗೆ: ಅದು ಒಂದು ಮನಃಸ್ಥಿತಿ; ರಸಾನುಭವದ ಮನಃಸ್ಥಿತಿ; ರಸವೆನ್ನುವುದು ಯಾವುದೋ ಒಂದು ಹೊಸ ಸೃಷ್ಟಿಯಲ್ಲ; ಈಗಾಗಲೇ ಸಾಮಾಜಿಕನ ಮನಸ್ಸಿನಲ್ಲಿರುವುದೇ ಮುಕ್ತವಾಗಿ, ಆನಂದಕರವಾಗಿ ವ್ಯಕ್ತವಾಗುವುದೇ ಅಭಿವ್ಯಕ್ತಿ; ಈ ಅಭಿವ್ಯಕ್ತಿಗೆ ಪದಗಳೂ ಅವುಗಳ ಅರ್ಥಗಳೂ ನಿಮಿತ್ತವಾಗಿರುತ್ತವೆ. ಅಥವ, Roland Barthes, ಓದುವಿಕೆಯನ್ನು ಕ್ರಿಯಾಶೀಲ ಸಹಯೋಗವೆನ್ನುತ್ತಾನೆ. ಈ ದಾರಿಯನ್ನು, ಅಂದರೆ ಕವಿ-ಕೃತಿ-ಓದುಗ ಇವೆಲ್ಲಅಖಂಡ ಐಕ್ಯತೆ ಎಂಬ ನಂಬಿಕೆಯ ದಾರಿಯನ್ನು ಹಿಡಿದು ಹೊರಟರೆ ನಮಗೆ ದೊರೆಯುವ ಕಾವ್ಯ ಮೀಮಾಂಸೆ ಬೇರೆಯದೇ ರೀತಿಯದು.

ಹಾಗಾದರೂ ಅಭಿವ್ಯಕ್ತಿಗೆ ನಿಮಿತ್ತವಾದ ಭಾಷೆ ಇರಬೇಕು, ಅಭಿವ್ಯಕ್ತಿಗೊಂದು ವಸ್ತು ಇರಬೇಕು, ಅಥವಾ ನಿಜವಾಗಿ ಅಭಿವ್ಯಕ್ತಿಯ ಸ್ವರೂಪವನ್ನು ಸ್ಪಷ್ಟಗೊಳಿಸಿಕೊಳ್ಳಲು ಸಾಧ್ಯವೇ?

ಭಾಷೆಯ ಬಗ್ಗೆ ನಂಬಿಕೆ ಅಪನಂಬಿಕೆಗಳೆರಡೂ ಇವೆ. ಅಭಿವ್ಯಕ್ತಿಗೆ ಭಾಷೆ ಒಂದು ಮಾಧ್ಯಮ. ಹೀಗೆಂದ ಕೂಡಲೇಈ ಮಾಧ್ಯಮದ ಶಕ್ತಿ ಸಾಮರ್ಥ್ಯಗಳ ಬಗ್ಗೆಯೇ ಅನುಮಾನಗಳು ಹುಟ್ಟಿ ಉಲಿಯ ಉಯ್ಯಲೆ ತೂಗ ತೊಡಗುತ್ತದೆ. ಯಾಕೆಂದರೆ 'ವ್ಯಕ್ತ', 'ಅಭಿವ್ಯಕ್ತ', ಇಂಥ ಪರಿಕಲ್ಪನೆಗಳೆಲ್ಲ 'ಅವ್ಯಕ್ತ'ವೆಂಬುದರ ವಿರೋಧದಲ್ಲಷ್ಟೆ ಅರ್ಥವನ್ನು ಪಡೆಯುವ ಪದಗಳು.

೧. ಆಕಾರಕ್ಕೆ ಕೇಡುಂಟು
ನಿರಾಕಾರಕ್ಕೆ ಕೇಡಿಲ್ಲ

೩. ನಿರಾಳವೆಂಬ ಕೂಸಿಂಗೆ
ಬೆಣ್ಣೆಯನ್ನಿಕ್ಕಿ ಹೆಸರಿಟ್ಟು ಕರೆದವರಾರೋ
ಅಕಟಕಟಾ ಶಬ್ದದ ಲಜ್ಜೆಯ ನೋಡಾ

೪. ಹಿಡಿವ ಕೈಯ ಮೇಲೆ ಕತ್ತಲೆಯಯ್ಯ
ನೋಡುವ ಕಂಗಳ ಮೇಲೆ ಕತ್ತಲೆಯಯ್ಯ
ನೆನೆವ ಮನದ ಮೇಲೆ ಕತ್ತಲೆಯಯ್ಯ
ಕತ್ತಲೆಯೆಂಬುದು ಇತ್ತಲೆಯಯ್ಯ
ಗುಹೇಶ್ವರನೆಂಬುದು ಅತ್ತಲೆಯಯ್ಯ

ಅಲ್ಲಮನ ಈ ವಚನಗಳನ್ನು ಸ್ವಲ್ಪ ಗಮನಕೊಟ್ಟು ನೋಡಿ. ಅಭಿವ್ಯಕ್ತಿಸಬೇಕಾದದ್ದು ಭಾಷೆಯ ಆಚೆಗೆ ಇದೆ, ಅದನ್ನು ಸುಳ್ಳಾಗದಂತೆ ಶಬ್ದದಲ್ಲಿ ಹೇಳುವುದು ಶಬ್ದವೇ ನಾಚುವ ಕೆಲಸ. ಭಾಷಾ ವ್ಯವಸ್ಥೆಯ ಆಚೆಗೆ ಇರುವುದೆಲ್ಲ ಆಕಾರ ರಹಿತ ಶುದ್ಧ ಅಖಂಡ ಇರುವಿಕೆ. ಅದಕ್ಕೆ ಎಂದೂ ಕೇಡಿಲ್ಲ, ಯಾಕೆಂದರೆ ಅದು 'ಅರ್ಥ' ಅಲ್ಲ, ಕೇವಲ ಇರುವಿಕೆ. ಆ ಇರುವಿಕೆಯನ್ನು ಗ್ರಹಿಸಲು ಮನುಷ್ಯನಿಗಿರುವ ಎಲ್ಲ ಪರಿಕರಗಳಿಗೂ-ಕೈ, ಕಣ್ಣು, ಮನ-ಕತ್ತಲೆ ಕವಿದಿದೆ. ಹೀಗಿರುವಾಗ ಭಾಷೆಯನ್ನು, ಕೈ-ಕಣ್ಣು-ಮನಸ್ಸುಗಳ ಸಹಯೋಗದ ಫಲಿತಾಂಶವಾದ ಭಾಷೆಯನ್ನು ನಂಬಿ ಅಭಿವ್ಯಕ್ತಿಸುವ ಸಾಹಸಕ್ಕೆ ತೊಡಗಲು ಸಾಧ್ಯವೇ? 'ಹೇಳಿದರೆ ಹಾಳಾಗುವುದೋ ಅನುಭವದ ಸವಿಯು/ಹೇಳದಿರೆ ತಾಳಲಾರನೋ ಕವಿಯು' ಎಂಬ ಕುವೆಂಪು ಮಾತುಗಳು ಕೂಡ ಇದೇ ದ್ವಂದ್ವವನ್ನು ಕುರಿತ ಮಾತುಗಳು. ಇದೇ ಸಂಗತಿಯನ್ನು, ಅಭಿವ್ಯಕ್ತಿಯ ಅಸಾಧ್ಯತೆಯನ್ನು ಅಲ್ಲಮನ ಈ ವಚನ ಹೇಳುತ್ತದೆ :

೫. ಕಂಗಳು ನಟ್ಟ ಗಾಯವನಾರಿಗೂ ತೋರಬಹುದೆ
ಮನ ಸೋಂಕಿದ ಸುಖದ ಮೊಟ್ಟೆಯ ಕಟ್ಟಬಹುದೆ
ಆತ ನಿಂದ ಸುಖವಾತಂಗೆ ಸಾಧ್ಯವಾಯಿತ್ತು
ಆತ ನಿಂದ ನಿಲವನೇನೆಂಬೆ

ಭಾಷೆಯೆಂಬುದು ಒಂದು ವ್ಯವಸ್ಥೆ, ಅತಿ ಸೂಕ್ಷ್ಮ ಧ್ವನಿಗಳಿಂದ ಹಿಡಿದು ವಾಕ್ಯಗಳವರೆಗೆ ಪರಸ್ಪರ ವ್ಯತ್ಯಾಸಗಳನ್ನು ಆಧರಿಸಿಯೇ ಈ ವ್ಯವಸ್ಥೆಯಲ್ಲಿ ಅರ್ಥಪ್ರಕಟನೆ ಸಾಧ್ಯ. ಭಾಷಾ ವ್ಯವಸ್ಥೆಯ ಆಚೆಗೆ ಅರ್ಥ ಎಂಬುದಿಲ್ಲ ಎಂಬ ತಿಳಿವಳಿಕೆ ಸಸ್ಯೂರನಿಂದಾಗಿ ಈಗ ನಮ್ಮ ಸಾಮಾನ್ಯ ಜ್ಞಾನದ ಭಾಗವಾಗಿಬಿಟ್ಟಿದೆ. ಅರ್ಥವು, ಅಭಿವ್ಯಕ್ತಿಸಬೇಕಾದ ಸಂಗತಿಯು, ಭಾಷೆಯ ಆಚಿನದು ಎಂದು ಹೇಳುವುದಕ್ಕೂ ಭಾಷೆಯೇ ಬೇಕಾಗಿದೆಯಲ್ಲ! ನಿರೂಪಕ್ಕೆ ಕೇಡಿಲ್ಲ, ನಿಜ. ಆದರೆ ರೂಪ ಎಂಬುದಿಲ್ಲದೆ ನಿರೂಪಕ್ಕೆ ಅರ್ಥವಾದರೂ ಎಲ್ಲಿದೆ? ಅಲ್ಲಮನ ಉಲಿಯ ಉಯ್ಯಲೆ ಇನ್ನೊಂದು ದಿಕ್ಕಿಗೂ ತೂಗಿದೆ:

೬. ರತ್ನದೀಪ್ತಿಯಾದಡೇನು
ಬಂಧಿಸಿದ ಕುಂದಣದಲ್ಲಿಯೆ ಸಂದಿರಬೇಕು
ಸ್ವಾದು ರಸದ ರುಚಿಯನೀವ ಫಲವೆಂದಡೇನು
ವೃಕ್ಷವಿಲ್ಲದನ್ನಕ್ಕರ
ಚಿತ್ರ ಸೌಂದರ್ಯ ನೋಟಕ್ಕೆ ಸುಖವೆಂದಡೇನು
ಭಿತ್ತಿಯ ಪಟ ಮುಖ್ಯ ಸ್ಥಾನವಿಲ್ಲದನ್ನಕ್ಕರ

ಅವ್ಯಕ್ತವಾದ ಬೆಳಕು ಕಣ್ಣಿಗೆ ವಸ್ತುವಾಗುವುದಕ್ಕೆ ಕುಂದಣ, ಅವ್ಯಕ್ತವಾದ ಹಣ್ಣಿನ ರುಚಿ ವ್ಯಕ್ತವಾಗಲು ವೃಕ್ಷದ ಆಸರೆ, ನೋಟ ಮನಸಿನ ಸುಖವಾಗುವುದಕ್ಕೆ ಭಿತ್ತಿಯ ಪಟವು ಪ್ರಾಮುಖ್ಯಗಳಿಸುವುದು ಅನಿವಾರ್ಯ. ಅನುಭವವೊಂದು ಅನುಭವವೆಂದು ನಮ್ಮ ಅರಿವಿಗೆ ಬರಬೇಕಾದರೆ ಮಾಧ್ಯಮವೊಂದು ಅನಿವಾರ್ಯ. ಆ ಮಾಧ್ಯಮ ಭಾಷೆಯಾದೀತು, ಬಣ್ಣವಾದೀತು, ಮರವೂ ಆದೀತು. ಅವ್ಯಕ್ತಕ್ಕೆ ಭಾಷೆ ಇಲ್ಲ. ಅದು ಕೇವಲ ಇರವು. ಕೇವಲ ನಿಶ್ಶಬ್ದ.ಆ ಶಬ್ದಕ್ಕೆ ಲಜ್ಜೆಯಾಗುವುದೆಂದರೂ ಶಬ್ದದೊಳಗಿನ ನಿಶ್ಶಬ್ದವನ್ನು ಅನುಭವಿಸುವುದೇ ನಿಜವಾದ ಅಭಿವ್ಯಕ್ತಿ. ಹಾಗೆ ಶಬ್ದ ನಿಶ್ಶಬ್ದಗಳನ್ನು ಗೆರೆಯೆಳೆದಂತೆ ಪ್ರತ್ಯೇಕಿಸುವುದೂ ಅಸಾಧ್ಯ. 'ವಾಗರ್ಥಾವಿವ ಸಂಪೃಕ್ತೌ' ಅಲ್ಲ ಇದು. ಅದಕ್ಕಿಂತ ಸೂಕ್ಷ್ಮವಾದದ್ದು. ಶಬ್ದನಿಶ್ಶಬ್ದಗಳ ಐಕ್ಯ ಅಲ್ಲಮನ ಅಭಿವ್ಯಕ್ತಿಚಿಂತನೆಯ ಮೂಲದಲ್ಲಿದೆ. ಈ ಸಂಗತಿಯನ್ನು ವಿವರವಾಗಿ ಪರಿಭಾವಿಸಬೇಕೆನ್ನುವವರು ಶೂನ್ಯ ಸಂಪಾದನೆಯಲ್ಲಿ ಬರುವ ಅಲ್ಲಮ-ಮುಕ್ತಾಯಕ್ಕಗಳ ಸಂವಾದವನ್ನು ಪರಿಶೀಲಿಸಬಹುದು.

ಹೀಗೆ ಅವ್ಯಕ್ತವಾದ ಪ್ರಜ್ಞೆ ವ್ಯಕ್ತವಾದಾಗ ಇರುವ ಸ್ಥಿತಿ ಎಂಥದು? ಇಂಗ್ಲೀಷಿನಲಿ Conceive ಎಂಬ ಪದವಿದೆಯಲ್ಲ-ಅದು ಆದಾಗ ಇರುವ ಸ್ಥಿತಿಯನ್ನು ಅಲ್ಲಮ ವಿವರಿಸಿದ್ದಾನೆ.

೭. ಮನೆ ಬಸುಱಾದರೆ ಕೈ ಬೆಸಲಾಯಿತ್ತ ಕಂಡೆ
ಕರ್ಪುರದ ಕಂಪ ಕಿವಿ ಕುಡಿಯಿತ್ತ ಕಂಡೆ
ಮುತ್ತಿನ ಥಾಳವ ಮೂಗು ನುಂಗಿತ್ತ ಕಂಡೆ
ಕಂಗಳು ಹಸಿದು ವಜ್ರವ ನುಂಗಿತ್ತ ಕಂಡೆ
ಒಂದು ನೀಲದೊಳಗೆ ಮೂಲೋಕವಡಗಿತ್ತ ಕಂಡೆ

ಅವ್ಯಕ್ತವು ವ್ಯಕ್ತವಾದಾಗ ಆಗುವ ಈ ಅನುಭವ ಕೇವಲ ಕವಿಯದು ಮಾತ್ರವಲ್ಲ ಓದುಗನದೂ ಹೌದು. ಓದಿದ್ದು ವಿವರಿಸಬಹುದಾದ ಅರ್ಥಮಾತ್ರವೆಂದು ಭಾವಿಸುವ ಕಾವ್ಯಮೀಮಾಂಸೆ ಕಳೆದುಕೊಳ್ಳುವುದೇ ಹೆಚ್ಚು. ಅರ್ಥವನ್ನೇ ಕೇಂದ್ರವಾಗಿ ಉಳ್ಳ ಕಾವ್ಯ ಮೀಮಾಂಸೆ ಅಭಿವ್ಯಕ್ತಿಯ ಪ್ರಶ್ನೆಯನ್ನು ಪರಿಶೀಲಿಸುವ ರೀತಿಯೇ ಬೇರೆ. ಸಿಸಿರೋ, ವಿಚಾರಗಳಿಗೆ ತಕ್ಕ ಭಾಷೆಯನ್ನು ಕಂಡುಕೊಳ್ಳುವುದೇ ಕವಿಯ ಮುಖ್ಯ ಕರ್ತವ್ಯ ಎಂದಾಗಲಾಗಲೀ, ಲಾಂಜಿನಸನು ಭವ್ಯತೆಯನ್ನು ಸಾಧಿಸಲು ಕವಿಗೆ ಐದು ಮೂಲಗಳಿವೆ ಎಂದಾಗಲಾಗಲೀ, ವರ್ಡ್ಸ್‌ವರ್ಥ್‌ನು ಕಾವ್ಯವೆಂಬುದು ಭಾವನೆಗಳ ಅಭಿವ್ಯಕ್ತಿ ಎಂದಾಗಲಾಗಲೀ-ಕವಿಯನ್ನು ಸ್ವತಂತ್ರ ವ್ಯಕ್ತಿತ್ವವೆಂದೇ ತಿಳಿದಿರುವುದು ಕಾಣುತ್ತದೆ. ಕವಿ ಎಂಬ ವ್ಯಕ್ತಿ ತಾನು ಕಂಡ, ಪಡೆದ ಅನುಭವವನ್ನು ಅಥವ ಅರ್ಥವನ್ನು ಅಚ್ಚುಕಟ್ಟಾಗಿ ವಿವರಿಸುವ ಸಮಸ್ಯೆಯನ್ನು ಎದುರಿಸುತ್ತಾನೆ ಎಂದೇ ಈ ಚಿಂತಕರು ಭಾವಿಸಿದ್ದಾರೆ.

ಹಾಗೆ ಕವಿಯನ್ನು ಒಬ್ಬ ಸ್ವತಂತ್ರ ಅಸ್ತಿತ್ವವುಳ್ಳ ವ್ಯಕ್ತಿ-ಘಟಕ ಎಂದು ಭಾವಿಸಲು ಸಾಧ್ಯವೇ? ಏಕೆಂದರೆ ಓದಿನ ಕ್ರಿಯೆಯ ಮುಖಾಂತರ ಓದುಗನ ಪ್ರಜ್ಞೆಯಲ್ಲಿ ಕವಿಯ ವ್ಯಕ್ತಿತ್ವ ಮೂಡುತ್ತದೆ. ಇತರ ಎಲ್ಲ ಪಾತ್ರಗಳಂತೆ, ಘಟನೆ, ಸಂಗತಿಗಳಂತೆ, ಕೃತಿಯೆಂಬುದು

ಕೇವಲ ಅಚ್ಚಾದ ಅಕ್ಷರಗಳಲ್ಲ. ಕೃತಿ ಎಂಬುದು ಓದುವಿಕೆಯ ಮುಖಾಂತರ, ಓದಿನ ಫಲಿತಾಂಶವಾಗಿ ಓದುಗನ ಪ್ರಜ್ಞೆಯಲ್ಲಿ ಮೂಡುವ 'ಫಲಿತಾಂಶ'. ನಮ್ಮ ಓದಿನ ಮೂಲಕವೇ ನಮ್ಮ ಪ್ರಜ್ಞೆಯಲ್ಲಿ ಪಂಪ, ಅಲ್ಲಮ, ಎಲಿಯಟ್ ಮೂಡುತ್ತಾರೆಯೇ ಹೊರತು ಬೇರೇನೂ ಇಲ್ಲ.

೮. ನನ್ನ ನಾನರಿವ ಮುನ್ನ ನೀನೇನಾಗಿದ್ದೆ ಹೇಳಾ

ಅಕ್ಕನ ಈ ಮಾತು ಓದಿನ ಕ್ರಿಯೆಗೂ ಅನ್ವಯವಾಗುತ್ತದೆ. ಕವಿಗೆ ಓದುಗನ ಪ್ರಜ್ಞೆಯಲ್ಲಲ್ಲದೆ, ಓದುವಿಕೆಯಲ್ಲಲ್ಲದೆ ಬೇರೆ ಅಸ್ತಿತ್ವವೇ ಇಲ್ಲ. ಅಲ್ಲಮ ನಮಗೆ ಹೇಳುತ್ತಾನೆ:

೯. ಆನು ನೀನೆಂಬುದು ತಾನಿಲ್ಲ
ತಾನಱಿದ ಬಳಿಕ ಮತ್ತೇನೂ ಇಲ್ಲ.

೧೦. ಮನದ ಮೇಲೆ ಅರಿವು
ಅರಿವಿನ ಮೇಲೆ ಕುರುಹಿದೇನೋ
ನೀನೆಂಬಲ್ಲಿ ನಾನು
ನಾನೆಂಬಲ್ಲಿ ನೀನು
ನೀ ನಾನೆಂಬುದಕ್ಕೆ ತೆರಹಿಲ್ಲ.

ಕುರುಹು ಎಂಬ ಮಾತು ಇಲ್ಲಿ ಕುತೂಹಲಕರವಾಗಿದೆ. ಅರ್ಥ ವಿಜ್ಞಾನಿಗಳು ಬಳಸುವ sign ಎಂಬ ಪಾರಿಭಾಷಿಕದಂತೆ ಇದನ್ನು ವಿವರಿಸಿಕೊಳ್ಳಬಹುದು. ಮತ್ತೆ ಸಸ್ಯೂರನನ್ನು ಜ್ಞಾಪಿಸಿಕೊಳ್ಳೋಣ. ಕುರುಹು ಅಥವ ಸಜ್ಞೆಯಲ್ಲಿ 'ಸೂಚಕ' ಮತ್ತು 'ಸೂಚಿತ'ಗಳೆಂಬ ಎರಡು ಅಂಶಗಳಿವೆ, ಅವೆರಡರ ನಡುವಣ ಸಂಬಂಧ ಆಕಸ್ಮಿಕವಾದದ್ದು, ಯಾದೃಚ್ಛಿಕವಾದದ್ದು ಎಂದು ಆತ ಹೇಳಿದ. ಸೂಚಕ ಮತ್ತು ಸೂಚಿತಗಳ ನಡುವಿನ ಅಂತರ ಶಾಶ್ವತವಾದದ್ದು. ಈ ಅಂತರವನ್ನು ತುಂಬಿಕೊಳ್ಳುವುದಕ್ಕೆಂದೇ ವಿಮರ್ಶೆ, ವ್ಯಾಖ್ಯಾನ ಇತ್ಯಾದಿಗಳನ್ನೆಲ್ಲ ನಾವು ಘುಟ್ಟಿಹಾಕಿಕೊಂಡಿದ್ದೇವೆ. ಈ ಎಲ್ಲ ಪ್ರಯತ್ನಗಳ ಹಿಂದೆ ಅರ್ಥವೆಂಬುದೊಂದು ಖಚಿತವಾಗಿ ಇದೆ. ಅದನ್ನು ನಾವು ಅರ್ಥೈಸಿಕೊಳ್ಳಬೇಕು ಎಂಬ ಹಂಬಲ ಕೆಲಸ ಮಾಡುತ್ತಿರುತ್ತದೆ. ಆದರೆ ಅರ್ಥವೆಂಬುದು ಅಷ್ಟು ಮುಖ್ಯವೆ? ಸೂಸನ್ ಲ್ಯಾಂಗರ್ 'ಅರ್ಥೈಸುವಿಕೆಯ ವಿರುದ್ಧ' ಎಂಬ ಪ್ರಸಿದ್ಧ ಲೇಖನ ಬರೆದಿರುವುದುಂಟು. ಅರ್ಥೈಸುವಿಕೆಯನ್ನು ಕೈಬಿಟ್ಟು ನೇರವಾಗಿ ಅರ್ಥವೇ ನಾವಾಗುವುದು ಉತ್ತಮವಲ್ಲವೆ? ಅಲ್ಲಮ ಕೇಳುವ ಪ್ರಶ್ನೆ ಇದು:

೧೧. ಅರ್ಥವುಳ್ಳನ್ನಕ್ಕರ ಅಱಿವುತ್ತಿದ್ದರೆ
ನಿಜವನ್ನೈದುವ ದಿನವಾವುದು

ನಮ್ಮ ಸಾಂಸ್ಕೃತಿಕ ಚಿಂತನೆಗಳೆಲ್ಲ ಪರಿಕಲ್ಪನೆಗಳನ್ನು ಆಶ್ರಯಿಸಿಯೇ ನಡೆಯುತ್ತವೆ. ಆದರೆ 'ಪರಿಕಲ್ಪನೆ'ಗಳು ಕಲ್ಪನೆಗಳೇ ಹೊರತು ನಿಜವಲ್ಲ. ಪರಿಕಲ್ಪನೆಗಳೇ ನಿಜವೆಂದು ಕೊಂಡಾಗ-

೧೨. ಭಾಷೆಯೆಂಬುದು ಪ್ರಾಣಘಾತಕ

ಎನ್ನುತ್ತಾನೆ ಅಲ್ಲಮ. ಭಾಷೆಯನ್ನು prision house ಎಂದವರೂ ಇದ್ದಾರೆ. ಅಭಿವ್ಯಕ್ತಿ ಎಂಬುದು ಅರ್ಥಕೇಂದ್ರಿತ ಎಂಬ ನಿಲವನ್ನು ತಿರಸ್ಕರಿಸಿದರೆ 'ನಿಜ' ಸಿಕ್ಕೀತು. ವೇದಗಳಾಗಲೀ ಶಾಸ್ತ್ರಗಳಾಗಲೀ ಎಲ್ಲವೂ ಪರಿಕಲ್ಪನೆಗಳು, ಪಾರಿಭಾಷಿಕಗಳನ್ನು ಆಧರಿಸಿದ ಸಂಕಥನಗಳು. ನಿಜವಾದ ಅಭಿವ್ಯಕ್ತಿ ದೊರೆಯಬೇಕಾದರೆ ಈ ಸಂಕಥನಗಳನ್ನೆಲ್ಲ ಮುರಿಯಬೇಕಾದ್ದು ಅನಿವಾರ್ಯವಾಗುತ್ತದೆ.

೧೩. ಅಜ್ಞಾನವೆಂಬ ತೊಟ್ಟಿಲೊಳಗೆ
ಜ್ಞಾನವೆಂಬ ಶಿಶುವ ಮಲಗಿಸಿ
ಸಕಲ ವೇದ ಶಾಸ್ತ್ರವೆಂಬ ನೇಣ ಕಟ್ಟಿ
ಹಿಡಿದು ತೂಗಿ ಜೋಗುಳವಾಡುತ್ತಿದ್ದಾಳೆ
ಭ್ರಾಂತಿಯೆಂಬ ತಾಯಿ
ತೊಟ್ಟಿಲು ಮುರಿದು
ನೇಣು ಹರಿದು
ಜೋಗುಳ ನಿಂದಲ್ಲದೆ
ಗುಹೇಶ್ವರನೆಂಬ ಲಿಂಗವ ಕಾಣಬಾರದು

ಭಾಷೆ, ಪರಿಕಲ್ಪನೆಗಳು ಇವೆಲ್ಲ ಮಗುವನ್ನು ಮಲಗಿಸಲೇಬೇಕೆಂದು ಹಟ ತೊಟ್ಟಿರುವ ತಾಯಿಯ ಹಾಗೆ. ಜ್ಞಾನವೆಂಬ ಮಗು ಎಚ್ಚರವಾಗಿರಲು ಬಯಸಿದರೂ ಬಿಡದೆ 'ಹಿಡಿದು ತೂಗಿ' ಮಲಗಿಸಲು ಜೋಗುಳ ಹೇಳುತ್ತಿರುತ್ತವೆ. ಈ ಭಾಷೆಗಳ, ಸಂಕಥನಗಳ ನೇಣು ಹರಿದುಬಿಡುವವರೆಗೆ ತನ್ನತನದ ಅಭಿವ್ಯಕ್ತಿ ಸಾಧ್ಯವಾಗದು.

ಕಾವ್ಯ ಮೀಮಾಂಸೆಯು ಅರ್ಥಕೇಂದ್ರಿತವಾದಾಗ ತುಂಬ ಇಕ್ಕಟ್ಟಿನದಾಗುತ್ತದೆ. ಅರ್ಥವೆಂದರೇನೆ ಮಿತಿ. ಸೂಚಕ ಸೂಚಿತಗಳ ನಡುವಿನ ಸ್ವಾತಂತ್ರ್ಯಕ್ಕೆ ನಮ್ಮ ಅಗತ್ಯಕ್ಕೆ ತಕ್ಕಂತೆ ನಾವು ಹಾಕಿಕೊಳ್ಳುವ ಮಿತಿ. ಕಾವ್ಯವನ್ನು ಓದುಗನ ಪ್ರಜ್ಞೆಗೆ ಸಂಬಂಧಿಸದ ಸ್ವತಂತ್ರ ಅಸ್ತಿತ್ವವುಳ್ಳ ವಸ್ತು ಎಂದು ಭಾವಿಸುವ ನಮ್ಮ ವಿಮರ್ಶೆಯ ಮಾದರಿಗಳು ಕಾವ್ಯದ ಅರ್ಥವನ್ನು ವಾಗ್ವಾದದ ವಸ್ತುವಾಗಿಸುತ್ತವೆ. ಬುದ್ಧಿ ಪ್ರಮುಖವಾಗಿ, ವೈಜ್ಞಾನಿಕ ನಿಷ್ಪೃಷ್ಟತೆಯ ಹಂಬಲ ಅಸಾಧ್ಯವನ್ನು ಸಾಧ್ಯವಾಗಿಸಬೇಕೆಂಬ ಹಠದ ವ್ಯರ್ಥ ಸಾಧನೆಯಾಗುತ್ತದೆ. ಕಾವ್ಯದಲ್ಲಿ ಅರ್ಥವೂ ಮುಖ್ಯವಲ್ಲ, ಸತ್ಯವೂ ಮುಖ್ಯವಲ್ಲ, ಅನುಭವದ ನಿರಂತರ ಪ್ರಸರಣ ಮಾತ್ರ ಮುಖ್ಯವಾಗಿರುತ್ತದೆ.

೧೪. ಮನದ ಸುಖವ ಕಂಗಳಿಗೆ ತಂದರೆ
ಕಂಗಳ ಸುಖವ ಮನಕ್ಕೆ ತಂದರೆ
ನಾಚಿತ್ತು ಮನ ನಾಚಿತ್ತು
ಸ್ಥಾನ ಪಲ್ಲಟವಾದಡೆ
ವ್ರತಕ್ಕೆ ಭಂಗ

ಅದಕ್ಕೆಂದೇ ಮೊದಲಲ್ಲಿ ಹೇಳಿದ್ದು: ಕಾವ್ಯ ಮತ್ತು ಕಾವ್ಯ ಮೀಮಾಂಸೆ ಎರಡೂ ಪರಸ್ಪರ ಸಂಬಂಧ ಇರಲೇ ಬೇಕಾಗಿಲ್ಲದ ಸಂಕಥನಗಳು ಎಂದು. ಕಾವ್ಯಾನುಭವ ಕಾವ್ಯ ಮೀಮಾಂಸೆಯ ವಸ್ತು ಆಗಬಲ್ಲುದೇ? ಪಂಪನ ಈ ಮಾತನ್ನು ಸ್ವಲ್ಪ ಗಮನಿಸಿ. ಅವನು ಹೇಳುತ್ತಾನೆ, ಕಾವ್ಯವೆನ್ನುವುದು ಒಬ್ಬ ಪಣ್ಯಾಂಗನೆ. ಅವಳಿಂದ ಸುಖವನ್ನು ಪಡೆವರೀತಿಯನ್ನು ಸುವಿಟಬಲ್ಲನೇ ಹೊರತು ಕುವಿಟ ಅಲ್ಲ. ಫ್ರಾನ್ಸಿನ Roland Barthes, 'Poetics' ಎಂಬ ಮಾತಿಗೆ ಬದಲಾಗಿ 'Erotics' ಎಂಬ ಮಾತನ್ನು ಬಳಸಬೇಕೆನ್ನುತ್ತಾನೆ. ನಾನು ಒಬ್ಬ ಓದುಗನಾಗಿ, ನನ್ನ ಓದಿನ ಕ್ರಿಯೆ ಕೇವಲ ಅರ್ಥದ ಅನ್ವೇಷಣೆಯಾಗದೆ, ಸೂಚಕ-ಸೂಚಿತಗಳ ನಡುವಿನ ಅಂತರದಲ್ಲಿ ಸ್ವಚ್ಛಂದವಾಗಿ ವಿಹರಿಸುವ ಸ್ವಾತಂತ್ರ್ಯವನ್ನು ಬಳಸಿಕೊಂಡಾಗ, ಓದು ಶಾಸ್ತ್ರವಾಗದೆ ಲೀಲೆಯಾದಾಗ, ಅಭಿವ್ಯಕ್ತಿ ಕೇವಲ ಕವಿಗೆ ಸಂಬಂಧಿಸಿದ ಪ್ರಶ್ನೆಯಾಗಲೀ ಬಂಧಕ್ಕೆ ಸಂಬಂಧಿಸಿದ ಪ್ರಶ್ನೆಯಾಗಲೀ ಆಗದೆ, ನನಗೇ ಸಂಬಂಧಿಸಿದ ಪ್ರಶ್ನೆಯಾಗುತ್ತದೆ. ಓದುವುದೆಂದರೆ ನನಗೆ ನಾನೇ ಅಭಿವ್ಯಕ್ತವಾಗುವ ಕ್ರಿಯೆಯಾಗುತ್ತದೆ. ಈ ಅಭಿವ್ಯಕ್ತಿಯಾದರೂ ಒಮ್ಮೆ ಆಗಿ ಮುಗಿಯುವಂಥದಲ್ಲ. ಉಲಿಯ ಉಯ್ಯಲೆತೂಗಿದಂತೆ, ಸಿಕ್ಕಂತೆ-ಸಿಗದಂತೆ, ಆಗುತ್ತ-ಆಗದಿರುತ್ತ ಇರುವಂಥದು.

■

ಪ್ರತಿಮೆ ಎಂಬುದು ಮೂಲತಃ ಕವಿ ಮನಸ್ಸಿನ ಸೃಜನೆ. ಒಂದು ಮತ್ತೊಂದಕ್ಕೆ ದೂರದಲ್ಲಿರುವ ಮತ್ತು ಯಾವದೇ ಸಂಬಂಧವಿದೆಯೆಂಬಂತೆ ತೋರದ, ಎರಡು ಅಥವಾ ಹೆಚ್ಚಿನ ವಸ್ತು ಸತ್ಯಗಳ ಹೋಲಿಕೆಯಿಂದ ಸಂಭವಿಸುವುದಲ್ಲ ಅದು; ಅದರ ಬದಲು, ದೂರದೂರದ ಆ ಎರಡು ವಸ್ತುಗಳಿಗಿರುವ ಯಾವುದೇ ಸಾದೃಶ್ಯವನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ, ಅವೆರಡಕ್ಕಿರುವ ಒಳ ಸಂಬಂಧವನ್ನು ಕವಿಯ ಪ್ರಜ್ಞೆ ಮಾತ್ರ ಗ್ರಹಿಸಿ, ಅವುಗಳನ್ನು ಸಂಘಟಿಸಿದ್ದರಿಂದ, ಅದುವರೆಗೂ ಮನೋಗೋಚರ ವಾಗದಿದ್ದ ಹೊಸತೊಂದು ಹುಟ್ಟಿಕೊಳ್ಳುತ್ತದೆ. ಇದೇ ಪ್ರತಿಮೆ.... ಪ್ರತಿಮೆ, ಒಂದರ ಮೂಲಕ ಮತ್ತೊಂದನ್ನು ತೆರೆಯುವಂತಹದ್ದು, ಮತ್ತು ಅವೆರಡರ ಸಾಮ್ಯ, ಅಜ್ಞಾತವಾದುದನ್ನು ಜ್ಞಾತವನ್ನಾಗಿ ಮಾಡುತ್ತದೆ.

– ಹರ್ಬರ್ಟ್ ರೀಡ್

ಪುನರ್ಲಿಖಿತ ಭಾರತೀಯ ಕಾವ್ಯ ಶಾಸ್ತ್ರದತ್ತ..

- ಪ್ರೊ ॥ ಕೃಷ್ಣ ರಾಯನ್

ಭಾರತೀಯ ಭಾಷೆಗಳೆಲ್ಲವುಗಳ ಸಾಹಿತ್ಯಗಳು ಸೇರಿ, ಪರ್ಶಿಯೋ-ಅರಾಬಿಕ್ ಮತ್ತು ಯುರೋ-ಅಮೇರಿಕನ್ ಸಾಹಿತ್ಯ ವ್ಯವಸ್ಥೆಗಳಿಗೆ ಹೋಲಿಸಬಹುದಾದ, ಭಾರತೀಯ ಸಾಹಿತ್ಯ ವ್ಯವಸ್ಥೆಯೊಂದನ್ನು ನಿರ್ಮಿಸುತ್ತವೆ. ಚೀನ ಮತ್ತು ಜಪಾನಿನ ಸಾಹಿತ್ಯ, ವ್ಯವಸ್ಥೆಗಳು ಏಕ ಭಾಷಾ ಸ್ಥಿತಿಯನ್ನು ತೋರಿಸುತ್ತವೆಯಾದರೆ ಜಗತ್ತಿನ ಉಳಿದ ಸಾಹಿತ್ಯ ವ್ಯವಸ್ಥೆಗಳು ಭಾಷಾ ಬಹುತ್ವದ ಸ್ಥಿತಿಯನ್ನು ತೋರುತ್ತವೆ. ಸಾಮಾನ್ಯವಾಗಿ ಪರಸ್ಪರ ಹತ್ತಿರದ ಸಂಬಂಧತೋರುವ ಸಾಹಿತ್ಯಗಳು, ಏಕೀಭವಿಸುವಂತಹ ಕೇಂದ್ರೀಯ ಚಲನೆಯ ಮೂಲಕ ಸಾಹಿತ್ಯವ್ಯವಸ್ಥೆಯೊಂದನ್ನು ರಚಿಸುತ್ತವೆ. ಈ ಏಕೀಭವಿಸುವ ಕೇಂದ್ರೀಯ ಚಲನೆಯ ಮುಖ್ಯ ಕರಾಣಗಳೆಂದರೆ :

೧. ಸಾಹಿತ್ಯ ವ್ಯವಸ್ಥೆಯೊಂದನ್ನು ರೂಪಿಸುವ ಸಾಹಿತ್ಯಗಳ ಭಾಷೆಗಳು ಒಂದೇ ಕುಟುಂಬಕ್ಕೆ ಸೇರಿದವುಗಳಾಗಿರುತ್ತವೆ. ಆದರೆ ಭಾರತೀಯ ಸಾಹಿತ್ಯ ವ್ಯವಸ್ಥೆಯ ನಿರ್ಮಾಣದಲ್ಲಿ ಈ ಕಾರಣವನ್ನು ಗುರುತಿಸಲಾಗದು.

೨. ಸಾಹಿತ್ಯ ವ್ಯವಸ್ಥೆಯೊಂದರಲ್ಲಿ ಭಾಗಿಯಾಗುವ ವಿವಿಧ ಸಾಹಿತ್ಯಗಳು ಒಂದೇ ಸಂಸ್ಕೃತಿಯ ಉತ್ಪನ್ನಗಳಾಗಿರುತ್ತವೆ. ಇಂಥ ಸಂಸ್ಕೃತಿಯು ಸಾಮಾನ್ಯವಾಗಿ ಅತ್ಯಂತ ಸಂಕೀರ್ಣವಾದದ್ದೂ ವೈವಿಧ್ಯಗಳನ್ನು ತೋರುವಂತಹದ್ದೂ ಆಗಿರುತ್ತದೆ. ಇದಕ್ಕೆ ಕೂಡ ಅಪವಾದಗಳಿವೆ. ಕೆಲವು ಸಾಹಿತ್ಯ ವ್ಯವಸ್ಥೆಗಳು ಸಾಂಸ್ಕೃತಿಕ ಬಹುತ್ವದ ಮೂಲಗಳನ್ನು ಹೊಂದಿರಬಹುದು.

೩. ಭೌಗೋಲಿಕ ಸಾಮೀಪ್ಯ, ಉತ್ಕೃಷ್ಟವಾದ ಸಂಪರ್ಕ ವ್ಯವಸ್ಥೆ, ವಿಪುಲವಾದ ಭಾಷಾಂತರ ಕ್ರಿಯೆ ಮತ್ತು ಲೇಖಕರು-ಓದುಗರು ಭಿನ್ನ ಭಿನ್ನ ಭಾಷೆಗಳಿಗೆ ಒಡ್ಡಿಕೊಳ್ಳುವದು ಈ ಮುಂತಾದ ಚಟುವಟಿಕೆಗಳಿಂದ ಏರ್ಪಡುವ ಪ್ರಕ್ರಿಯೆಯೊಂದರ ಮೂಲಕ ಏಕೀಭವಿಸುವಿಕೆಯ ಕ್ರಿಯೆಯು ನಡೆಯುತ್ತದೆ.

ಆದರೆ ಇಷ್ಟೆಲ್ಲ ಕಾರಣಗಳಿಗಿಂತ ಭಿನ್ನವಾದದ್ದು ಮತ್ತು ಸಾಹಿತ್ಯ ವ್ಯವಸ್ಥೆಯೊಂದನ್ನು ಒಂದಾಗಿ ಹಿಡಿದಿಡುವಂತಹ ಅಂಶವೆಂದರೆ ಅದು ಹೊಂದಿರುವ ಏಕೈಕವಾದ ಕಾವ್ಯಶಾಸ್ತ್ರ. ಕಾವ್ಯ ಶಾಸ್ತ್ರವು ಸೂಚ್ಯವಾದದ್ದಾಗಲಿ-ವಿವರವಾದದ್ದಾಗಲಿ, ಮೌಖಿಕವಾದದ್ದಾಗಲೀ ಅಥವಾ ಲಿಖಿತವಾದದ್ದಾಗಲಿ-ಅದು ಮುಖ್ಯವಾಗಿ ಚಾಲ್ತಿಯಲ್ಲಿರುವ ಸಾಹಿತ್ಯ ಚಟುವಟಿಕೆಯ

ಪ್ರಧಾನ ಲಕ್ಷಣಗಳನ್ನು ನಿರೂಪಿಸುವ ಲಕ್ಷಣ ಶಾಸ್ತ್ರವಾಗಿರುತ್ತದೆ, ಅಥವಾ ಇಂಥ ಪ್ರಧಾನ ಲಕ್ಷಣಗಳನ್ನು ಸಿಂಧುಗೊಳಿಸುವ ತಾತ್ವಿಕ ವಿವೇಚನೆಯಾಗಿರುತ್ತದೆ, ಅಥವಾ ಇವೆರಡೂ ಅಂಶಗಳನ್ನು ಒಳಗೊಂಡಿರುತ್ತದೆ. ಇವೆರಡೂ ಅಂಶಗಳನ್ನು ಒಳಗೊಂಡಿದ್ದಾದರೆ ಅದು ವಿವರಣಾತ್ಮಕವಾದ ಮತ್ತು ಕಾರ್ಯ ಕಾರಣ ವಿಶ್ಲೇಷಣಾತ್ಮಕವಾದ ಅಂಶಗಳನ್ನು ಪರಸ್ಪರ ಪ್ರೇರಣಾತ್ಮಕವಾದ ಸಂಬಂಧದಲ್ಲಿ ಹೊಂದಿರುತ್ತದೆ.

ಕಾವ್ಯ ಶಾಸ್ತ್ರವು ತೋರುವ ಒಂದು ರೀತಿಯ ಸಡಿಲುತನ ಮತ್ತು ಅದು ಪ್ರಯೋಗ ಶೀಲತೆಯನ್ನು ಒಳಗೊಳ್ಳುವ, ಬದಲಾವಣೆಯನ್ನು ತೋರುವಂಥದಾದ್ದರಿಂದ ಸಾಹಿತ್ಯ ವ್ಯವಸ್ಥೆಯು ಚಲನಶೀಲತೆಯನ್ನುಗಳಿಸುತ್ತದೆ. ಬದಲಾವಣೆಯ ಕ್ರಿಯೆಯು ವ್ಯಕ್ತಿಗತ ಮೀರುವಿಕೆಯಿಂದ ನಡೆಯಬಹುದು ಅಥವಾ ಈಗಾಗಲೇ ಸ್ಥಾಪಿತವಾದ ನಿಯಮ ಅಥವಾ ರೂಢಿಗಳನ್ನು ವಿರೋಧಿಸುವಂತಹ ಚಳುವಳಿಗಳಿಗೆ ಬದ್ಧವಾಗಿ ಬರೆಯುವುದರಿಂದ ನಡೆಯಬಹುದು. ಒಂದೊಮ್ಮೆ ಈ ಬದಲಾವಣೆಗಳು ಸ್ಥಾಪಿತಗೊಂಡು ಸಾಹಿತ್ಯ ಚಟುವಟಿಕೆಗಳಲ್ಲಿ ಸಹಜವೆಂಬಂತೆ ಬಳಕೆಗೆ ಬಂದಾಗ ಕಾವ್ಯ ಶಾಸ್ತ್ರವು ಇದನ್ನೂ ತನ್ನ ಒಂದು ಅಂಗದಂತೆ ಒಳಗೊಳ್ಳುತ್ತದೆ. ಪಠ್ಯ ಪುಸ್ತಕಗಳಲ್ಲಿನ ಕಾವ್ಯಶಾಸ್ತ್ರವು ಸಂಪೂರ್ಣವಾದದ್ದು ಮತ್ತು ನಿರ್ದಿಷ್ಟವಾದದ್ದು ಎಂದು ತೋರಬಹುದು. ಆದರೆ ಇಂಥ ಸ್ಥಿತಿ ನಿಜವಾಗಿಯೂ ಇರುತ್ತದೆನ್ನುವುದಾದರೆ ಅದು ಯಾವದೋ ಕಾರಣದಿಂದ ಸಾಹಿತ್ಯ ವ್ಯವಸ್ಥೆಯು ಪಾಷಾಣೀಕರಣಗೊಂಡಿದೆ ಎನ್ನುವಾಗ ಮಾತ್ರ. ಸಾಹಿತ್ಯ ವ್ಯವಸ್ಥೆಯೊಂದರ ಮುಖ್ಯ ಲಕ್ಷಣವೆಂದರೆ, ಅದು ತನ್ನ ವ್ಯಕ್ತಿತ್ವಕ್ಕೆ ಭಂಗ ಬಾರದಂತೆ, ಪರಂಪರೆಯ ಹರಿವು ದರಿಗಟ್ಟದಂತೆ ಬದಲಾಗುತ್ತಿರುತ್ತದೆ. ಉದಾ: ಪಾಶ್ಚಾತ್ಯ ಅಥವಾ ಯುರೋ-ಅಮೇರಿಕನ್ ಸಾಹಿತ್ಯ ವ್ಯವಸ್ಥೆಯು ಕಳೆದ ೩೦೦ ವರ್ಷಗಳ ಕಾಲದಲ್ಲಿ ನಿಯೋಕ್ಲಾಸಿಕಲ್‌ನಿಂದ ಹೈ ರೋಮ್ಯಾಂಟಿಕ್, ಹೈ ರೋಮ್ಯಾಂಟಿಕ್‌ನಿಂದ ಲೇಟ್ ರೋಮ್ಯಾಂಟಿಕ್, ಲೇಟ್ ರೋಮ್ಯಾಂಟಿಕ್‌ನಿಂದ ಮಾಡರ್ನಿಷ್ಟ್, ಮಾಡರ್ನಿಷ್ಟ್‌ನಿಂದ ಪೋಸ್ಟ್ ಮಾಡರ್ನಿಷ್ಟ್ ರೂಪಗಳಂತೆ ಬದಲಾಗುತ್ತ ಬರುತ್ತಿದೆ.

ಸಾಹಿತ್ಯ ವ್ಯವಸ್ಥೆಯೊಂದು ಬೇರೆ ಸಾಹಿತ್ಯ ವ್ಯವಸ್ಥೆಗಳ ಜೊತೆಗೆ ಸಂಘರ್ಷಿಸುತ್ತ ತನಗೆ ಪೂರಕವಾಗುವಂತಹ, ಹೊಂದುವಂತಹ ಅಂಶಗಳನ್ನು ಸ್ವೀಕರಿಸುತ್ತಿರುತ್ತದೆ. ಬೇರೆ ಸಾಹಿತ್ಯ ವ್ಯವಸ್ಥೆಗಳಲ್ಲಿನ ಹೆಚ್ಚು ಸ್ಪಷ್ಟಗೊಂಡಂತಹ ಕೆಲವು ಅಂಶಗಳಿಂದ ಇಂಥ ಸಾಹಿತ್ಯ ವ್ಯವಸ್ಥೆಯು ತನ್ನ ಸೀಮೆಯನ್ನು ವಿಸ್ತರಿಸಿಕೊಳ್ಳುತ್ತಿರುತ್ತದೆ. ಬೇರೆ ಸಾಹಿತ್ಯ ವ್ಯವಸ್ಥೆಗಳೊಂದಿಗೆ ಸಂಪರ್ಕಕಡಿದುಕೊಂಡ ಮಡಿವಂತ ಸಾಹಿತ್ಯ ವ್ಯವಸ್ಥೆಗಳು ಪೆಡಸುಗೊಳ್ಳುತ್ತ ಸಾವಿನತ್ತ ಸಾಗುತ್ತಿರುತ್ತವೆ. ದಾರಿದ್ರ್ಯಕ್ಕೆ ಈಡಾಗಿರುತ್ತವೆ. ಆದರೆ ಸಾಹಿತ್ಯ ವ್ಯವಸ್ಥೆಯೊಂದು ಮತ್ತೊಂದು ಸಾಹಿತ್ಯ ವ್ಯವಸ್ಥೆಯೊಂದಿಗಿನ ಸಂಪರ್ಕವನ್ನು ಏಕೆ ಕಡಿದುಕೊಳ್ಳುತ್ತದೆ? ಇಂಥದಕ್ಕೆ ಮುಖ್ಯವೆಂದು ತೋರುವ ಕಾರಣವೆಂದರೆ, ಆ ಬೇರೆ ಸಾಹಿತ್ಯವ್ಯವಸ್ಥೆಯ ಬಗೆಗೆ ತಾಳುವ ಭಯ; ಅದರಲ್ಲಿನ ಅಂಶಗಳನ್ನು ಅಳವಡಿಸಿಕೊಳ್ಳುವ ಮೂಲಕ ತಾನು ಅದರ ಪ್ರಾಬಲ್ಯವನ್ನು ಒಪ್ಪಿಕೊಂಡಂತಾಗುತ್ತದೆನ್ನುವ ಭಯ. ಆದರೆ ಭಾರತೀಯ ಮತ್ತು ಪಾಶ್ಚಾತ್ಯ ಸಾಹಿತ್ಯ

ವ್ಯವಸ್ಥೆಗಳ ನಡುವೆ ಇಂತಹ ಭಯದ ಸಂಶಯ ಬರಬೇಕಾಗಿಲ್ಲ. ಯಾಕೆಂದರೆ ನಾವು ವಸಾಹತುಶಾಹಿಯ ಪರಿಣಾಮಗಳನ್ನು ದಾಟಿಕೊಂಡು ಬಂದಿದ್ದೇವೆ. ಇಂಥ ಸಂಬರ್ಧದಲ್ಲಿ ಈ ಎರಡು ಸಾಹಿತ್ಯ ವ್ಯವಸ್ಥೆಗಳ ನಡುವಿನ ಸಂಬಂಧವು ಸಂಸ್ಕೃತ ಮತ್ತು ತಮಿಳು ಸಾಹಿತ್ಯ ಪರಂಪರೆಗಳ ನಡುವಿನ ಸಂಬಂಧದಂತೆಯೇ ಗ್ರಹಿಸಲ್ಪಡಬೇಕು. ವಸಾಹತುಶಾಹಿಯ ತಲೆಭಾರ ಕಳೆದು ಹೋದ ಹಿನ್ನೆಲೆಯಲ್ಲಿ ಇಂದು ಈ ಎರಡು ವ್ಯವಸ್ಥೆಗಳ ನಡುವೆ ಯಾವ ಮುಜುಗರಗಳೂ ಇಲ್ಲದಂತೆ ಕೊಡುಕೊಳುವ ಸಂಬಂಧ ಏರ್ಪಡಬೇಕು. ಸಂಸ್ಕೃತ ಮತ್ತು ತಮಿಳು ಸಾಹಿತ್ಯ ಪರಂಪರೆಗಳ ನಡುವೆ ಏರ್ಪಟ್ಟಿದ್ದ ಇಂಥ ಸಂಬಂಧವನ್ನು ಅವುಗಳ ಕಾವ್ಯ ಶಾಸ್ತ್ರಗಳಲ್ಲಿರುವ ಸಮಾನಾರ್ಥಕ ಪರಿಕಲ್ಪನೆಗಳು ಸ್ಪಷ್ಟವಾಗಿ ತೋರಿಸಬಲ್ಲವು. ಉದಾ : ಧ್ವನಿ- ಉಲ್ಲುರೈ; ರಸ-ಮೆಪಾತು; ವಿಭಾವಾದಿ-ಮುತಲ್, ಕಾರು; ಶೃಂಗಾರರಸ-ಅಕಮ್; ವೀರರಸ-ಪುರಂ.. ಇತ್ಯಾದಿಗಳು.

೧೦ನೆಯ ಶತಮಾನದ ನಂತರ ಮೂಡಿಬಂದ ಆಧುನಿಕ ಭಾರತೀಯ ಭಾಷಾಸಾಹಿತ್ಯಗಳೆಲ್ಲ ಸೇರಿ ಒಂದು ಸಾಹಿತ್ಯ ವ್ಯವಸ್ಥೆ ರೂಪುಗೊಳ್ಳಲು ಸಾಧ್ಯವಾದದ್ದು ಅನೇಕ ಭಾರತೀಯ ಭಾಷೆಗಳು ಒಂದು ಮೂಲದಿಂದ ಉಗಮಹೊಂದಿದವುಗಳಾದ್ದರಿಂದ, (ಇಂಡೋ ಆರ್ಯನ್ ಮೂಲದ ಭಾಷೆಗಳಿಗೆ ಸಂಬಂಧಿಸಿದಂತೆ) ಮತ್ತು ಈ ಸಾಹಿತ್ಯಗಳ ಹಿನ್ನೆಲೆಯಲ್ಲಿ ಒಂದೇ ಸಾಂಸ್ಕೃತಿಕ ಪರಿಸರ ಇದ್ದದ್ದರಿಂದ (ದ್ರಾವಿಡ ಭಾಷಾ ಸಾಹಿತ್ಯಗಳಿಗೆ ಸಂಬಂಧಿಸಿದಂತೆ). ಇನ್ನೊಂದು ಕಾರಣವೆಂದರೆ, ಇಂಥ ವ್ಯವಸ್ಥೆಗೆ ಬೇಕಾಗುವಂತಹ ಕಾವ್ಯ ಶಾಸ್ತ್ರವೊಂದು ಸಂಸ್ಕೃತ ಕಾವ್ಯ ಮೀಮಾಂಸೆಯ ರೂಪದಲ್ಲಿ ಈಗಾಗಲೇ ಇದ್ದಿತು. ಅದು ೯ನೇ ಶತಮಾನದಷ್ಟೊತ್ತಿಗೆ ಲಕ್ಷಣಶಾಸ್ತ್ರದೊಂದಿಗೆ ನೆಲೆನಿಂತಿತ್ತು. ಆನಂದವರ್ಧನನ 'ಧ್ವನ್ಯಾಲೋಕ'ವು ಈ ಕಾವ್ಯ ಶಾಸ್ತ್ರದ ಕೇಂದ್ರ ಪಠ್ಯವಾಗಿದ್ದಿತು. (ಅದಾಗಲೇ 'ಸಂಗಂ' ಕಾವ್ಯಶಾಸ್ತ್ರದ ಕೇಂದ್ರ ಪಠ್ಯವಾಗಿ 'ತೋಕಾಪ್ಪಿಯಂ' ಕೂಡ ನೆಲೆಗೊಂಡಿದ್ದಿತಾದರೂ ಅದು ಕೇವಲ ತಮಿಳು ಸಾಹಿತ್ಯ ಪರಂಪರೆಯ ವೈಶಿಷ್ಟ್ಯ ಹೇಳುವಂತಹದಾಗಿದ್ದಿತು). ಆದರೆ ನಮ್ಮಲ್ಲಿ ಮೂಡಬಹುದಾದ ಪ್ರಶ್ನೆ ಎಂದರೆ-ಸಾಹಿತ್ಯ ವ್ಯವಸ್ಥೆಯೊಂದು ಮೂಡಿಬರುವುದಕ್ಕಿಂತ ಮೊದಲೇ ಅದರ ಕಾವ್ಯ ಶಾಸ್ತ್ರವೊಂದು ನೆಲೆಗೊಂಡಿರಲು ಸಾಧ್ಯವೆ? ಕಾವ್ಯಶಾಸ್ತ್ರವು ವಿವರಣಾತ್ಮಕವಾದ ಅಂಶವನ್ನು ಮತ್ತು ಕಾರ್ಯ-ಕಾರಣ ವಿವೇಚನೆಯನ್ನು ಹೊಂದಿರುವುದನ್ನು ಈಗಾಗಲೇ ಹೇಳಲಾಗಿದೆ. ಕಾವ್ಯ ಶಾಸ್ತ್ರವು ಕೇವಲ ವಿವರಣಾತ್ಮಕ ಅಂಶವನ್ನು ಹೊಂದಿದ್ದರೆ ಅದು ಈಗಾಗಲೇ ಇರುವ ಸಾಹಿತ್ಯ ಚಟುವಟಿಕೆಗಳ ಬಗೆಗಿನ ವಿಮರ್ಶಾತ್ಮಕ ವಿಶ್ಲೇಷಣೆಯಾಗಿರುತ್ತದೆ. ಆದರೆ ಎರಡನೆಯ ಅಂಶವಿರುವುದಾದರೆ, ಅಂದರೆ ಕಾರ್ಯ ಕಾರಣ ವಿವೇಚನೆಯಿದ್ದರೆ, ಅದು ಮುಂದೆ ಬರಲಿರುವ ಸಾಹಿತ್ಯದ ಮೇಲೆ ಪ್ರಭಾವ ಬೀರುತ್ತದೆ; ಸಾಹಿತ್ಯಕ ಚಟುವಟಿಕೆಗಳನ್ನು ನಿಯಂತ್ರಿಸುತ್ತದೆ.

ಒಂದೇ ಮೂಲದ ಭಾಷೆಗಳ ಸಾಹಿತ್ಯಗಳು ಸೇರಿ ಸಾಹಿತ್ಯವ್ಯವಸ್ಥೆಯೊಂದು ರೂಪುಗೊಳ್ಳುವಾಗ ಆ ಸಾಹಿತ್ಯವ್ಯವಸ್ಥೆಯು ಪಿತೃಭಾಷೆಯ ಕಾವ್ಯ ಶಾಸ್ತ್ರವನ್ನು ತನ್ನದಾಗಿಸಿಕೊಳ್ಳುತ್ತದೆ. ಒಂದು ಕಾವ್ಯಶಾಸ್ತ್ರದ ಸಾಫಲ್ಯ ಮತ್ತು ಅದರ

ಮುಂದುವರಿಯುವಿಕೆಯು ಅದರ ತಾತ್ವಿಕ ವಿವೇಚನಾ ಶಕ್ತಿಯನ್ನು ಅವಲಂಬಿಸಿರುತ್ತದೆ. ಅದರ ಪ್ರಭಾವಶಾಲೀ ನಿಲವು ಅದರ ಕಾರ್ಯ ಶೈಲಿಯನ್ನು ಅವಲಂಬಿಸಿರುತ್ತದೆ. ಅದು ಯಜಮಾನಿಕೆಯನ್ನು ಹೇರುವ ಬದಲು ಪ್ರೇರಣಾತ್ಮಕವಾದದ್ದಾಗಿರಬೇಕು. ಅದು ದಬಾವಣೆ ಮಾಡುವಬದಲು ಪೋಷಿಸುವಂತಹದ್ದಾಗಿರಬೇಕು. ಭಾರತೀಯ ಸಾಹಿತ್ಯ ವ್ಯವಸ್ಥೆಯಲ್ಲಿನ ವಿವಿಧ ಭಾಷಾ ಸಾಹಿತ್ಯಗಳು ವಿಕಾಸಹೊಂದಿ ಪಕ್ವತೆಯನ್ನು ಪಡೆದಿದ್ದರೂ ಅವಾವವೂ ತಮ್ಮದೇ ಆದ ಪ್ರತ್ಯೇಕ ಕಾವ್ಯ ಶಾಸ್ತ್ರಗಳನ್ನು ಬೆಳೆಸಿಕೊಳ್ಳದಿರುವದು ಸಂಸ್ಕೃತ ಕಾವ್ಯ ಶಾಸ್ತ್ರವು ಈ ಮೇಲೆ ಹೇಳಿದ ಕ್ರಿಯಾ ಶೈಲಿಯನ್ನು ರೂಢಿಸಿಕೊಂಡ, ಎಲ್ಲ ಭಾಷಾ ಸಾಹಿತ್ಯಗಳಿಗೂ ಒಪ್ಪಿತವಾದ ಕಾವ್ಯ ಶಾಸ್ತ್ರವಾಗಿತ್ತು ಎನ್ನುವದನ್ನು ಸ್ಪಷ್ಟಪಡಿಸುತ್ತದೆ. ಜನಸಾಮಾನ್ಯರಿಂದ ಮಾನ್ಯತೆ ಪಡೆದ, ಭಾರತೀಯ ಸಾಹಿತ್ಯ ವ್ಯವಸ್ಥೆಯಲ್ಲಿ ಅತ್ಯಂತ ವ್ಯಾಪಕವಾಗಿ ಬೆಳೆದ ಭಕ್ತಿ ಕಾವ್ಯ ಪರಂಪರೆ ಕೂಡ ತನ್ನ ಪ್ರತ್ಯೇಕ ಕಾವ್ಯ ಶಾಸ್ತ್ರವನ್ನು ಬೆಳೆಸಿಕೊಳ್ಳಲಿಲ್ಲ. ಭಕ್ತಿಯನ್ನು ಇನ್ನೊಂದು ರಸವಾಗಿ ಪರಿಗಣಿಸಿದ ಸಂಸ್ಕೃತ ಕಾವ್ಯ ಶಾಸ್ತ್ರವನ್ನು ಒಪ್ಪಿಕೊಂಡಿತು. ಪ್ರತಿಯೊಂದು ಭಾಷೆಯ ಸಾಹಿತ್ಯದಲ್ಲಿಯೂ ಅಪ್ರಧಾನವೆನ್ನಿಸಿಕೊಳ್ಳುವ, ಜನಪ್ರಿಯವಾದ ಸಾಹಿತ್ಯ ಸೃಷ್ಟಿ ನಡೆಯುತ್ತಿದ್ದು ಇಂಥ ಸಾಹಿತ್ಯದ ಮೇಲೆ ಸಾಹಿತ್ಯ ವ್ಯವಸ್ಥೆ ಮತ್ತು ಅದರ ಕಾವ್ಯ ಶಾಸ್ತ್ರದ ಪ್ರಭಾವವು ಅತ್ಯಂತ ದುರ್ಬಲವಾಗಿರುತ್ತದೆ. ಆದರೆ ಈ ಸಾಹಿತ್ಯಗಳ ಪ್ರಧಾನ ಧಾರೆಗಳು ಸಂಸ್ಕೃತ ಕಾವ್ಯಶಾಸ್ತ್ರದ ತತ್ವಗಳಿಂದ ಪ್ರಭಾವಿತವಾಗುತ್ತಿದ್ದವು. ಮತ್ತು ಈ ಸಾಹಿತ್ಯಗಳ ಮೌಲ್ಯವು ಸಂಸ್ಕೃತ ಕಾವ್ಯ ಮೀಮಾಂಸೆಯನ್ನು ಆಧರಿಸಿಯೇ ನಿರ್ಣಯವಾಗುತ್ತಿತ್ತು. ಪಂಡಿತ ಮಾನ್ಯತೆಯ ತೆವಲಿನ ಗ್ರಾಂಥಿಕತೆ ಮತ್ತು ಲಕ್ಷಣಗಳನ್ನು ಪಟ್ಟಿಮಾಡುವ ಕ್ರಿಯೆಗಳ ಮೂಲಕ ಸಂಸ್ಕೃತ-ಸಾಹಿತ್ಯ ಮೀಮಾಂಸೆಯು ತನ್ನ ಕ್ರಿಯಾಶೈಲಿಯಲ್ಲಿ ಕ್ರಮೇಣ ನಿರ್ಜೀವ ಪೆಡಸು ವ್ಯವಸ್ಥೆಯಾಗಿ ಬೆಳೆಯಿತಾದರೂ ಪದಾರ್ಥ ಲೋಕದ ಸ್ವಭಾವಗಳ ಬಗ್ಗೆ ಮತ್ತು ಭಾರತೀಯ ಸಾಹಿತ್ಯಗಳನ್ನು ಪೋಷಿಸುವಂತಹ ಅದರ ಮೂಲ ಗ್ರಹಿಕೆಗಳ ಮೂಲಕ ಅದು ಅನೇಕ ಶತಮಾನಗಳ ಕಾಲ ಭಾರತೀಯ ಸಾಹಿತ್ಯ ಪರಂಪರೆಗಳನ್ನು ಪೋಷಿಸಿ ಬೆಳೆಸಿತು.

೧೯ನೆಯ ಶತಮಾನದಲ್ಲಿ ಭಾರತೀಯ ವಿದ್ಯಾಭ್ಯಾಸ ವ್ಯವಸ್ಥೆಯಲ್ಲಿ ಇಂಗ್ಲೀಷ್ ಸಾಹಿತ್ಯದ ವ್ಯಾಪ್ತವಾದ ಅಧ್ಯಯನ ಸೇರಿಕೊಂಡಾಗ ಪಾಶ್ಚಾತ್ಯ ಸಾಹಿತ್ಯ ಮೀಮಾಂಸೆಯು (ಮುಖ್ಯವಾಗಿ ಆಗ ಪ್ರಸ್ತುತವಾಗಿದ್ದ ರೋಮ್ಯಾಂಟಿಕ್ ಕಾವ್ಯ ಶಾಸ್ತ್ರ) ಭಾರತದಲ್ಲಿ ಲೇಖಕ ಓದುಗರ ಗಮನ ಸೆಳೆಯಿತು. ಆದರೆ ಪಾಶ್ಚಾತ್ಯ ಸಾಹಿತ್ಯ ಮೀಮಾಂಸೆಯು ಸಂಸ್ಕೃತ ಕಾವ್ಯ ಮೀಮಾಂಸೆಗೆ ಪರ್ಯಾಯವಾದದ್ದೆಂದು ಸ್ಥಾಪನೆಗೊಳ್ಳಲಿಲ್ಲ. ಇದಕ್ಕೆ ಕಾರಣವೆಂದರೆ, ತರಗತಿಗಳಲ್ಲಿ ಇಂಗ್ಲಿಷ್ ಅಧ್ಯಯನ ಪ್ರಾಬಲ್ಯ ಸಾಧಿಸುತ್ತ ಹೋದಂತೆ ತರಗತಿಗಳ ಹೊರಗಡೆಗೆ ಸಂಸ್ಕೃತ ಸಾಹಿತ್ಯ ಮತ್ತು ಸಾಹಿತ್ಯ ಮೀಮಾಂಸೆಗಳ ಉತ್ಸಾಹಪೂರ್ಣ ಅಧ್ಯಯನ ಏರ್ಪಟ್ಟಿತು. ಈ ಪ್ರಕ್ರಿಯೆ ಯುರೋಪಿನ ಪಂಡಿತರಿಂದ ಆರಂಭಗೊಂಡು ಮುಂದೆ ಅನೇಕ ಭಾರತೀಯ ಪಂಡಿತರುಗಳಿಂದ ಮುಂದುವರಿಸಲ್ಪಟ್ಟಿತು. ಈ ಶತಮಾನದ ಎರಡನೆಯ ದಶಕದಿಂದ, ಸಂಸ್ಕೃತ ಸಾಹಿತ್ಯ, ಸಂಸ್ಕೃತ ಕಾವ್ಯ ಮೀಮಾಂಸೆ-ಇವುಗಳ

ಇತಿಹಾಸ, ತಾತ್ವಿಕ ವಿಶ್ಲೇಷಣೆಗಳು ಇಂಗ್ಲಿಷ್‌ಗೆ ತರ್ಜುಮೆಗೊಂಡು ದೇಶದುದ್ದಕ್ಕೂ ಎಲ್ಲರ ಪರಿಗಣನೆಗೆ ಒದಗಿ ಬಂದವು. ಆನಂದ ಕುಮಾರಸ್ವಾಮಿ, ಎಂ. ಹಿರಿಯಣ್ಣ, ಎಸ್. ಕೆ.ಡೆ, ಪಿ.ವಿ. ಕಾಣೆ, ಕೆ.ಸಿ. ಪಾಂಡೆ, ವಿ. ರಾಘವನ್, ಪ್ರವಾಸ್ ಜೀವನ್ ಚೌಧರಿ, ಕೆ. ಕೃಷ್ಣಮೂರ್ತಿ, ಕೃಷ್ಣ ಚೈತನ್ಯ, ಆರ್. ಅಗ್ನೋಲಿ, ಡಿ.ಎಚ್. ಎಚ್. ಇಂಗಾಲ್ಸ್, ರಾಂರಂಜನ್ ಮುಖರ್ಜಿ ಮತ್ತು ಎಸ್. ಕೆ. ಚಾರಿಯವರಂತಹ ಪಂಡಿತರು ಭಾರತದುದ್ದಕ್ಕೂ ಬಳಕೆಗೆ ಒದಗಿದ ಇಂಗ್ಲಿಷ್ ಭಾಷೆಗೆ ತರ್ಜುಮೆ ಮಾಡುವುದರ ಮೂಲಕ ಸಂಸ್ಕೃತ ಕಾವ್ಯ ಮೀಮಾಂಸೆಯ ಪ್ರಚಾರ ಮಾಡಿದರು. ಇದರ ಜೊತೆ ಜೊತೆಗೆಯೇ ಸಂಸ್ಕೃತ ಸಾಹಿತ್ಯ ಮತ್ತು ಮೀಮಾಂಸೆ ಮತ್ತು ಅವುಗಳ ಟೀಕೆಗಳು ಭಾರತೀಯ ಭಾಷೆಗಳಿಗೂ ತರ್ಜುಮೆಗೊಂಡವು.

ಕುತೂಹಲಕಾರಿಯಾದ ಸಂಗತಿಯೆಂದರೆ, ಭಾರತೀಯ ಸಂದರ್ಭದಲ್ಲಿ ಸಂಸ್ಕೃತ ಕಾವ್ಯ ಶಾಸ್ತ್ರವು ಮಹತ್ವಗಳಿಸುತ್ತಲಿದ್ದ ಈ ದಶಕಗಳ ಕಾಲದಲ್ಲಿಯೇ ಪಾಶ್ಚಾತ್ಯ ಸಾಹಿತ್ಯ ವ್ಯವಸ್ಥೆಯಲ್ಲಿ ರಶಿಯನ್ ಫಾರ್ಮಾಲಿಸ್ಮ್, ಸೆಮಿಯಾಟಿಕ್ಸ್, ಫೆನಾಮೆನಾಲಜಿ, ಹರ್ಮೆನ್ಯುಟಿಕ್ಸ್ ರೀಡರ್ ರೆಸ್ಪಾನ್ಸ್ ರಿಸೆಪ್ಷನ್ ಇಸ್ಥೆಟಿಕ್ಸ್, ನ್ಯೂ ಕ್ರಿಟಿಸಿಸಂ, ಸ್ಟ್ರಕ್ಚರಾಲಿಸ್ಮ್, ಡಿಕನ್‌ಸ್ಟ್ರಕ್ಶನ್, ಮಾರ್ಕ್ಸಿಸ್ಟ್ ಕ್ರಿಟಿಸಿಸ್ಮ್, ಸೈಕೋ ಅನಲಿಟಿಕಲ್ ಕ್ರಿಟಿಸಿಸ್ಮ್, ಫೆಮಿನಿಷ್ಟ್ ಕ್ರಿಟಿಸಿಸ್ಮ್.. ಹೀಗೆ ಹತ್ತೆಂಟು ವಿಭಿನ್ನವಾದ ತಾತ್ವಿಕ ವಿವೇಚನೆಗಳು ಮೂಡಿಬರುತ್ತಿದ್ದವು. ಈ ಪಾಶ್ಚಾತ್ಯ ಮಾದರಿಗಳು ಜಗತ್ತಿನಾದ್ಯಂತ ಲೇಖಕ ಮತ್ತು ವಿಮರ್ಶಕರ ಗಮನ ಸೆಳೆದ ದ್ದಲ್ಲದೆ ಸಾಹಿತ್ಯ ಸ್ವಭಾವಗಳ ಗ್ರಹಿಕೆಯಲ್ಲಿ ಸಾಕಷ್ಟು ಬದಲಾವಣೆಗಳನ್ನುಂಟು ಮಾಡಿದವು. ಈ ಎಲ್ಲ ಮಾದರಿಗಳ ಅಲ್ಲೋಲ ಕಲ್ಲೋಲಗಳ ನಡುವೆಯೂ ಭಾರತೀಯ ಸಾಹಿತ್ಯ ವ್ಯವಸ್ಥೆಯಲ್ಲಿ ಸಂಸ್ಕೃತ ಕಾವ್ಯಶಾಸ್ತ್ರವು ಕ್ರಿಯಾಶೀಲವಾಗಿದ್ದಲ್ಲದೆ ಈ ಕಾವ್ಯ ಮೀಮಾಂಸೆಯ ಪರಿಕಲ್ಪನೆಗಳನ್ನು ಸಂಸ್ಕೃತದಿಂದ ತುಂಬ ದೂರವಾದ ಭಾಷೆಗಳ ಸಾಹಿತ್ಯ ಕೃತಿಗಳಿಗೂ ಅನ್ವಯಿಸಲಾಯಿತು. ಮಲೆಯಾಳೀ ಕವಿ ಕುಮಾರನ್ ಆಸಾನ್ ಅವರ 'ನಳಿನಿ' ಕಾವ್ಯವು ಧ್ವನಿ ತತ್ವದ ಆಧಾರದ ಮೇಲೆ ವಿವೇಚಿಸಲ್ಪಟ್ಟಿತು ಮತ್ತು ಎಪ್ಪತ್ತರ ದಶಕದಲ್ಲಿ ಮೋತೀಲಾಲ ಜೋತ್ವಾನಿಯವರು ಸಿಂಧೀಕವಿ ಅಬ್ದುಲ್ ಕರೀಂ ಅವರ 'ರಿನಾಲೋ' ಕಾವ್ಯ ವಿಶ್ಲೇಷಣೆಯನ್ನು ಸಂಸ್ಕೃತ ಕಾವ್ಯ ಮೀಮಾಂಸೆಯ ನೆಲೆಯಲ್ಲಿ ಕೈಗೊಂಡರು.

ಈ ಸಂಸ್ಕೃತ ಕಾವ್ಯ ಮೀಮಾಂಸೆ ಎಂದರೆ ಏನೆಂಬುದರ ಬಗೆಗೆ ನಮಗೆ ಸ್ಪಷ್ಟತೆ ಇರಬೇಕಾಗುತ್ತದೆ. ಸಂಸ್ಕೃತ ಕಾವ್ಯ ಮೀಮಾಂಸೆಯು ಭಾಗಶಃ ಸಾಹಿತ್ಯ ರಚನಾ ಪರಿಕರಗಳ ಬಗೆಗಿನ ಪಟ್ಟಿಯಾಗಿದೆ. 'ಪ್ರಾಬ್ಲೆಮ್ಸ್ ಆಫ್ ಸಂಸ್ಕೃತ ಪೋಯಟಿಕ್ಸ್' ಗ್ರಂಥದಲ್ಲಿ ಎಸ್. ಕೆ.ಡೇ ಅವರು, 'ಅಲಂಕಾರ' ಮತ್ತು 'ರೀತಿ' ತತ್ವಗಳು ಕೇವಲ ರಾಚನಿಕ ವ್ಯಾಕರಣದ ಆಧಾರದ ಮೇಲೆ ಶೈಲಿಯ ಹೊರಮೈ ಪರಿಕರಗಳನ್ನು ಪಟ್ಟಿ ಮಾಡಿ ಹೆಸರಿಸಿ ವರ್ಗೀಕರಿಸುವ ಚಟುವಟಿಕೆಯಲ್ಲಿ ಮಾತ್ರ ತೊಡಗುತ್ತವೆ ಎನ್ನುತ್ತಾರೆ. ಶೈಲಿಶಾಸ್ತ್ರದ ಇಂತಹ ಹೊಟ್ಟು ನಮ್ಮ ಆಸಕ್ತಿಯ ಹೊರಗಿರುವಂತಹದು. ಸಾಹಿತ್ಯ ಕೃತಿಗಳ ಅಂತರಾತ್ಮದ ಸ್ವಭಾವ, ಇದರ ಗ್ರಹಿಕೆಯ ರೀತಿಯ ಸ್ವಭಾವ-ಇವೆರಡರ ನಡುವಿನ ಸಂಬಂಧಗಳನ್ನು ಆಳದ ನೆಲೆಯಲ್ಲಿ ಶೋಧಿಸುವ ತಾತ್ವಿಕ ಕ್ರಿಯೆ, ಇವು ಸಂಸ್ಕೃತ ಕಾವ್ಯಮೀಮಾಂಸೆಯ ಮುಖ್ಯವಾದ

ಪೂರಣವಾಗಿವೆ. ಇಂಥ ಶೋಧನೆಯ ತಾತ್ವಿಕ ಉತ್ಪನ್ನಗಳೆಂದರೆ ರಸ, ಧ್ವನಿ ಮತ್ತು ರಸಧ್ವನಿಗಳಂತಹ ಪರಿಕಲ್ಪನೆಗಳು. ಇವಲ್ಲದೆ ವಕ್ರೋಕ್ತಿ ಮತ್ತು ಔಚಿತ್ಯ ಪರಿಕಲ್ಪನೆಗಳು ಕೂಡ ಇಂಥ ಶೋಧನೆಯ ಫಲಗಳಾಗಿವೆ. ಈ ಪರಿಕಲ್ಪನೆಗಳು ಸಾರ್ವಕಾಲಿಕ ಸಾಹಿತ್ಯ ಗ್ರಹಿಕೆಯ ಪ್ರಧಾನ ಅಂಶಗಳಾಗಿದ್ದು ಸಮಕಾಲೀನ ಸಾಹಿತ್ಯಕ್ಕೂ ಸಂಬದ್ಧವಾದವುಗಳಾಗಿವೆ. ಹೀಗೆ ಸಾಹಿತ್ಯ ಕೃತಿಗಳನ್ನು ಆಳವಾದ ತಾತ್ವಿಕ ಪರಿಭಾವನೆಗೆ ಒಡ್ಡುವ ಇಂತಹ ಅಂಶಗಳನ್ನೇ ನಾವು ಸಂಸ್ಕೃತ ಕಾವ್ಯ ಮೀಮಾಂಸೆ ಎಂದು ಗುರುತಿಸುತ್ತೇವೆ.

ಧ್ವನಿಯ ವಿಶೇಷತೆಯನ್ನು ಒಂದಕ್ಕೆ-ಒಂದು ಸಂಬಂಧದ ರೀತಿಯಲ್ಲಿ, ವಿಶೇಷ್ಯ-ವಿಶೇಷಣಗಳ ಸಂಬಂಧದಂತೆ ಗ್ರಹಿಸಲಾಗದು. ಈ ಸಂಬಂಧ ಸಡಿಲವಾದದ್ದು ಆಗಿ, ವಿಶೇಷ್ಯವು ಬಹುತ್ವವನ್ನು ತೋರುವಂತಹದು, ಸಂಕೀರ್ಣವಾದದ್ದು ಮತ್ತು ಅಸ್ಪಷ್ಟವಾದದ್ದು ಆಗಿರಬಹುದು. ಹೀಗಾಗಿ ವಿಶೇಷಣಕ್ರಿಯೆಯು ಸೂಚ್ಯವೂ ವ್ಯಂಗ್ಯಾರ್ಥಜನಕವೂ ಆಗುತ್ತದೆ. ಅಥವಾ ಈ ಧ್ವನಿ ಕ್ರಿಯೆಯನ್ನು ತತ್ವ ನಿಷ್ಪತ್ತಿಗೆ ಕಾರಣವಾಗುವ 'ರೂಪಕ'ವೆಂತಲೂ ಹೇಳಬಹುದು. ಹೀಗೆ ವ್ಯಂಗ್ಯಾರ್ಥ ಪ್ರೇರಣೆಗಳನ್ನು ನೀಡುವ ಧ್ವನಿಯ ವಿಶೇಷತೆಯು, ಐಂದ್ರಿಯಕವಾದ-ವಸ್ತುಕವಾದ ಉದ್ದೀಪಕ ಸಂಕೇತಗಳನ್ನು, ಓದುಗನಲ್ಲಿ ಹೊಸ ಅರ್ಥ ವಿನ್ಯಾಸಗಳನ್ನು ಉದ್ದೀಪಿಸಲು ಜಗಿತ ಮತ್ತು ಅಸ್ಪಷ್ಟತೆಗಳನ್ನು ಮತ್ತು ಪಠ್ಯದ ಹಿನ್ನೆಲೆಯಲ್ಲಿ ಅಂತರ್ಗತವಾಗಿರುವ ತಾತ್ವಿಕ ವಿನ್ಯಾಸಗಳನ್ನು ಹೊಂದಿರುತ್ತದೆ. ಈ ಸಾಹಿತ್ಯಕ ಹುನ್ನಾರಗಳು ಅತ್ಯಂತ ಮಹತ್ವವಾದವುಗಳು. ಯಾಕೆಂದರೆ, ಆಧುನಿಕತೆಯ ಅತ್ಯಂತ ಪ್ರಮುಖ ಲಕ್ಷಣವಾದ 'ಹೇಳಿಕೆ'ಯ ರೀತಿಯನ್ನು ತಿರಸ್ಕರಿಸಿ ಸೂಚ್ಯತೆಯ ಮಾರ್ಗವನ್ನು ಒಪ್ಪಿಕೊಳ್ಳುವದು ಸಾಧ್ಯವಾಗುವದು ಈ ಹುನ್ನಾರಗಳಿಂದಲೇ. ಇವುಗಳಿಗಿಂತ ಮುಖ್ಯವಾದದ್ದೆಂದರೆ, ಸಾಹಿತ್ಯ ಕೃತಿಗಳ ಅರ್ಥ ವಿನ್ಯಾಸವನ್ನು ಗುರುತಿಸಿಕೊಳ್ಳುವಲ್ಲಿ ಈ ಧ್ವನಿಕ್ರಿಯೆ ಒದಗಿಸುವ ಸಹಾಯ. ವಿಭಾವಗಳು-ಅವುಗಳು ವ್ಯಕ್ತಗೊಳ್ಳುವ ಭಾಷಿಕ ರಚನೆಗಳಾದ ಸಂಕೇತ, ವಿವರಣಾತ್ಮಕತೆ, ಪಾತ್ರ, ಶೈಲಿ, ಛಂದಸ್ಸು-ಈ ಮುಂತಾದವುಗಳೆಲ್ಲ ಸೇರಿ ಓದುಗನಲ್ಲಿ ಅನುಭಾವವನ್ನು ಉದ್ದೀಪಿಸುತ್ತವೆ. ಈ ಕ್ರಿಯೆ ಸಡಿಲವಾದದ್ದೂ ಅನಿರ್ದಿಷ್ಟವಾದದ್ದೂ ಆಗಿದೆ. ಇಂಥ ಅನುಭಾವದ ಉದ್ದೀಪನೆಯೇ ಸಾಹಿತ್ಯ ಕೃತಿಯ ಧ್ವನಿ. ವಿಭಾವಾದಿಗಳಿಗೆ ಪ್ರತಿಕ್ರಿಯೆಯಂತೆ ಓದುಗನಲ್ಲಿ ರಸಸ್ಪಂದನೆಯನ್ನುಂಟುಮಾಡುವ ಧ್ವನಿಯು ಸೃಜನಶೀಲ ಕೃತಿಯೊಂದರ ಮುಖ್ಯವಾದ ಸಾಹಿತ್ಯಕ ಅಂಶವಾಗಿರುತ್ತದೆ. ಈ ಎಲ್ಲ ಅಂಶಗಳನ್ನು ಗುರುತಿಸಿ ಅವುಗಳನ್ನು ವಿಶ್ಲೇಷಿಸುವ, ಅವು ಪರಸ್ಪರ ನಡೆಸುವ ಪ್ರಕ್ರಿಯೆಯ ರೀತಿಯನ್ನು ಪರೀಕ್ಷಿಸುತ್ತ, ಇವೆಲ್ಲವುಗಳ ಮೂಲಕ ಉತ್ಪನ್ನವಾಗುವ ಧ್ವನಿಯನ್ನು ಕಾಣಿಸುವದು ವಿಮರ್ಶೆಯ ಏಕಮೇವ ಸಮರ್ಪಕ ಕಾರ್ಯವಾಗಿದೆ. ಲೇಖಕನ ಉದ್ದೇಶಗಳು, ಸಾಮಾಜಿಕ ವಾಸ್ತವ, ಇತಿಹಾಸ, ರಾಜಕಾರಣ, ನೀತಿಶಾಸ್ತ್ರ ಇವೆಲ್ಲ ಅಂಶಗಳೂ ಸಾಹಿತ್ಯ ಕೃತಿಗೆ ಬಾಹ್ಯವಾದವುಗಳು. ಆದರೆ ಓದುಗನಿಗೆ 'ಪಠ್ಯದ ಹೊರಗೆ ಉಳಿಯುವದು ಏನೂ ಇಲ್ಲ'. ಸಂಸ್ಕೃತ ಕಾವ್ಯ ಶಾಸ್ತ್ರದ ಸಂಕ್ಷಿಪ್ತ ವಿವರಣೆಯ ಕೊನೆಗೆ 'ಪಠ್ಯದ ಹೊರಗೆ ಉಳಿಯುವದು ಏನೂ ಇಲ್ಲ' ಎನ್ನುವ ಡೆರಿಡಾನ

ಹೇಳಿಕೆಯನ್ನು ಬೇಕೆಂತಲೇ ಉಲ್ಲೇಖಿಸಿದೆ. ಯಾಕೆಂದರೆ ಇದು ಮಾಡರ್ನ್ ಸಾಹಿತ್ಯದ ಪರಿಕಲ್ಪನೆ ಕೂಡ ಆಗಿದೆ.

ಪರಂಪರೆ ನಿರಪೇಕ್ಷವಾದದ್ದೇನೂ ಅಲ್ಲ. ಪ್ರತಿಯೊಂದು ಹಂತದಲ್ಲಿಯೂ ಅದು ಪುನಃ ಶೋಧಿಸಲ್ಪಟ್ಟು ಪುನಃ ಪುನಃ ಬರೆಯಲ್ಪಡುತ್ತದೆ. ಟಿ.ಎಸ್. ಎಲಿಯಟ್ ಹೇಳುವಂತೆ, ಭೂತಕಾಲವು ವರ್ತಮಾನವನ್ನು ರೂಪಿಸುತ್ತಿರುವಂತೆ ವರ್ತಮಾನವು ಭೂತಕಾಲವನ್ನು ರೂಪಿಸುತ್ತಿರುತ್ತದೆ. ಆನಂದವರ್ಧನನ 'ಧ್ವನ್ಯಾಲೋಕ'ವನ್ನು ಮತ್ತು ಅಭಿನವಗುಪ್ತನ 'ಲೋಚನ' ಇವುಗಳನ್ನು ಸಂಪೂರ್ಣವಾಗಿ ಅವುಗಳ ಸಮಕಾಲೀನ ನೆಲೆಯಲ್ಲಿಯೇ ಗ್ರಹಿಸಲು ಸಾಧ್ಯವಿಲ್ಲ. ಹಾಗೆಯೇ ಇವುಗಳನ್ನು ಸಂಪೂರ್ಣವಾಗಿ ಪಶ್ಯಕ್ಕೆ ನಿಷ್ಠವಾಗಿ ಹೊರಡುವ ಪಾಂಡಿತ್ಯದ ಮಾಡರ್ನ್ ದೃಷ್ಟಿಕೋನದಿಂದಲೂ ನೋಡಲಾಗದು. ಪಾರಂಪರಿಕ ಭಾರತೀಯ ಕಾವ್ಯ ಶಾಸ್ತ್ರವನ್ನು ಅರಿಯಲು ಹೊರಡುವ ಯಾವದೇ ಪ್ರಜ್ಞೆಯಾದರೂ ಕಾಲಾಂತರದ ಪರಿಕ್ರಮದ ಅನುಭವಗಳಿಂದ ಮತ್ತು ಸಾಹಿತ್ಯ ಸ್ವಭಾವದ ಬಗೆಗಿನ ಸಮಕಾಲೀನ ಗ್ರಹಿಕೆಗಳಿಂದ ರೂಪುಗೊಂಡಿರಬೇಕಾಗುತ್ತದೆ. ಇದು ಭೂತದ ಅಂದಗೆಡಿಸುವ ಕ್ರಿಯೆಯಲ್ಲ, ಭೂತದ ಬಗೆಗಿನ ತಿಳುವಳಿಕೆಯನ್ನು ಪಡೆಯುವ ಅನಿವಾರ್ಯವಾದ ಮಾರ್ಗವಾಗಿದೆ. ಇಂದು ನಾವು ರೋಮ್ಯಾಂಟಿಕ್-ಸಿಂಬಲಿಸ್ಟ್ ತತ್ವಗಳು ಮಂಡಿಸುವ ಸೂಚ್ಯಾರ್ಥದ ಹಿನ್ನೆಲೆಯಲ್ಲಿ ಮತ್ತು ಪೋಸ್ಟ್ ಸಸುರಿಯನ್ ಪರಿಕಲ್ಪನೆಯ ಸಡಿಲು ವಿಶೇಷಣದ ಮೂಲಕ ಮಾತ್ರ ಧ್ವನಿ ತತ್ವವನ್ನು ವಿವರಿಸಲು ಸಾಧ್ಯವಾಗುತ್ತದೆ. 'ಓದುಗ ಪ್ರತಿಕ್ರಿಯೆ' ಪರಿಕಲ್ಪನೆಯನ್ನು ಬಿಟ್ಟು ರಸ ತತ್ವವನ್ನು ವಿವರಿಸಲಾಗದು. ಇಲ್ಲಿ ಭಿನ್ನವಾದವುಗಳು ಒಂದು ಮತ್ತೊಂದರ ಮೇಲೆ ಬೆಳಕು ಚೆಲ್ಲುವುದರಿಂದ ನಮ್ಮ ಗ್ರಹಿಕೆಯು ಹೆಚ್ಚು ಸ್ಪಷ್ಟಗೊಳ್ಳಲು ಸಾಧ್ಯವಾಗುತ್ತದೆ.

ಇಂದು ನಾವು ಸಂಸ್ಕೃತ ಕಾವ್ಯ ಮೀಮಾಂಸೆಯನ್ನು ನಮಗೆ ನಾವೇ ವಿವರಿಸಿ ಕೊಳ್ಳತೊಡಗಿದಾಗ ಅದು ಪಾಶ್ಚಾತ್ಯ ಸಾಹಿತ್ಯ ಮೀಮಾಂಸೆಯಂತೆಯೂ ತೋರುತ್ತದೆ. ಹಿಂದೀ ಸಾಹಿತ್ಯ ವಿಮರ್ಶಕ ನಮ್ವರ್‌ಸಿಂಗ್ ಹೇಳುವಂತೆ, ವಸಾಹತುಶಾಹಿಯಿಂದ ಬಿಡುಗಡೆಹೊಂದಲು ಭಾರತೀಯ ಮನಸ್ಸು ಪಾಶ್ಚಾತ್ಯವಾದದ್ದನ್ನೆಲ್ಲ ತಿರಸ್ಕರಿಸಬೇಕಾಗಿಲ್ಲ. ನಮ್ವರ್ ಸಿಂಗ್ ಹೇಳುವಂತೆ, ಪೋಷ್ಟ್ ಮಾಡರ್ನಿಷ್ಟ್ ಯುಗವಾದ ಇಂದು, ಪಾಶ್ಚಾತ್ಯರು ವ್ಯತ್ಯಾಸಗಳ ಆಧಾರದ ಮೇಲೆ ತಮ್ಮ 'ಸ್ವತ್ವ'ವನ್ನು ಗುರುತಿಸಿಕೊಳ್ಳುತ್ತಿದ್ದಾರೆ. 'ಪಶ್ಚಿಮವು ಗುರುತಿಸುವಂತೆ, ವ್ಯತ್ಯಾಸ/ವೈಶಿಷ್ಟ್ಯವೆ ಪೌರ್ವಾತ್ಯದ ಅಂತಿಮಗುರಿ. ಪೌರ್ವಾತ್ಯವು ತನ್ನ ಈ ವ್ಯತ್ಯಾಸವನ್ನು ಉಳಿಸಿಕೊಳ್ಳಲು ನಡೆಸುವ ಎಲ್ಲ ಪ್ರಯತ್ನಗಳೂ ಪಶ್ಚಿಮಕ್ಕೆ ಅಂತಿಮ ಮೌಲ್ಯಗಳಂತೆ ತೋರುತ್ತವೆ'. (ಇಂಡಿಯನ್ ಲಿಟರೇಚರ್ ಸೆಪ್ಟ-ಅಕ್ಟೋ. 92. ಪುಟ :153) ನಿಜವಾದ ನಿರ್ವಸಾಹತೀಕರಣ ಪ್ರಕ್ರಿಯೆಯು ನಮ್ಮ ಚಿಂತನೆ ಮತ್ತು ನಂಬಿಕೆಗಳಿಗೆ ಪೂರಕವಾಗಬಹುದಾದ, ಹೊಂದಿಕೊಳ್ಳಬಲ್ಲಂತಹ ಪಾಶ್ಚಾತ್ಯ ಅಂಶಗಳನ್ನು ಒಳಗೊಳ್ಳುವಂತಹದ್ದಾಗಬೇಕು. ಬಹುಮುಖ್ಯವಾಗಿ, ಈ ಶತಮಾನದ ಉತ್ತರಾರ್ಧದಲ್ಲಿ ಪಶ್ಚಿಮವು ತಾತ್ವಿಕ ಚಿಂತನೆಯಲ್ಲಿ ಸಾಧಿಸಿರುವ ಅಗಾಧವಾದ ಬೆಳವಣಿಗೆಗಳನ್ನು ನಾವು

ನಿರ್ಲಕ್ಷಿಸಲಾಗುವುದಿಲ್ಲ. ಈ ಚಿಂತನೆಗಳು ಕೇವಲ ಪಶ್ಚಿಮಕ್ಕೆ ಮಾತ್ರ ಅನ್ವಯಗೊಳ್ಳುವ ಸಂಕುಚಿತಗಳಲ್ಲ. ಇವು ಇಡೀ ಜಗತ್ತಿನ ಸಾಹಿತ್ಯದ ಮೇಲೆ ಪ್ರಭಾವ ಬೀರುವಂತಹವಾಗಿವೆ; ವಿಜ್ಞಾನದ ಎಲ್ಲ ಕವಲುಗಳ ಮೇಲೆ ಅಗಾಧವಾದ ಪರಿಣಾಮ ಬೀರಿವೆ; ಇಷ್ಟಲ್ಲದೆ ನಮ್ಮ ಚಿಂತನೆಯ ಕ್ರಮದ ಮೇಲೆಯೂ ಅವು ತಮ್ಮ ನೆರಳು ಚಾಚಿವೆ.

ಪೌರ್ವಾತ್ಯ ಮತ್ತು ಪಾಶ್ಚಾತ್ಯ ಸಾಹಿತ್ಯ ತತ್ವಗಳೆರಡರ ನಡುವೆ ಅನೇಕ ಸಾಮ್ಯಗಳಿವೆ. ಕೆಲವು ಸ್ಥೂಲವಾದ ಹೋಲಿಕೆಗಳನ್ನು ಪಟ್ಟಿ ಮಾಡುವುದಾದರೆ : ಇವೆರಡೂ ಚಿಂತನೆಗಳು ಸಾಹಿತ್ಯ ಕೃತಿಗಳನ್ನು ಭಾಷಿಕ ರಚನೆಗಳೆಂತಲೇ ನೋಡುತ್ತವೆ. ಇವೆರಡೂ ಕೂಡ ಅರ್ಥದ ಬಗೆಗಿನ ತತ್ವಗಳು. ಇವೆರಡು ತತ್ವಗಳು ಲೇಖಕನ ಭಾವಸ್ಥಿತಿಯು ಮಾತ್ರ ಸಾಹಿತ್ಯದ ರಚನೆಗೆ ಕಾರಣವಾಗುತ್ತದೆನ್ನುವ ವಾದವನ್ನು (Expressionism) ಮತ್ತು ಕೃತಿಯು ಲೇಖಕನ ಉದ್ದೇಶವನ್ನು ಮಾತ್ರ ಬಿಂಬಿಸುತ್ತದೆನ್ನುವ ವಾದವನ್ನು ತಿರಸ್ಕರಿಸುತ್ತವೆ. ಇವುಗಳಿಗೆ ಬದಲಾಗಿ ಓದುಗನು ತೋರುವ ಪ್ರತಿಕ್ರಿಯೆಯೇ ಸಾಹಿತ್ಯ ಕೃತಿಯ ಪ್ರಧಾನವಾದ ಅಂಶ ಮತ್ತು ಈ ಓದುಗ ಪ್ರತಿಕ್ರಿಯೆಯೇ ಆ ಕೃತಿಯ ನಿಜವಾದ ಅರ್ಥವನ್ನು ಸೂಚಿಸುತ್ತದೆ ಎನ್ನುವದು ಈ ತತ್ವಗಳ ಗ್ರಹಿಕೆ. ಈ ಎರಡೂ ತತ್ವಗಳು ನೇರವಾಗಿ ಇಲ್ಲವೆ ಸೂಚ್ಯವಾಗಿ, ಇತಿಹಾಸ, ಸಮಾಜ, ತತ್ವಶಾಸ್ತ್ರ, ನೀತಿ ಶಾಸ್ತ್ರ ಈ ಮುಂತಾದವುಗಳನ್ನೆಲ್ಲ ಸಾಹಿತ್ಯ ಕೃತಿಯ ಹೊರ ಅಂಗಗಳೆಂದು ಹೇಳುತ್ತವೆ. ಸಾಮಾನ್ಯವಾಗಿ ಈ ಎರಡೂ ತತ್ವಗಳು ಸಾಹಿತ್ಯ ಕೃತಿಯೊಂದು ತಾಳಿ ನಿಂತ ಭಾಷಿಕ ರಚನೆ ಮತ್ತು ಈ ಭಾಷಿಕ ರಚನೆಯು ಓದುಗನಲ್ಲಿ ಮೂಡಿಸುವ ರಸಸ್ಪಂದನೆ ಇವುಗಳತ್ತ ತಮ್ಮ ಗಮನವನ್ನು ಹರಿಸುತ್ತವೆ. ಮತ್ತು ಈ ಅಂಶಗಳೇ ವಿಮರ್ಶೆಯಲ್ಲಿ ಪ್ರಸ್ತಾಪಿತವಾಗಬೇಕಾದ ಪ್ರಧಾನವಾದ ಅಂಶಗಳೆನ್ನುತ್ತವೆ. (ಈ ಲಕ್ಷಣಗಳೆಲ್ಲ ಸಾಕಷ್ಟು ಸರಳೀಕರಣಗೊಂಡವುಗಳಾಗಿವೆ. ಇವುಗಳಿಗೆ ಅಪವಾದಗಳು ಇದ್ದೇ ಇವೆ).

ಒಂದು ವೇಳೆ ಸಂಸ್ಕೃತ ಕಾವ್ಯಮೀಮಾಂಸೆಯು ಪಾಶ್ಚಾತ್ಯ ಮತ್ತು ಮಾಡರ್ನ್‌ಗಳೆಲ್ಲವುಗಳ ಸಂಪರ್ಕದಿಂದ ದೂರ ಇರುವುದೆಂದಾದರೂ, ಅದು ಇಂದು ಭಾರತೀಯ ಸಾಹಿತ್ಯ ವ್ಯವಸ್ಥೆಯಲ್ಲಿ ನಡೆಯುತ್ತಿರುವ ಚೈತನ್ಯಶೀಲವಾದ ಪ್ರಯೋಗಗಳಿಗೆ, ವ್ಯಾಪ್ತವಾಗಿ ಮೂಡಿಬರುತ್ತಿರುವ ಹೊಸತನಕ್ಕೆ ಸ್ಪಂದನೆಯನ್ನು ತೋರದೇ ಇರಲಾಗದು. ಆದರೆ ಈ ಹೊಸತುಗಳು-ಪ್ರಯೋಗಗಳ ಬಹುತೇಕ ಭಾಗವು , ಪಾಶ್ಚಾತ್ಯ ಮತ್ತು ಮಾಡರ್ನ್ ಬರೆಹ ಮತ್ತು ಚಿಂತನೆಗಳಿಂದ ಪ್ರಭಾವಿತವಾಗಿವೆ. ಸಾಹಿತ್ಯ ವ್ಯವಸ್ಥೆಯೊಂದು ಬದುಕುಳಿಯಬೇಕಾದರೆ ಅದು ಅಂದಂದಿನ ಬರೆಹಗಳಲ್ಲಿ ತೋರುತ್ತಿರುವ ಬದಲಾವಣೆಗಳಿಗೆ ತಕ್ಕಂತೆ ತನ್ನ ಸಾಹಿತ್ಯ ಮೀಮಾಂಸೆಯಲ್ಲಿಯೂ ಹೊಂದಾಣಿಕೆಯನ್ನು ತೋರಬೇಕಾಗುತ್ತದೆ. ಭಾರತೀಯ ಸಾಹಿತ್ಯ ವ್ಯವಸ್ಥೆಯಲ್ಲಿನ ವಿವಿಧ ಭಾಷೆಗಳ ಸಾಹಿತ್ಯಗಳು ಒಂದೇ ರೀತಿಯ ಪ್ರಭಾವಗಳಿಗೆ ಒಳಗಾಗಿರುವುದರಿಂದಲೋ ಅಥವಾ ಈ ವಿವಿಧ ಭಾಷೆಗಳ ಸಾಹಿತ್ಯಗಳ ನಡುವೆ ಕೊಡುಕೊಳುವ ತೀವ್ರವಾದ ಕ್ರಿಯೆ ಏರ್ಪಟ್ಟಿದ್ದರಿಂದ ಲೋ, ಇಲ್ಲಿ ಮೂಡಿಬರುತ್ತಿರುವ

ಹೊಸ ಸಾಹಿತ್ಯಕ ಮಾರ್ಗಗಳು ಎಲ್ಲ ಭಾಷೆಗಳಲ್ಲಿಯೂ ವ್ಯಾಪ್ತವಾಗಿ ಕಾಣುತ್ತಿವೆ. ಹೀಗಿರುವಾಗ ಸಾಹಿತ್ಯ ವ್ಯವಸ್ಥೆಯು ಈ ಹೊಸ ಮಾರ್ಗದ ನಿಯಮಗಳನ್ನು ತನ್ನ ಕಾವ್ಯ ಶಾಸ್ತ್ರದಲ್ಲಿ ಅಳವಡಿಸಿಕೊಳ್ಳುತ್ತ ಅವುಗಳಿಗೆ ಸಿಂಧುತ್ವವನ್ನು ನೀಡುವದು ಅನಿವಾರ್ಯವಾಗುತ್ತದೆ.

ಪರಂಪರಾಗತವಾದ ಭಾರತೀಯ ಕಾವ್ಯಶಾಸ್ತ್ರವು ಭರತನಿಂದ ಜಗನ್ನಾಥನವರೆಗಿನ ತಾತ್ವಿಕ ವಿಶ್ಲೇಷಣೆಗಳಂತೆ ದಾಖಲಾಗಿದೆ. ಈ ದಾಖಲೆಗಳ ಅಧ್ಯಯನದಿಂದ ನಮಗೆ ಸ್ಪಷ್ಟವಾಗುವುದೇನೆಂದರೆ ಈ ಕಾವ್ಯಶಾಸ್ತ್ರವು ಏಕಶಿಲಾರೂಪವೆಂತಾಗಲೀ, ಇದೇ ಅಂತಿಮವೆಂದುಕೊಂಡು ಎಲ್ಲ ದ್ವಾರಗಳನ್ನು ಮುಚ್ಚಿಕೊಂಡದ್ದು ಎಂದಾಗಲೀ ಅಥವಾ ಬದಲಾವಣೆಯ ವಿರೋಧಿಯಾದದ್ದು ಎಂದಾಗಲೀ ಅಲ್ಲ. ಜಗನ್ನಾಥನ ಕಾಲದಿಂದಲೂ ಸಂಸ್ಕೃತ ಕಾವ್ಯ ಮೀಮಾಂಸೆಯು ಬದಲಾಗುತ್ತ ಬೆಳೆಯುತ್ತ ಬಂದಿದೆ. ಅದು, ಒಳಗೊಳ್ಳುವ-ವಿಸರ್ಜಿಸುವ ಕ್ರಿಯೆಗಳ ನಡುವೆ ಸಮತೋಲ ಸಾಧಿಸುವಲ್ಲಿ ಯಶಸ್ವಿಯಾಗಿದೆ. ೨೦ನೆಯ ಶತಮಾನದಲ್ಲಿಯಂತೂ ಅದು ಪರಕೀಯವಾದದ್ದರ ಮತ್ತು ಹೊಸತುಗಳ ತೀವ್ರವಾದ ಒತ್ತಡಕ್ಕೆ ಒಳಗಾಯಿತು. ಪರಂಪರಾಗತವಾದ ಕಾವ್ಯಶಾಸ್ತ್ರವು ಈ ಎಲ್ಲ ಒತ್ತಡಗಳಿಗೆ ಆರೋಗ್ಯಪೂರ್ಣವಾದ ಪ್ರತಿಕ್ರಿಯೆಯನ್ನು ತೋರಿದೆ. ಹೀಗಾಗಿ ಕಾವ್ಯಶಾಸ್ತ್ರದ ಮೂಲ ತತ್ವಗಳನ್ನು ಪುನರ್ವ್ಯಾಖ್ಯಾನಿಸುತ್ತ, ಇಂದು ಬರುತ್ತಿರುವ ಹೊಸ ಸಾಹಿತ್ಯಕ ಚಟುವಟಿಕೆಗಳ ಬೆಳಕಿನಲ್ಲಿ ಕಾವ್ಯಶಾಸ್ತ್ರದ ಹೊಸ ಅವತರಿಣಿಕೆ ಮೂಡಿಬರಬೇಕಾಗಿದೆ. ಹಾಗೆ ನೋಡಿದರೆ ಇಂಥ ಕಾವ್ಯ ಶಾಸ್ತ್ರವೊಂದು, ಅವ್ಯಕ್ತವಾಗಿ, ವ್ಯಾಪ್ತವಾದ ಸಹಮತ ಪಡೆದ ಗ್ರಹಿಕೆಗಳ ಮತ್ತು ನಿಯಮಗಳ ರೂಪದಲ್ಲಿ ಈಗಾಗಲೇ ಚಾಲ್ತಿಯಲ್ಲಿದೆ. ಇಂದು, ಬಹಿರಂಗವಾಗಿ, ಪರಂಪರೆಗೆ ವಿರುದ್ಧವೆಂದು ತೋರುವ, ಪರಸ್ಪರ ತಿರಸ್ಕರಿಸುತ್ತವೆಂದು ತೋರುವ ಸಾಹಿತ್ಯ ಮಾರ್ಗಗಳ ಗೊಂದಲದ ಸ್ಥಿತಿಯೊಂದು ಇದೆ ಎನ್ನುವಂತೆ ತೋರಬಹುದು. ಆದರೆ ಭಾರತೀಯ ಸಾಹಿತ್ಯ ವ್ಯವಸ್ಥೆಯಲ್ಲಿ ಪರಂಪರೆ ಮತ್ತು ಆಧುನಿಕತೆಗಳು ಭಾಗಶಃ ವಾಗಿಯಾದರೂ ಹೊಂದಿಕೊಳ್ಳಬಲ್ಲವೆನ್ನುವದು, ವೈವಿಧ್ಯತೆಗಳಿರುತ್ತವಾದರೂ ಒಡಕುಗಳು ಇರುವುದಿಲ್ಲವೆನ್ನುವದೂ ಮತ್ತು ಅರಾಜಕತ್ವ ವಿರುವುದಿಲ್ಲವೆನ್ನುವದು ಸಾಬೀತುಗೊಂಡಿವೆ. ಹೀಗಿರುವಾಗ, ಅವ್ಯಕ್ತವಾದ ಮತ್ತು ಪರಸ್ಪರ ಒಪ್ಪಿತವಾಗಿರುವ ಅಂಶಗಳನ್ನು ವ್ಯಕ್ತವಾಗಿ-ವಿಸ್ತಾರವಾಗಿ ಚರ್ಚಿಸಿ ಕಾವ್ಯ ಶಾಸ್ತ್ರದಲ್ಲಿ ಅಳವಡಿಸಿಕೊಳ್ಳುವದು ಸಾಧ್ಯವಾಗಬೇಕು.

ಹೀಗೆ ವಿಮರ್ಶೆಯ ಬಗೆಗಿನ, ಮೀಮಾಂಸೆಯ ಬಗೆಗಿನ ಪ್ರಧಾನವಾದ ಚರ್ಚೆಯು ನಡೆದು ಅದರಿಂದ ನಿಷ್ಪನ್ನವಾಗುವ ಸೂತ್ರಗಳು ಲಿಖಿತಗೊಳ್ಳದಿರುವ ಇಂದಿನ ಪರಿಸ್ಥಿತಿಯಲ್ಲಿ, ಇಬ್ಬಂದಿಯಾದ ಕಾವ್ಯ ಶಾಸ್ತ್ರದ ಅರಿವು ಇರುವ ಓದುಗನಾಗಲೀ, ವಿಮರ್ಶಕನಾಗಲೀ ಸಾಹಿತ್ಯವನ್ನು ಯಾವ ಕ್ರಮದಲ್ಲಿ ಗ್ರಹಿಸಬೇಕು? ಕೃತಿಕಾರನ ಉದ್ದೇಶ ಮತ್ತು ಅವನ ಆತ್ಮವೃತ್ತಾಂತದ ಹಿನ್ನೆಲೆಗಳು, ಸಾಹಿತ್ಯ ಕೃತಿಯ ಐತಿಹಾಸಿಕತೆ, ಅದರ ರಾಜಕೀಯ, ತತ್ವಶಾಸ್ತ್ರೀಯ ಮತ್ತು ಸಾಮಾಜಿಕ ಪ್ರೇರಣೆಗಳು ಅಥವಾ ಕೃತಿಯು ಇವುಗಳಿಗೆ ಸಂಬಂಧಪಟ್ಟಂತೆ ನೀಡುವ ಸಂದೇಶಗಳು ಈ ಮುಂತಾದವುಗಳೆಲ್ಲ ಪ್ರತ್ಯೇಕವಾಗಿ ತಮ್ಮಷ್ಟಕ್ಕೆ

ಾವೇ ಕುತೂಹಲಕಾರಿಯಾದವುಗಳೂ ಅಧ್ಯಯನಕ್ಕೆ ಅರ್ಹವಾದವುಗಳೂ ಆಗಬಹುದು. ಆದರೆ ಇವು ಕೃತಿಯ ಸಾಹಿತ್ಯಕ ಮೌಲ್ಯದ ಬಗೆಗೆ ಮಹತ್ವವಾದವುಗಳಲ್ಲ. ಓದುಗನು ಕೃತಿಗೆ ನ್ನ ಸ್ಪಂದನೆ ತೋರುವಲ್ಲಿ ಈ ಅಂಶಗಳು ಅಡ್ಡಬರದ ಪ್ರಮಾಣದಲ್ಲಿ ಇವುಗಳತ್ತ ಮನಹರಿಸಬಹುದು. ಓದುಗನು, ಸಂಪೂರ್ಣವಾಗಿ ವೈಚಾರಿಕವೂ ಅಲ್ಲದ-ಸಂಪೂರ್ಣವಾಗಿ ಅಂತಃಕರಣದಿಂದ ಮೂಡಿದ್ದೂ ಅಲ್ಲದ ಇವೆರಡನ್ನೂ ಒಳಗೊಳ್ಳುವ ಸಂಕೀರ್ಣ ಅನುಭವ ವಾಗುವ ತನ್ನ ಸಂವೇದನೆಯನ್ನು ಗುರುತಿಸಿಕೊಳ್ಳಬೇಕು. ಈ ಸಂವೇದನೆಯು ಭಾವ ಸ್ಪರ್ಶಿಯಾದದ್ದಾದರೂ ಇದು ಒಂದಿಷ್ಟಾದರೂ ಅರಿವಿನ- ಐಂದ್ರಿಯಕ ವಿವರಣೆಗೆ ದೊರೆಯು ವಂತಹದ್ದೂ ಆಗಿರುತ್ತದೆ. ಒಟ್ಟಿನ ಮೇಲೆ ಓದುಗನಲ್ಲಿ ಹುಟ್ಟುವ ಸಂವೇದನೆಯು ಸುಲಭವಾಗಿ ಹೆಸರಿಸಲು-ವರ್ಗೀಕರಿಸಲು-ಸಂಪೂರ್ಣವಾಗಿ ವರದಿಮಾಡಲು ಸಾಧ್ಯವಾಗದಂತಹದ್ದು ಆಗಿರುತ್ತದೆ. ಆದರೆ ಇದು ಸ್ಪಷ್ಟ ವಾಸ್ತವದಂತೆ ಓದುಗನೊಂದಿಗೆ ಇರುತ್ತದೆ.

ಓದುಗನು ಮುಖ್ಯವಾಗಿ ಕೃತಿಯ ಆಂತರಿಕ ಅಂಗಗಳಾದ ಶೈಲಿ, ಛಂದಸ್ಸು, ವಿವರಣಾತ್ಮಕತೆ,ಸಾಂಕೇತಿಕತೆ ಮತ್ತು ಪಾತ್ರ ಈ ಮುಂತಾದವುಗಳನ್ನು ನಿಕಟವಾಗಿ ಪರಿಭಾವಿಸುತ್ತ ಹೋದಂತೆ ಅವನಲ್ಲಿ 'ಧ್ವನಿ' ಎಂದು ಹೇಳಬಹುದಾದ ಸ್ಪಂದನೆಯು ಮೂಡುತ್ತದೆ. ಈ ಪ್ರಕ್ರಿಯೆಯ ಜೊತೆಗೇ, ಓದುಗನು ಕೃತಿಯಲ್ಲಿ ಅಲ್ಲಲ್ಲಿ ಬರುವ ಸಾಂದರ್ಭಿಕ ಅಂಶಗಳನ್ನು ತೀವ್ರವಾಗಿ ಗಮನಿಸುತ್ತಿರಬೇಕು. ಈ ಅಂಶಗಳು ಓದುಗನ ರಸಸ್ಪಂದನೆಯನ್ನು ಉದ್ದೀಪಿಸುವಂತಹ ಸೂಚನೆಗಳನ್ನು ನೀಡುವ ವಿಪುಲ ಸಾಧ್ಯತೆಗಳನ್ನು ಹೊಂದಿರುತ್ತವೆ. ಇಂಥ ನಿರೀಕ್ಷಣೆಗಳಿಂದ, ಸಂಕೇತವೊಂದು ಬೆಳೆದು, ಸಾಧಿಸುವ ಅರ್ಥ ಸಮೃದ್ಧತೆಯನ್ನು ಕಾಣಬಹುದು; ವಿವರಣೆಯ ಭಾಗವೊಂದು ಸಾಧಿಸುವ ಗಾಢತೆಯನ್ನು ಕಾಣಬಹುದು; ಪಠ್ಯದ ಹಿನ್ನೆಲೆಯಲ್ಲಿಯೇ ಏರ್ಪಡುವ ತಾತ್ವಿಕ ಚರ್ಚೆಯನ್ನು ಗುರುತಿಸಬಹುದು; ಕೃತಿಯಲ್ಲಿ ಏರ್ಪಡುವ ಜಗಿತ ಮತ್ತು ಕಂದಕಗಳು, ವೈರುಧ್ಯಗಳು ಮೂಡಿಸುವ ತೀವ್ರವಾದ ಭಾವಸಂವೇದನೆಗಳನ್ನುಗುರುತಿಸಬಹುದು.. ಹೀಗೆ ಇತ್ಯಾದಿಗಳು. ಈ ಎಲ್ಲ ಚಟುವಟಿಕೆಗಳನ್ನು ನಡೆಸುತ್ತ ಮತ್ತು ಇವುಗಳಲ್ಲಿ ಮಾತ್ರ ತೊಡಗುವ ಓದುಗನು ರುಕ್ಷವಾದ 'ರೂಪನಿಷ್ಠ' ಓದುವಿಕೆಯನ್ನು ನಡೆಸುತ್ತಿರುವುದಿಲ್ಲ. ಅವನು ಕಾವ್ಯ ಶಾಸ್ತ್ರದ ಮಹತ್ವದ ಕಾಣ್ಕೆಗಳಿಗೆ ತನ್ನನ್ನು ಒಡ್ಡಿಕೊಳ್ಳುತ್ತಿರುತ್ತಾನೆ. ಈ ಕ್ರಿಯೆ ಅನೂಚಾನವಾಗಿ ಬಂದ ಕಾವ್ಯಶಾಸ್ತ್ರವನ್ನು ಭಕ್ತಿಯಿಂದ ಅನುಸರಿಸುವುದಲ್ಲ. ಅದಕ್ಕೆ ಬದಲಾಗಿ, ಓದುವಿಕೆಯು ಹೊಸ 'ಸ್ವತ್ವ'ವನ್ನು ಕಂಡುಕೊಳ್ಳುವ ಸಂಸ್ಥೆಯಾಗಿರುತ್ತದೆ.

(ಕೃಪೆ 'ಇಂಡಿಯನ್ ಲಿಟರೇಚರ್'. ಕನ್ನಡಕ್ಕೆ : ರಾಘವೇಂದ್ರ ಪಾಟೀಲ)

‘ಪಿಂಛಾ ಆಡಿಸಬಾರದು’

– ಎಸ್. ಮಂಜುನಾಥ್

‘ಹಸರು ನಿಲುವಂಗಿಯ ಬಾಬಯ್ಯಗಳು ಮನೆಯ ಗೇಟಿನ ಬಳಿ ಬರುತ್ತಾರೆ. ನವಿಲುಗರಿಯ ಕುಚ್ಚನ್ನು (ಪಿಂಛಾ) ಆಡಿಸುತ್ತಾ ಮಣಮಣಗುಟ್ಟುತ್ತಾರೆ. ಮರುಳು ಮಾಡಿದಂತಾಗುತ್ತದೆ. ಅವರ ಮಣಮಣ ಮಂತ್ರದಲ್ಲಿ ಶಕ್ತಿಯೂ ಇರಬಹುದೇನೋ ಎಂದು ಸಣ್ಣ ಭಯವೂ ಆಗಬಹುದು. ಹೋಗಲಿ ಎಂದು ದಕ್ಷಿಣೆ ಹಾಕಿ ಕಳಿಸುತ್ತೇವೆ. ನಮ್ಮ ಕವಿಗಳಲ್ಲಿ ತುಂಬ ಜನ ಹೀಗೇ ದಕ್ಷಿಣೆ ಪಡೆದವರು’...

ಈ ಮಾತುಗಳನ್ನಾಡಿದವರು ಶ್ರೀ ಪು.ತಿ.ನ. ನಮ್ಮೊಡನೆ ಇರುವ ಶ್ರೇಷ್ಠಕಾವ್ಯಜೀವಿ, ಕವಿಗಳ ಗುರು. ನಾನು ನನ್ನ “ಬಾಹುಬಲಿ” ಎಂಬ ಕವನ ಸಂಕಲನದ ಬೆನ್ನುಡಿಗಾಗಿ ಅವರ ಬಳಿ ಹೋಗಿದ್ದಾಗ ನನ್ನಿಂದ ಕವನಗಳನ್ನು ಗಟ್ಟಿಯಾಗಿ ಓದಿಸಿ–ಕೇಳಿಕೊಂಡರು. ನನಗೆ ಮುಖ್ಯವೆನಿಸುವ ಪದ್ಯಗಳನ್ನೇ ಮೊದಲು ಓದಿ ಆ ಹಿರಿಯರನ್ನು ಮೆಚ್ಚಿಸಿಬಿಡಬೇಕು ಎಂದು ಶುರುಮಾಡಿದೆ.‘ಬಾಹುಬಲಿ’ ಎಂಬ ಪದ್ಯ ಕೇಳಿ ಕ್ಷಣ ಮೌನವಾದರು. ನಂತರ ಸಂಕೋಚದಿಂದ ನಕ್ಕರು, ನನಗೆ ನೋವಾಗದಂತೆ. “ಅರ್ಥವಾಗಲಿಲ್ಲ. ಹೇಳಿ, ಏನು ಇದರ ಅರ್ಥ? ಏನು ರಹಸ್ಯ, ಸ್ವಲ್ಪ ವಿವರಿಸಿ,” ಎಂದರು. ನಾನು ಜರ್‍ರಂತ ಇಳಿದಿದ್ದೆ. ಆ ಪದ್ಯದ ಅನುಭವವನ್ನು ಜ್ಞಾಪಿಸಿಕೊಳ್ಳಲು ಯತ್ನಿಸುತ್ತ “ಅದು ಅನಂತದ ಕುರಿತು ಇರಬೇಕು” ಎಂದೆ. ಅಸಂಖ್ಯ ಪದ್ಯಗಳನ್ನು ಅನುಭವಿಸಿರುವ ಆ ಮನಸ್ಸು ನಮ್ಮ ಎಲ್ಲ ಪದ್ಯಗಳನ್ನು ಊಹಿಸಬಲ್ಲದು. ನನ್ನ ಪದ್ಯವನ್ನು ಮರುಕ್ಷಣ ತೆಕ್ಕೆಗೆ ತೆಗೆದುಕೊಳ್ಳುತ್ತ “ಎಂಥ ಒಳ್ಳೇ Poetic idea ಅಪ್ಪಾ. ಈವರೆಗೆ ಯಾರೂ ಹೇಳಿಲ್ಲ. ಆದರೆ ಹೇಳುವುದರಲ್ಲಿ ಯಾಕಪ್ಪಾ ತೊಡಕು ಮಾಡಿದೀಯ?” ಎಂದು ಹೇಳಿ, ನನ್ನ ಪದ್ಯವನ್ನು ಎರಡು ಮೂರು ತೆರನಾಗಿ ಮರು ರಚಿಸಿ ತೋರಿದರು, “ಇದಲ್ಲವೇ ನೀನು ಹೇಳಬೇಕಾದ್ದು, ಇದಲ್ಲವೇ” ಎನ್ನುತ್ತ. “ಮೋಡಿ ಮಾಡಬಾರದು. ವಾಗರ್ಥಗಳಲ್ಲಿ ಅವಿಶದತೆಯಿಂದಾಗಿ ಸಂವಹನದಲ್ಲಿ ತೊಡಕುಂಟು ಮಾಡಬಾರದು. ನನಗೆ ಇಷ್ಟು ಭಾವನೆ ಬಂತು, ಇಂಥ ವಿಚಾರ ಬಂತು–ಎಂದು ಪ್ರಾಮಾಣಿಕವಾಗಿ ಹೇಳಬೇಕು. ಅವಿಶದತೆ ಧ್ವನಿ ಅಲ್ಲ. ಅದು ಗುಣ ಅಲ್ಲ” ಎಂದರು.

ನಾನು ಹೇಳಿದೆ: “ಅನುಭವ ವಾಚ್ಯಗೊಂಡುಬಿಡಬಹುದು ಎಂಬ ಭಯದಲ್ಲಿ ನಾವು ಹಾಗೆ ಮಾಡುತ್ತೇವೆ ಎನಿಸುತ್ತದೆ ಸಾರ್.” ಪು.ತಿ.ನ ಅಂದರು : “ಭಾವ ಎನ್ನುವುದು

ಊರ್ಜೆ (energy). ಅದು ಇರುತ್ತದೆ. ಅದನ್ನು ಯಾರೂ ಉಂಟುಮಾಡಲಾಗದು. ಅದು ವಚನೀಯವೇ ಅಲ್ಲ. ಸೂರ್ಯನ ಬೆಳಕು ವಸ್ತುಗಳಿಂದ ಪ್ರತಿಫಲನಗೊಂಡು ನಮಗೆ ಅದರ ಇರುವು ತಿಳಿಯುವಂತೆ- ಪದ್ಯದ ಸಕಲ ಪರಿಕರಗಳು ಹೀಗೆ ಭಾವದ ಇರುವನ್ನು ತಿಳುಹಬಹುದು ಅಷ್ಟೇ.''

ನವ್ಯಕಾವ್ಯದಲ್ಲಿ ಮುಖ್ಯವಾಗಿ ಈ ದೋಷವಿರುವಂತೆ ಪು.ತಿ.ನ. ಅವರಿಗೆ ಕಂಡಿದೆ. ನವ್ಯ ಮತ್ತು ನಂತರದಲ್ಲಿ ಬರೆದ ಹಲವರಲ್ಲಿ ಅನುಭವವನ್ನು ಗೂಢವಾಗಿಸುವ, ಸಂಕೇತಗೊಳಿಸುವ ಚಟ ಬೆಳೆಯಿತು. ಅದು ಅನುಭವದ್ದೇ ನಿಗೂಢತೆ ಅಲ್ಲ. ಹೇಳುವ ಕ್ರಮದಲ್ಲಿ ತಂದುಕೊಂಡದ್ದು. ಇದು ಓದುಗ ಮನಸ್ಸಿಗೆ ತೊಡಕನ್ನುಂಟುಮಾಡಿತು. ಇದರಿಂದ ಕವಿತೆಯ ಓದಿಗೆ ಧಕ್ಕೆಯಾಯಿತು.

ಮಾರ್ಕ್ಸ್‌ವಾದದಂಥ ಥಿಯರಿಗಳನ್ನು ನೆಚ್ಚಿದ ಬಂಡಾಯ ಚಳುವಳಿಗಾದರೋ ಕಾವ್ಯ ತನ್ನಷ್ಟಕ್ಕೆ ತಾನಿರುವುದು ಏನೂ ಪ್ರಯೋಜನವಿಲ್ಲೆನಿಸಿ, ಅದು ಸಮಾಜ ಬದಲಾವಣೆಯ, ಅಥವಾ ಸಾಮಾಜಿಕ ಟೀಕೆ, ವ್ಯಾಖ್ಯಾನದ ಸಾಧನವಾದರೂ ಆಗಬೇಕೆಂದೆನಿಸಿತು. ಹಾಗಾಗಿ ಆ ಕಾವ್ಯ, ಕಾವ್ಯಪ್ರಕ್ರಿಯೆಯ ತೊಡಕನ್ನು ಬಿಟ್ಟು ಸರಳಗೊಂಡಂಥದ್ದಾಯಿತು.

ಉಳಿದಂತೆ, ಹಲವು ಕನ್ನಡ ಕವಿಗಳ ಮೇಲೆ ಅನುಭಾವ ಚಿಂತನೆಯ ಪ್ರಭಾವ ಹೆಚ್ಚಾಗಿ ಆಗುತ್ತಿರುವಂತೆ ಕಾಣುತ್ತಿದೆ. ಕಾವ್ಯ ಇನ್ನು ಅನುಭಾವದ ದಾರಿ ಹಿಡಿಯ ಬೇಕು ಎಂದು ಕೆಲವರು ಮಾರ್ಗನಿರ್ದೇಶನ ಮಾಡಿಕೊಂಡಿದ್ದೂ ಇದೆ. ಅಂಥ ಎಲ್ಲ ಕಾವ್ಯದ ನಾಯಕ ಬಹುಷಃ ಅಲ್ಲಮಪ್ರಭು. ಪ್ರಭುವಿನ paradoxical ಗ್ರಹಿಕೆ ಕವಿಗಳ ಮನಸ್ಸನ್ನು ಹಿಡಿದಂತೆ ಕಾಣುತ್ತದೆ. ಆದರೆ ಒಂದು ಸಮಂಜಸವಾದ ಅನುಭವವಾಗಿಯೇ ಸಂವಹನಗೊಳ್ಳಬೇಕಾದ paradox ಬರಿಯ ದ್ವಂದ್ವ ನುಡಿಗಳ ಗಡಣವಾಗಿ ಅರ್ಥ ಹೀನ ಕಾಲ್ಪನಿಕ ವ್ಯವಹಾರವಾಗಿ ದಿಕ್ಕುಗೆಡಿಸುತ್ತಿರುವಂತೆ ಕಾಣುತ್ತಿದೆ. ನವ್ಯದ ನಂತರದ ಹಲವರ ಕವಿತೆ ನಿಗೂಢವಾದ ಜಟಿಲವಾದ ಶಬ್ದಗಳ ಪೋಣಿಸುವಿಕೆಯಾಗಿರುವುದಕ್ಕೆ ಈ ಅನುಭಾವ ಎಂಬುದರ ಒರಟು ಕಲ್ಪನೆಯೂ ಕಾರಣವೆಂದು ತೋರುತ್ತದೆ.

ನಿಜ, ಕವಿತೆಯೆಂದರೆ ಅದಾಗಲೇ ಸ್ಪಷ್ಟವಾದ ಅನುಭವಕ್ಕೆ ಭಾಷಾರೂಪ ಕೊಡುವುದಲ್ಲ. ಅದು ಕತ್ತಲಲ್ಲಿ ಬಿಟ್ಟ ಬಾಣ. ಆ ದಿಶೆಯಲ್ಲಿ ಅದು ಎಷ್ಟು ಧೈರ್ಯವಹಿಸುತ್ತದೋ, ಎಷ್ಟೆಷ್ಟು ಅಮೂರ್ತವನ್ನು ಅದು ಮೂರ್ತಗೊಳಿಸಿಕೊಡುತ್ತದೋ, ಅಷ್ಟಷ್ಟು ಅದರ ಹೆಚ್ಚುಗಾರಿಕೆ. ಆದರೆ, ಹಾಗೆ ಬಿಟ್ಟ ಬಾಣ ತನ್ನ ಗುರಿಯಾದ ಓದುಗನ ಮನಸ್ಸನ್ನು ಭೇದಿಸಿದಾಗ ಅದನ್ನು ಶಬ್ದವೇದಿ ಎಂದು ಕರೆಯಬಹುದು. ಕತ್ತಲಲ್ಲಿ ಬಿಟ್ಟ ಬಾಣ ಅಡ್ಡಾದಿಡ್ಡಿಯೇ ಪಯಣಿಸಿದರೆ.....?

ಅಗ್ರಾಹ್ಯವಾದುದಕ್ಕೂ ಅರ್ಥ ಕಟ್ಟುವ ವಿಮರ್ಶೆ ಕೂಡ ಇಂಥ 'ಪಿಂಛಾ-ವಾತಾವರಣ'ಕ್ಕೆ ಎಷ್ಟೋ ಮಟ್ಟಿಗೆ ಕಾರಣವಾಗಿದೆ. ಅರ್ಥವಿಲ್ಲದ್ದರಲ್ಲೂ ಅರ್ಥ ಕಾಣುವುದು ನಿಜಕ್ಕೂ ಬೌದ್ಧಿಕ ಕ್ಷೀಣತೆ. ಎಲ್ಲಕ್ಕಿಂತ ಮೊದಲು ಕವಿತೆ ಕವಿತೆಯಾಗಿದೆಯೇ ಎಂದು ನೋಡುವ ಬದಲು, ಕವಿತೆಯಲ್ಲಿನ ವಿವಿಧ ಬಿಡಿ ಅಂಶಗಳನ್ನು ಎಣಿಸಿ ಗುಣ-ದೋಷ ಹೇಳುವ ಪ್ರವೃತ್ತಿಯಿದೆ. ಒಂದು ಇಡೀ ವಿಮರ್ಶೆಯನ್ನು ಓದಿದ ಮೇಲೂ ಕವಿತೆ ಆ ವಿಮರ್ಶಕನಿಗೆ ಸಂತೋಷ ಕೊಟ್ಟಿತೋ ಇಲ್ಲವೋ ಗೊತ್ತಾಗುವುದಿಲ್ಲ. ಬಹುಷಃ ಕವಿತೆಯಿಂದ ಸಂತೋಷ

ಪಡುವುದು ಸಾಮಾನ್ಯ ಜನರ ಗುಣ ಇರಬೇಕು. ವಿಮರ್ಶಕರಾದರೋ ಕವಿತೆಯಲ್ಲಿ ಏನೇನಿದೆ ಎಂದು ಹುಡುಕಿ ಓದುಗರಿಗೆ ಉಪಕಾರ ಮಾಡುವವರಾಗಿದ್ದಾರೆ. ಮತ್ತು ಕವಿತೆಗೆ ಅರ್ಥ ಹಚ್ಚಿ ಕವಿಗಳಿಗೆ ಉಪಕಾರ ಮಾಡುವವರಾಗಿದ್ದಾರೆ. ಅದರಲ್ಲಿ ಅವರು ತಮ್ಮ ಜ್ಞಾನದ ವಿಜಯವನ್ನು ಕಾಣುತ್ತಾರೆ. ಇಂಥ ವ್ಯವಹಾರದಿಂದ ಅವರು ಬರೆಯುವವರಿಗೂ ಓದುಗರಿಗೂ ಗೊಂದಲವನ್ನು ಸೃಷ್ಟಿಸಿದ್ದಾರೆ.

ಬರೆದಾತ, ಪ್ರಕಟಿಸುವಾತ, ಓದುವಾತ, ವಿಮರ್ಶಿಸುವಾತ, ಯಾರಿಗೂ ಅರ್ಥಪೂರ್ಣವೆನಿಸದ, ಇಂದ್ರಿಯದ ಅಥವಾ ಮನಸ್ಸಿನ ಯಾವ ಅನುಭವಕ್ಕೂ ಸಂವಾದಿಯಲ್ಲದೆ ಅಗ್ರಾಹ್ಯವಾದ ನುಡಿಗಡಣವೂ ಈಗ ಕಾವ್ಯವೆಂಬ ಹೆಸರಿನಲ್ಲಿ ಗೊಂದಲ ವುಂಟುಮಾಡುತ್ತಿಲ್ಲವೇ? ಒಂದು ಕವಿತೆಯನ್ನು ಓದಿದಾಗ ತನಗಾಗುವ ಸಂತೋಷ, ತನಗೊದಗುವ ಅರ್ಥ ಇವುಗಳೇ ಮಾಪನಗಳಾಗಬೇಕಾದುದು ಈಗ ವ್ಯತ್ಯಾಸಗೊಂಡಿರುವಂತೆ ತೋರುತ್ತಿದೆ. ಕವಿತೆ ಬರೀ ಕವಿತೆಯಾಗಿರುವುದು ಯಾರಿಗೂ ಸಾಲದೆನಿಸುತ್ತಿದೆಯೇ?ಸರಸ್ವತಿಯ ಹಂಸ ಬರೀ ಮಾನಸ ಸರೋವರದಲ್ಲಿ ವಿಹರಿಸುವುದು ಅಷ್ಟಾಗಿ ಸೇರುತ್ತಿಲ್ಲವೇ?

ತುಂಬ ಜಾನಪದೀಯವಾಗಿ, ಅತಿ ವಿಶಿಷ್ಟವಾಗಿ ಭಾಷೆಯನ್ನು ಪ್ರಯೋಗಿಸುವುದೂ-ಅದು ಒಂದು ಜೀವಂತ ಸಂವೇದನೆಯ ಸಹಜ ಅಭಿವ್ಯಕ್ತಿಯಾಗದೆಯೂ ಅದಕ್ಕೆ ತನ್ನದೇ ಆದ ಒಂದು ಮೌಲ್ಯವಿದೆ ಎಂಬಂತೆ ಬಳಸುವುದು-ತನ್ನ ಊರು, ತನ್ನ ಜನ, ತನ್ನ ಮನೆಯಲ್ಲಿ ಮಾತ್ರ ತಿಳಿಯುವ ಮಾತು, ಭಾವನೆಗಳನ್ನು ಹೇಳಬಯಸುವದೂ ಕಾವ್ಯಧ ಪಾರದರ್ಶಕತೆ, ವಿಶ್ವಸಾಮಾನ್ಯತೆಗಳನ್ನು ಕೆಡಿಸುತ್ತಿದೆ. ತಿಳಿಯಾದ, ಜಟಿಲವಾಗಿದ್ದರೂ ಅರ್ಥಪೂರ್ಣವಾದ, ಸಂಕೀರ್ಣವಾದರೂ ಹೃದಯದಲ್ಲಿ ಸರಳತೆಯನ್ನು ಹೊಂದಿದ ಕಾವ್ಯವಷ್ಟೇ ಕೊನೆಯಲ್ಲಿ ಎಲ್ಲರಿಗೂ ಪ್ರಿಯವಾಗಿ ಉಳಿಯುವುದು. ಮನಸ್ಸನ್ನು ಹಿಡಿದುಕೊಡುವುದೇ ಕಾವ್ಯಕ್ಕೆ ಮುಖ್ಯವೇ ಹೊರತು ಜೀವನದ ವಿವರಗಳು, ಅನುಭವ, ತಮ್ಮಷ್ಟಕ್ಕೆ ತಾವೇ ಪದ್ಯದಲ್ಲಿ ಏನೂ ಅಲ್ಲ. ದಲಿತ ಜೀವನವನ್ನೋ ಮುಸ್ಲಿಂ ಜೀವನವನ್ನೋ ತಿಳಿಯಲು ನಾವು ಆಯಾ ಕವಿಗಳು ಬರೆದ ಕಾವ್ಯವನ್ನು ಓದಬೇಕೇ? ಮನುಷ್ಯರೆಲ್ಲರಿಗೂ ಒಂದೇ ಆದ ಕಾವ್ಯದ ಘನವಾದ ಮನಸ್ಸು ಎಂಬುದಿದೆ. ಅದನ್ನು ಸ್ಪರ್ಶಿಸಲೇ ಹತ್ತಾರು ಕಾವ್ಯಗಳ, ಹತ್ತಾರು ಕವಿಗಳ ಸಹಾಯ ಹಸ್ತ ನಮಗೆ ಬೇಕಿರುವುದು.

ಮನಸ್ಸಿನ ಸಹಜ ಸಾಮಾನ್ಯವಾದ ಒಳ್ಳೆಯತನ, ಸೌಂದರ್ಯ, ಸಂತೋಷಗಳೇ ಅಂತಿಮವಾದ ಕ್ರಿಯಾಶೀಲತೆ. ಎಲ್ಲ ಪ್ರತಿಭೆಯೂ ಅದರಿಂದಲೇ ಪರೀಕ್ಷೆಗೊಳಪಡ ಬೇಕಾಗಿರುವುದು. ಕವಿತೆಯನ್ನೊಂದು ವೃತ್ತಿಬದ್ಧತೆಯಿಂದ ಓದುವ ಕವಿ ವಿಮರ್ಶಕರನ್ನು ಬಿಟ್ಟರೆ, ವಿವೇಚನೆಯುಳ್ಳ, ಒಳ್ಳೆಯ, ಸಂತೋಷದ ಮನಸ್ಸಿನ ಹಲವು ಜನರು ಕವಿತೆಯನ್ನು ಓದಿ ಇದು ಮೌಲಿಕವಾದ್ದು ಎಂದು ಗೌರವ ತಳೆಯುವ ಸ್ಥಿತಿ ಇಂದು ಕಾಣುತ್ತಿಲ್ಲ. ಬದಲಿಗೆ, ಕಾವ್ಯವೆಂದರೆ ಅಂಥವರು ಮುನಿದು ದೂರ ನಿಲ್ಲುವ ಸ್ಥಿತಿಯಿದೆ. ಸಮಾಜದ ಲಿಖಿತ ಕಾವ್ಯದ ಸೃಷ್ಟಿಯಲ್ಲಿ ನೇರವಾಗಿ ಭಾಗಿಯಾಗುತ್ತಿರುವ ಕವಿಜನರು ವಿಮರ್ಶಕರುಗಳು ಕವಿತೆಯ ಇಂಥ ತೊಡಕಾದ ಕುಪ್ರಸನ್ನ ಮನಸ್ಥಿತಿಗೆ ಎಷ್ಟರ ಮಟ್ಟಿಗೆ ಕಾರಣೀಭೂತರೆಂಬುದನ್ನು ನೋಡಿಕೊಳ್ಳಬೇಕಾಗಿದೆ.

■

ಕನ್ನಡ ನವೋದಯದ ಪ್ರಕೃತಿದರ್ಶನ

-ಡಾ॥ ಡಿ.ಆರ್. ನಾಗರಾಜ

ಇಪ್ಪತ್ತನೆಯ ಶತಮಾನದಲ್ಲಿ ಕರ್ನಾಟಕದ ಚರಿತ್ರೆ ಹೊಸ ಯುಗಕ್ಕೆ ಕಾಲಿಟ್ಟ ಹಾಗೆಯೇ ಕನ್ನಡ ಕಾವ್ಯ ಕೂಡ ಹೊಸ ದಿಕ್ಕಿಗೆ ಹಬ್ಬಿತು. ಕಾವ್ಯದ ನೋಟ, ಬಂಧ, ದೃಶ್ಯಿಕ ಜಗತ್ತು ಕೂಡಾ ಕ್ರಾಂತಿಕಾರಕ ಬದಲಾವಣೆಯನ್ನು ಕಂಡವು. ನಿಸರ್ಗವು ಬರೀ ತೆರೆ ಎನ್ನುವ ಭಾವನೆ ಹಿಂದೆ ಸರಿಯಿತು. ಮಾನವನ ಮನಸ್ಸು ಮತ್ತು ನಿಸರ್ಗ ಮೊದಲಬಾರಿಗೆ ಕನ್ನಡದಲ್ಲಿ ಮುಖಾಮುಖಿಯಾದವು. ಪ್ರಕೃತಿ ಎನ್ನುವುದು ಶುದ್ಧ ಐಂದ್ರಿಕ ಅನುಭವ ಹಾಗೂ ತಾತ್ವಿಕ ಶೋಧನೆ ಎರಡಕ್ಕೂ ಅದ್ಭುತವಾದ ಮಾಧ್ಯಮವಾಯಿತು. ಶುದ್ಧ ಐಂದ್ರಿಕ ಅನುಭವ ಜೊತೆಗೆ ತಳುಕು ಹಾಕಿಕೊಂಡರೆ, ಪ್ರಕೃತಿಯ ಹಿನ್ನೆಲೆಯಲ್ಲಿ ನಡೆದ ವೈಚಾರಿಕ ಶೋಧನೆ ಭಾರತೀಯ ಸಂಸ್ಕೃತೀಯ ಮೂಲ ನೆಲೆಗಟ್ಟುಗಳಲ್ಲಿ ಒಂದಾದ ಭೂಮಿ ತತ್ವ ಪ್ರತೀಕವನ್ನು ಮುಟ್ಟಿತು. ಈ ಭಿನ್ನ ಪ್ರಕ್ರಿಯೆಗಳು ಬೇರೆ ಬೇರೆ ಕವಿಗಳಲ್ಲಿ ಸಂಭವಿಸಿದ ರೀತಿಯಂತೂ ವಿಶಿಷ್ಟವಾದದ್ದು.

ಹತ್ತೊಂಭತ್ತನೇ ಶತಮಾನದ ಇಂಗ್ಲಿಷ್ ರೊಮ್ಯಾಂಟಿಕ್ ಕಾವ್ಯ ಮತ್ತು ಕನ್ನಡ ನವೋದಯ ಪ್ರಕೃತಿದರ್ಶನದ ನಡುವೆ ಇರುವ ಸಾಮ್ಯ ಮತ್ತು ಭಿನ್ನತೆಗಳು ಸ್ಪಷ್ಟವಾದಾಗಲೇ ನವೋದಯ ಕಾವ್ಯದ ಪ್ರಕೃತಿದರ್ಶನದ ವಿಶಿಷ್ಟತೆ ಅರಿವಾಗುವುದು. ಎರಡರ ತೌಲನಿಕ ಅಧ್ಯಯನದ ಮೊದಲ ಹಂತ ಎರಡೂ ಕಾವ್ಯ ಮಾರ್ಗಗಳ ಚಾರಿತ್ರಿಕ ಸತ್ವದ ಚರ್ಚೆಯಿಂದಲೇ ಪ್ರಾರಂಭವಾಗಬೇಕು. ಈ ಸಮಸ್ಯೆಯ ಸಮಗ್ರ ಅಧ್ಯಯನ ಪ್ರಸ್ತುತ ಸಮಸ್ಯೆಗೆ ಹೊರತಾದುದರಿಂದ ಅದರ ಸ್ಥೂಲಾಂಶವನ್ನು ಇಲ್ಲಿ ಗುರುತಿಸಲು ಸಾಧ್ಯ. ಈ ಹಿನ್ನೆಲೆಯಲ್ಲಿ ಗಮನಿಸಬೇಕಾದ ಮುಖ್ಯ ಅಂಶವೆಂದರೆ, ಕಾವ್ಯವೆಂಬ ಸಂಸ್ಥೆಗೆ ಎಷ್ಟೇ ಸ್ವಾಯತ್ತತೆ ಇದ್ದರೂ, ಅದು ಮೂಲತಃ ಚರಿತ್ರೆಯ ಕೂಸೇ ಎಂಬುದು.

ಸಾಮಾಜಿಕವಾಗಿ ಇಂಗ್ಲಿಷ್ ರೊಮ್ಯಾಂಟಿಕ್ ಕಾವ್ಯದ ಸತ್ವ ಇರುವುದು ಇಂಗ್ಲೀಷ್ ಜನಾಂಗದ ದಣಿವು ಮತ್ತು ಪ್ರತಿಭಟನೆಯಲ್ಲಿ ಮತ್ತು ಒಂದು ರೀತಿಯ ತಾತ್ವಿಕ ಹಿಂಜರಿತದಲ್ಲಿ. ವಿವವರಿಸುವುದಾದರೆ: ಬಂಡವಾಳ ಶಾಹೀ ನಾಗರಿಕತೆ ತನ್ನ ಕುರೂಪೀ ಮುಖಗಳನ್ನು, ಕ್ರೂರ ಹಸ್ತಗಳನ್ನು ಇಂಗ್ಲೆಂಡಿನ ಬದುಕಿನಲ್ಲಿ ಪ್ರಕಟಿಸತೊಡಗಿತ್ತು. ವಾಸ್ತವವಾಗಿ ಇಂಗ್ಲೆಂಡಿನಲ್ಲಿ ಬಂಡವಾಳ ಶಾಹಿ ನಾಗರಿಕತೆ ಹುಟ್ಟಿದ್ದೇ ತೀವ್ರ ಹಿಂಸೆಯ ಗರ್ಭದಿಂದ. ಹಳೆಯ ಸಾಮಾಜಿಕ,

ಆರ್ಥಿಕ ರಚನೆಗಳನ್ನು, ಮಾನಸಿಕ ರಚನೆಗಳನ್ನು ನಾಶಮಾಡಿ ಅದು ತನ್ನ ಹುಟ್ಟನ್ನು ಪಡೆಯಿತು. ಈ ಪ್ರಕ್ರಿಯೆ ಅತ್ಯಂತ ವಿನಾಶಕಾರೀ ಸ್ವರೂಪದ್ದಾಗಿತ್ತು. ಅದರಲ್ಲಿಯೂ, ರೊಮ್ಯಾಂಟಿಕ್ ಕಾವ್ಯ ತನ್ನ ಸ್ಪಷ್ಟತೆಯನ್ನು ರೂಪಿಸಿಕೊಳ್ಳುವ ಹೊತ್ತಿಗೆ ಬಂಡವಾಳಶಾಹೀ ನಾಗರಿಕತೆಯ ಬಗ್ಗೆ ಇಂಗ್ಲೀಷ್ ಬುದ್ಧಿ ಜೀವಿಗಳ ಒಂದು ವರ್ಗಕ್ಕೆ ಯಾವ ಆಸೆಯೂ ಉಳಿದಿರಲಿಲ್ಲ. ಮುಂದೆ ಅದು ತಳೆಯಲಿರುವ ಭಯಾನಕ ರೂಪದ ಅರಿವು ರೊಮ್ಯಾಂಟಿಕ್ ಪ್ರತಿಭೆಗೆ ಆಗಲೇ ಹೊಳೆದು ಹೋಗಿತ್ತು. 'ಮುಗಿಲು ಮುಟ್ಟುವ ಕುರೂಪಿ ಹೊಗೆಗೊಳವೆಗಳು, ನರಕದ ಚೂರುಗಳಂತಿರುವ ಕೂಲಿಕಾರರ ಓಣಿಗಳು–ಇವೇ ಮುಂದೆ ಇಂಗ್ಲೆಂಡಿನ ಪ್ರತಿಮೆಗಳು' ಎಂದು ಇಂಗ್ಲಿಷ್ ಮನಸ್ಸು ಗಾಢವಾಗಿ ದುಃಖಿಸುತ್ತಿದ್ದ ಕಾಲ ಅದು. ಈ ಹತಾಶೆ ಬೆರೆತ ಸಿಟ್ಟಿಗೆ ಬ್ಲೇಕ್ ಕವಿ ಅತ್ಯಂತ ಪರಿಣಾಮಕಾರಿಯಾಗಿ ಮಾತಿನ ರೂಪ ಕೊಡುತ್ತಾನೆ.'Dark Satanic Mills' ಎಂಬ ಮಾತನ್ನು ಸೃಷ್ಟಿಸಿದ.

ಈ ಮಾತು ಮುಂದೆ ಕೈಗಾರಿಕೀಕೃತ ನಾಗರಿಕತೆಯ ವಿರೋಧಿಗಳ ಮಾತಿನೊಳಗೆ ಬೆಲೆ ಬಾಳುವ ನುಡಿಗಟ್ಟಾಗಿ ಪರಿವರ್ತಿತವಾಯಿತು. ಪರಿಸರದ ಕರಾಳತೆಯ ವಿರುದ್ಧ ಹತಾಶೆ, ದಣಿವು, ಸಿಟ್ಟು, ಪಲಾಯನದ ಆಸೆ ಎಲ್ಲವೂ ಬೆರೆತು ರೊಮ್ಯಾಂಟಿಕ್ ಕಾವ್ಯದ ಚೌಕಟ್ಟು ಸಿದ್ಧವಾಯಿತು. ಈ ಕಾರಣಕ್ಕಾಗಿಯೇ, ಅದರ ಕನಸಿನ ಲೋಕದ, ಮಾಧುರ್ಯದ ರಸ ಘಳಿಗೆಗಳ ಹಿನ್ನೆಲೆಯಲ್ಲಿರುವುದು ಒಂದು ನಾಗರಿಕತೆಯ ಎದೆಯೊಡೆದ ಮನಸ್ಸು. ವಾಸ್ತವವಾಗಿ ಅವರು ಪ್ರಕೃತಿಯ ಕಡೆಗೆ ತಿರುಗಿದ್ದು, ನಿಸರ್ಗದ ಆರಾಧಕರಾಗಿದ್ದು ಇದೇ ಕಾರಣದಿಂದಲೇ. ಇದರ ಜೊತೆಗೆ ತತ್ತ್ವ ಜ್ಞಾನದ ವಲಯದಲ್ಲಿ ರೂಪುಗೊಂಡಿದ್ದ ವಿಚಾರಗಳು ಕೂಡಾ ಈ ರೊಮ್ಯಾಂಟಿಕ್ ದಂಗೆಗೆ ಕಾರಣವನ್ನೊದಗಿಸಿದವು: ಅದೆಂದರೆ, ಲಾಕ್, ಹಾರ್ಟಲೀ ಮುಂತಾದವರ ತತ್ವಜ್ಞಾನ. ಪರಿಸರ ಮತ್ತು ಈ ತತ್ವಜ್ಞಾನ ಎರಡೂ ಒಂದೇ ಮರದ ಬೇರೆ ಬೇರೆ ಕೊಂಬೆಗಳಂತೆ ಕಂಡಾಗ ಎರಡರ ವಿರುದ್ಧವೂ ಅವರು ದಂಗೆ ಎದ್ದರು.[1] ಬೌದ್ಧಿಕತೆ ಮತ್ತು ಯಾಂತ್ರಿಕ ನಾಗರಿಕತೆಯ ಪ್ರಗತಿ ಎರಡೂ ಒಂದೇ ಪ್ರಕ್ರಿಯೆ ಎಂದು ಇಂಗ್ಲಿಷ್ ರೊಮ್ಯಾಂಟಿಕ್ಕರು ಭಾವಿಸಿದರು. ಈ ಕಾರಣಕ್ಕಾಗಿಯೇ ಕವಿ ಬ್ಲೇಕ್, ಬೇಕನ್, ನ್ಯೂಟನ್ ಮತ್ತು ಲಾಕರನ್ನು 'ಅನಿಷ್ಟ ತ್ರಿವಳಿಗಳು' ಎಂದು ಕರೆದ.[2] ಹತ್ತೊಂಭತ್ತನೆ ಶತಮಾನದ 'ವೈಚಾರಿಕ ವಿಚಾರವಾದ'ದ ಎಲ್ಲಾ ಪ್ರತಿನಿಧಿಗಳು (ಡೆಕಾರ್ಟ್ ಮತ್ತು ಹಾಬ್ಸ್‌ರೂ ಸೇರಿದಂತೆ) ಖಂಡನೆಗೆ ಅರ್ಹ ಎನಿಸಿದರು. ನಾಗರಿಕತೆಯ ಈ ವಿಕಾಸಪಥದ ಬಗ್ಗೆ ಇದ್ದ ತಿರಸ್ಕಾರ, ದಣಿವು ವರ್ಡ್ಸ್‌ವರ್ತ್‌ನಲ್ಲಿಯಂತೂ ಇನ್ನೂ ಮಾರ್ಮಿಕವಾಗಿ ವ್ಯಕ್ತವಾಗುತ್ತದೆ.

---

1. ರೊಮ್ಯಾಂಟಿಕ್ ಕಾವ್ಯ ಮಿಮಾಂಸೆಯಲ್ಲಿ ಮಹತ್ವದ ಪರಿಕಲ್ಪನೆಯಾದ ''ಪ್ರತಿಭೆ'' ರೂಪುಗೊಂಡದ್ದೇ ಈ ಸೆಲೆಗಳಿಂದ.
2. Douglas Bush : **Science And English poetry** (Oxford university Press: NewYork, 1950)P-53.

ಇದು ಒಂದು ರೀತಿಯ ನೇತ್ಯಾತ್ಮಕ ನೆಲೆಯಾದರೆ, ಇನ್ನೊಂದು ಗಾಢ ಹತಾಶೆ. ಅದು ಒಂದು ಜನಾಂಗದ ಅರ್ಥಪೂರ್ಣ ಕನಸುಗಳನ್ನು ಮಣ್ಣುಗೂಡಿಸಿದ ಫ್ರೆಂಚ್ ಕ್ರಾಂತಿಯ ವಿಫಲತೆಯನ್ನು ಕುರಿತದ್ದು. ಎಲ್ಲೆಲ್ಲೂ ಸಂಕೋಲೆಗಳಿಂದ ಬಂಧಿಸಲ್ಪಟ್ಟಿರುವ ಮಾನವನ ಬಿಡುಗಡೆಗಾಗಿ ಫ್ರೆಂಚ್ ಕ್ರಾಂತಿ ಎಂದು ಬಹುಪಾಲು ರೋಮ್ಯಾಂಟಿಕ್ಕರು ನಂಬಿದ್ದರು. ಅದರಲ್ಲಿಯೂ ಪ್ರಗತಿಶೀಲರಾಗಿ ಹೊರಟ ರೊಮ್ಯಾಂಟಿಕ್ಕರಿಗಂತೂ ಫ್ರೆಂಚ್ ಕ್ರಾಂತಿಯ ವಿಫಲತೆಯಿಂದ ಉಂಟಾಗಿರಬಹುದಾದ ಆಘಾತ ಎಷ್ಟೆಂಬುದನ್ನು ಅವರ ಕವನಗಳ ಮೂಲಕವೇ ಅರ್ಥಮಾಡಿಕೊಳ್ಳಬೇಕು. ಅರ್ಥಪೂರ್ಣ ಮಾನವರನ್ನು ಸೃಷ್ಟಿಸಹೊರಟ ಫ್ರೆಂಚ್ ಕ್ರಾಂತಿ ರಕ್ಕಸರನ್ನು ಸೃಷ್ಟಿಸಿತು. ಈ ಭ್ರಮನಿರಸನ ಒಂದು ರೀತಿಯ ತಾತ್ವಿಕ ಹಿಂಜರಿತಕ್ಕೆ ರೊಮ್ಯಾಂಟಿಕ್ಕರನ್ನು ತಳ್ಳಿತು.[3] ಈ ಹಿಂಜರಿತ ತನ್ನ ಗಾಢ ದುಃಖದ ಬಣ್ಣಗಳಲ್ಲಿ ಕಾಣಿಸಿಕೊಳ್ಳುವುದು ವರ್ಡ್ಸ್‌ವರ್ತ್‌ನಲ್ಲಿ. ರಾಜಕೀಯದ ಕಾರಣದಿಂದಾಗಿ ಉಂಟಾಗುವ ಈ ಹಿಂಜರಿತ ಮುಂದೆ ಆಡೆನ್ ಮತ್ತು ಮೂವತ್ತರ ದಶಕದ ಇಂಗ್ಲಿಷ್ ಕಾವ್ಯಕ್ಕೂ ಮುಂದುವರೆಯಿತೆಂದು ಖ್ಯಾತ ಬ್ರಿಟಿಷ್ ಚರಿತ್ರಕಾರ ಇ.ಪಿ. ಥಾಂಸನ್ ತಮ್ಮ ಪ್ರಬಂಧವೊಂದರಲ್ಲಿ ವಿವರಿಸುತ್ತಾರೆ.[4] ಅವರೆಲ್ಲರ ಹುಡುಕಾಟದ ಕೇಂದ್ರಸೆಲೆ ನಿಸರ್ಗವಾಗಿ ರೂಪುಗೊಂಡಿದ್ದು ಈ ಹಿನ್ನೆಲೆಯಿಂದಲೇ.

ಆದರೆ ಕನ್ನಡ ನವೋದಯದ ಸತ್ವವಿರುವುದು ಇದಕ್ಕೆ ತೀರಾ ಭಿನ್ನವಾದ ನೆಲೆಗಳಲ್ಲಿ. ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಿಂದಾಚೆಗೆ ಭಾರತದ ಬದುಕಿನಲ್ಲಿ ಅತ್ಯಂತ ಮಹತ್ವದ ಬದಲಾವಣೆ ಪ್ರಾರಂಭವಾಯಿತು. ಬ್ರಿಟಿಷರು ಇಲ್ಲಿ ಕೈಗೊಂಡ ಶಿಕ್ಷಣ ಪ್ರಸಾರ ಈ ಹಿನ್ನೆಲೆಯಲ್ಲಿ ವಹಿಸಿದ ಪಾತ್ರವನ್ನು ನೆನೆಯಬೇಕಾದದ್ದು ಅತ್ಯಾವಶ್ಯಕ. ಭಾರತದ ಚರಿತ್ರೆ ಹೊಸ ದಿಕ್ಕಿನಲ್ಲಿ ಚಲಿಸಿ ಶತಶತಮಾನಗಳಿಂದ ಮೂಕವಾಗಿದ್ದ ವರ್ಗಗಳು ನಿಧಾನಕ್ಕೆ ಚಲಿಸತೊಡಗಿದವು. ತಮ್ಮ ರಾಷ್ಟ್ರವನ್ನು ಸ್ವತಂತ್ರವನ್ನಾಗಿಸುವ, ಹೊಸ ಭಾರತವನ್ನು ಕಟ್ಟುವ ಕನಸಿನಿಂದ ಹೊರಟ ರಾಷ್ಟ್ರೀಯ ಚಳುವಳಿ ರೂಪುಗೊಳ್ಳಹತ್ತಿತು. ತಮ್ಮ ಸಂಸ್ಕೃತಿಯನ್ನು ವಿಮರ್ಶಾತ್ಮಕವಾಗಿ ಪರೀಕ್ಷಿಸುವ, ಕೊಳೆಯುತ್ತಿರುವ ಅನೇಕ ಸಂಸ್ಥೆಗಳ, ಮೌಲ್ಯಗಳ ವಿರುದ್ಧ ಒಂದು ಸಾಂಸ್ಕೃತಿಕ ಆಂದೋಲನವೇ ರೂಪುಗೊಂಡಿತು. ಈ ಪ್ರಕ್ರಿಯೆಯೇ ಭಾರತದ ರೆನೆಸಾನ್ಸ್ ಎಂದು ಖ್ಯಾತವಾಗಿರುವುದು. ಆದರೆ ಭಾರತೀಯ ಸಂಸ್ಕೃತಿಯನ್ನು ನಿರಾಕರಿಸುವುದು ಇದರ ಮೂಲ ಉದ್ದೇಶವಾಗಿರಲಿಲ್ಲ. ಬದಲಾಗಿ, ತಮ್ಮ ಸಂಸ್ಕೃತಿ ಕೂಡಾ ಶ್ರೇಷ್ಠವಾದುದು ಎಂಬ ಗಾಢ ನಂಬಿಕೆಯಿಂದ ಹೊರಟು ಅದನ್ನು ಪರಿಷ್ಕರಿಸುವುದು

---

3 ವರ್ಡ್ಸ್‌ವರ್ತ್ ಮುಂತಾದವರು ತಮ್ಮ ಕಡೆಗಾಲದಲ್ಲಿ ಸಂಪ್ರದಾಯವಾದಿಗಳಾದುದರ ಹಿನ್ನೆಲೆಯ ಮೂಲ ಕಾರಣ ಇದೇ ಎನ್ನಲು ಸಾಧ್ಯವಿದೆ.

4. E.P. Thompson : Poverty of Theory and other Essays
Merlin Press; London, (1978)P-8-19.

ಈ ಆಂದೋಲನದ ಮುಖ್ಯ ಗುರಿ. ಈ ಸಂದರ್ಭದಲ್ಲಿ ಮುಖ್ಯವಾದ ಚಾರಿತ್ರಿಕ ವಿಸಂಗತಿಯೊಂದನ್ನು ಗಮನಕ್ಕೆ ತಂದುಕೊಳ್ಳಬೇಕಾಗಿದೆ. ಅದೆಂದರೆ, ಭಾರತದ ಬದುಕಿನಲ್ಲಿ ಉಂಟಾದ ಈ ಹೊಸ ಜಾಗೃತಿಯ ಮೂಲ ಪ್ರೇರಣೆ ಎಂದರೆ ಪಾಶ್ಚಾತ್ಯ ಸಂಸ್ಕೃತಿಯ ಸಂಪರ್ಕ ಎಂಬುದು. ಹೀಗಾಗಿ, ಈ ಪ್ರಕ್ರಿಯೆಯಲ್ಲಿ ಒಟ್ಟಾರೆಯಾಗಿ ವಸಾಹತುಶಾಹೀ ಅನುಕರಣೆಯ ಅಂಶವೆಷ್ಟು, ತಮ್ಮ ಸಂಸ್ಕೃತಿಯ ಪುನರ್ ಮೌಲ್ಯೀಕರಣದ ಅಸಲೀ ಪ್ರಯತ್ನವೆಷ್ಟು ಎಂಬುದನ್ನು ಸೂಕ್ಷ್ಮವಾಗಿ ವಿಶ್ಲೇಷಿಸಬೇಕಾಗಿದೆ. ಈ ಅಂಶ ನಮ್ಮ ಆಧುನಿಕ ಭಾರತೀಯ ಸಂಸ್ಕೃತಿ ಮೀಮಾಂಸೆಗೆ ಅತ್ಯಂತ ಮಹತ್ವದ್ದಾಗಿದೆ. ಏಕೆಂದರೆ, ಈ ವಸ್ತುನಿಷ್ಠ ವಿಶ್ಲೇಷಣೆಯಿಂದ ಹೊರ ಬರುವ ನಿಲುವುಗಳು ನಮ್ಮ ಈಗಿನ ಅನೇಕ ನಿಲುವುಗಳ ಮೇಲೆ ಕ್ರಾಂತಿಕಾರಕ ಪ್ರಭಾವವನ್ನು ಬೀರುತ್ತದೆ. ಈ ಅಂಶವನ್ನು ಗಮನದಲ್ಲಿಟ್ಟುಕೊಂಡೇ ಮುಂದಿನ ಮಾತುಗಳನ್ನು ಹೇಳಲಾಗಿದೆ.

ಮೇಲಿನ ವಿಶ್ಲೇಷಣೆಯಿಂದ ಪರೋಕ್ಷವಾಗಿ ಸೂಚಿತವಾದದ್ದು ಇಪ್ಪತ್ತನೆಯ ಶತಮಾನದ ಮೊದಲ ದಶಕಗಳಲ್ಲಿ ಭಾರತದ ಬದುಕಿನ ಎಲ್ಲ ಕ್ಷೇತ್ರಗಳಲ್ಲಿ ತುಂಬಿದ್ದ ಅದಮ್ಯ ಉತ್ಸಾಹ, ತುಂಬು ವೀರ್ಯವಂತಿಕೆ, ಹೊಸದನ್ನು ಕಟ್ಟುವ ಹಠ, ಹಳೆಯ ಕೊಳಕನ್ನು ನಾಶಮಾಡುವ ರೊಚ್ಚು-ಇದೆಲ್ಲದರ ಹಿನ್ನೆಲೆಯಲ್ಲಿ ಹೊಸ ಭಾರತದ ಬಗ್ಗೆ ಪ್ರೀತಿ ಬೆರೆತ ನಿರೀಕ್ಷೆ. ಇವೆಲ್ಲ ಸಮಷ್ಟಿ ಆಶಯಗಳನ್ನು ಕುವೆಂಪು ಅವರ ಈ ಸಾಲುಗಳಲ್ಲಿ ಗಮನಿಸಬಹುದು.

> ಹೋಗುತಲಿದೆ ಹಳೆ ಕಾಲ, ಹೊಸ ಕಾಲ ಬರುತಲಿದೆ,
> ಬರುತಲಿದೆ ಹೊಸ ದೃಷ್ಟಿ, ಹೊಸ ಬಯಕೆಗಳಲಿ,
> ಹೋಗುತಿದೆ ಹಳೆಬಾಳು, ಹೊಸ ಬಾಳು ಬರುತಲಿದೆ,
> ಬರುತಲಿದೆ ಕುದಿಗೊಂಡು ತರುಣರೆದೆಗಳಲಿ
> ತರುಣರಿರ ಎದ್ದೇಳಿ ಎಚ್ಚರಗೊಳ್ಳಿ ಕೇಳಿ
>
> – ತರುಣರಿರ ಎದ್ದೇಳಿ[1]

ವೀರತ್ವ ಆಗಿನ ಯುಗಧರ್ಮ ಎಂಬ ಅಂಶ ವಾದಾತೀತವಾದದ್ದು.

ಕನ್ನಡ ನವೋದಯದಲ್ಲಿ ಅತ್ಯಂತ ಮುಖ್ಯವಾಗಿ ಗಮನಿಸಬೇಕಾಗಿರುವ ಅಂಶವೆಂದರೆ ಪ್ರಕೃತಿಯ ದೈವೀಕರಣ. ಪ್ರಕೃತಿಯ ಪ್ರತಿಯೊಂದು ವಿಲಾಸವೂ, ವಿದ್ಯಮಾನವೂ, ಮತ್ತಾವುದೊ ಶಕ್ತಿಯ, ದೈವೀ ಶಕ್ತಿಯ ಸಾಕ್ಷಾತ್ಕಾರದಂತೆ ಕಾಣುತ್ತದೆ. ಒಂದಲ್ಲ ಒಂದು ರೀತಿಯ ಪರಿವರ್ತನೆ ಪ್ರಕೃತಿ ದರ್ಶನದ ಅಂತಿಮ ಹಂತ. ಕುವೆಂಪು ಅವರ 'ಆನಂದಮಯ ಈ ಜಗ ಹೃದಯ' ಕವನ ಈ ವಿಚಾರವನ್ನು ತತ್ವೀಕರಿಸಿ ಹೇಳುತ್ತದೆ.

---

1 ಕುವೆಂಪು : ಕೋಗಿಲೆ ಮತ್ತು ಸೋವಿಯಟ್ ರಷ್ಯಾ (ಉದಯರವಿ ಪ್ರಕಾಶನ: ಮೈಸೂರು, ತೃ.ಮು, 1966) ಪು-27.

ಆನಂದಮಯ ಈ ಜಗ ಹೃದಯ :
ಏತಕೆ ಭಯ? ಮಾಣೋ
ಸೂರ್ಯೋದಯ ಚಂದ್ರೋದಯ
ದೇವರ ದಯ ಕಾಣೊ
ಬಿಸಿಲಿದು ಬರಿ ಬಿಸಿಲಲ್ಲವೊ
ಸೂರ್ಯನ ಕೃಪೆ ಕಾಣೊ
ಸೂರ್ಯನು ಬರಿ ರವಿಯಲ್ಲವೊ
ಆ ಭ್ರಾಂತಿಯ ಮಾಣೊ
ರವಿವದನವೆ ಶಿವಸದನವೊ
ಬರಿ ಕಣ್ಣದು ಮಣ್ಣೊ
ಶಿವನಿಲ್ಲದೆ ಸೌಂದರ್ಯವು
ಶವಮುಖದ ಕಣ್ಣೊ

–ಆನಂದಮಯ ಈ ಜಗಹೃದಯ[1]

ಈ ಸಾಲುಗಳು ಪ್ರಾತಿನಿಧಿಕವೇಕೆಂದರೆ, ಇವು ಒಟ್ಟಾರೆಯಾಗಿ ಇಡೀ ನವೋದಯದ ಪ್ರಕೃತಿ ದರ್ಶನದ ಒಂದು ಮುಖವನ್ನು ಸೂತ್ರೀಕರಿಸಿ ಹೇಳುತ್ತವೆ.

ಈ ಹಿನ್ನೆಲೆಯಿಂದ ನೋಡುವುದಾದರೆ, ಪ್ರಕೃತಿಯ ಬಗೆಗೆ ಶುದ್ಧ ಈಸ್ಥೆಟಿಕ್ ಆದ ದೃಷ್ಟಿಕೋನವನ್ನು ಹೊಂದಿರುವ ಕವನಗಳು ಕಡಿಮೆ. ಎಲ್ಲವೂ ಅಂತಿಮವಾಗಿ ದೈವೀಕರಣಕ್ಕೆ ತಳುಕು ಹಾಕಿಕೊಳ್ಳುತ್ತವೆ.

ಪ್ರಕೃತಿಯನ್ನು ದೈವೀಕರಿಸುವ ಈ ದೃಷ್ಟಿಕೋನ ಹತ್ತೊಂಭತ್ತನೆಯ ಶತಮಾನದ ಇಂಗ್ಲಿಷ್ ರೊಮ್ಯಾಂಟಿಕ್ ಕವಿಗಳ ದೃಷ್ಟಿಕೋನಕ್ಕೆ ಅನೇಕ ದೃಷ್ಟಿಗಳಿಂದ ಹತ್ತಿರವಾದದ್ದು ಎಂಬುದರ ಬಗ್ಗೆ ಯಾವ ಅನುಮಾನವೂ ಇಲ್ಲ. ಅಲ್ಲಿ ಕೂಡಾ ಪ್ರಕೃತಿಯ ವಿವರಗಳಲ್ಲಿ ದೈವವನ್ನು ಕಾಣುವ ಪ್ರಯತ್ನ ಮುಖ್ಯ. ನಿಸರ್ಗದ ಬಗೆಗಿನ ಧೋರಣೆಯಿಂದಾಗಿ ಒಟ್ಟಾರೆಯಾಗಿ ಕವನದ ಭಾವಕೋಶ ಸಾಮಾನ್ಯವಾಗಿ ಉನ್ನತೀಕರಣಗೊಂಡಿರುತ್ತದೆ.

ಇಂಗ್ಲಿಷ್ ರೊಮ್ಯಾಂಟಿಕ್ ಕಾವ್ಯದಲ್ಲಿ ನಿಸರ್ಗ, ಮರ, ಗಿಡ, ಬೆಟ್ಟ ಎಲ್ಲವೂ ದೈವವನ್ನು ಪ್ರಕಟಿಸಹತ್ತುತ್ತವೆ. ನಿಸರ್ಗದ ಎಲ್ಲ ವಸ್ತುಗಳು ಕೂಡಾ, ಕೋಲ್‌ರಿಜ್‌ನ ಮಾತಿನಲ್ಲೇ ಹೇಳವುದಾದರೆ–'ಆ ದೈವದ ಅನಂತ ಭಾಷೆ'ಯಿಂದ ಬಂದದ್ದು. ಇಲ್ಲಿ ಕೂಡ ನೋಡುತ್ತಿದ್ದ ಹಾಗೆ ಮರ, ಗಿಡ, ಬಳ್ಳಿ, ಬೆಟ್ಟ, ನೀರು ತಮ್ಮ ಭೌತಿಕ ಅಸ್ತಿತ್ವವನ್ನು ಕಳೆದುಕೊಳ್ಳುತ್ತವೆ, ಉತ್ಕಟ ಧಾರ್ಮಿಕ ಅನುಭವದ ವಿಶಿಷ್ಟ ರೂಪಗಳಾಗುತ್ತವೆ.

ಈ ಹಂತದಿಂದಾಚೆಗೆ ನಮ್ಮ ತೌಲನಿಕ ಅಭ್ಯಾಸ, ಸಮೀಪೀಕರಣ ಅತ್ಯಂತ

---

1 ಕುವೆಂಪು : ಪಕ್ಷಿಕಾಶಿ (ಕಾವ್ಯಾಲಯ ಮೈಸೂರು, 1946) ಪು.10

ಎಚ್ಚರಿಕೆಯಿಂದ ಸಾಗಬೇಕಾದದ್ದು ಅನಿವಾರ್ಯ. ಏಕೆಂದರೆ, ಎರಡರ ಪ್ರಕೃತಿ ದರ್ಶನದ ಹಿಂದೆ ಇರುವ ಮೌಲ್ಯಗಳು, ಪ್ರೇರಣೆಗಳು ಸಂಪೂರ್ಣವಾಗಿ ಬೇರೆಯಾದದ್ದು. ಹಿಂದೆ ಕಾಣಿಸಿರುವ ಭಿನ್ನ ಚಾರಿತ್ರಿಕ ಮಾನಸಿಕ ಸ್ಥಿತಿಗಳಲ್ಲಿಯ ವ್ಯತ್ಯಾಸ ಇದರ ಮೂಲ ನೆಲೆ. ಇಂಗ್ಲಿಷ್ ರೊಮ್ಯಾಂಟಿಕ್ಕರ ಪ್ರಕೃತಿ ದರ್ಶನ ಬೌದ್ಧಿಕತೆ, ವೈಚಾರಿಕತೆ ಮತ್ತು ಆಗಿನ ವೈಜ್ಞಾನಿಕ ಧೋರಣೆಗಳ ಉತ್ಕಟ ವಿರೋಧದಿಂದಾಗಿ ಬಂದದ್ದು. (ಆಗಿನ ವೈಜ್ಞಾನಿಕ ಧೋರಣೆ ಎಂದರೆ ಆಗ ವಿಜ್ಞಾನದ ಬಗ್ಗೆ ಇದ್ದ ಪರಿಕಲ್ಪನೆಗಳು ಮತ್ತು ಚಟುವಟಿಕೆಯ ವಿಧಾನಗಳು). ಮುಂದೆ ಖ್ಯಾತ ತತ್ವಜ್ಞಾನಿ ವೈಟ್ ಹೆಡ್ ಯಾಂತ್ರಿಕ ವಿಜ್ಞಾನದ ವಿರೋಧಿ ನಿಲುವಿನಿಂದ ಇಂಗ್ಲಿಷ್ ರೊಮ್ಯಾಂಟಿಕ್ಕರ ದಂಗೆಯನ್ನು ಸಮರ್ಥಿಸಿದ.[1]

ಈ ವೈಚಾರಿಕ ವಿರೋಧಿ ನಿಲುವಿನಿಂದ ಇಂಗ್ಲಿಷ್ ರೊಮ್ಯಾಂಟಿಕ್ಕರ ಪ್ರಕೃತಿ ದರ್ಶನ ಬಂದದ್ದು; ಧರ್ಮ ಮತ್ತು ವೈಚಾರಿಕತೆಯ ನಡುವಿನ ಘರ್ಷಣೆಯನ್ನು ಅವರ ಪ್ರಕೃತಿ ದರ್ಶನ ಹೇಳುತ್ತದೆ.

ಆದರೆ ಆಧುನಿಕ ಕನ್ನಡ ನವೋದಯಕಾವ್ಯದ ಪ್ರಕೃತಿ ದರ್ಶನ ರೂಪುಗೊಂಡದ್ದು ಬೇರೆ ರೀತಿಯ ಪ್ರೇರಣೆಗಳಿಂದ. ನವೋದಯ ಕಾವ್ಯದಲ್ಲಿ ಧರ್ಮ ಮತ್ತು ವಿಜ್ಞಾನಗಳ ನಡುವೆ ಘರ್ಷಣೆ ಇಲ್ಲ. ಬುದ್ಧಿ ಮತ್ತು ಭಾವಗಳ ನಡುವೆಯೂ ಘರ್ಷಣೆ ಇಲ್ಲ. ಇವೆಲ್ಲ ಅಪೂರ್ವವಾದ ಸಾಮರಸ್ಯವನ್ನುಪ್ರಕಟಿಸುತ್ತವೆ.

ಈ ದೃಷ್ಟಿಯಿಂದ ಕನ್ನಡ ನವೋದಯ ಕಾವ್ಯದಲ್ಲಿ ಪ್ರಕಟವಾಗಿರುವ ಧರ್ಮ ಮತ್ತು ವಿಜ್ಞಾನಗಳ ಸಾಮರಸ್ಯ ವಿಶಿಷ್ಟವಾದದ್ದು. ವಿಜ್ಞಾನ ತನ್ನ ವಿಕಾಸದ ಉನ್ನತ ಹಂತಗಳಲ್ಲಿ ಧರ್ಮದ ನೆಲೆಗಳನ್ನು ನಾಶ ಮಾಡುತ್ತದೆ ಎಂಬುದು ಸಾಮಾನ್ಯ ನಂಬಿಕೆ. ಆಧುನಿಕ ಜಗತ್ತನ್ನು ನೋಡಿದಾಗ ಬಹುಮಟ್ಟಿಗೆ ಇದು ಸತ್ಯವೂ ಹೌದು. ವಿಜ್ಞಾನ ತನ್ನ ವಸ್ತುನಿಷ್ಠ ಶೋಧನೆಯ ವಿವಿಧ ಹಂತಗಳಲ್ಲಿ ಸೂಕ್ಷ್ಮವಾಗಿ ಧರ್ಮದ ಅನೇಕ ಬೇರುಗಳನ್ನು ನಾಶಮಾಡುತ್ತಾ ಬರುತ್ತದೆ. ಆ ಧರ್ಮ ಹಾಕುತ್ತಿದ್ದ ಅನೇಕ ಪ್ರಶ್ನೆಗಳ ಅರ್ಥಹೀನತೆಯನ್ನು ಮನಗಾಣಿಸುತ್ತದೆ. ಮತ್ತು ಧರ್ಮ ಎತ್ತಿದ ಮಹತ್ವದ ಸಮಸ್ಯೆಗಳ ಶೋಧನೆಯನ್ನೇ ಮುಂದುವರಿಸುತ್ತದೆ. ಆದ್ದರಿಂದ, ಸಾಂಪ್ರದಾಯಕ ಧರ್ಮದ ನೆಲೆಗಳು ಸೀಮಿತವಾಗುತ್ತಾ ಬರುತ್ತವೆ. ಅಥವಾ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ವಿಜ್ಞಾನವೇ ಅತ್ಯಂತ ದೊಡ್ಡ ಧರ್ಮವಾಗಿ ಬಿಡುತ್ತದೆ.

ಈ ಹಿನ್ನೆಲೆಯಿಂದ ನೋಡಿದಾಗ, ಕನ್ನಡ ನವೋದಯ ಕಾವ್ಯದ ದರ್ಶನದಲ್ಲಿ ವಿಜ್ಞಾನ ಮತ್ತು ಧರ್ಮಗಳೆರಡೂ ಸಾಮರಸ್ಯವನ್ನು ಸಾಧಿಸಿವೆ. ಅಷ್ಟೇ ಅಲ್ಲ, ಮಾನವನ ಅರ್ಥಪೂರ್ಣ ವಿಕಾಸಕ್ಕೆ ಈ ಸಾಮರಸ್ಯ ಅನಿವಾರ್ಯ ಎಂಬ ನಂಬಿಕೆಯನ್ನು ಪ್ರಕಟಿಸುತ್ತದೆ. ಈ ಕಾರಣದಿಂದಲೇ, ಕನ್ನಡ ನವೋದಯ ಕಾವ್ಯ ಪ್ರಗತಿ ವಿರೋಧಿ ಧೋರಣೆಗಳನ್ನು

---

1 ಈ ಬಗೆಗೆ ವಿವರವಾದ ಚರ್ಚೆಯನ್ನು ಈ ಹಿಂದೆ ಉದ್ಧೃತ ವಾದ ಡಗ್ಲಸ್ ಬುಶ್ ಅವರ ಕೃತಿಯಲ್ಲಿ ಕಾಣಬಹುದು.

ಎಲ್ಲಿಯೂ ಪ್ರಕಟಿಸಿಲ್ಲ. ಧರ್ಮ ಮನುಷ್ಯನ ಅಂತರಂಗದ ಶ್ರೇಷ್ಠತೆಗೆ, ವ್ಯಕ್ತಿತ್ವದ ವಿಕಾಸಕ್ಕೆ ಸಂಬಂಧಿಸಿದ್ದೆಂದು ಅದು ಭಾವಿಸಿದೆ. ವಿಜ್ಞಾನ ಮನುಷ್ಯನ ವಿಕಾಸಕ್ಕೆ, ನಾಗರಿಕತೆಯ ಉನ್ನತ ವಿಕಾಸಕ್ಕೆ ಅನಿವಾರ್ಯವೆಂಬ ಧೋರಣೆಯನ್ನು ಅದು ತಳೆದಿದೆ. ಆದ್ದರಿಂದಲೇ, ವಿಜ್ಞಾನಿಯನ್ನು ಕನ್ನಡ ನವೋದಯ ಪ್ರೀತಿಯಿಂದ, ತುಂಬು ಗೌರವದಿಂದ ಆರಾಧಿಸಿದೆ. ಧರ್ಮ ಮತ್ತು ವಿಜ್ಞಾನಗಳೆರಡೂ ಅಖಂಡವಾಗಿರುವ, ಧರ್ಮದ ನೇತೃತ್ವದಲ್ಲಿ ವಿಜ್ಞಾನ ಮಿಳಿತವಾಗಿರುವ ಸ್ಥಿತಿಯನ್ನು ನವೋದಯ ಎತ್ತಿ ಹಿಡಿದಿದೆ.

ವಿಜ್ಞಾನ ಮತ್ತು ಧರ್ಮಗಳ ನಡುವಿನ ಈ ಕಾವ್ಯಾತ್ಮಕ ಸಮನ್ವಯ ನವೋದಯ ಸಾಹಿತ್ಯದ ಅನೇಕ ಜನಪರ ತಾತ್ವಿಕ ನೆಲೆಗಳಿಗೆ ಮೂಲಸತ್ವವನ್ನು ಒದಗಿಸಿತು. ನವೋದಯ ಸಾಹಿತ್ಯದ ವೈಚಾರಿಕ ಧೋರಣೆಯಲ್ಲಿ ಈ ಬಗೆಯ ನಿಲುವುಗಳಿಗೆ ಈ ಸಮನ್ವಯ ಕಾರಣ ವಾದರೆ, ಸೃಜನಶೀಲ ಪ್ರಕ್ರಿಯೆಯ ಹಂತದಲ್ಲಿ ಇದು ಇನ್ನೂ ವಿಶಿಷ್ಟ ರೂಪದಲ್ಲಿ ಕಾಣಿಸಿ ಕೊಂಡಿತು. ಜಗತ್ತನ್ನು ಪರಿಭಾವಿಸುವ, ಅನುಭವವನ್ನು ಗ್ರಹಿಸುವ, ಅದನ್ನು ಕಲೆಯಾಗಿ ಕಟ್ಟುವ ಹಂತಗಳಲ್ಲಿಯೇ ಈ ಸಾಮರಸ್ಯ ಮೂಡಿತು. ಅಧ್ಯಾತ್ಮದ ಪರಿಭಾಷೆ ವೈಜ್ಞಾನಿಕ ರೂಪಕಗಳ ಮೂಲಕ ವ್ಯಕ್ತವಾಯಿತು. ಕೆಲವೊಮ್ಮೆಯಂತೂ ವೈಜ್ಞಾನಿಕ ಪರಿಕಲ್ಪನೆಗಳು ಅದ್ಭುತವಾದ ಸೃಜನಶೀಲ ಪ್ರತಿಮೆಗಳಾಗಿ ರೂಪುಗೊಂಡವು. ಇದಕ್ಕೆ ಉತ್ತಮ ಉದಾಹರಣೆಯಾಗಿ ಕುವೆಂಪು ಅವರ ''ರಾಸಲೀಲೆ'' ಕವನವನ್ನು ಉದಾಹರಿಸಬಹುದು. ''ಪ್ರೇಮ ಕಾಶ್ಮೀರ'' ಸಂಕಲನದ ಈ ಕವನ ನವೋದಯ ಸಾಹಿತ್ಯದ ಅಪೂರ್ವ ಕುತೂಹಲಗಳಲ್ಲಿ ಒಂದು.

ಕವನದ ಕೇಂದ್ರ ಅನುಭವವನ್ನು ರೂಪಿಸುವುದು ಈ ಹೊತ್ತು ಮಾನವ ಚಿಂತನೆಯಲ್ಲಿ ಹಾಸುಹೊಕ್ಕಾಗಿ ಹೋಗಿರುವ 'ಎನರ್ಜಿ' ಸಿದ್ಧಾಂತ. ಕವನದ ಮೂಲ ನೆಲೆಯಲ್ಲಿ ಈ ಸಿದ್ಧಾಂತ ಒಂದು ಸೃಜನಶೀಲ ಪ್ರತಿಮೆಯಾಗಿ ರೂಪುಗೊಂಡಿದೆ. ಈ ನೆಲೆಯಿಂದ ಹೊರಟ ಕವನ ಇಡೀ ಲೋಕದ ಅನುಭವ ಸಮಸ್ತವನ್ನೂ ಅದಕ್ಕೆ ಹೊಂದಿಸಲು ಯತ್ನಿಸುತ್ತದೆ. ''ವಿಶ್ವದ ಕೇಂದ್ರದ ಬೃಂದಾವನದಲಿ ಜೀವನ ಜಮುನೆಯ ಕೂಲದಲಿ-'' ಈ ರಾಸಲೀಲೆ ಪ್ರಾರಂಭವಾಗಿದೆಯಂತೆ. ಈ ಅಪಾರ ಆಕರ್ಷಣೆಯ, ಗುರುತ್ವಾಕರ್ಷಣೆಯ ಕೇಂದ್ರ- ''ಕೇಂದ್ರ ಸ್ವಾಮಿ ಶ್ರೀ ಕೃಷ್ಣನು ದಿವ್ಯ ಪ್ರೇಮಿ.'' ಹೀಗೆ ಇಡೀ ಸಿದ್ಧಾಂತವೊಂದನ್ನೆ ಅನನ್ಯ ಪ್ರತಿಮೆಯೊಂದನ್ನಾಗಿ ಕಂಡರಿಸಿದ ಬಳಿಕ, ಕವನದ ಸಾಲುಗಳಲ್ಲಿ ಅದನ್ನು ಮೂರ್ತ ವಾಗಿಯೇ ಹೆಸರಿಸುತ್ತಾರೆ (ಈ ಸುಂದರ ಕವನದಲ್ಲೊಂದು ಪುಟ್ಟ ದೋಷದ ಭಾಗ ಇದು.)

ಭೂ ಗ್ರಹ ನಿಕರಂ ರವಿ ತಾರಾಳಿ
ರಾಸಕ್ರೀಡಾವೇಶವ ತಾಳಿ
ಯುಗ ಯುಗದಿಂ ಗಿರ್ರನೆ ಸುತ್ತಿವೆ
ಒಂದನ್ನೊಂದು ಸೆಳೆದಿವೆಮುತ್ತಿವೆ.
ಎಂದೆಂದಿಗು ಬಿಡದಾಲಿಂಗನದಿ

ರಹಸ್ಯ ಛಂದೋ ಬಂಧನದಿ
ನಿಲ್ಲಲ್ ಪ್ರಲಯಂ ಚಲಿಸಲ್ ಸೃಷ್ಟಿ
ನೃತ್ಯ ಗೀತಗಳೆ ಜೀವನ ತುಷ್ಟಿ
ಅಣು ಅಣುವಿಂ ನೀಹಾರಿಕೆವರೆಗೆ.
ತೃಣ ಕಣ ಕಣದಿ ಹಿಮಗಿರಿವರೆಗೆ.
ಎಲ್ಲೆಲ್ಲಿಯೂ ರಾಸಕ್ರೀಡೆ
ಪ್ರಕೃತಿ ನಿಯಮಗಳೋ ವಿದ್ಯುಚ್ಛಕ್ತಿಯೋ?
ಬಹುರೂಪಗಳಿವೆ ಬಹು ನಾಮಗಳಿವೆ
ಆದರೆ- ಆದರೆ ಕಡೆಯಲಿ, ಎಲ್ಲಿಯು
ಎಲೆಲ್ಲವು ರಾಸಕ್ರೀಡೆ

- ರಾಸಲೀಲೆ[1]

ಇಂಗ್ಲಿಷ್ ರೊಮ್ಯಾಂಟಿಕ್ ಕನ್ನಡ ನವೋದಯ ಕಾವ್ಯ ಭಿನ್ನವಾಗುವುದು ಸತ್ವಶಾಲಿ ಸ್ವತಂತ್ರ ಅಸ್ತಿತ್ವವನ್ನು ಪ್ರಕಟಪಡಿಸುವುದು ಇಂಥ ನೆಲೆಗಳಲ್ಲಿಯೇ. ಈ ರೀತಿಯ ನೆಲೆಗ ವಿರುದ್ಧ ಬಂಡಾಯದಿಂದಲೇ ಇಂಗ್ಲಿಷ್ ರೊಮ್ಯಾಂಟಿಕ್ ಕಾವ್ಯ ಹುಟ್ಟಿದ್ದು ಎನ್ನುವುದನ ಹಿಂದೆಯೇ ಸೂಚಿಸಲಾಗಿದೆ. ಕನ್ನಡ ನವೋದಯ ಸೃಷ್ಟಿಸಿದ 'ವಿಜ್ಞಾನಸೂರ್ಯ' ಎಂಬ ಪ ಪಾಶ್ಚಾತ್ಯ ರೊಮಾಂಟಿಕ್ಕರಿಗೆ ಸಾಧ್ಯವೇ ಇರಲಿಲ್ಲ. ಆದರೆ ಇಂಗ್ಲಿಷ್ ಕಾವ್ಯ ಚರಿತ್ರೆಯಲ್ಲಿ ಈ ಬಗೆಯ ನಿಲುವುಗಳಿಗೆ ಸಂವಾದಿಯಾಗುವಂತಹ ಘಟ್ಟಗಳೇ ಇಲ್ಲವೆಂದಲ್ಲ. ಈ ದೃಷ್ಟಿಯಿಂ ಹದಿನೆಂಟನೆ ಶತಮಾನದ ಇಂಗ್ಲಿಷ್ ಕಾವ್ಯಕ್ಕೂ ಕನ್ನಡ ನವೋದಯ ಕಾವ್ಯದ ಈ ನಿಲುವುಗಳಿಗ ಆಶ್ಚರ್ಯಕರ ಸಾಮ್ಯಗಳಿವೆ. ಹದಿನೆಂಟನೆಯ ಶತಮಾನದ ಇಂಗ್ಲಿಷ್ ಕಾವ್ಯದ ಮುಖ ವೈಚಾರಿಕ ನೆಲೆ ಕೂಡಾ ವಿಜ್ಞಾನ ಮತ್ತು ಧರ್ಮದ ಸಾಮರಸ್ಯವೇ. ಜೊತೆಗೆ ಆ ಕಾವ ಕೂಡಾ ಪ್ರಕೃತಿಯನ್ನು ಆರಾಧಿಸುತ್ತದೆ. ಕ್ರಿಶ್ಚಿಯನ್ ಧರ್ಮ ಯಾವುದನ್ನು ನಂಬಿಕೆಯ ಹಂತದಲ್ಲಿ ಹೇಳುತ್ತಾ ಬಂದಿತ್ತೊ, ಅದನ್ನೇ ವಿಜ್ಞಾನ ತನ್ನ ಸಂಶೋಧನೆಗಳ ಮೂಲ ಖಚಿತಗೊಳಿಸಿತು[1] . ಈ ಜಗತ್ತಿನ ಮೂಲ ನಿಯಮದಲ್ಲಿ ಒಂದು ನಿರ್ದಿಷ್ಟ ವ್ಯವಸ್ಥೆ ನಿಯಮ ಇದೆ ಎಂಬುದನ್ನು ಸಾಬೀತುಗೊಳಿಸಲಾಯಿತು. ಧರ್ಮ ಇದನ್ನೆ ಮೊದಲು ದೈವಿ ನಿಯಮ ಎಂದು ಹೇಳುತ್ತಿತ್ತು. ಪ್ರಕೃತಿಯ ನಿಯಮಗಳು ಉನ್ನತ ದೈವೀ ನಿಯಮಗಳಾ ಪ್ರಕಟಗೊಂಡವು. ಅಲೆಗ್ಸ್ಯಾಂಡರ್‌ಪೋಪ್‌ನ ಒಂದು ಪ್ರಸಿದ್ಧ ಕವನ ಈ ಅಂಶವನ ಪರಿಣಾಮಕಾರಿಯಾಗಿ ಹೇಳುತ್ತದೆ.

Nature and Nature's laws lay hid in night
God said, let Neuton be, and all was light[2]

ಪ್ರಕೃತಿಧರ್ಮದ ಉಗಮ ಈ ನೆಲೆಗಳಿಂದಲೆ ಆದದ್ದು. ಸಾಕ್ಷಾತ್ಕಾರವನ್ನು ಆಧರಿಸಿ

---

1 ಕುವೆಂಪು : ಪ್ರೇಮಕಾಶ್ಮೀರ (ಕಾವ್ಯಾಲಯ; ಮೈಸೂರು, 1946) ಪು- 28

ಧಾರ್ಮಿಕ ಬದುಕು ಸಹಜವಾಗಿ ಪ್ರಕೃತಿಯಾರಾಧನೆಯ ಕಡೆಗೆ ವಾಲಿತು. (ಈ ಬಗ್ಗೆ ಹದಿನೆಂಟನೆಯ ಶತಮಾನದ ಇಂಗ್ಲಿಷ್ ಬೌದ್ಧಿಕ ಬದುಕಿನಲ್ಲಿ ಆದ ವಾದ ವಿವಾದ ನಿಜಕ್ಕೂ ಅಪೂರ್ವವಾದದ್ದು.) ಈ ಬಗೆಯ ಸಾಮರಸ್ಯದಿಂದ ಉಂಟಾದ ತಾತ್ವಿಕ ಪರಿಣಾಮಗಳು ಅನೇಕ. ಅದಮ್ಯ ಆಶಾವಾದ ಈ ಬಗೆಯ ಒಂದು ಮುಖ್ಯ ಪರಿಣಾಮ. ಪ್ರಕೃತಿಯ ನಿಯಮದಲ್ಲಿ, ಪ್ರಕೃತಿಯ ಸಂದೇಶದಲ್ಲಿ ಈ ಆಶಾವಾದ ಅಂತರ್ಗತವಾಗಿದೆ ಎಂದು ಅವರು ಭಾವಿಸಿದರು. ಜೀವನದ ದುರಂತ ಪ್ರಜ್ಞೆ ಗಮನಾರ್ಹವಾಗಿ ಗೌಣವಾಯಿತು. ಇಷ್ಟೇ ಅಲ್ಲ, ಪ್ರಕೃತಿಯ ನಿಯಮದ ಪ್ರಕಾರ ಸ್ವಾತಂತ್ರ್ಯ ಮತ್ತು ಅಭಿವೃದ್ಧಿ ಎರಡೂ ಜೀವನದ ಪರಮ ಮೌಲ್ಯಗಳಾದವು.

ಈ ನಿಲುವುಗಳು ಒಟ್ಟಾರೆಯಾಗಿ ಕನ್ನಡದ ನವೋದಯ ಕಾವ್ಯದಲ್ಲೂ ಪ್ರಕಟವಾಗುತ್ತವೆ ಎಂಬ ಅಂಶ ಸ್ವಾರಸ್ಯಕರವಾದುದು. ನವೋದಯ ಕಾವ್ಯದ ಪ್ರಕೃತಿ ಆರಾಧನೆ ಮತ್ತು ಮೇಲೆ ಹೇಳಿದ ಆಶಾವಾದ, ದುರಂತ ಪ್ರಜ್ಞೆಯ ಅಪ್ರಾಮುಖ್ಯತೆ, ಸ್ವಾತಂತ್ರ್ಯ ಮತ್ತು ಅಭಿವೃದ್ಧಿಗಳಲ್ಲಿ ಶ್ರದ್ಧೆಯ ಜೊತೆ ಜೊತೆಯಲ್ಲಿಯೇ ಹೋಗುತ್ತದೆ.

ಈ ಬಗೆಯ ಸಾಮರಸ್ಯಗಳ ಹಿನ್ನೆಲೆಯ ಕಾರಣವನ್ನು ವಿಶ್ಲೇಷಿಸುವ ಕೆಲಸ ಅತ್ಯಂತ ಕಷ್ಟಕರವಾದದ್ದು. 18ನೆ ಶತಮಾನದ ಇಂಗ್ಲಿಷ್ ಕಾವ್ಯದ ನಿಲುವುಗಳಿಗೂ ಕನ್ನಡ ನವೋದಯದ ಕೆಲವು ನಿಲುವುಗಳಿಗೂ ಇರುವ ಸಾಮ್ಯ ನೇರ ಪ್ರಭಾವಕ್ಕೆ ಸಂಬಂಧಿಸಿದ್ದಂತೂ ಅಲ್ಲ, ಏಕೆಂದರೆ ಆ ಸಾಹಿತ್ಯ ಯುಗಕ್ಕೂ ಕನ್ನಡ ನವೋದಯಕ್ಕೂ ಯಾವುದೇ ರೀತಿಯ ಸಂಪರ್ಕ, ಪ್ರಭಾವ ಇಲ್ಲ. ಬಹುಶಃ ಈ ಸಾಮರಸ್ಯ ಬಂಡವಾಳಶಾಹಿ ನಾಗರೀಕತೆಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನಗಳು ಪೂರ್ಣ ಪ್ರಮಾಣದ ಐಡಿಯಾಲಜಿಗಳಾಗಿ, ಸರ್ವಾಧಿಕಾರೀ ಶಕ್ತಿಗಳಾಗಿ ರೂಪುಗೊಳ್ಳುವ ಘಟ್ಟಕ್ಕಿಂತ ಹಿಂದೆ ಸಾಧ್ಯವಿದ್ದ ಗ್ರಹಿಕೆಯ ಫಲ. ಆಗ ವಿಜ್ಞಾನ ಸಮಾಜದ ಅನೇಕ ಪರಂಪರೆಗಳಂತೆ ಕೇವಲ ಒಂದು ಪರಂಪರೆ ಅಷ್ಟೆ. ಧರ್ಮ, ಸಂಸ್ಕೃತಿ, ವಿಜ್ಞಾನಗಳಿಗೆ ಸಮಾನ ನ್ಯಾಯಬದ್ಧತೆಯ ಸ್ತರಗಳಿದ್ದ ಯುಗ ಅದು. (ಈ ರೀತಿಯ ಬಹುಮುಖೀ ನ್ಯಾಯ ಬದ್ಧತೆಯ ಸ್ತರಗಳನ್ನು ನಿರ್ನಾಮ ಮಾಡಿ ತಾವು ಮಾತ್ರ ಬೆಳೆಯುವುದೇ ವಿಜ್ಞಾನ ಮತ್ತು ತಂತ್ರಜ್ಞಾನಗಳ ಮುಂದಿನ ದಾರಿಯಾಗಿತ್ತು. ಈ ಪ್ರಕ್ರಿಯೆಯನ್ನೆ ಪಾಲ್ ಫೇಯರ್‌ಬಾಂಡ್, ಹೇಬರ್ ಮಾಸ್ ಮುಂತಾದ ತತ್ವಜ್ಞಾನಿಗಳು ತಮ್ಮ ಕೃತಿಗಳಲ್ಲಿ ಚರ್ಚಿಸಿದ್ದಾರೆ.)

ಕನ್ನಡ ನವೋದಯದಲ್ಲಿ ಕಂಡ ವಿಜ್ಞಾನ-ಧರ್ಮಗಳ ಸಾಮರಸ್ಯ ಕೂಡಾ ಅಂಥ ಬಹುಮುಖೀ ನ್ಯಾಯಬದ್ಧತೆಗಳ (ಮಲ್ಟಿಪಲ್ ಲೆವೆಲ್ಸ್ ಆಫ್ ಲೆಜಿಟಮಿಸಿ ಎಂಬರ್ಥದಲ್ಲಿ) ಕಲ್ಪನೆಯಿಂದ ಬಂದದ್ದು. ಜತೆಗೆ ಭಾರತದಂಥ ಸಾಂಪ್ರದಾಯಕ ಸಮಾಜಗಳಲ್ಲಿ ವಿಜ್ಞಾನ

---

1. ಈ ನಿಲುವುಗಳ ಚರ್ಚೆಗೆ:
   Basil Wille : The Eighteenth Century Background (Chatto & Windus: London, 1950,)
2. ಅದೇ : ಪು. 5.

ಮತ್ತು ಧರ್ಮ, ಸಂಸ್ಕೃತಿಗಳ ನಡುವಣ ಸಂಬಂಧದ ಸ್ವರೂಪವನ್ನೂ ನಾವಿಲ್ಲಿ ಗಮನಿಸಬೇಕು. ವಿಜ್ಞಾನದ ಸ್ವಾಯತ್ತತೆಯನ್ನು ಈ ಸಮಾಜದ ಸಂಪ್ರದಾಯಗಳು ಒಪ್ಪುವುದಿಲ್ಲ. ಅದಕ್ಕೆ ಯಾವುದಾದರೊಂದು ಕಡಿವಾಣ ಇದ್ದೇ ತೀರಬೇಕು. ಸಾಮಾನ್ಯವಾಗಿ ಧರ್ಮ-ಸಂಸ್ಕೃತಿಗಳು ಆ ಕಠಿಣವಾದ ಕೆಲಸವನ್ನು ಮಾಡುತ್ತವೆ. ಕನ್ನಡ ನವೋದಯದಲ್ಲೂ ಈ ನಿಲುವು ಅಂತರ್ಗತವಾಗಿರುವುದರಿಂದಲೇ ಅಲ್ಲಿ ಧರ್ಮ-ವಿಜ್ಞಾನಗಳ ನಡುವಣ ಘರ್ಷಣೆ ಇಲ್ಲ. ವಿಜ್ಞಾನದ ಸ್ವಾಯತ್ತತೆ, ಧರ್ಮ, ಸಂಸ್ಕೃತಿಗಳ ಕಡಿವಾಣ ಇರದ ಸ್ವಾಯತ್ತತೆ ಅತ್ಯಂತ ಅಪಾಯಕಾರಿ ಎಂದು 20ನೇ ಶತಮಾನದ ಚರಿತ್ರೆ ಸಾಕ್ಷಿ ಹೇಳುತ್ತದೆ. ಈ ಹಿನ್ನೆಲೆಯಲ್ಲಿ ಸಾಮರಸ್ಯದ ಕಲ್ಪನೆ ಆಕರ್ಷಕವಾದದ್ದೆ.

ಭಾಗ -೨ :

ಕನ್ನಡ ನವೋದಯದ ಎರಕದ ಸ್ವರೂಪ

(ಕನ್ನಡ ನವೋದಯದ ಪ್ರಕೃತಿ ದರ್ಶನ ಹಿನ್ನೆಲೆಯ ಟಿಪ್ಪಣಿ)

ರಾಘವೇಂದ್ರ ಪಾಟೀಲರು ನನ್ನ 'ಶಕ್ತಿ-ಶಾರದೆಯ ಮೇಳ' ದಲ್ಲಿನ 'ಕನ್ನಡ ನವೋದಯದ ಪ್ರಕೃತಿದರ್ಶನ' ಭಾಗವನ್ನು ಈ ವಿಶೇಷಾಂಕದಲ್ಲಿ ಅಳವಡಿಸಿಕೊಳ್ಳುತ್ತೇನೆ ಎಂದು ಬರೆದಾಗ ಮತ್ತೆ ಆ ಬರಹವನ್ನು ಓದಿದೆ. ಅದಕ್ಕೆ ಹೊಂದಿಕೆಯಾಗುವ ಹಾಗೆ ಇನ್ನಷ್ಟು ಟಿಪ್ಪಣಿಗಳನ್ನು ಬರೆಯಬೇಕು ಎನ್ನಿಸಿತು. ಅದಕ್ಕಾಗಿ ಈ ಪ್ರಯತ್ನ.

ಹಾಗೆ ನೋಡಿದರೆ, ನನಗಿನ್ನೂ ಚಾರಿತ್ರಿಕ ವಿಧಾನದ ಗುಂಗು ಇನ್ನೂ ಪೂರ್ಣವಾಗಿ ಇಳಿದಿಲ್ಲ. ಸಾಹಿತ್ಯದಲ್ಲಿ ಶಾಶ್ವತವಾದದ್ದು, ಸಾರ್ವಕಾಲಿಕವಾದದ್ದು ಇರಲಾರದು ಮತ್ತು ಆ ಪರಿಕಲ್ಪನೆಗಳು ಅಷ್ಟು ಉಪಯುಕ್ತವಲ್ಲ ಎಂದು ನನ್ನ ಅಭಿಪ್ರಾಯ. ಹೀಗಾಗಿ, ಸಾಹಿತ್ಯದಲ್ಲಿ ಎರಕಗಳು ಬದಲಾಗುತ್ತಾ ಹೋಗುತ್ತವೆ. ಅಥವಾ ವಿಕಲ್ಪಗಳು ಬದಲಾಗುತ್ತ ಹೋಗುತ್ತವೆ. ಈ ವಿಕಲ್ಪಗಳಲ್ಲಿ ಒಂದು ರೂಪುಗೊಳ್ಳುವ ದ್ರವ್ಯಗಳನ್ನು 'ಶಾಶ್ವತ' ಎನ್ನಬಹುದೇನೋ. ಆದರೆ, ಸಾಹಿತ್ಯದಲ್ಲಿ ದ್ರವ್ಯಕ್ಕೆ ಬೆಲೆ ಇಲ್ಲ. ಏನಿದ್ದರೂ ಬೆಲೆ ಇರುವುದು ವಿಕಲ್ಪಕ್ಕೆ, ಎರಕಕ್ಕೆ.

ಈ ಮಾತನ್ನು ನಾನು ಬರೆಯಲು ವಿಶೇಷ ಕಾರಣವಿದೆ. ಕನ್ನಡ ನವೋದಯದ ಚಾರಿತ್ರಿಕ ವಿಕಲ್ಪದ ಸ್ವರೂಪದ ಕಡೆಗೆ ಗಮನ ಸೆಳೆದು, ಕನ್ನಡ ಪ್ರತಿಭೆಯಲ್ಲಿ ಉಂಟಾಗಿರುವ ಪಲ್ಲಟದ ಬಗೆಗೆ ಚರ್ಚೆ ಮಾಡಲು ಈ ಸನ್ನಿವೇಶ ಬಳಸಿಕೊಳ್ಳುತ್ತಿದ್ದೇನೆ. ತಾತ್ವಿಕ ನಿರ್ವಸಾಹತೀಕರಣದ ಪ್ರಮುಖ ಲಕ್ಷಣ ಅಂದರೆ ವಸಾಹತು ಪೂರ್ವ, ವಸಾಹತು ಘಟ್ಟ ಮತ್ತು ವಸಾಹತೋತ್ತರಗಳನ್ನು ಸೇರಿಸಿ ಒಂದು ವೈಚಾರಿಕ ಮಾಲೆ ಹೆಣೆಯುವುದು. ವಸಾಹತು ಘಟ್ಟದ ಮುಖ್ಯ ರೋಗವೇ ವಸಾಹತುಪೂರ್ವದ ರಚನೆಗಳೊಡನೆ ಅಧಿಕೃತ ಸಂಬಂಧವನ್ನು ಅಸಾಧ್ಯವಾಗಿಸುವುದು. ಉದಾಹರಣೆ ಕೊಟ್ಟು ಈ ಅಂಶ ಸ್ಪಷ್ಟ ಪಡಿಸುವುದಾದರೆ, ಕುವೆಂಪು ಅವರನ್ನು ವರ್ಡ್ಸ್‌ವರ್ತ್ ಜತೆಗಿಟ್ಟು ಹೋಲಿಸುವುದು ಸಹಜವಾಗಿ, ತಾರ್ಕಿಕವಾಗಿ ಕಾಣುತ್ತದೆ. ಆದರೆ, ಅವರನ್ನು ಹರಿಹರನ ಜತೆಗಿಟ್ಟು ನೋಡುವುದಕ್ಕೆ ಕನ್ನಡ ವಿಮರ್ಶೆ ಹಿಂಜರಿದಿದೆ. ಪರಂಪರೆಯೊಂದನ್ನು ಸಜೀವ ಸಾತತ್ಯವನ್ನಾಗಿ

ನೋಡಲು, ಚರ್ಚೆ ಮಾಡಲು ಹಿಂಜರಿಕೆ ಹುಟ್ಟುವುದೇ ಬೌದ್ಧಿಕ ವಸಾಹತೀಕರಣದ ಮುಖ್ಯ ಲಕ್ಷಣ ಎಂದು ತಿಳಿದಿದ್ದೇನೆ. ಆ ಬಗೆಯ ಸಾತತ್ಯ, ಭಗ್ನತೆ, ಮತ್ತು ಮುಂದುವರಿಕೆಗಳ ರಚನೆಯನ್ನಾಗಿ ಕನ್ನಡ ಕಾವ್ಯ ಪರಂಪರೆಯನ್ನು ನೋಡಲು ಸಾಧ್ಯ ಎಂಬ ನೆಲೆಯಲ್ಲೇ ಈ ಕಿರು ಟಿಪ್ಪಣಿ ಬಂದಿದೆ.

ಕನ್ನಡ ಮತ್ತು ಭಾರತೀಯ ಸಾಹಿತ್ಯಗಳಲ್ಲಿ ಪ್ರಕೃತಿ ಮೂರು ರೀತಿಯ ಆಶಯಗಳಾಗಿ ಬಂದಿದೆ. ಒಂದು, ಸಾಂಕೇತಿಕ ವ್ಯವಸ್ಥೆಯಾಗಿ ನಿಸರ್ಗ. ಎರಡು, ಭಾವಸ್ಥಿತಿಯ ವಾಹಕವಾಗಿ ನಿಸರ್ಗ. ಮೂರು, ಸ್ವತಂತ್ರ ಹಾಗೂ ಪೂರ್ಣ ಪ್ರಮಾಣದ ವಸ್ತುವಾಗಿ. ಮೊದಲ ಎರಡು ವರ್ಗೀಕರಣಗಳು ಹಳೆಯ ಸಾಹಿತ್ಯಗಳಲ್ಲಿ ತುಸು ವ್ಯಾಪಕವೂ ಹೌದು, ಜನ ಪ್ರಿಯವೂ ಹೌದು. ಮೂರನೆಯದು, ಪ್ರಾಮುಖ್ಯತೆಯಲ್ಲಿ ಹಾಗೂ ಸಾಧನೆಯಲ್ಲಿ ಗೌಣ ಎಂದರೂ ನಡೆಯುತ್ತದೆ; ಇದು ಆಧುನಿಕ ಸಾಹಿತ್ಯದ ಸಾಧನೆ.

ಪ್ರಕೃತಿ ಸಾಂಕೇತಿಕ ವ್ಯವಸ್ಥೆಯಾಗಿ ಬರುವುದು ಅಪಾರ ಬೌದ್ಧಿಕ ಶಕ್ತಿಯ ಕವಿಗಳಲ್ಲಿ ಮಾತ್ರ. ಸಾಹಿತ್ಯೇತರ ಬೌದ್ಧಿಕ ವ್ಯವಸ್ಥೆಯಲ್ಲಿ ಪ್ರಕೃತಿಯೇ ವಿವಿಧ ಸ್ಥಿತಿಗಳ ರೂಪಕವಾದಾಗ, ಆ ಅಭಿವ್ಯಕ್ತಿಯ ಸಾಂಕೇತಿಕತೆ ಸಾಹಿತ್ಯದೊಳಗೂ ತೂರಿ ಬರುತ್ತದೆ. ಚಿಂತಕ ಅಭಿನವಗುಪ್ತನ ಚಿಂತನಾ ವ್ಯವಸ್ಥೆಯಲ್ಲಿ ಬರುವ ನಿಸರ್ಗರೂಪಕಗಳು ಇದಕ್ಕೆ ಉತ್ತಮ ಉದಾಹರಣೆ. ಆತನ ಶೈವ ತಂತ್ರ ವಿದ್ಯೆಯಲ್ಲಿ ಅನೇಕ ಕಡೆಗಳಲ್ಲಿ ಪ್ರಕೃತಿಯ ವಿವಿಧ ರೂಪಗಳು ತಂತ್ರ ಸಾಧನೆಯ ರೂಪಕಗಳಾಗಿಬಿಡುತ್ತವೆ. ಅಂದರೆ, ಪ್ರಕೃತಿ ಒಂದು ರೂಪಕದ ಸಮಗ್ರ ಪರಿಭಾಷೆಯೇ ಆಗಿಬಿಡುತ್ತದೆ. 'ಹೃದಯ ಕಮಲ' ಎಂಬ ರೂಪಕವನ್ನೇ ತೆಗೆದುಕೊಳ್ಳಿ. ಅಲ್ಲಮನಲ್ಲಿ ಕೂಡಾ ಈ ರೀತಿಯ ಸಾಂಕೇತಿಕ ವ್ಯವಸ್ಥೆಯಾಗಿ ನಿಸರ್ಗ ಬರುತ್ತದೆ. ಶೈವ ಅಥವಾ ಶಾಕ್ತ ಪಂಥದ ಅನೇಕ ನಿಸರ್ಗ ತಾಂತ್ರಿಕ ರೂಪಕಗಳು ಹೀಗೆ ಕವಿಗಳಲ್ಲಿ ಕಾಣಿಸಿಕೊಳ್ಳುವ ಕ್ರಮಗಳೇ ರೋಮಾಂಚನಕಾರಿ. ಅಲ್ಲಮನಲ್ಲಿ ಕಾಣುವ ಪ್ರಕೃತಿಗೆ ಲೋಕ ವ್ಯವಹಾರದ ಗುಣವಿಲ್ಲ. ಅಲ್ಲಿ ಬರುವ ಹಂಸ ಹಂಸವಲ್ಲ. ಗಿಳಿ ಗಿಳಿಯಲ್ಲ. ಕಾಡು ಕಾಡಲ್ಲ. ಅಥವಾ ಇಡೀ ಬೆಡಗಿನ ವಚನ ಸಮುದಾಯದಲ್ಲಿ ಬರುವ ನಿಸರ್ಗವಾಸ್ತವವೂ ಅಲ್ಲ, ಲೌಕಿಕ ಸತ್ಯವೂ ಅಲ್ಲ. ಅದಕ್ಕೆಂದೇ ಅವು ಸ್ಥೂಲ ರೂಪಕಗಳಾಗಿ ಬರುತ್ತವೆ. ಲೌಕಿಕ ವಾಸ್ತವದ ಸ್ವತಂತ್ರ ವ್ಯಾಪಾರವಾಗಿ ಅಲ್ಲಿ ಪ್ರಕೃತಿ ಬರುವುದಿಲ್ಲ. ಹೀಗೆ ಸಾಂಕೇತಿಕ ವ್ಯವಸ್ಥೆಯಾಗಿ ನಿಸರ್ಗ ಕಾಣುವುದು ಒಂದು ಬಗೆ.

ಎರಡನೆಯದು, ಭಾವಸ್ಥಿತಿಯ ವಾಹಕವಾಗಿ ನಿಸರ್ಗ ಎಂಬ ಮಾರ್ಗ. ಕನ್ನಡ ಮತ್ತು ಭಾರತೀಯ ಸಾಹಿತ್ಯಗಳಲ್ಲಿ ಈ ಮಾರ್ಗಕ್ಕೆ ರೋಚಕ ವೈವಿಧ್ಯತೆ ಇದೆ. ಕಾಳಿದಾಸನ 'ಮೇಘದೂತ' ಒಂದು ಅತ್ಯುತ್ತಮ ಉದಾಹರಣೆ ಇದಕ್ಕೆ. ಆದರೆ, ಈ ಬಗೆಯ ನಿಸರ್ಗಕ್ಕೆ ವಿರೋಧಿಗಳೂ ಇದ್ದರು. ಹುಲ್ಲು ಹೊಲಗಳ ವರ್ಣನೆ ಸಲ್ಲದು ಎಂದು ರಾಘವಾಂಕ ಆವಾಜ್ ಹಾಕುವ ಹಿನ್ನೆಲೆಯಲ್ಲಿ ಇದ್ದದ್ದು ಇದೇ ರೀತಿಯ ಭಿನ್ನಾಭಿಪ್ರಾಯ ಎಂದು ನನ್ನ ಗುಮಾನಿ. 'ಮೇಘದೂತ'ದ ಬಗೆಗೆ ಅತ್ಯಂತ ಉತ್ಕಟವಾದ ತಾತ್ವಿಕ ಟೀಕೆ ಇದು. ಸ್ವತಃ ಕಾಳಿದಾಸನ ಸಂಸ್ಕೃತ ಸಾಹಿತ್ಯದಲ್ಲೇ ಒಂದು ಸಾದಾ ಮೋಡವನ್ನು ದೂತನನ್ನಾಗಿಸಿ ಗಾಂಭೀರ್ಯ ಹಾಳುಮಾಡಿದ ಎಂದು ಘರ್ಜಿಸಿದ ಒಬ್ಬ ಕುಲೀನ ಕವಿ 'ಹಂಸ ದೂತ' ಬರೆದ. ಹರಿಹರನ 'ಪುಷ್ಪರಗಳೆ' ಮತ್ತು ಕಾಳಿದಾಸನ ಹುಲ್ಲು, ಹೊಲಗಳ ವರ್ಣನೆಯ ನಡುವೆ

ವಚನ ಮಾರ್ಗದ ಹೊಸ ಸಂವೇದನೆ ಇದೆ. ಅದು ನಿಸರ್ಗವನ್ನು ಲೌಕಿಕ ಭಾವಲೋಲುಪತೆಯ ಮಾಧ್ಯಮವನ್ನಾಗಿ ಬಳಸಲು ಖಂಡಿತ ಒಪ್ಪವುದಿಲ್ಲ. ಅದು ವನವೆಲ್ಲ ನೀವೆ, ವನದೊಳಗಾಡುವ ಖಗಮೃಗವೆಲ್ಲ ನೀವೆ ಎಂದು ಹೇಳುವಂಥದ್ದು. ದೈವಿಕ ಶೃಂಗಾರದ ಅಭಿವ್ಯಕ್ತಿ ನಿಸರ್ಗ. ಮಾನುಷ ರತಿಯ ಉದ್ದೀಪಕವಾಗಿ ಪ್ರಕೃತಿಯನ್ನು ಕಾಣಬಾರದು. ಹೀಗೇ ಪ್ರಕೃತಿ ಬದಲಾಗುತ್ತ ಹೋಗುತ್ತಾಳೆ.

ಹಾಗಾದರೆ, ಕನ್ನಡ ನವೋದಯ ಪ್ರಕೃತಿಯನ್ನು ಹಿಂದೆ ಇರದಂಥ ವ್ಯಾಪ್ತಿ ಮತ್ತು ಏಕಾಗ್ರತೆಗಳಲ್ಲಿ ಪ್ರಕೃತಿಯನ್ನು ಪೂರ್ಣ ಪ್ರಮಾಣದ ವಸ್ತುವನ್ನಾಗಿ ಸ್ವೀಕರಿಸಿದ್ದು ಹೇಗೆ? ಆ ಪ್ರಕ್ರಿಯೆಯ ಸ್ವರೂಪವೇನು ಎಂಬ ಪ್ರಶ್ನೆಗಳು ಮೂಡುತ್ತವೆ. ಚಾರಿತ್ರಿಕ ವಿಧಾನದ ವಿಮರ್ಶೆ ಕೊಡುವ ಕೆಲವು ವಿಶೇಷ ಮಾಹಿತಿ ಮತ್ತು ಸವಲತ್ತು ಬಳಸಿ ಹೇಳುವುದಾದರೆ, ಹೊಸ ರೀತಿಯ ಶಿಕ್ಷಣ ಮತ್ತು ಸಂವೇದನಾ ಸಂಸ್ಕಾರಗಳ ಕಾರಣಕ್ಕಾಗಿ, ಕನ್ನಡ ನವೋದಯದ ಶಿಕ್ಷಿತ ಮನಸ್ಸು ಕನ್ನಡ ಕಾವ್ಯ ಪರಂಪರೆಯನ್ನು ಸೆರೆಯ ಸ್ಥಿತಿ ಎಂದು ಭಾವಿಸತೊಡಗಿತ್ತು. ಗತ ಚರಿತ್ರೆಯೇ ಬಂಧನದ ಸ್ಥಿತಿ. ಅನೇಕ ರೀತಿಯ ಒತ್ತಡಗಳಿಂದ ನವೋದಯದ ಸಂವೇದನೆ ತೀವ್ರವಾಗಿ ಬಿಡುಗಡೆ ಪಡೆದುಕೊಳ್ಳ ಬಯಸಿತ್ತು. ಹೀಗೆ ಚರಿತ್ರೆ ಎಂಬುದು ಬಂಧನದ ಸ್ಥಿತಿಯಾದರೆ ನಿಸರ್ಗ ಎನ್ನುವುದು ಸ್ವಾತಂತ್ರ್ಯದ ಸ್ಥಿತಿ. ಪ್ರಕೃತಿ ಎನ್ನುವುದು ಪರಮ ಸ್ವಾತಂತ್ರ್ಯದ ಆರಾಧನೆ.

ಆದರೆ, ಈ ನಡುವೆ ಹೊಸ ಸ್ವಾತಂತ್ರ್ಯದ ಸ್ಥಿತಿಯಲ್ಲಿ ಹಳೆಯ ಮಾದರಿಗಳು ಬಂದು ಕಾಡತೊಡಗಿದವು. ಮುಖ್ಯವಾಗಿ, ಸಾಂಕೇತಿಕ ವ್ಯವಸ್ಥೆಯಾಗಿ ನಿಸರ್ಗ, ಭಾವ ಸ್ಥಿತಿಯ ವಾಹಕವಾಗಿ ನಿಸರ್ಗ ಮಾದರಿಗಳು ಬಂದು ಕೂತವು. ಬೇಂದ್ರೆ ಮೊದಲ ಮಾದರಿಯ ಪುನರುಜ್ಜೀವಕರಾದರು. 'ಜೋಗಿ' ಪದ್ಯವನ್ನು ಹಾಗೆಯೇ ನೋಡಬೇಕು. ಅಲ್ಲಿ ಬರುವ ಯಾವುವೂ ಲೌಕಿಕ ವ್ಯವಹಾರದ ಸತ್ಯಗಳಲ್ಲ. ಆದರೆ, ಪಾಶ್ಚಾತ್ಯ ರೋಮ್ಯಾಂಟಿಕ್ ಪ್ರಭಾವದ ಕಾರಣಕ್ಕಾಗಿ ಹಾಗೆಂದು ಬರೆಯಲಾಗಿದೆ. ಹೀಗಾಗಿ, 'ಜೋಗಿ' ಪದ್ಯದಲ್ಲಿ ಹಳೆ ಮತ್ತು ಹೊಸ ಮಾದರಿಗಳು ಘರ್ಷಿಸಿರುವ ರೀತಿಗೆ ಅನನ್ಯವಾದ ಸೊಬಗಿದೆ. ಬೆಡಗಿನ ವಚನಗಳಲ್ಲಿ ಅನೇಕಸಾರಿ ಬಂದಿರುವ ಆಧ್ಯಾತ್ಮಿಕ ಎಚ್ಚರದ ವಸ್ತುವೇ ಇಲ್ಲಿ ಇದೆ. "ಕಂಭ ಬೆಂದಿತ್ತು, ಹಂಸ ಹಾರಿತ್ತು" ಎನ್ನುವಲ್ಲಿ ಆ ಪ್ರಕ್ರಿಯೆಯ ಮುಕ್ತಾಯದ ವರ್ಣನೆ ಇದೆ. ಅಥವಾ 'ಹುಬ್ಬಳ್ಳಿ ಕಲ್ಲು ಬಾವಿ ಜಂಗಮ, ನೀರಿಗೊಬ್ಬಳೆ ಹೊಗಲಾರೆ ಜಂಗಮ' ಎಂದ ನಿಗೂಢ ತತ್ವದ ಪದದಲ್ಲಿಯೂ ಇದೇ ಪ್ರಕ್ರಿಯೆಯ ಇನ್ನೊಂದು ಮುಖದ ಚಿತ್ರಣ ಇದೆ. ಆದರೆ, 'ಜೋಗಿ' ಪದ್ಯದಲ್ಲಿ ಆ ಹಳೆಯ ಕರ್ತೃಗಳು ಎದುರಿಸದ ರೀತಿಯ ಸಮಸ್ಯೆಯನ್ನು ಬೇಂದ್ರೆ ಎದುರಿಸುತ್ತಿದ್ದಾರೆ. ಇಲ್ಲಿ ಪ್ರಕೃತಿಯನ್ನು ಸಂವೃತ್ತಿಯ ಸತ್ಯವನ್ನಾಗಿಯೂ ಕಾಣಬೇಕಿದೆ, ಲೌಕಿಕ ವಾಸ್ತವವನ್ನಾಗಿಯೂ ಕಾಣಬೇಕಾಗಿದೆ.

ಕುವೆಂಪು ಮತ್ತು ಪು.ತಿ.ನ. ಭಾವಸ್ಥಿತಿಯವಾಹಕ ಮಾದರಿಯಲ್ಲಿ ಕ್ರಿಯಾಶೀಲರಾದರು. ಪು.ತಿ.ನ.ರಿಗೆ ನಿಸರ್ಗ ಚೆಲುವನಾರಾಯಣನ ಸೊಬಗಿನ ಅಭಿವ್ಯಕ್ತಿ. ಕುವೆಂಪು ಅವರಿಗೆ ನಿಸರ್ಗ ಶುದ್ಧ ಸ್ವಾತಂತ್ರ್ಯದ ಸ್ಥಿತಿ ದೈವ ಅನುಭವದ ಜತೆಗೆ ಪ್ರಮುಖ ಸಾಮಾಜಿಕ ಆಯಾಮವೂ ಇದೆ. ಇಷ್ಟು ವಿಚಾರಗಳು ಮುಂದಿನ ಓದಿಗೆ ಸಹಾಯಕ ಎನಿಸಿತು. ಮುಂದಿನ ಬರಹದ ಹರಹನ್ನು ಇನ್ನಷ್ಟು ವಿಸ್ತರಿಸುವ ದೃಷ್ಟಿಯಿಂದ ಈ ಟಿಪ್ಪಣಿ ಬರೆದೆ.

ಕನ್ನಡ ನವ್ಯಕವಿತೆಯಲ್ಲಿಯ ಮನೋಧರ್ಮ

ಒಂದು ಟಿಪ್ಪಣಿ

-ಡಾ || ಶಾಂತಿನಾಥ ದೇಸಾಯಿ

ಕನ್ನಡ ಕಾವ್ಯದಲ್ಲಿ ನವ್ಯತೆ ತಲೆದೋರಿ ಸುಮಾರು ೧೫ ವರ್ಷಗಳಾಗುತ್ತ ಬಂದಿದೆ. (1) ಈ ಕಾಲಖಂಡದಲ್ಲಿ ನವ್ಯತೆ ದೃಢವಾಗಿ ಬೇರುಬಿಟ್ಟಿದೆ: ನವ್ಯತೆಯ ಒಂದು ಸಂಪ್ರದಾಯವೇ ಬೆಳೆದು ನೆಲೆಯೂರಿದೆ; ಹಿಂದಿನ ರಸ ಸಂಪ್ರದಾಯವನ್ನು ಬದಿಗೊತ್ತಿ ತನ್ನ ಜಯಭೇರಿ ಹೊಡೆದು ನಿಂತಿದೆ.

ಕನ್ನಡ ಕಾವ್ಯದಲ್ಲಿಯ ನವ್ಯತೆ ಇಂಗ್ಲಿಷ್ ಸಾಹಿತ್ಯದಿಂದಲೇ ಬಂತು, ಕೆಲವು ಇಂಗ್ಲಿಷ್ ಪ್ರಾಧ್ಯಾಪಕರು ಈ ನವ್ಯತೆಯನ್ನು ಬುದ್ಧಿ ಪೂರ್ವಕವಾಗಿ ಎಳೆದು ತಂದು ಕನ್ನಡದಲ್ಲಿ ಹಾಕಿದರು ಎಂದು ಹೇಳುವುದು ಸಮಂಜಸವಲ್ಲ. ನವ್ಯತೆ ಇಂಗ್ಲಿಷ್ ಸಾಹಿತ್ಯದಿಂದಲೇ ಬರುವ ವಿಷಯವಾಗಿದ್ದರೆ ೧೯೨೦ ರಿಂದ ೧೯೩೦ರ ಅವಧಿಯಲ್ಲಿ, ಬೇಡ, ಕನಿಷ್ಠ ಗೋಕಾಕರು ಇಂಗ್ಲಂಡಿನಿಂದ ಬಂದನಂತರ ೧೯೪೦ರ ಸುಮಾರಿಗಾದರೂ, ಕನ್ನಡದಲ್ಲಿ ತಲೆದೋರಬೇಕಿತ್ತು. ಇಂಗ್ಲಿಷ್ ಸಾಹಿತ್ಯದಲ್ಲಿ ನವ್ಯತೆ ೧೯೧೭ರಿಂದ ಸುರುವಾದರೂ ಅದರ ಸಕ್ರಿಯ ಪರಿಣಾಮ ಭಾರತೀಯ ಸಾಹಿತ್ಯದ ಮೇಲೆ ಉಂಟಾಗಲು ಸುಮಾರು 30 ವರ್ಷ ಹಿಡಿದವು. ಯಾಕೆ? ಕಾರಣ ಸರಳವಿದೆ: ಇಂಗ್ಲಿಷ್ ಸಾಹಿತ್ಯದ ನವ್ಯತೆಗೆ ಕಾರಣವಾದ ವಿಶಿಷ್ಟ ಮನೋಧರ್ಮ, ವಿಶಿಷ್ಟ ಪ್ರಜ್ಞೆ-ಸಂವೇದನೆಗಳು ನಮ್ಮ ದೇಶದಲ್ಲಿ ರೂಪುಗೊಂಡಿದ್ದು ಸ್ವಾತಂತ್ರ್ಯದ ನಂತರದ ಕಾಲದಲ್ಲಿ. (೨) ಆಗ ಅನಿವಾರ್ಯವಾಗಿಯೇ ಬದಲಾಗುತ್ತಿದ್ದಂಥ ಮನೋಧರ್ಮ, ಹೊಸದಾಗಿ ರೂಪುಗೊಳ್ಳುತ್ತಿದ್ದ ಪ್ರಜ್ಞೆ-ಸಂವೇದನೆಗಳು ಹೊಸ ಅಭಿವ್ಯಕ್ತಿ ಪಡೆಯಲು ಹವಣಿಸಿದವು, ಹಾಗೂ ಈ ಹೊಸ ಅಭಿವ್ಯಕ್ತಿ ಪಡೆಯುವಾಗ ನಮಗೆ ತೀರ ಹತ್ತಿರವಾದ ಇಂಗ್ಲಿಷ್ ಸಾಹಿತ್ಯದಲ್ಲಿಯ ನವ್ಯ ಪ್ರಯೋಗಗಳಿಂದ ಕೆಲವು ವಿಷಯಗಳನ್ನು ಕಲಿತುಕೊಂಡವು, ಕಲಿತು ಅರಗಿಸಿಕೊಂಡವು.... ಮುಖ್ಯ, ಕನ್ನಡ ಕಾವ್ಯದಲ್ಲಿ ನವ್ಯತೆ ಬಂದದ್ದು ಹೊಸ ಮನೋಧರ್ಮದ ಫಲವಾಗಿ, ಹೊಸ ಪ್ರಜ್ಞೆಯ ಫಲವಾಗಿ. ಇಲ್ಲಿ ಕನ್ನಡ ನವ್ಯ ಕಾವ್ಯ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಹೊಸ ಮನೋಧರ್ಮ ಯಾವುದು, ಅದರ ಮುಖಗಳಾವುವು ಎಂದೂ ಸೂಚಿಸುವ ಒಂದು ಅಪೂರ್ಣ ಯತ್ನವಿದೆ.

ಕನ್ನಡದಲ್ಲಿ ತೀರ ಸ್ವತಂತ್ರವಾದ, ಯಾವದೇ ಪರದೇಶದ ಪ್ರಭಾವಕ್ಕೆ ಸಂಬಂಧವಿಲ್ಲದ ಹೊಸದೊಂದು ಮನೋಧರ್ಮ ಮೊದಲಿಗೆ ಕಾಣಿಸಿಕೊಂಡದ್ದು ಬಹುಶಃ ವ್ಹಿ.ಜಿ ಭಟ್ಟ ಕಾವ್ಯದಲ್ಲಿ. ಅವರ ಕಾವ್ಯವೇದನೆ ಎಂಬ ಸಂಕಲನದಲ್ಲಿಯ 'ಆತ್ಮಶೋಧನೆ' ಎಂಬ ಕವಿ ನೋಡಿ (ವೇದನೆ, ಶೋಧನೆ- ಈ ಶಬ್ದಗಳು ಹೊಸ ಮನೋಧರ್ಮದ ದೃಷ್ಟಿಯಿಂ ಅರ್ಥಪೂಣವಾಗಿವೆ):

ಹುಡುಕಿದೆ ಹಗಲೆಲ್ಲಾ
ಎಲ್ಲೂ ಸಿಗಲಿಲ್ಲ
ಹಳಬರು ಹೇಳಿದ ಆತ್ಮವು ನನಗೆ
ಎಲ್ಲೂ ಸಿಗಲಿಲ್ಲ.
ಗುಡಿಯಲಿ ಬರಿ ಕಲ್ಲು
ವೇದ ಪುರಾಣದ ಪೀಠದ ಮೇಲೆ
ಬೆಳೆದಿದೆ ಒಣಹುಲ್ಲು.
ಹುಡುಕಿದೆ ಮಗುವಿನ ಕಣ್ಣಿನಲಿ
ಮಸಣದ ಮಣ್ಣಿನಲಿ
ಸಿಗಲಿಲ್ಲ.
ಪರಿಕಿಸಿದೆನು ಚೆಲುವಿನ ಕೆನ್ನೆ
ಒಳಗಡೆ ಬರಿ ಸೊನ್ನೆ.

ಕವಿ 'ಆತ್ಮ'ವನ್ನು ಎಲ್ಲಡೆಗೂ ಹುಡುಕುತ್ತಾನೆ. ಕೊನೆಗೊಮ್ಮೆ ಅದು ಸಿಕ್ಕಿತಂತೆ. ಎಲ್ಲಿ

ಸಿಕ್ಕಿತು! ಸಿಕ್ಕಿತು!
ಆತ್ಮವು ಸಿಕ್ಕಿತು
ಕಿಟ್ಟೆಲ್ ಕೋಶದ ನೂರಾಐವತ್
ಮೂರನೆ ಪುಟದಲ್ಲಿ
ಹರಿ ಓಂ ಹರ ಓಂ ಹರಿಹರ ಓಂ ಸತ್.
ಆತ್ಮವು ಇನ್ನೆಲ್ಲಿ?
ಹಳಬರು ಹೇಳಿದ
ಆತ್ಮವು ಇನ್ನೆಲ್ಲಿ?

ಇಲ್ಲಿ ವ್ಯಕ್ತವಾಗುವ ಮನೋಧರ್ಮದಲ್ಲಿ ಭ್ರಮನಿರಸನೆಯ ರೊಚ್ಚಿದೆ; ಹಳೇ ಆದರ್ಶವಾದಿತ್ವದ ವಿರುದ್ಧ ಬಂಡಾಯವಿದೆ; ಸತ್ಯವನ್ನು, ಅಲ್ಲ ಸತ್ಯದ ನಗ್ನತೆಯನ ನೇರವಾಗಿ ನೆಟ್ಟದೃಷ್ಟಿಯಿಂದ ನೋಡುವ ಹಟವಿದೆ; ಮೇಲು ಮೇಲಿನ ರಮ್ಯ ಈಸಾಟ ಬೇ ನೇರವಾಗಿ ತಳಕ್ಕೇ ಜಿಗಿದು ಅಲ್ಲೇನಿದೆ ನೋಡೋಣ ಎಂಬ ವಿಪರೀತ ಸಾಹಸವಿದೆ. ಅ 'ಪ್ರೀತಿ' ಎಂಬ ಕವಿತೆಯಲ್ಲಿ ಈ ಮಾತು ಇನ್ನೂ ಸ್ಪಷ್ಟವಾಗುವುದು.

ಮೊದಲ ಹೆಣ್ಣು ಮೊದಲ ಗಂಡು
ಒಬ್ಬೊರನ್ನು ಕಂಡು
ಮೈಗೆ ಮೈಗೆ ಮೋಹಗೊಂಡು
ಕೂಡಿ ಕುಣಿದರು.
ಹೀಗೆ ದಿನವು ಸಾಗುತ್ತಿತ್ತು
ನೆಲ ತುಂಬಿತು ಅವಳು ಹೆತ್ತು
ಹೆತ್ತು ಸೋತು ಹೆಣವು ಬಿತ್ತು
ಕೊನೆಗೆ ಪ್ರೀತಿಯೆಂಬ ಮದ್ದು
ಅರೆದು ಕುಡಿದರು.

ಪ್ರೀತಿ ಅಮೃತವಲ್ಲ, 'ಮದ್ದು' ಎಂದು ವಾದಿಸುವಲ್ಲಿ ಭಟ್ಟರ ಜೀವನದ ಮೂಲಭೂತ ವಸ್ತು ಸ್ಥಿತಿಯನ್ನು ತಿವಿದು ಕೆದಕಿ ನೋಡುವ ದೃಷ್ಟಿ ವ್ಯಕ್ತವಾಗುವದು. ಭಟ್ಟರ ಮನೋಧರ್ಮಕ್ಕನುಗುಣವಾಗಿ ಅವರ ಶೈಲಿ ಕಲ್ಪನಾಡಂಬರವಿಲ್ಲದೆ ನೇರವಾಗಿದೆ. ಅಲಂಕಾರವಿಲ್ಲದೆ ಬತ್ತಲೆಯಾಗಿದೆ. ಜೀವನದ ಬಗ್ಗೆ ಅವರಿಗೆ ಅನಿಸುವ ಅಸಮಾಧಾನ ವೈಫಲ್ಯಗಳಿಗನುಗುಣವಾಗಿ ಅವರ ಶೈಲಿಯಲ್ಲಿ ಕಹಿ ಹಾಸ್ಯವಿದೆ, ಎಲ್ಲವನ್ನೂ ಅಣಕಿಸುವ ಒಣ ವ್ಯಂಗ್ಯವಿದೆ.

ಅಡಿಗರ ನವ್ಯಕಾವ್ಯವೂ, ಭಟ್ಟರ ಕಾವ್ಯದಂತೆ, ಜೀವನದ ವೈಫಲ್ಯದಿಂದಲೇ ಹೊರಹೊಮ್ಮಿದೆ. ಆದರೆ ಅಡಿಗರಿಗೆ ಅನಿಸುವ ವೈಫಲ್ಯ ಭಟ್ಟರ ನಿರಾಶೆಗಿಂತ ಗಹನವಾಗಿದೆ, ಅವರ ಕಾವ್ಯದಲ್ಲಿಯೂ ವ್ಯಂಗ್ಯವಿದೆ, ವಿಡಂಬನೆಯಿದೆ, ರೊಚ್ಚಿದೆ, ಸಿಟ್ಟಿದೆ; ಆದರೆ ಇವುಗಳ ಜೊತೆಗೆ, ಭಟ್ಟರಲ್ಲಿಲ್ಲದ, ಅನುಭವ ಸಂಕೀರ್ಣತೆಯಿದೆ. ವ್ಯಾಪಕತೆಯಿದೆ. ಭಟ್ಟರಲ್ಲಿ ಅನುಭವದ ಎಲುಬುಗಳು ಮಾತ್ರ ಕಂಡರೆ ಅಡಿಗರಲ್ಲಿ ಅನುಭವ ಮಾಂಸ-ರಕ್ತಗಳಿಂದ ತುಂಬಿಕೊಂಡು ಹೆಚ್ಚು ಪ್ರಭಾವಿಯಾಗಿದೆ. ಹೆಚ್ಚು ಚೋದ್ಯವಾಗಿದೆ. ಭಟ್ಟರ ನಗ್ನಸತ್ಯದ ಅನ್ವೇಷಣೆಜೀವನದ ನಿರರ್ಥಕತೆಯತ್ತಒಲಿಯುತ್ತದೆ; ಆದರೆ ಅಡಿಗರ ಸತ್ಯಾನ್ವೇಷಣೆಗೆ ಮೂಲ್ಯಗಳ ಅನ್ವೇಷಣೆಯ ಜೋಡಿದೆ: ಅವರ ಸಿಟ್ಟು- ಸೆಡವುಗಳ ಹಿಂದೆ ಜೀವನದ ಸಾರ್ಥಕತೆಯ ಜೀವಂತ ಕಲ್ಪನೆಯಿದೆ- ಹಿಮಗಿರಿಯ ಕಂದರದ ಅಸ್ತಿತ್ವದ ಅರಿವಿದೆ, ಕೃಷ್ಣನ ಕೊಳಲಿನ ಇಂಚರದ (ಇನ್ನೂ ಕೇಳಿಬರದ) ಶೃತಿಯಿದೆ. ಅಡಿಗರಿಗೆ ನಮ್ಮ ಇಂದಿನ ಜೀವನವೆಂದರೆ 'ಗೊಂದಲಪುರ'ದ ಅಸಹ್ಯವಾದ ವಿಪರೀತವಾದ ಗತಿಗೆಟ್ಟ ಜೀವನ:

ಮಬ್ಬು,
ಕಾಮಾಲೆ ಕತ್ತಲು
ಬಂದು ಮೈಮೇಲೆ ಅಬ್ಬರಿಸಿ ಎದ್ದೆದ್ದು ಬಿದ್ದು
ಬೊಬ್ಬಿರಿದಲೆವ ಕಾರ್ಮೋಡ.
(ಕುಡಿದುಬಿಟ್ಟಿದೆ ಕಣೋ, ಕಡಲ ಪಡಖಾನೆಯಲ್ಲಿ ನೊರೆಗರೆವ ವ್ಹಿಸ್ಕಿ
ಸೋಡಾ)

ಚಾಚಿ ತನ್ನ ಕಬಂಧಕೈಯ ಫೇರಾಯಿಸಿದೆ-ಮಾಯಾಬಜಾರ ಫೋಡಾ
ಕಬಳಿಸಿತು ದಂಡಕಾರಣ್ಯ ಕಬ್ಬೊಗೆ ಸುತ್ತಿ ಕಲ್ಕತ್ತೆ ಬೊಂಬಾಯಿಯನ್ನು
ಮದ್ರಾಸನ್ನು, ಬೆಂಗಳೂರನ್ನು, ಧಾರವಾಡವನ್ನು
ಶೀತದೇಶದ ತೊನ್ನು ಮಂಡು ಚೀರಟೆ ಹಕ್ಕಿ- ಚಿರಚಿರೋ ಚಿರಚಿರೋ
ಕಾಶ್ಮೀರದಿಂದ
ರಾಮೇಶ್ವರದತನಕವೂ...

ಜೀವನದಲ್ಲಿಯ ತೊಡಕು ತೊಡಕಾದ, ಅಸ್ತವ್ಯಸ್ಥವಾದ ಮೂಲ್ಯಗಳ ವಿವರವಾದ, ಮೂರ್ತವಾದ ದರ್ಶನ ಕೊಡವುದರಲ್ಲಿ ಅಡಿಗರದು ಎತ್ತಿದಕೈ.

ಈಗ ಈ ಲೋಕ ಅಸ್ತವ್ಯಸ್ತ: ಗಡಿಯಾರ
ಬಿಚ್ಚಿ ಯಂತ್ರೋಪಯಂತ್ರಗಳ ಚೆಲ್ಲಾಪಿಲ್ಲಿ
ಚೆಲ್ಲಿ, ಕೈಕಟ್ಟಿ ಕುಳಿತ ರಿಪೇರಿಯವನಂತೆ
ಯಾವ ತಿರುಗಣಿ ಮೊಳೆಯನೆಲ್ಲಿ ಹಾಕಲಿ? ಮತ್ತೆ ಈ
ಸುರುಳಿ ತಂತಿಯನ್ನೆಲ್ಲಿ ತುರುಕಲಿ?
ಗಡಿಯಾರವಿದೆ, ಯಂತ್ರವಿದೆ, ಎಲ್ಲ ಇವೆ, ಇಲ್ಲ
ಸಾವಯವ ಶಿಲ್ಪದ ಸಮಗ್ರೀಕರಣ ಬಲ.
('ಶರದ್ಗೀತ')

ಚಂಡೆಮದ್ದಳೆಯಲ್ಲಿ ಹಾಗೂ ಭೂಮಿಗೀತದ ಕೆಲವು ಕವಿತೆಗಳಲ್ಲಿ ಸದ್ಯದ ಜಗತ್ತಿನಲ್ಲಿ ಕಂಡುಬರುವ ಅವ್ಯವಸ್ಥೆಯನ್ನು ಭಾಷೆ-ಲಯ-ಪ್ರತಿಮೆಗಳ ಮುಖಾಂತರ ಹೇಳುವ ರೀತಿಯಲ್ಲಿ ಕೊಂಚ ಅತಿರೇಕ ಉಂಟಾದರೂ ಅಡ್ಡಿಯಿಲ್ಲ, ಮೂರ್ತವಾಗಿ ಪ್ರಭಾವಿಯಾಗಿ ಅಭಿನಯಿಸಿ ತೋರಿಸಿ, ಮುಂದೆ 'ಭೂಮಿಗೀತ', 'ಹದ್ದು', 'ಭೂತ' ಮುಂತಾದ ಕವನಗಳಲ್ಲಿ ಜೀವನದ ಮೂಲಭೂತ ತಾತ್ವಿಕ ಸಮಸ್ಯೆಗಳತ್ತ ಅವರ ಪ್ರತಿಭೆ ಹರಿದಿದೆ. ಅಡಿಗರ ಅನುಭವದ ಆಳ- ಆಗಲ-ಎತ್ತರ, ಅವರ ದೃಷ್ಟಿಯ ತೀಕ್ಷ್ಣತೆ ಬುದ್ಧಿಯ ಸೂಕ್ಷ್ಮತೆ, ಅವರ ಸಮಗ್ರೀಕರಣ ಬಲ, ಕನ್ನಡ ಭಾಷೆಯ ಎಲ್ಲ ಸ್ಥರಗಳಲ್ಲಿ ಸಲೀಸಾಗಿ ಈಜಾಡುವ ಅವರ ಚಾತುರ್ಯ- ಇವು ಅವರನ್ನು ಕನ್ನಡ ನವ್ಯಕಾವ್ಯದಕೇಂದ್ರ ವ್ಯಕ್ತಿಯನ್ನಾಗಿ ಮಾಡಿವೆ. ವಿಫಲತೆ-ನಿರಾಸೆ-ಸಿಟ್ಟು-ಸೆಡವುಗಳ ವ್ಯಂಗ್ಯ-ವಿಡಂಬನೆಯ ಮಾರ್ಗವನ್ನು ಭಟ್ಟ-ಅಡಿಗರ ನಂತರ ಎಷ್ಟೋ ತರುಣ ಕವಿಗಳು ಹಿಡಿದಿದ್ದಾರೆ. ಅವರಲ್ಲಿ ಚಂದ್ರಶೇಖರ ಪಾಟೀಲರು ಒಂದು ವಿಶಿಷ್ಟ ಮನೋಧರ್ಮದ ಪ್ರತಿನಿಧಿಯಾಗಿದ್ದಾರೆ. ಅವರ ಕಾವ್ಯದಲ್ಲಿ ವ್ಯಂಗ್ಯ ಬಾಹ್ಯ ಸಮಾಜವನ್ನಷ್ಟೇ ಅಲ್ಲದೆ ಸ್ವಂತ ವ್ಯಕ್ತಿತ್ವವನ್ನು ಸಹ ಆಹುತಿಯನ್ನಾಗಿ ಮಾಡಿದೆ. ಅವರ ಪ್ರಾಮಾಣಿಕ ಆತ್ಮಪ್ರಜ್ಞೆಯಲ್ಲಿ, ಅವರ ಕಟುವಾದ ತೀಕ್ಷ್ಣವಾದ ಆತ್ಮ ಪರೀಕ್ಷೆಯಲ್ಲಿ ಬೆಳವಣಿಗೆಯ ಭರವಸೆ ತುಂಬ ಇದೆ. ಮಧ್ಯ ಬಿಂದುವಿನಲ್ಲಿಯ 'ನೀನು ಒಮ್ಮೆ ನಕ್ಕರೆ' ಕವಿತೆಯ ಪ್ರಾರಂಭ ನೋಡಿರಿ:

ನೀನು ಒಮ್ಮೆ ನಕ್ಕರೆ, ನನಗೆ ಬಹಳ ಅಕ್ಕರೆ
(ನಾನು ಕವಿ ಅಲ್ಲವೇನು?
ಏನು ಮುಂದೆ ಪ್ರಾಸ?
ಕವಿಯು ಆದ ಸಂಕಟಕ್ಕೆ
ಪಡಲೇಬೇಕು ತ್ರಾಸ.)

ಅಥವಾ 'ಪ್ರೀತಿ ಪ್ರೀತಿ' ಎಂಬ ಕವನದ ಮೊದಲ ಪದ್ಯ ನೋಡಿರಿ:

ನಾ ನಿನ್ನ ಪ್ರೀತಿಸಿದೆ, ನೀ ನನ್ನ ಪ್ರೀತಿಸಿದಿ. ಅದು ಬರೋಬರಿ. ಅದರ ಬಗ್ಗೆ
ಬಣ್ಣದ ಸುತ್ತು-
ಏಕೆ ಎಂತು ಎಂದು-ಎಲ್ಲ ಯಾರಿಗ್ಗೊತ್ತು?

ಪಾಟೀಲರ ನಿಷ್ಠುರ ಆತ್ಮಪ್ರಜ್ಞೆ ನಿಜಕ್ಕೂ ಬೆರಗುಗೊಳಿಸುವಂಥಹದು. ಆದರೆ ಅನುಭವವನ್ನು ಮೊದಲಿನಿಂದಲೇ ಹಣೆ ಗಂಟಿಕ್ಕಿ ನೋಡುತ್ತ ಹೋದರೆ ಅವರು ತಮ್ಮ ಹಾಗೂ ಅನುಭವದ ನಡುವೆ ಒಂದು ಮುಳ್ಳು ಬೇಲಿಯನ್ನೇ ಕಟ್ಟುವ ಹೆದರಿಕೆಯಿದೆ. ಇವರ ಮನೋಧರ್ಮದ ಬೆಳವಣಿಗೆಗೆ ಮುಖ್ಯವಾಗಿ ಬೇಕಾಧದ್ದು ತಾತ್ವಿಕ ಗಂಭೀರತೆ ಹಾಗೂ ಸಮಗ್ರೀಕರಣ ಬಲ್ಲ.

ಜೀವನವನ್ನು ವಕ್ರದೃಷ್ಟಿಯಿಂದ ನೋಡದೆ, ಬಂದ ಅನುಭವಗಳಿಗೆ ತಮ್ಮ ವ್ಯಕ್ತಿತ್ವವನ್ನು ಸಂಪೂರ್ಣವಾಗಿ ಆಧೀನಗೊಳಿಸಿ, ಆ ಅನುಭವಗಳ ನಿಜಸ್ವರೂಪ ಏನೆಂದು ಹುಡುಕಾಡಿ ಆ ಹುಡುಕಾಟವನ್ನೇ ಕಾವ್ಯವನ್ನಾಗಿ ಮಾಡುವ ಇನ್ನೊಂದು ಬಗೆಯ ಹೊಸ ಪ್ರಜ್ಞೆ ಕನ್ನಡ ಕಾವ್ಯದಲ್ಲಿ ಬೆಳೆಯುತ್ತಿದೆ. ಈ ಪ್ರಜ್ಞೆಯಿಂದ ಇನ್ನೂ ಅಷ್ಟು ಸಾರ್ಥಕವಾದ ಕಾವ್ಯ ನಿರ್ಮಾಣವಾಗದಿದ್ದರೂ ಸಾಕಷ್ಟು ಉತ್ತೇಜಕವಾದ ಕಾವ್ಯ ಹೊರಬಂದಿದೆ. ರಾಮಚಂದ್ರ ಶರ್ಮ, ಶಂಕರ ಮೊಕಾಶಿ, ಸಿದ್ಧಲಿಂಗ ಪಟ್ಟಣಶೆಟ್ಟಿ, ಸುಮತೀಂದ್ರ ನಾಡಿಗ, ಚೆನ್ನಯ್ಯ, ಸಿದ್ಧಲಿಂಗಯ್ಯ, ಗಿರಡ್ಡಿ, ಕಂಬಾರ, ತೇಜಸ್ವಿ ಮುಂತಾದವರ ಕಾವ್ಯ ಈ ರೀತಿಯದೆಂದು ಹೇಳಬಹುದು. ಉದಾಹರಣೆಗಾಗಿ, ಪಟ್ಟಣಶೆಟ್ಟಿಯವರ 'ಗೊಳಲಿ' ಎಂಬ ಕವನ ನೋಡಿ:

ನರಗಳನು ಹುರಿಹುರಿ ಹಾಕಿ
ನಿನ್ನ ತೋಳನ್ನು ಬಳಸಿ ಗಂಧದಲ್ಲಿ ಕಟ್ಟಿ
ನಾನೆಳೆದು ನಿಂತಾಗ
ಯಾವ ಗಗನದಿ ತೊದಲು ತುಳುಕಾಡಿತೊ!

ಇಲ್ಲಿ ಪ್ರತಿಮೆಗಳನ್ನು ಅಸ್ತವ್ಯಸ್ತವಾಗಿ ಜಗ್ಗಿ ಕೂಡಿ ಕಟ್ಟಿದ ರೀತಿಯಲ್ಲಿ ಅನುಭವದ ನೈಜ ಜೀವಂತ ಅಸ್ತವ್ಯಸ್ತತೆಯನ್ನೇ ಶಬ್ದಗಳಲ್ಲಿ ಹಿಡಿಯಲು ಯತ್ನ ಮಾಡಿದಂತಿದೆ.

ಲಯಬದ್ಧತೆ, ಪ್ರತಿಮೆಗಳ ಏಕಸೂತ್ರತೆ ಮುಂತಾದ ತಾಂತ್ರಿಕ ಚತುರೋಪಾಯಗಳ
ಅಲಕ್ಷಿಸಿ ಅನುಭವದ ಬಿಸಿಬಿಸಿ ಸ್ವರೂಪವನ್ನು ನೇರವಾಗಿ ಕೈಹಾಕಿ ಹಿಡಿಯುವ ಹಪ್ಪಾ
ಪಟ್ಟಣಶೆಟ್ಟಿಯವರದು.. ಅನುಭವದ ಅಂತಃಸ್ವರೂಪವನ್ನು ಕಲಾತ್ಮಕವಾಗಿ ರೂಪಿಸುವವರ
ರಾಮಚಂದ್ರ ಶರ್ಮ ಹಾಗೂ ಕಂಬಾರರು ಉಲ್ಲೇಖನೀಯರು. ಉದಾಹರಣೆಗೆ ಕಂಬಾ
'ಹೋರಿ'ಯ ಮುಖ್ಯ ವಸ್ತು ಕವಿಯು ಹೊಸದಾಗಿ ಅನುಭವಿಸಿದ 'ಬಿಸಿ':

ಬಿಸಿಯೆಂಬುದುಂಟೆಂದು ನನಗೆ ಗೊತ್ತಾದದ್ದೇ ಈಗ
ಇದೆ ಮೊದಲ ಸಲ

ಆ ಬಿಸಿಯ ಅನುಭವದ ಮುಖಾಂತರ ಹೋರಿಯ ಅಂತಃಸ್ವರೂಪ
ಅನುಭವವುಂಟಾಗಿ, ಆ ಬಿಸಿಯ ಸ್ವರೂಪವನ್ನು ಹೋರಿಯ ಸ್ವರೂಪದ ಮುಖಾಂ
ಅಭಿವ್ಯಕ್ತಗೊಳಿಸಿದ ರೀತಿ ವಿಸ್ಮಯಗೊಳಿಸುವಂತಹದು. ಅನುಭವದ ಸ್ವರೂಪದ ಜೊತೆ
ಅದರ ಅರ್ಥವೇನು ಎಂದು ಹುಡುಕಾಡುವ ರೀತಿ ನೋಡಬೇಕಾದರೆ ಸುಮತೀಂದ್ರ ನಾಡಿಗ
ಕಾವ್ಯ ನೋಡಬೇಕು:

ವರುಷಕೊಂದು ಊರು ಸೇರಿದ ನನಗೆ
ಯಾವುದದು ನನ್ನ ಊರು?
....
ಊರೂರು ಅಗಸೆ ಬಾಗಿಲ ತೆಗೆದು ನುಗ್ಗಿದರೆ
ಒಂದರಂತೊಂದು
ನಾ ಕಂಡ ಹೆಣ್ಣುಗಳ ಒಂದೆತನದಂತೆ--
ಒಂದು ಮುಖ ಕಂಡಾಗ ಯಾವುದೊ ಒಂದು
ಹಿಂದೆ ಕಂಡ ಮುಖ,
ಸೊಗಸಾದ ಪಿರುಮಿರುಗುವ ನವಿರೆಳೆಯ ನಗೆಯ ಜಾಲ
ಇದು ನನ್ನದಲ್ಲ, ಅದು ನನ್ನದಲ್ಲ.
ನನ್ನದೆಂದೆನಿಸುವಷ್ಟೂ ಅನಿಸಿ ಕಡೆಗೆ ಜಾರಿಸಿ ಬೇರ ಕತ್ತರಿಗಿತ್ತ
ನೆಲದ ಸಂಬಂ
ಇದು ಎಂಥ ಋಣಾನುಬಂಧ?

ಇಲ್ಲಿ ನಾಡಿಗರು ಬೇರೆ ಬೇರೆ ಬಗೆಯ ಅನುಭವಗಳನ್ನು ಅರಗಿಸಿ ಹೊಂದಿಸಿ ನೋ
ಕೊನೆಗೆ ಇದೆಲ್ಲದರ ಅರ್ಥವೇನು ಎಂದು ನೋಡಲು ಹೆಣಗಾಡುತ್ತಿದ್ದಾರೆ. ಹ
ಹೆಣಗಾಡುವಾಗ ಒಮ್ಮೊಮ್ಮೆ ಅನುಭವಕ್ಕೂ ಕವಿಗೂ ಸಾಕಷ್ಟು ಅಂತರ ನಿರ್ಮಾಣವಾಗ
ಅನುಭವ ಕಾವ್ಯವಾಗದೆ ಹಾಗೇ ಹಸಿಯಾಗಿ ಉಳಿಯುವ ಸಂಭವವಿದೆ. ಒಟ್ಟಿನ ಮೇ
ಇವರೆಲ್ಲರಿಗೂ ಅನುಭವವನ್ನು ತಮ್ಮದೇ ಆದ ವಿಶಿಷ್ಟ ರೀತಿಯಲ್ಲಿ ನೋಡುವ ಕಣ್ಣ
ನೋಡಿ ಹಿಂಜರಿಯದ ಹೃದಯವಿದೆ, ತಿಳಿಯಲೆತ್ನಿಸುವ ತೀಕ್ಷ್ಣ ಬುದ್ಧಿಯಿದೆ, ಪ್ರಯೋಗಶೀ
ಕಲ್ಪನಾ ಶಕ್ತಿ ಇದೆ. ಇವರೆಲ್ಲರಿಂದ ತೀರ ಹೊಸಬಗೆಯ, ಭಟ್ಟರಿಗಿಂತಲೂ ಅಡಿಗರಿಗಿಂತಲ
ಭಿನ್ನವಾದ, ಕಾವ್ಯವನ್ನು ಅಪೇಕ್ಷಿಸಬಹುದಾಗಿದೆ.

ನವ್ಯ ಸಂಪ್ರದಾಯದ ಒಂದು ಬಹು ಮುಖ್ಯವಾದ ಸೃಜನಶೀಲವಾದ ಕಾರ್ಯವೆಂದರೆ ಹಳೆಯ ಸಂಪ್ರದಾಯದಲ್ಲಿ ಸಿದ್ಧಿಯನ್ನು ಪಡೆದ ಕೆಲವು ಕವಿಗಳಲ್ಲಿ ಹೊಸ ಚೈತನ್ಯ ತುಂಬಿ ವಾಸ್ತವಿಕ ಅನುಭವಗಳೊಡನೆ ಕುಸ್ತಿಯಾಡಲು ಹಚ್ಚಿದ್ದು, ಈ ಕುಸ್ತಿಗಳಲ್ಲಿ ಗೋಕಾಕರ ಆದರ್ಶವಾದಿತ್ವ ವಾಸ್ತವಿಕ ಜಗತ್ತಿನೊಡನೆ ಮಾಡಿದ ಕುಸ್ತಿ ಪ್ರೇಕ್ಷಣೀಯವಾದದ್ದು. ಅವರ ನವ್ಯ ಕಾವ್ಯದಲ್ಲಿ ಬುದ್ಧಿಗೇ ಹೆಚ್ಚು ಪ್ರಾಧಾನ್ಯವಾಗಿ, ಕೊನೆಗೆ ಅವರು 'ಕಾಶ್ಮೀರ'ದಲ್ಲಿ 'ಕಾವ್ಯ ಪ್ರಬಂಧ'ಗಳನ್ನು ಬರೆದಿದ್ದಾರೆ. ಗೋಕಾಕರ ಪರಿಣತ ಚಿಂತನಶೀಲ ಪ್ರಜ್ಞೆ ತನ್ನ ನೈಜವಾದ ಆದರ್ಶವಾದಿತ್ವವನ್ನು ಬಿಡದೆ ಒಂದು ಹೊಸ ಬಗೆಯ ಗಹನವಾದ ವಿಚಾರಶೀಲ ನವ್ಯತೆಯನ್ನು ಕನ್ನಡ ಕಾವ್ಯಕ್ಕೆ ಒದಗಿಸಿದೆ... ಚೆನ್ನವೀರ ಕಣವಿ ಹಾಗೂ ಶಿವರುದ್ರಪ್ಪನವರಲ್ಲಿ ಉಂಟಾದ ಮನ್ವಂತರ ಬೇರೆ ರೀತಿಯದು. ಅವರು ತಮ್ಮ ನೈಜವಾದ ರಮ್ಯ ದೃಷ್ಟಿಯನ್ನು ವಾಸ್ತವಿಕ ಜಗತ್ತಿನತ್ತ ಹರಿಸಿ ಒಂದು ಹೊಸ ಬಗೆಯ ಸಾರ್ಥಕ ಕಾವ್ಯವನ್ನು ಸೃಷ್ಟಿಸುತ್ತಿದ್ದಾರೆ. ಹೊಸ ತಂತ್ರ ಇವರ ಪ್ರತಿಭೆಗೆ ಸ್ವಚ್ಛಂದ ಹಾರಾಡಲು ಹೊಸ ಸ್ವಾತಂತ್ರ್ಯವನ್ನೊದಗಿಸಿದೆ. ಇವರ ಆತ್ಮ ಕೇಂದ್ರಿತ ಕನಸುಂಡ ಕಣ್ಣುಗಳು ಹೊರಗೆ ಹೊರಳಿ ಕಂಡದ್ದು ಅನುಭವಿಸಿದ್ದು ಎಲ್ಲ ಸ್ವಾರಸ್ಯವಾದ ಕಾವ್ಯರೂಪ ತಾಳುತ್ತಿದೆ. ಉದಾಹರಣೆಗೆ ಕಣವಿರವರ 'ಕಾಲ ನಿಲ್ಲುವುದಿಲ್ಲ' ಕವನ ನೋಡಿ;

ಈ ಕಾಲನೆಂಬುವ ಪ್ರಾಣಿ
ಕೈಗೆ ಸಿಕ್ಕರೆ ಚೆನ್ನಾಗಿ ಥಳಿಸಬೇಕೆಂದಿದ್ದೆ;
ಎಲ್ಲೊ ತಲೆ ಮರೆಸಿಕೊಂಡು ಓಡಾಡುತ್ತಿದ್ದಾನೆ.
ಆಕಾಶದಲ್ಲಿ ಮಿಂಚಿ,
ಭೂಕಂಪದಲ್ಲಿ ಗದಗದ ನಡುಗಿ,
ಜ್ವಾಲಾಮುಖಿಯೊಳಗೆ ಸಿಡಿದು ನುಚ್ಚುನೂರಾಗಿ,
ನದಿನದಿಯ ಗರ್ಭವ ಹೊಕ್ಕು, ಮಹಾಪೂರದಲ್ಲಿ ಹೊರಬಂದು ,
ನಮ್ಮೆದೆಯಲ್ಲಿ ತುಡಿವ ತಬಲವಾಗಿದ್ದಾನೆ.
ಹಿಡಿಯಿರೋ ಅವನ....

ಇಲ್ಲಿ ಕಣವಿಯವರ ರಮ್ಯತೆಗೆ ನವ್ಯದ ರಕ್ತದಾನ ದೊರೆತಿದೆ. ನವ್ಯ ದೃಷ್ಟಿ ಅವರ ಪ್ರತಿಭೆಯ ಹಾರಾಟಕ್ಕೆ ಹೊಸ ಆಕಾಶ ಕಲ್ಪಿಸಿದೆ.

ಇದೇ ರೀತಿ ಕೆ.ಎಸ್. ನರಸಿಂಹಸ್ವಾಮಿ ಹಾಗೂ ಗಂಗಾಧರ ಚಿತ್ತಾಲರ ಪ್ರಜ್ಞೆ ಹಳೆ-ಹೊಸಗಳ ಸಮನ್ವಯದ ಹೊಸದೊಂದು ದಾರಿ ತಳೆದಿದೆ. ಅವರಲ್ಲಿ ಹಳೆಯ ಆದರ್ಶವಾದಿತ್ವವಿಲ್ಲ. ಸ್ವಪ್ನರಂಜನೆಯಿಲ್ಲ. ನವ್ಯದ ಸಿಟ್ಟು-ರೊಚ್ಚು-ಅಬ್ಬರವಿಲ್ಲ. ಅವರು ತಮ್ಮದೇ ಆದ ರೀತಿಯಲ್ಲಿ, ತಮ್ಮ ಅನುಭವ-ಚಿಂತನೆಗಳನ್ನು ಪ್ರಾಮಾಣಿಕವಾಗಿ ಶಕ್ತಿಯುತವಾಗಿ ವ್ಯಕ್ತಗೊಳಿಸಿ ವೈಯಕ್ತಿಕ ವಿಶಿಷ್ಟ ಸಿದ್ಧಿಯನ್ನು ಪಡೆದಿದ್ದಾರೆ. ಉದಾಹರಣೆಗಾಗಿ ಕೆ.ಎಸ್.ಎನ್. ಅವರ 'ಕೇಳುವರಿಲ್ಲದ ಮಗು'ವಿನ ಕೊನೆಗೆ ವ್ಯಕ್ತವಾಗುವ ನಿರ್ದಾಕ್ಷಿಣ್ಯವಾದ ತಿಳಿಗಣ್ಣಿನ ಸಹಾನುಭೂತಿಯ ದೃಷ್ಟಿ ವೈಶಿಷ್ಟ್ಯ ಪೂರ್ಣವಾದುದು.

ಇದರ ಗತಿಯೇನು?
ಏನಾದರೇನು?
ಸೃಷ್ಟಿ ಸಾಗರದಲ್ಲಿ ಆಲದೆಲೆಯ ಮೇಲೆ ತೇಲುವಂತಿಲ್ಲ;
ಮುಳುಗಲಿ ಬಿಡು.
ತೆರೆದ ಬಾಯೊಳಗೆ ಹದಿನಾಲ್ಕು ಲೋಕಗಳಿಲ್ಲ, ಬೆಳ್ದಿಂಗಳಿಲ್ಲ;
ಇಳಿದು ನೋಡು.
ಬಿನ್ನಹದ ಸಿಡಿಲಾಗಿ ಅರಮನೆಯ ಕಂಬವನು ಸೀಳಲಿಲ್ಲ
ಇದರ ಮೊರೆ.
ಕುಂತಿ ಗಂಗಾನದಿಗೆ ಗುಟ್ಟಾಗಿ ಎಸೆದಳಲ್ಲ
ಆ ಮಗು ಬೇರೆ!
ಹಗಲೆಂತು, ಇರುಳೆಂತು ಎನುತ ಭೀತಿಯ ಹೊತ್ತ
ಭೇತಾಳ ಇದರ ಕಾಲ;
ನಡೆದಂತೆ ದಾರಿಯಲ್ಲಿ ದೀಪಗಳನಳಿಸುತ್ತ
ತೀರುವುದು ನೆಲದ ಸಾಲ.
"ವಾಸಾಂಸಿ ಜೀರ್ಣಾನಿ ಯಥಾ ವಿಹಾಯ..."
ಅಷ್ಟು ಸುಲಭವಲ್ಲ ದೈವ ಸಹಾಯ!
ಹತ್ತು ಹಲ ಹದ್ದು ನೋಡಿದೆ ಇದರ ಕಡೆಗೆ:
'ತಪ್ಪದೆಯೆ ಕೊಡುವೆನು ನಾ ನ್ನಿ ಕಟ್ಟಕಡೆಗೆ,
ಬಿಡುಗಡೆಗೆ!'

ಇನ್ನು ಚಿತ್ತಾಲರ ವೈಶಿಷ್ಟ್ಯ ಜೀವನದ ಮೂಲಭೂತ ಪ್ರಶ್ನೆಗಳ ಕುರಿತು ತಮ್ಮ ಸ್ವಂತ ಅನುಭವ-ಚಿಂತನೆಗಳ ಪ್ರಾಮಾಣಿಕ ಅಭಿವ್ಯಕ್ತಿಯಲ್ಲಿದೆ. ಅವರ 'ದುಃಖಗೀತ' ದಲ್ಲಿಯ ಆರ್ತ ಆಕ್ರಂದನ ಕೇಳಿ:

ಏಕೆ ಇದು, ಏನು ಇದು, ಎಂತು ಇದು ಎನಬೇಡ
ಚೀರಿದರು ಬ್ರಹ್ಮಾಂಡ ಬಿರಿವಂತೆ,
ಬಾನ ತಳಚಿಪ್ಪೊಡೆದು ಸಿಡಿವಂತೆ ಕೂಗಿದರು ಒರಲಿದರು
ದಿಕ್ಕು ದಿಕ್ಕುಗಳ ಕದಕದ ಬಡಿದು ನರಳಿದರು
ಆಹ! ನಿರುತ್ತರ ನಿರುತ್ತರ ನಿರುತ್ತರ ಸೃಷ್ಟಿ.

ಇದು ಉತ್ಕೃಷ್ಟವಾದ ತಾತ್ವಿಕ ಕಾವ್ಯ. ಇದರ ಬಾಹ್ಯ ಆವರಣ ನವ್ಯವಾಗಿರದಿದ್ದರೂ ಇದರ ತಿರುಳು ನವ್ಯವಾದದ್ದು. ಇದರಲ್ಲಿ ಕೆಲಸ ಮಾಡುತ್ತಿದ್ದ ಪ್ರಜ್ಞೆ, ಹೊಸದು.

ಇನ್ನು ಉಪಸಂಹಾರ : ಕನ್ನಡ ಕಾವ್ಯದಲ್ಲಿ ಕಂಡುಬರುವ ಹೊಸ ಪ್ರಜ್ಞೆಯ, ಹೊಸ ಸಂವೇದನೆಯ ಸಾಮಾನ್ಯ ಅಂಶಗಳಾವುವು?

(1) ವಾಸ್ತವಿಕತೆಯನ್ನು ನೇರ ದೃಷ್ಟಿಯಿಂದ ನೋಡುವ ಧಾರ್ಷ್ಟ್ಯ; (2) ಅನುಭವವನ್ನು

ಕೆದಕಿ ಕೆದಕಿ ನೋಡುವ ವಿಪರೀತ ಕುತೂಹಲ; (3) ವೈಯಕ್ತಿಕ ಮೂಲ್ಯಗಳ ಅವಿರತ ಶೋಧನೆ; (4) ಭಾವನೆಗಳ ಜೊತೆಗೆ ಬುದ್ಧಿಗಿತ್ತ ಪ್ರಾಧಾನ್ಯತೆ- ಅಂದರೆ ಕಾವ್ಯದಲ್ಲಿ ಇಡಿಯ ವ್ಯಕ್ತಿತ್ವವನ್ನು ಕೆಲಸಕ್ಕೆ ತರುವ ಹವಣಿಕೆ; (5) ಅನುಭವ ನಿರೂಪಣೆಯಲ್ಲಿಯ ಪ್ರಾಮಾಣಿಕತೆ; ಹಾಗೂ (6) ಭಾಷೆಯ ಬಗ್ಗೆ ವೈಶಿಷ್ಟ್ಯಪೂರ್ಣವಾದ ಪ್ರಜ್ಞೆ ಹಾಗೂ ಶೈಲಿಯ ಪ್ರಾಯೋಗಿಕತೆ.

ಈ ಹೊಸ ಮನೋಧರ್ಮದಿಂದಾದ ಪರಿಣಾಮವೆಂದರೆ, (1) ಕಾವ್ಯದಲ್ಲಿ ವ್ಯಾಪಕತೆ ಬಂದಿದೆ, ವೈವಿಧ್ಯ ಬಂದಿದೆ, ಸಂಕೀರ್ಣತೆ ಬಂದಿದೆ: ನಾವು ದಿನಾಲು ನೋಡುವ, ಅನುಭವಿಸುವ ಜಗತ್ತು ನವ್ಯ ಕಾವ್ಯದಲ್ಲಿ ಬಹುಮುಖವಾಗಿ ಒಡಮೂಡುತ್ತಿದೆ (2) ಹೊಸ ಸಂಪ್ರದಾಯದಲ್ಲಿ ವೈಯಕ್ತಿಕ ದೃಷ್ಟಿಗೆ, ವೈಯಕ್ತಿಕ ಪ್ರಯೋಗಕ್ಕೆ ತುಂಬ ಉತ್ತೇಜನವಿದ್ದುದರಿಂದ ಪ್ರತಿಯೊಬ್ಬ ಒಳ್ಳೆಯ ನವ್ಯ ಕವಿಯ ಕಾವ್ಯವು ಒಂದೊಂದು ದೃಷ್ಟಿಯಿಂದ ಉತ್ತೇಜಕವಾಗಿದೆ, ಸ್ವಾರಸ್ಯವಾಗಿದೆ. ಕೊನೆಯದಾಗಿ (3) ಹೊಸ ಮನೋಧರ್ಮ ಹುಟ್ಟಿಸಿದ ಕಾವ್ಯ ಹಳೆಯ ರಸ ಸಂಪ್ರದಾಯದ ಕಾವ್ಯಕ್ಕಿಂತ ವೈವಿಧ್ಯಪೂರ್ಣವಾಗಿದೆ, ಹೆಚ್ಚು ಜೀವಂತವಾಗಿದೆ, ಒಂದು ರೀತಿಯಲ್ಲಿ ಶ್ರೇಷ್ಠತರವಾಗಿದೆ ಎಂದು ಧಾರಾಳವಾಗಿ ಹೇಳಬಹುದು.

ವರ್ಣಗಳಿಂದ ಹಿಡಿದು ಪೂರ್ಣ ಪ್ರಬಂಧದವರೆಗೆ ಕಾವ್ಯ ಶರೀರದ ಪ್ರತಿಯೊಂದು ಅಂಶವೂ ವ್ಯಂಜಕವಾಗಬಲ್ಲದು ಎನ್ನುವದನ್ನು ಆನಂದವರ್ಧನನು ಪ್ರತಿಪಾದಿಸಿದ್ದಾನೆ. ಒಂದು ಕೃತಿಯೇ ಪ್ರತಿಮೆಯಾಗಬಲ್ಲದು ಎಂದು ಹೇಳಿದ ಪಾಶ್ಚಾತ್ಯಾ ವಿಮರ್ಶಕರ ಅಭಿಪ್ರಾಯದೊಂದಿಗೆ, ಭಾರತೀಯ ಧ್ವನಿತತ್ವಕಾರರ ವಿಚಾರಗಳನ್ನು ಹೋಲಿಸಿ ನೋಡಿದರೆ ಅವುಗಳಲ್ಲಿನ ಸಾಮ್ಯವು ಆಶ್ಚರ್ಯಕರವಾಗಿದೆ.

– ಜಿ.ಎಸ್. ಶಿವರುದ್ರಪ್ಪ
(ಕಾವ್ಯಾರ್ಥ ಚಿಂತನ : ಪುಟ : 111)

ಕವಿಯ ಕಮಲಕೃತಿಯಲ್ಲಿ ಉಂಡೆ ನಾನೊಬ್ಬ ಭಾವ ಭೃಂಗ
ಪಕಳೆ ಮಾತು ಉದಿರಾಡಬಹುದು, ತುಂಬೀತ ಸ್ವಾಂತರಂಗ ॥
ತೋಳುಗೀಳು ಸಡಲೀತು ಪ್ರಿಯರ ಸುಸ್ನಿಗ್ಧ ಬಂಧದಲ್ಲಿ
ಪ್ರಾಣ ತುಂಬುವಾ ಅಧರಪಾನ ಇಳಿದೀತೆ ಉದರದಲ್ಲು? ॥

-- ಅಂಬಿಕಾತನಯ ದತ್ತ

ಬಂಡಾಯ ಕಾವ್ಯ ಸ್ವರೂಪ ಒಂದು ಪರಿಚಯ

- ಡಾ. ಆರ್ಕೆ. ಮಣಿಪಾಲ

ಬಂಡಾಯಕಾವ್ಯದ ಮುಖ್ಯ ದ್ರವ್ಯ ನಮ್ಮ ಸಮಾಜ ವ್ಯವಸ್ಥೆಯ ಸಾಂಸ್ಥಿಕ ಹಾಗೂ ಸ್ಥಾವರ ಕಲ್ಪನೆಯ ಭಂಜನೆಯ ಮನೋಧರ್ಮದಿಂದ ಬಂದಿರುತ್ತದೆ. ಈ ಭಂಜನೆಯ ಮನೋಧರ್ಮವನ್ನು ಪ್ರಗತಿಶೀಲರಿಂದಲೂ ಕೆಲಮಟ್ಟಿಗೆ ನವ್ಯರಿಂದಲೂ ಸ್ವೀಕರಿಸಿರುವುದು ನಿಜವಾದರೂ, ಸತ್ವ ಮತ್ತು ಆಶಯದ ದೃಷ್ಟಿಯಿಂದ ಇದು ಕನ್ನಡ ಭಾಷೆಯ ಮಟ್ಟಿಗೆ ಹೊಸತೇ ಆಗಿದೆ. ಪ್ಯಾಂಥರ್ ಸಾಹಿತ್ಯ- ವಿರಸಂ ಕಾವ್ಯ-ಲ್ಯಾಟಿನ್ ಅಮೆರಿಕಾ, ಪ್ಯಾಲೇಸ್ತೀನ್, ಚೀನೀ, ಕೆಂಪು ಇಂಡಿಯನ್ ಕ್ರಾಂತಿಕಾರಿ ಸಾಹಿತ್ಯ- ನೀಗ್ರೋ ಸಾಹಿತ್ಯ ಇವೆಲ್ಲ ಭಂಜನೆಯ ಲಯವನ್ನು ಬಂಡಾಯದವರಲ್ಲಿ ಪ್ರೇರಿಸಿದುವು. ಮಾರ್ಕ್ಸ್‌ವಾದ ಹಾಗೂ ಜನಪದ ಸಂಸ್ಕೃತಿಯ ಹೊಸ ಅರಿವು ಕೂಡಾ ಪ್ರತಿಭಟನೆಯ ಆಶಯವನ್ನು ಗಟ್ಟಿಗೊಳಿಸಿತು. ನವ್ಯಕಾವ್ಯ ಆಡುಮಾತನ್ನು ಕಾವ್ಯದಲ್ಲಿ ಬಳಸಿದುದಲ್ಲದೆ ಶುದ್ಧ ಲೌಕಿಕ ಸಂವೇದನೆಗಳನ್ನು ಮಡಿಮೈಲಿಗೆಯ ಮುಲಾಜಿಲ್ಲದೆ ಕಾವ್ಯದ ವಸ್ತುವನ್ನಾಗಿ ದುಡಿಸಿಕೊಂಡಿದ್ದು, ಬಂಡಾಯವದವರಿಗೆ ಸ್ಫೂರ್ತಿ ನೀಡುವಂಥಾದ್ದೇ. ನವ್ಯ ಮತ್ತು ಬಂಡಾಯದ ಅಂತರ ಇರುವುದೇ ವ್ಯಕ್ತಿಯ ಮಹತ್ವವನ್ನು ಗುರುತಿಸುವ ಮನೋಭೂಮಿಕೆಯಲ್ಲಿ. ವ್ಯಕ್ತಿಯ ಸಮಸ್ಯೆಗಳು ಕೇವಲ ವ್ಯಕ್ತಿಗತವಲ್ಲವಾದರೂ, ಆ ಸಮಸ್ಯೆಗಳ ಸಂವೇದನೆ ತನಗೊಬ್ಬನಿಗೇ ಇರುವುದೆಂಬ ರೀತಿಯಲ್ಲಿ, ಸಮಾಜವಿಚ್ಛೇದಿತ, ಅನಾಥ ಪ್ರಜ್ಞೆಯಿಂದ ಬಳಲುವ ವ್ಯಕ್ತಿಯ ಚಿತ್ರಣದಲ್ಲಿ ನವ್ಯ ತೋರಿಸಿದ ಒಲವು, ಸಮಾಜದ ಒಂದು ತುಣುಕಾಗಿಯಷ್ಟೇ ವ್ಯಕ್ತಿಯ ಸಮಸ್ಯೆಗಳು ಪ್ರಸ್ತುತವಾದುವು-ಎಂಬರೀತಿಯಲ್ಲಲ್ಲದೆ, ಸಮುದಾಯದ ಸಮಸ್ಯೆಗಳು ಒಟ್ಟಾರೆ ಮಾದರಿಯಾಗಿ ವ್ಯಕ್ತಿ ಮತ್ತು ಆತನ ಸಂವೇದನೆ ಬಂಡಾಯ ಕಾವ್ಯದಲ್ಲಿ ಪ್ರಸ್ತುತಗೊಳ್ಳುತ್ತಿದೆ. ಈ ವ್ಯಕ್ತಿಯಿಂದ ಸಮುದಾಯದ ಕಡೆಗೆ ಪಲ್ಲಟಿತವಾದ ಈ ಒತ್ತು, ಚಿಂತನೆ, ನವ್ಯದಿಂದ ಬಂಡಾಯ ಕಾವ್ಯದ ಭಿನ್ನತೆಯನ್ನು ಸಾದರಪಡಿಸುವುದರೊಂದಿಗೆ ಇದರ ವಿಮರ್ಶೆಯ ಹಿಂದಿರಬೇಕಾದ ಸೈದ್ಧಾಂತಿಕತೆಯನ್ನೂ ನಿರ್ದೇಶಿಸುತ್ತದೆ ಎನ್ನಬಹುದು.

ಬಂಡಾಯ ಕಾವ್ಯದಲ್ಲಿ ಚಿತ್ರಿತವಾದ ಐತಿಹಾಸಿಕ ವ್ಯಕ್ತಿಗಳ, ಕ್ರಾಂತಿಕಾರಿ ಚಿಂತಕರ

ಾತ್ರದ ಕಲ್ಪನೆಯನ್ನು ಪರಿಭಾವಿಸಿದರೂ ಈ ಪಲ್ಲಟಿತವಾದ ಮನೋಧರ್ಮ ಸ್ಪಷ್ಟವಾಗುತ್ತದೆ. ಲ್ಲಿನ ವ್ಯಕ್ತಿಗಳು ಆಯಾಕಾಲದ ಜನಸಮೂಹದ ಚಿಂತನೆಯ, ಗತಿಶೀಲ ಹೋರಾಟದ ೀವಂತ ಪ್ರತಿನಿಧಿಗಳಾಗಿ ನಮ್ಮೆದುರು ಮೂಡಿನಿಲ್ಲುತ್ತಾರೆ. ಬಸವ, ಅಂಬೇಡ್ಕರ್, ಗಾಂಧಿ, ುದ್ಧ, ಮಹಾದೇವಿಯಕ್ಕ, ಬೆಂಜಮಿನ್ ಮೊಲಾಯಿಸ್, ಮಂಡೇಲ, ಮಾರ್ಕ್ಸ್ ಮಾತ್ರವಲ್ಲ, ುರಾಣೋಕ್ತ ಪಾತ್ರಗಳ ಕಲ್ಪನೆ ಕೂಡ ಬಂಡಾಯದಲ್ಲಿ ಹೆಚ್ಚು ಜನಸಮ್ಮುಖಿ ಚಿಂತನೆಯ ಮೂಲಕ ಅರ್ಥಪೂರ್ಣ ವಿಮರ್ಶೆಗೆ, ಮರು ಸ್ಥಾನ ನಿರ್ದೇಶನಕ್ಕೊಳಗಾಗಿದೆ. ಈ ಅಂಶ ಮೂಲಭೂತವಾದುದೆಂಬ ಕಾರಣಕ್ಕೆ ಕೆಲವು ಉದಾಹರಣೆಗಳನ್ನು ನೀಡುವುದು ಗತ್ಯವೆನಿಸುತ್ತದೆ.

) ಅಕ್ಕಮಹಾದೇವಿ ಬಗೆಗೆ

ನೀ ನಡೆಸಿದ ಯುದ್ಧದಲ್ಲಿ ಶತ್ರುಗಳೇ
ಶರಣಾಗತರಾದದ್ದು
ದಿಕ್ಕುದಿಕ್ಕುಗಳನು ಗೆದ್ದು ವಿಜಯಿಯಾಗಿ
ನೀ ಚಕ್ರವರ್ತಿನಿಯೇ ಸರಿ.
ನಾ ನಡೆಸುವ ಯುದ್ಧದಲ್ಲಿ
ಅಸಿಗಳಿದ್ದರೂ ಅಸ್ತ್ರಗಳಲ್ಲ
ತುಕ್ಕು ಹಿಡಿಯಲಾಗದೆ
ಸಾಣೆ ಹಾಕಲಾರದ
ಮಣ್ಣಿನ ಆಕಾರಗಳಷ್ಟೇ
ಅದಕ್ಕೇ ಸೋಲಿನ ಸುತ್ತವೇ ಸುತ್ತುತ್ತೇನೆ
ಯಾಕಂದರೆ ಹೊರಗೆ ನಿನ್ನಂತೆ ಬೆತ್ತಲೆ
ನಾನಾಗಿಲ್ಲವಲ್ಲ !
ಗೊತ್ತೇ ಒಳಗೆ ಬೆತ್ತಲೆಯಾಗಿದ್ದೇನೆ
ಚಳಿಗೆ ನಡುಗಿದ್ದೇನೆ.

-ಭಾಗ್ಯ : ಸುಳ್ಳಿನಾಚೆಯ ಸತ್ಯ, ೧೯೮೧

) ನೆಲ್ಸನ್ ಮಂಡೆಲಾ ಬಗೆಗೆ :

ವಿಜಯದ ಕೈ ಬೀಸುವಾಗ
ಹಾರುತ್ತದೆ ಸ್ವಾತಂತ್ರ್ಯದ ಹಕ್ಕಿ
ಭೂಮಂಡಲದ ತುಂಬ
ಆಳುವ ಬಿಳಿಯುರು ಬೆಚ್ಚುವ
ಆತನ ವಾದದಲ್ಲಿ ತಪ್ಪಿಲ್ಲ;
ದ್ವೇಷಕ್ಕೆ ಮಾತ್ರ ವಿರೋಧ.
ಶತಮಾನದ ಆಳದಿಂದ

ತುಂಬಿ ಬಂದ ಕೋಪ ಅದುಮಿ
ಆತ ಮಾತಾಡುವಾಗ-
ಕಿವುಡರು ಕೇಳಬಲ್ಲರು
ಕುರುಡರು ನೋಡಬಲ್ಲರು
ಕುಂಟರು ನಡೆಯಬಲ್ಲರು.

-ರಂಜಾನ ದರ್ಗಾ : ಹೊಕ್ಕುಳಲ್ಲಿ ಹೂವಿದೆ, 199

೩) ಗೋರಕ್ಷನ ಹುಡುಕಾಟದ ಬಗೆಗೆ :

ಅಲ್ಲಿ ಕಂಡೆನು ರಾಟೆಯಲ್ಲಿ ಸಿಕ್ಕಿ ಸತ್ತವರನ್ನು
ನೇಗಿಲ ಕುಳಕ್ಕೆ ಸಿಕ್ಕಿ ಸತ್ತವರನ್ನು
ರಥದ ಗಾಲಿಗೆ ಅಪ್ಪಚ್ಚಿಯಾದವರನ್ನು
ಇಟ್ಟಿಗೆ ಗೂಡಲ್ಲಿ ಸುಟ್ಟು ಹೋದವರನ್ನು
ನಿನ್ನ ಕರುಣೆ ಮೈಯ್ಯಿ ದಡವಿತು
ಕೈಹಿಡಿದು
ತಿರುಗಿ ನನ್ನ ನಗೆ ದಾರಿಹಿಡಿಸಿತು.

- ಎಚ್.ಎಸ್. ಶಿವಪ್ರಕಾಶ್, ಅಣುಕ್ಷಣ ಚರಿತೆ, ೧೯೮

೪) ಅಹಲ್ಯೆ ಬಗೆಗೆ

ಅಹಲ್ಯೆ ನೀನು....
ಗಂಡಸರ ಅಹಂಕಾರಕ್ಕೊಂದು ಸಾಕ್ಷಿಯಾಗಿದ್ದೆ.
....
....
ಆದರೆ ಅಹಲ್ಯೆ
ನೀನು ಕಲ್ಲಿನಿಂದ ಹೆಣ್ಣಾಗಿ ಅರಳಿ
ಮತ್ತೆ ಗೌತಮನ ದಾಸಿಯಾಗಿ
ಏನನ್ನೂ ಯೋಚಿಸದೇ
ಅವನ ಗುಡಿಸಲು ಹೊಕ್ಕುಬಿಟ್ಟೆ
ನೀನು ಕಲ್ಲಾಗಿದ್ದಾಗ
ಅಹಲ್ಯೆ ಜೀವಂತವಾಗಿದ್ದೆ
ಮತ್ತೆ ಹೆಣ್ಣಾದಾಗ ಸತ್ತುಹೊದೆ.

-ಸರಜೂ ಕಾಟ್ಕರ್; ಅನ್ವೇಷಣೆ ೪೫, ೧೯೯

ಅಡಿಗರಂಥ ಹಿರಿಯ ನವ್ಯಕವಿಗಳು ಈಚಿನ ವರೆಗೂ ಬರೆಯುತ್ತಿದ್ದು ಅವರ ಕಾವ್ಯದಲ್ಲಿ ಉಪದೇಶಾತ್ಮಕತೆ ಮತ್ತು ಪ್ರತಿಗಾಮಿ ಆಶಯಗಳು ಒಟ್ಟೊಟ್ಟಿಗೇ ಅಭಿವ್ಯಕ್ತವಾಗಿರುವುದ ಹೆಚ್ಚಾಗಿ ಬಂಡಾಯ ಕಾವ್ಯದ ಈ ಕಾಲಘಟ್ಟದಲ್ಲೇ (೧೯೭೦ರ ದಶಕದ ಉತ್ತರಾರ್ಧದಿಂದ)

ಪ್ರಮಕಾಲೀನ ಕಿರಿಯ ಕವಿಗಳ ನೇರ ಅಭಿವ್ಯಕ್ತಿಯಲ್ಲಿರುವ ಸಂವೇದನಾ ತೀವ್ರತೆ, ಮಾತನ್ನೇ ಕಾವ್ಯವಾಗಿಸುವ ಸಹಜತೆ, ಸಾಮೂಹಿಕ ಧ್ವನಿಗಳ ಮುಂದೆ ಅಡಿಗರಂಥವರ ರಚನೆಗಳು ಪೇಲವವಾಗುವುದನ್ನು ಗುರುತಿಸಬಹುದು. ಅಡಿಗರ ಸಾಮಾಜಿಕ ಕವನಗಳು, ಅವರ ವೈಯಕ್ತಿಕ ಸಂವೇದನೆಗಳನ್ನು ಕುರಿತ ಕವನಗಳು ಸಾಧಿಸಿದ ಯಶಸ್ಸನ್ನು ಗಳಿಸದಿರುವ ರಹಸ್ಯ ಅಧ್ಯಯನಕ್ಕೆ ಒಳ್ಳೆಯ ವಸ್ತುವಾಗಬಲ್ಲುದು. ಹೀಗೆ ಹೇಳುವಾಗ, ವೈಯಕ್ತಿಕ ಕವನಗಳ ಮೂಲಕ ಹೆಚ್ಚು ಯಶಸ್ವಿಯಾಗುವ ಕವಿಯೊಬ್ಬ ಸಾಮಾಜಿಕ ವಸ್ತುವನ್ನು ಎತ್ತಿಕೊಂಡು ಕಾವ್ಯ ಬರೆಯುವ ಸ್ವಾತಂತ್ರ್ಯ ಕೂಡ ಹೊಂದಿದ್ದಾನೆ ಎಂಬುದನ್ನು ಒಪ್ಪಿಕೊಂಡೇ ಹೇಳುತ್ತಿದ್ದೇನೆ. ಒಟ್ಟಿನಲ್ಲಿ ಇದರಿಂದ ಸ್ಪಷ್ಟವಾಗುವುದೆಂದರೆ, ಬಂಡಾಯದ ಹುಟ್ಟಿನ ವೇಳೆ ಅಡಿಗರ, ಅಡಿಗರಂಥವರ ಕಾವ್ಯದ ನೆಲೆ ಬತ್ತಿಹೋಗಿತ್ತು; ನಂತರ ಏನಿದ್ದರೂ ಅವರ ಚಟ ಅಥವಾ ಹಟದಿಂದ ಕಾವ್ಯದಲ್ಲಿ ಪ್ರತಿಕ್ರಿಯಿಸ ಹೊರಟರು-ಎಂಬುದು. ಅಡಿಗರ ಅತ್ಯುತ್ತಮ ರಚನೆಗಳಿಗೆ ೧೯೭೦ರಾಚೆಗೆ ಹೋಗಬೇಕೆಂಬುದನ್ನು ಬಂಡಾಯದ ಕಾಲಘಟ್ಟದಲ್ಲಿನ ಅವರ ಕಾವ್ಯದ ಸಾಧನೆ ಒತ್ತಾಯಿಸುತ್ತದೆ. 'ಅಕ್ಷರ ಹೊಸ ಕಾವ್ಯ'ದ ಪರಿಷ್ಕೃತ ಆವೃತ್ತಿಯಲ್ಲಿ ಸಂಪಾದಕರು ಅಡಿಗರ ಹಳೆಯ ಕವಿತೆಗಳೊಟ್ಟಿಗೆ ನಂತರದ 'ಚಿಂತಾಮಣಿಯಲ್ಲಿ ಕಂಡ ಮುಖ' ಎಂಬ ಒಂದು ಕವಿತೆಯನ್ನಷ್ಟೇ ಸೇರಿಸಿಕೊಂಡಿರುವುದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಮಿಕ್ಕುಳಿದಂತೆ ರಾಮಚಂದ್ರ ಶರ್ಮ, ಜಯಂತ್‌ರಂಥವರು ಇನ್ನೂ ನವ್ಯದ ತಂತಿಯನ್ನೇ ಮೀಟುತ್ತಿದ್ದಾರೆ; ತಿರುಮಲೇಶ್ ಬದಲಾಗಿದ್ದಾರೆ. ಬಂಡಾಯದ ಮನೋಧರ್ಮ ಅವರ ಕಾವ್ಯನಿರ್ಮಿತಿಯಲ್ಲಿ ತಕ್ಕಷ್ಟು ನಿಚ್ಚಳವಾಗಿಯೇ ಕಾಣಿಸಿದೆ ('ಮುಖಾ ಮುಖಿ' ಯಿಂದೀಚೆ). ನವ್ಯಕವಿಗಳಲ್ಲಿ ಇತರರೂ ಅನಿವಾರ್ಯವಾಗಿ ಸಮಾಜಮುಖೀ ರಚನೆಗಳನ್ನು ನೀಡಿದ್ದಾರೆ. ಅಥವಾ ಕಡಿಮೆ ವ್ಯಕ್ತಿವಾದಿಗಳಾಗುತ್ತಿದ್ದಾರೆ. (ಕಾವ್ಯವಷ್ಟೇ ಅಲ್ಲ, ಇತರ ಪ್ರಕಾರಗಳಲ್ಲೂ ಈ ಮಾತು ಅಷ್ಟೇ ನಿಜ.)

ಇದರೊಟ್ಟಿಗೆ ಮಧುರಚನ್ನ-ಸೂಫಿ-ಝೆನ್-ವಚನಕಾರರು- ದಾಸರ ಲಯಗಳನ್ನು ಬಳಸಿಕೊಂಡು ವರ್ತಮಾನ ಪುರಾಣಗಳ ಮುಖಾಮುಖಿಯಿಂದ ಕಾವ್ಯದ ಅರ್ಥಪರಿಧಿಯನ್ನು ವಿಸ್ತರಿಸುತ್ತಿರುವ ಶಿವಪ್ರಕಾಶ್ ಪ್ರಯೋಗ ಒಂದು ಕಡೆ, ಪೂರ್ತಿ ನವ್ಯವಲ್ಲದಿದ್ದರೂ ನವ್ಯೋತ್ತರ ಚಿಂತನೆಗಳಿಗೆ ತೆರೆದುಕೊಳ್ಳಲಾಗದ (ಅಥವಾ ತೆರೆದುಕೊಳ್ಳುವ ಮನಸ್ಸಿಲ್ಲದ?) ವೆಂಕಟೇಶಮೂರ್ತಿ ನಡುಗನ್ನಡದ ಲಯಗಳಿಗೆ ವಾಪಸಾಗುವುದು ಇಲ್ಲವೇ ನವೋದಯದ ಮನೋಧರ್ಮಕ್ಕೆ ಹೊಂದುವಂಥ ಸಂಸ್ಕೃತ ಕಾವ್ಯವನ್ನು ಅನುವಾದಿಸುತ್ತಿರುವುದು ವಿಚಾರಣೀಯ. ವೆಂಕಟೇಶಮೂರ್ತಿ ಮಕ್ಕಳ ಕಾವ್ಯದಲ್ಲೂ ಪ್ರಯೋಗ ನಡೆಸಿದ್ದಾರೆ. ಅವರ ಈ ಪದ್ಯಗಳು ಮಕ್ಕಳ ಕಾವ್ಯಕ್ಕೆ ಉತ್ಕೃಷ್ಟ ಸೇರ್ಪಡೆ ಅಷ್ಟೇ ಅಲ್ಲ; ಅದು ಮಕ್ಕಳ ಕಾವ್ಯಕ್ಕಿಂತ ಹೆಚ್ಚಿನದು ಕೂಡ. ಲಕ್ಷ್ಮೀನಾರಾಯಣ ಭಟ್ಟರು ರಚಿಸಿರುವ ಮಕ್ಕಳ ಗೀತಗಳಿಗೆ ಹೋಲಿಸಿದರೆ ಈ ಮಾತು ಸ್ಪಷ್ಟವಾದೀತು. ಭಟ್ಟರು ಕ್ಯಾಸೆಟ್ಟಿಗೆ ಮೊರೆಹೊಕ್ಕು ಗೇಯವಾದ ರಚನೆಗಳನ್ನು, ತೀರಾ ಸಾಮಾನ್ಯ ಶಿಶುಗೀತಗಳನ್ನು

ಕೊಟ್ಟಿದ್ದಾರೆ. 'ಇಕ್ರಲಾ ವದೀರ್ಲಾ' ದಿಂದ ಕಾವ್ಯಕ್ಷೇತ್ರಕ್ಕೆ ಲಗ್ಗೆ ಹಾಕಿದ ಪ್ರಮುಖ ದಲಿತ ಕವಿ ಸಿದ್ಧಲಿಂಗಯ್ಯ ಹಾಡುಗಳನ್ನು ಬರೆಯುತ್ತಿರುವುದಷ್ಟೇ ಅಲ್ಲ; ಚಲನ ಚಿತ್ರಕ್ಕೂ ಹಾಡು ರಚಿಸುತ್ತಿದ್ದಾರೆ. ಕುಂ. ವೀರಭದ್ರಪ್ಪ ಕೂಡ ಕೆಲವು ಗೇಯ ರಚನೆಗಳನ್ನು ನೀಡಿದ್ದಾರೆ. ಜಿ.ಎಚ್. ರಾಘವೇಂದ್ರ, ಬಿದರಕುಂದಿ, ಸತೀಶ್ ಕುಲಕರ್ಣಿ, ಅಮರಚಿಂತ, ಮಾಲಗತ್ತಿ, ಚಂಪಾ, ವಾಲೀಕಾರ ಮುಂತಾದವರು ಅನುಸರಿಸುವ ಲಯಗಳು ಸಾದೃಶ್ಯವಾಗಿದ್ದರೂ ಚಿಂತನೆಯಲ್ಲಿ ಸೂಕ್ಷ್ಮ ವ್ಯತ್ಯಾಸವನ್ನು ಗುರುತಿಸಲು ಸಾಧ್ಯ. ಕಾಳೇಗೌಡ ತಡವಾಗಿ ಕಾವ್ಯ ಕ್ಷೇತ್ರಕ್ಕೆ ಕಾಲಿರಿಸಿದರೂ ನವ್ಯದ ಲಯವನ್ನೆ ನೆಚ್ಚಿಕೊಂಡಿದ್ದಾರೆ. ಸ್ವಾರಸ್ಯವೆಂದರೆ, ನವ್ಯದಿಂದ ಭ್ರಮನಿರಸನಗೊಂಡು ಗಪದ್ಯರೀತ್ಯಾ ಬರೆಯುತ್ತ ಬಂದ ಚಂಪಾ 'ಅರ್ಧ ಸತ್ಯದ ಹುಡುಗಿ' (೧೯೮೮)ಯ ಹೊತ್ತಿಗೆ ಮತ್ತೆ ನವ್ಯದ ಶೈಲಿ ರೂಢಿಸಿಕೊಂಡಿದ್ದಾರೆ. ಆದರೆ, ಚಿಂತನೆಯಲ್ಲಿ ಮಾತ್ರ ಪ್ರಾತಿನಿಧಿಕ ನವ್ಯರಷ್ಟು ವ್ಯಕ್ತಿವಾದಿಯಾಗಿ ಮಾರ್ಪಟ್ಟಿಲ್ಲ ಎಂಬುದು ಸಮಾಧಾನದ ಸಂಗತಿ.

ಕಥನ ಗೀತಪ್ರಕಾರವನ್ನೇ ರೂಢಿಸಿಕೊಂಡ ಹಿರಿಯಕವಿ ಸು.ರಂ. ಎಕ್ಕುಂಡಿ ಅನುಭಾವಿ ಚೌಕಟ್ಟಿನೊಳಗೂ ವಾಸ್ತವವನ್ನು ಉಪೇಕ್ಷಿಸದಿರುವುದು ಗಮನಾರ್ಹವೆನಿಸಿದರೂ ಗದ್ಯಕವಾಗಿ ಬರೆಯುತ್ತಿರುವುದು ಅಷ್ಟೇ ನಿಜ. ಇತಿಹಾಸದ ನೆನಪುಗಳನ್ನುಬಗೆಯುವ, ಅದರ ಕರಾಳತೆಯಲ್ಲಿ ವರ್ತಮಾನದ ವಿಘಟನಶೀಲ ವಿನ್ಯಾಸಗಳನ್ನು ತೆರೆದಿಡುವ ಗಂಭೀರ ಪ್ರಯತ್ನಕ್ಕೆ ತೊಡಗಿರುವ ಕೇಶವಶರ್ಮ ('ಶ್ವೇತ ಕೇತುವಿನ ಆಖ್ಯಾನ') ಹೆಚ್ಚು ಕವಿತೆಗಳನ್ನು ಕೊಟ್ಟಿಲ್ಲ.

●

ಮೇಲಿನ ಭಾಗದಲ್ಲಿ ಬಂಡಾಯದ ಒಳಗೂ ಹೊರಗೂ ಇರುವ, ಸಮಕಾಲೀನ ಕನ್ನಡ ಕಾವ್ಯದಲ್ಲಿ ಬೆರೆತು ಬಂದಿರುವ ವೈವಿಧ್ಯವನ್ನು ಸ್ಥೂಲವಾಗಿ ಪರಿಚಯಿಸಿದ್ದೇನೆ. ಇನ್ನು ಮುಂದೆ ಬಂಡಾಯಕಾವ್ಯದ ತಂತ್ರ ಮತ್ತು ಶೈಲಿಯ ಕುರಿತ ಒಂದೆರಡು ಮಾತುಗಳನ್ನು ದಾಖಲಿಸಬಹುದೆನ್ನಿಸುತ್ತದೆ.

ಬಂಡಾಯ ಜನಪದ ತಂತ್ರ ಮತ್ತು ಶೈಲಿಯನ್ನು ಹೆಚ್ಚು ಪ್ರಜ್ಞಾಪೂರ್ವಕವಾಗಿ ಬಳಸಿರುವುದನ್ನು ಮನಗಾಣಬಹುದು. ಜನಪದ ತಂತ್ರ ಅಲ್ಲಲ್ಲಿ ನವ್ಯದವರೂ ಬಳಸಿದ್ದುಂಟು. ಆದರೆ, ಅವರಿಗೆ ಅದು ವೈಯಕ್ತಿಕ ತೆವಲಿನ, ಅವರ ಒಟ್ಟು ಅರಾಜಕತಾವಾದಿ ಒಲವಿನ, ಸಾಧನವಾಗಿತ್ತು. ಬಂಡಾಯಕ್ಕೂ ಜನಪದಕ್ಕೂ ಇರುವ ನಂಟು ಪಟ್ಟು ಮೂಲಭೂತವಾದುದೇ ವಿನಾ ಆಕಸ್ಮಿಕವಾದುದಲ್ಲ; ತೆವಲಂತೂ ಆಗಲಾರದು. ಜನಪದ ತಂತ್ರಕ್ಕೂ ಜನಪದ ವಸ್ತುವಿಗೂ ಸಂಬಂಧವಿರುವ ಹಿನ್ನೆಲೆಯಲ್ಲಿ ಇದರ ಅರ್ಥ ಪೂರ್ಣತೆಯನ್ನು ಪರಿಭಾವಿಸಬೇಕು. ಆದರೆ, ಜನಪದ ತಂತ್ರ ಮತ್ತು ಲಯಗಳು ತಮ್ಮಿಂತಾವೆ ಬಂಡಾಯದವರಿಗೆ ಮುಖ್ಯವಾಗದೆ, ಅವರ ಒಟ್ಟು ಗ್ರಹಿಕೆಯ ಕ್ರಮದಲ್ಲಿ ಮೂಡಿಬರಬೇಕು; ಅವರು ಅದನ್ನು ಜೀರ್ಣಿಸಿಕೊಂಡಿರಬೇಕು. ಕಂಬಾರ, ಬೇಂದ್ರೆಗಿಂತ ಹೆಚ್ಚು ಪ್ರಮಾಣದಲ್ಲಿ ಜಾನಪದದ ವಿವಿಧ ಮಟ್ಟುಗಳನ್ನೂ ಭಾಷಾ

ಸೊಗಡನ್ನು ದುಡಿಸಿಕೊಂಡರೂ, ಚನ್ನಣ್ಣ ವಾಲೀಕಾರರಂಥವರು ತಮ್ಮ ಕಾವ್ಯ ನಿರ್ಮಿತಿಯಲ್ಲಿ ಎಷ್ಟರ ಮಟ್ಟಿಗೆ ಯಶಸ್ವಿಯಾಗಿದ್ದಾರೆ ಎಂಬ ಪ್ರಶ್ನೆ ಮಾತ್ರ ಉಳಿದೆ ಉಳಿಯುತ್ತದೆ ಎನ್ನುತ್ತಾರೆ, ಮನಜ[1]. ಜನಪದದೊಂದಿಗಿನ ಮುಖಾಮುಖಿ, ತಾದಾತ್ಮ್ಯ, ಪ್ರಗತಿಪರ ನೆಲೆಯಲ್ಲಿ, ದ್ವಂದ್ವಾತ್ಮಕವಾಗಿ, ಜರುಗದಿದ್ದಾಗ, ಯಾಂತ್ರಿಕ ಲೆಕ್ಕಾಚಾರದ ಜನಪದೀಕರಣ ಕಾವ್ಯಕ್ಕಾಗಲಿ ಜನಪದಕ್ಕಾಗಲಿ ಹಿತಕಾರಿಯಾಗಬೇಕಾಗಿಲ್ಲ ಎಂಬುದನ್ನು ಬಂಡಾಯದವರ ರಚನೆಗಳು ಸೂಚಿಸುತ್ತವೆ. ಬೇಂದ್ರೆಯ ಹೆಸರನ್ನೇ ಅಳಿಸಿ ಹಾಕಬಲ್ಲಷ್ಟು ಜನಪದಲಯದ ಹಾಡುಗಳು ಈಚಿನ ದಿನಗಳಲ್ಲಿ ಉತ್ಪತ್ತಿಯಾಗಿದ್ದರೂ ಬಂಡಾಯದ ನಿಜಾಶಯವನ್ನು ಜನಪದ ಶೈಲಿ ಮತ್ತು ಪರಿವೇಷದೊಳಗಿನಿಂದ ಕಟ್ಟಿಕೊಡುವ, ಬೇಂದ್ರೆಗೆ ಸರಿಗಟ್ಟುವ ಶಕ್ತ ಕವಿ ಒಬ್ಬನೇ ಒಬ್ಬ ಮೂಡಿಬಂದಿಲ್ಲ ಎಂಬುದು ಚಿಂತನೀಯವಾಗಿದೆ.

ಜನಪದ ತಂತ್ರ-ಶೈಲಿಗಳನ್ನು ದಟ್ಟವಾಗಿ ಬಳಸಿಕೊಂಡಾಗ್ಯೂ ದೇವನೂರರ 'ಕುಸುಮ ಬಾಲೆ', ಅದಕ್ಕಿಂತ ಹಿಂದಿನ 'ಒಡಲಾಳ' ದಷ್ಟು ಯಶಸ್ಸನ್ನು ಕಂಡಿಲ್ಲ. 'ಜಾನಪದ ಆಚರಣೆ ನಮ್ಮ ಅರಿವಿನ ಮೂಲಕ ರೂಢಿಸಿಕೊಂಡ ಒಂದು ರೀತಿಯ ಮನೋಚಿಕಿತ್ಸೆ. ನಾನೆಂದೂ ಈ ಆಚರಣೆಯನ್ನು ಕಣ್ಣಾರೆ ನೋಡಿಲ್ಲ; ಆದರೆ ನನ್ನ ಕಾದಂಬರಿಯಲ್ಲಿ ಈ ಆಚರಣೆಯನ್ನು ವಿವರಿಸುವ ಪುಟಗಳು ನನ್ನ ಅತ್ಯುತ್ತಮ ಬರವಣಿಗೆ ಎಂದು ನಾನು ಭಾವಿಸಿದ್ದೇನೆ ಎಂದಿರುವ ದೇವನೂರು[3] 'ಕುಸುಮ ಬಾಲೆ'ಯಲ್ಲಿ ಅದುವರೆಗೆ ಜಾನಪದ ಕತೆಯನ್ನು, ಸತ್ವವನ್ನು ನಿರೂಪಿಸಲು ಬಳಸಿಕೊಳ್ಳಬಹುದೆಂದು ಭಾವಿಸದುದನ್ನು[4] ನಿವೇದಿಸಿಕೊಂಡಿದ್ದಾರೆ. 'ಕುಸುಮ ಬಾಲೆ'ಯ ಒಟ್ಟು ತೊಡಕು ನಿರೂಪಣೆಯ ಈ ತಂತ್ರದಿಂದ, ಸಂವಹನಾ ಸಮಸ್ಯೆಯಿಂದ ಹುಟ್ಟಿಕೊಂಡದ್ದೆನಿಸುತ್ತದೆ. ಜನಪದದ ಚೌಕಟ್ಟನ್ನು ಮೀರಿದ ಚಿಂತನೆ, ಆ ಚಿಂತನೆಯನ್ನು ತನ್ನ ಶೈಲಿ, ಪರಿಭಾಷೆಗಳ ಚೌಕಟ್ಟಿನಲ್ಲಿ ಹಿಡಿದಿಟ್ಟುಕೊಳ್ಳಲಾರದ ಜನಪದ ಆಕೃತಿ-ಹೀಗೆ ವಿಚಿತ್ರ ದ್ವಂದ್ವದಲ್ಲಿ ಬಂಡಾಯ ಕಾವ್ಯ ಸಿಕ್ಕಿಹಾಕಿಕೊಂಡಂತಿದೆ ('ಕುಸುಮ ಬಾಲೆ' ಎಂಬ 'ಗದ್ಯಕಾವ್ಯ'ದ ಬಗೆಗೆ ಬರೆಯುವ ಈ ಮಾತು, ಜನಪದ ತಂತ್ರ-ಶೈಲಿಗಳನ್ನು ಅವುಚಿಕೊಂಡ ಬಹುತೇಕ ಬಂಡಾಯ ಕವಿತೆಗಳ ಹಣೆ ಬರೆಹವೂ ಆಗಿದೆ).

ದಲಿತ-ಬಂಡಾಯ ಕಾವ್ಯ ಸಂಪ್ರದಾಯದೊಳಗೇ ಅಳವಡುವಂಥ ಒಲವು ಸ್ತ್ರೀವಾದದ್ದು. ಸ್ತ್ರೀವಾದಿ ದೃಷ್ಟಿಕೋನದ-ವಿಮರ್ಶೆ ಮತ್ತು ವೈಚಾರಿಕ ಬರೆಹಗಳಿಗಿಂತ-ಕವಿತೆಗಳು ಹೆಚ್ಚಾಗಿ ಹೊರಬರುತ್ತಿರುವುದು ಈ ಸಂವೇದನೆಯ ಸ್ವರೂಪ ಮತ್ತು ಹಿನ್ನೆಲೆಯ ದೃಷ್ಟಿಯಿಂದ ಅರ್ಥಪೂರ್ಣವಾಗಿದೆ. ಇಲ್ಲೂ ಸರ್ವಮಂಗಳ ಮತ್ತು ವೈದೇಹಿ ಇನ್ನೂ ನವ್ಯ ಪರಿಧಿ, ಯೊಳಗೇ ಸುತ್ತುತ್ತಿದ್ದಾರೆನಿಸುತ್ತದೆ. ಡಿ. ವಿಜಯಾ, ಪ್ರತಿಭಾ, ಶಶಿಕಲಾ, ಭಾಗ್ಯ, ಪುಷ್ಪ, ಮಾಲತಿ ಪಟ್ಟಣಶೆಟ್ಟಿ, ಮುಕ್ತಾಯಕ್ಕ, ಸವಿತಾ ನಾಗಭೂಷಣರಂಥವರು ಈ ಒಲವಿನಿಂದ ಬರೆಯುತ್ತಿದ್ದರೂ ಇವರೆಲ್ಲ ಬರಿಯ ಸ್ತ್ರೀವಾದಿಗಳಷ್ಟೇ ಎಂದು ವರ್ಣಿಸುವಂತಿಲ್ಲ. ಇವರೆಲ್ಲರಲ್ಲಿ ಭಾಗ್ಯ ಮತ್ತು ಸವಿತಾರ ಸಾಧನೆ ಮಹತ್ವದ್ದೆಂದು ನನಗನಿಸುತ್ತದೆ. ಮಲ್ಲಿಕಾ

ಘಂಟಿಯಂಥವರು ಮಾರ್ಕ್ಸ್‌ವಾದಿ ಅರಿವಿನಿಂದ ಬರೆಯುತ್ತಿದ್ದಾರೆ; ಸ್ತ್ರೀವಾದದ ಸೋಂಕೇ ಇಲ್ಲದೆ ಇವರ ಕಾವ್ಯ ಸೂಕ್ಷ್ಮತೆಗೂ ಎರವಾಗಿರುವುದು ಅಷ್ಟೇ ನಿಜ. ಬಂಡಾಯ ಸಾಹಿತ್ಯ ಸಂಘಟನೆ ರೂಪುಗೊಂಡು ಇಷ್ಟು ವರ್ಷಗಳಾದ ಮೇಲೂ ಸ್ತ್ರೀ-ಪುರುಷ ಸಮಾನತೆಯ ಆದರ್ಶವು ವರ್ಗ ಸಮಾನತೆಯ ಖಚಿತ ನೆಲೆಯಲ್ಲಿ, ಸಾಹಿತ್ಯ ಮತ್ತು ಸಾಂಸ್ಕೃತಿಕಕ್ಷೇತ್ರದಲ್ಲಿ ಬಿತ್ತನೆಯಾಗದಿರುವ ಕಟುಸತ್ಯವನ್ನು ಈ ಒಲವಿನ ಕಾವ್ಯಮಾರ್ಗ ಮತ್ತು ಅದರ ಒಟ್ಟು ಸಾಧನೆ ಪ್ರತಿಫಲಿಸುವಂತಾಗಿದೆ. ದಲಿತ-ಬಂಡಾಯ, ಸಂಘರ್ಷ-ಕ್ರಾಂತಿಗಳ ಘೋಷಣೆ ಇವೊತ್ತಿನ ಮಧ್ಯಮ ವರ್ಗೀಯ ಪ್ರತಿಷ್ಠೆಯ ಸಾಧನವಾಗಿರುವಂತೆ, 'ಆಧುನಿಕತೆ'ಯ ಪರ್ಯಾಯ ಪದವಾಗಿರುವಂತೆ, ಸ್ತ್ರೀವಾದದ ವಿಚಿತ್ರ, ವಿಸಂಗತ, ವಿಪರೀತ ಪಲುಕುಗಳೂ ಒಂದು ಫ್ಯಾಶನ್ನಾಗಿ ಇನ್ನೂ ಕೆಲ ವರ್ಷ ಸಾಹಿತ್ಯ ಕ್ಷೇತ್ರದಲ್ಲಿ ಗುನುಗುಟ್ಟುತ್ತಿರ ಬಹುದೆನಿಸುತ್ತದೆ.

ಇದಕ್ಕೆ ಪೂರಕವಾಗಿ ಮುಸ್ಲಿಂ ಸಂವೇದನೆಯು ಕಾವ್ಯದಲ್ಲಿ ಎಷ್ಟರ ಮಟ್ಟಿಗೆ ದಾಖಲಾಗಿದೆ ಎಂಬುದನ್ನು ಗಮನಿಸಿದರೆ, ಪರಿಸ್ಥಿತಿ ಅಷ್ಟೇನೂ ಆಶಾದಾಯಕವಾಗಿಲ್ಲ ಎನ್ನಬೇಕಾಗಿದೆ. ರಶೀದ್, ನಜೀರ್‌ರಂಥವರು ಬರೆಯುತ್ತಿದ್ದರೂ ಮುಸ್ಲಿಂ ಸಮುದಾಯದ್ದೇ ಆದ ಅನುಭವ ದ್ರವ್ಯ ಕಾವ್ಯಲೋಕವನ್ನು ಪ್ರವೇಶಿಸಿಲ್ಲವೆಂದೇ ಅನಿಸುತ್ತದೆ. ದರ್ಗಾ ವೈಜ್ಞಾನಿಕ ಮಾನವತಾವಾದಿ ಹಿನ್ನೆಲೆಯಲ್ಲಿ ಬರೆಯುತ್ತಿದ್ದಾರೆಯೇ ವಿನಾ ಮುಸ್ಲಿಂ ಸಮುದಾಯದ ಮುಖವಾಣಿಯಾಗಿ ಅಲ್ಲ. ಗದ್ಯ ಪ್ರಕಾರದಲ್ಲಿ ಮುಸ್ಲಿಂ ಲೇಖಕರು ಮಾಡಿದ ಸಾಧನೆ ಕಾವ್ಯ ಕ್ಷೇತ್ರದಲ್ಲಾಗಿಲ್ಲ. ಇದಕ್ಕಿರಬಹುದಾದ ಸಾಂಸ್ಕೃತಿಕ ಕಾರಣಗಳೇನೇ ಇರಲಿ, ಬಂಡಾಯ ಸಾಹಿತ್ಯ ಚಳವಳಿಯ ಸಂದರ್ಭದಲ್ಲಿ ಇಂಥ ತೊಡಕುಗಳ ಸರಿಯಾದ ಕಲ್ಪನೆ ಹಾಗೂ ತಕ್ಕ ಪರಿಹಾರದ ಚಿಂತನೆ ಅಗತ್ಯವೆನಿಸುತ್ತದೆ.

ಈ ಪರಿಚಯ ಬರೆಹದ ಮುಕ್ತಾಯದ ಸಂದರ್ಭದಲ್ಲಿ ಬಂಡಾಯ ಸಾಹಿತ್ಯ ಸಂಘಟನೆಯ ಮುಖಂಡರಾಗಿದ್ದ ಬರಗೂರರ ಮಾತನ್ನು ಉದ್ಧರಿಸಬಹುದು: 'ಬಂಡಾಯ ಸಾಹಿತ್ಯದ ಮುಖ್ಯ ಬಿಕ್ಕಟ್ಟು ಇರುವುದು ತನ್ನ ಆಶಯ ಮತ್ತು ವಾಸ್ತವಗಳಿಗೆ ಸಂಬಂಧ ಕಲ್ಪಿಸುವ ಕ್ರಿಯೆಯಲ್ಲಿ. ಆಶಯಗಳನ್ನೇ ವಾಸ್ತವವೆಂಬಂತೆ ಚಿತ್ರಿಸಿದರೆ ಹುಸಿ ಘೋಷಣೆಯಾಗುವ ಅಪಾಯವಿದೆ; ಇದು ಬಂಡಾಯ ಭಾಷೆಗೆ ಒದಗುವ ಅಪಾಯವೂ ಆಗುತ್ತದೆ...[6] ಬಂಡಾಯದ ಭಾಷಾ ತೀವ್ರತೆ, ಅಸಹಜ ಉದ್ವೇಗಕ್ಕೆ ಕಾರಣವನ್ನು ಇಲ್ಲಿ ಗುರುತಿಸಲಾಗಿದೆ. ಜಗತ್ತಿನ ಬಂಡಾಯದ ವಿವಿಧ ಧ್ವನಿಲಯಗಳನ್ನು, ಪರಂಪರೆಗಳ ಅನುಭವಗಳನ್ನು, ಬಂಡವಾಳ ವಾಗಿಸಿಕೊಂಡಿರಬೇಕಾದ ಈ ಆಂದೋಲನ ವಾಸ್ತವದ ಗ್ರಹಿಕೆಯಲ್ಲಿ ತಪ್ಪಿಬಿಟ್ಟಿದೆ ಎಂದೇ ಅನಿಸುತ್ತದೆ. ಅದಲ್ಲವಾದರೆ, ಸಾಮ್ರಾಜ್ಯಶಾಹಿ-ನವವಸಾಹತುಶಾಹಿಯ ದಬ್ಬಾಳಿಕೆಯ ಈ ದುರ್ದಿನಗಳಲ್ಲಿ, ಶೋಷಣೆಯ ಮತ್ತು ಹಿಂಸೆಯ ಜಾಗತಿಕ ಸ್ವರೂಪ ಮತ್ತು ಹಿನ್ನೆಲೆ ನಮ್ಮ ಬಂಡಾಯ ಕವಿಗಳನ್ನು ಇನ್ನೂ ಅಷ್ಟಾಗಿ ಏಕೆ ಬಾಧಿಸಿಲ್ಲ? ಅದಲ್ಲವಾದರೆ, ಅವರಲ್ಲಿ ಕೆಲವರು ನವ್ಯಕ್ಕೆ, ಪ್ರೇಮಗೀತೆಗಳಿಗೆ, ಕೆಲಮಟ್ಟಿಗೆ ಅರಾಜಕತಾವಾದಿ ಒಲವುಗಳಿಗೆ ಏಕೆ ವಾಪಸಾಗುತ್ತಿದ್ದಾರೆ?

ಆಶಯ-ವಾಸ್ತವಗಳ ಲೇವಾದೇವಿ ಕಲ್ಪಿಸುವ ವಿಷಯದಲ್ಲಿ ಬಂಡಾಯ ಇನ್ನೂ ಯಶಸ್ಸು ಕಾಣದಿರುವುದಕ್ಕೆ ಸ್ವತಃ ಬರಗೂರರೇ ಸಂಪಾದಕರಾಗಿದ್ದ 'ಬಂಡಾಯ ಕಾವ್ಯ' ಎಂಬ ಬೃಹತ್ ಸಂಕಲನವನ್ನು ಉದಾಹರಿಸಬಹುದು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ 'ಜನಪ್ರಿಯ ಪುಸ್ತಕ ಮಾಲೆ'ಯಡಿ ಪ್ರಕಟವಾದ ಈ ಸಂಕಲನದಲ್ಲಿ ಭಾರೀ ಪ್ರಮಾಣದ ಬಂಡಾಯದ ಕವಿಗಳನ್ನು ಒಂದೆಡೆ ಸೇರಿಸಲಾಗಿದೆ. ಇಲ್ಲಿ ಸಂಪಾದನೆಯ ಕಾರ್ಯವೇ ನಡೆದಿಲ್ಲ ಎಂಬಷ್ಟು ಸರಳವಾದ, ಸೂಕ್ಷ್ಮತೆಗೆ ಹೊರತಾದ, ಹೇಳಿಕೆಗಳ ಕಾವ್ಯವೇ ಇಡಿಕಿರಿದಿದೆ. ನನ್ನ ಪ್ರಶ್ನೆ ಇದು: 'ಬಂಡಾಯ ಕವಿಗಳು' ಇಂಥ ಸಂಕಲನದಲ್ಲಷ್ಟೇ ಒಟ್ಟಾಗಿ ನಿಲ್ಲುತ್ತಾರೋ, ಹೋರಾಟ-ಬದುಕು- ಕಾವ್ಯಗಳ ತ್ರಿಕೂಟದ ಸಂಶ್ಲೇಷಣಾಕ್ರಿಯೆಯಲ್ಲೂ ಒಂದಾಗಿರುತ್ತಾರೋ? ಈ ಪ್ರಶ್ನೆಯ ಮೇಲೆ ಬಂಡಾಯ ಸಾಹಿತ್ಯಾಂದೋಲನದ ಒಟ್ಟಾರೆ ಯಶಾಪಯಶ ನಿಂತಿದೆ ಎಂದು ನನ್ನ ಭಾವನೆ.

ಅಡಿಟಿಪ್ಪಣಿಗಳು

1: 'ದಲಿತ-ಬಂಡಾಯ ಕಾವ್ಯ ತಾತ್ವಿಕ ಜಿಜ್ಞಾಸೆ', ಬಂಡಾಯ ಸಾಹಿತ್ಯದ ತಾತ್ವಿಕ ನೆಲೆಗಳು (ಸಂ. ಬಸವರಾಜ ಸಬರದ), 1992. ಪು. ೧೨೩.

2. ಅಲ್ಲೆ

3. ನೋಡಿ: ಸಂವಾದ, 14

4. ಅಲ್ಲೆ

5. ಮಹಿಳಾಪ್ರಜ್ಞೆಯ ಇತಿಮಿತಿಗಳ ಕುರಿತು ನನ್ನ ಚಿಂತನೆಗಳನ್ನು 'ಮಹಿಳಾ ಪ್ರಜ್ಞೆ ಮತ್ತು ಕಾವ್ಯ' ಎಂಬ ಲೇಖನದಲ್ಲಿ ಮಂಡಿಸಿದ್ದೇನೆ. ನೋಡಿ: ಸಾಹಿತ್ಯ: ಸಿದ್ಧಾಂತ ಮತ್ತು ಹೋರಾಟ, ೧೯೮೬.

6. ನೋಡಿ : 'ಬಂಡಾಯ ಸಾಹಿತ್ಯಕ್ಕೆ ಹತ್ತು ವರ್ಷ' ಬಂಡಾಯ ಸಾಹಿತ್ಯದ ತ್ವಾತಿಕ ನೆಲೆಗಳು (ಸಂ.) ಪು. ೨೧೩-೨೧೪.

ರೂಪಕ ನಿರ್ಮಾಣವೆಂಬುದು ಕವಿಪ್ರತಿಭೆಯ ಹೆಗ್ಗುರುತು. ಯಾಕೆಂದರೆ ರೂಪಕಗಳ ಪ್ರಯೋಗವೆಂಬುದು ಬೇರೆಯವರಿಂದ ಕಲಿಯುವಂಥದ್ದಲ್ಲ. ಕಾವ್ಯ ಕ್ರಿಯೆಯಲ್ಲಿ ಅತ್ಯಂತ ಮುಖ್ಯವಾದುದೆಂದರೆ ರೂಪಕ ಪ್ರಯೋಗ ಸಾಮರ್ಥ್ಯ.

– ಡಿ.ಜೆ. ಜೇಮ್ಸ್ 'ಸ್ಕೆಪ್ಟಿಸಿಸಂ ಆಂಡ್ ಪೊಯೆಟ್ರಿ'ಯಿಂದ

ರಸಿಕ ಸ್ಪಂದನೆ...

ಡಾ॥ ರಾಜೀವ ತಾರಾನಾಥ

○ ಕಾವ್ಯದ ಓದು ನಿಮಗೆ ನಿಮ್ಮ ಪ್ರವೃತ್ತಿಯಾದ ಸಂಗೀತ ಕೊಡುವ ಸುಖವನ್ನು ಕೊಟ್ಟಿದೆಯೆ?

□ ಕಾವ್ಯದ ಓದು... "ಸುಖ" ಕೊಟ್ಟಿಲ್ಲ.

○ ಇಂದು ಸದ್ಯದಲ್ಲಿ ಬರುತ್ತಿರುವಂತಹ ಕನ್ನಡ ಕವಿತೆ ಇಂಥ ಸುಖ ಮೂಡಿಸುವ ಶಕ್ತಿ ತೋರಿದೆಯೆ? ತೋರಿದ್ದರೆ ಯಾರ ಕವಿತೆ?

□ ಕಂಬಾರರ ಕಾವ್ಯದಲ್ಲಿ ಕೊಂಚ "incantation" ಇದೆ.

○ ಕಾವ್ಯ ವೈಯುಕ್ತಿಕ ನೆಲೆಯಲ್ಲಿ ಮೂಡಿಬಂದರೂ ಸಮೂಹಪ್ರಜ್ಞೆಯಲ್ಲಿ ಬೇರು ನೆಟ್ಟಿರುತ್ತದೆ. ಹೀಗಿರುವಾಗ ಕನ್ನಡದ ಇಂದಿನ ಕಾವ್ಯ ಈ ದೃಷ್ಟಿಯಿಂದ ನಿಮಗೆ ತೃಪ್ತಿದಾಯಕವೆನಿಸುತ್ತದೆಯೆ?

□ Individual-Social ಸಂಬಂಧ ಇಂದಿನ ಕನ್ನಡ ಕಾವ್ಯದಲ್ಲಿ ಇದೆಯೋ ಇಲ್ಲವೋ ಗೊತ್ತಾಗುವುದಿಲ್ಲ. ಯಾಕೆಂದರೆ ನಮ್ಮ ಕವಿಗಳು/ಸಾಹಿತಿಗಳು ಯಾವದೋ Western Fashion (ತಾವು ಓದಿದ ಪುಸ್ತಕಗಳಲ್ಲಿ ಸಿಕ್ಕಿದ್ದು) ಗಳನ್ನ ಬರಹಕ್ಕಾಗಿ ಮಾತ್ರ ತೊಟ್ಟುಕೊಂಡು ಯಾತನೆ ಪಡುತ್ತಾರೆ. ಉದಾ: ಅಡಿಗ, ಅನಂತಮೂರ್ತಿ, ಶರ್ಮಾ... ಇತ್ಯಾದಿ 'ದಿಗ್ಗಜ'ಗಳು.

○ ಶಬ್ದಾತೀತ ಸಂಗೀತ ಮತ್ತು ಶಬ್ದಕ್ಕೆ ಕಟ್ಟು ಬಿದ್ದ ಕಾವ್ಯ ಅತ್ಯಂತ ಅರ್ಥಪೂರ್ಣವಾಗಿ ಸಂಧಿಸುವ ನೆಲೆ ಯಾವುದು? ಇಂಥ ನೆಲೆ ಕಾವ್ಯಕ್ಕೆ ದಿವ್ಯ ಶೋಭೆ ಒಂದನ್ನು ತರಬಲ್ಲದೆ?

□ ಈ ಪ್ರಶ್ನೆಗೆ ಬಹಳೇನೂ ಅರ್ಥವಿಲ್ಲ.

ಶಬ್ದಗಳು ಯಾವಾಗಲೂ ಹಾಡುಗಳಲ್ಲಿ ಇವೆ, ಇರುತ್ತವೆ... "ದಿವ್ಯಶೋಭೆ"??

ಎ.ಎನ್.ಮುಕುಂದ

ವೃತ್ತಿ: ಕೆ.ಇ.ಬಿ.ಯಲ್ಲಿ ಇಂಜನಿಯರ್
ಪ್ರವೃತ್ತಿ : ಫೋಟೋಗ್ರಾಫಿ-ಸಾಹಿತ್ಯದ ಓದು

○ ಕಾವ್ಯದ ಓದು ನಿಮಗೆ ದೊರಕುತ್ತಿರುವುದು ಯಾವ ಮಾಧ್ಯಮದ ಮೂಲಕ? (ದಿನ ಪತ್ರಿಕೆ/ ಸಾಹಿತ್ಯಕ ಪತ್ರಿಕೆ/ ಕ್ಯಾಸೆಟ್/ ಚಲನ ಚಿತ್ರ/ಕವನಸಂಕಲನ)

□ ಕವನ ಸಂಕಲನಗಳ ಮೂಲಕ.

○ ಯಾವುದಾದರೂ ಕನ್ನಡ ಕವಿತೆಯನ್ನು ಓದಿದಾಗ ನಿಮಗೆ ಥಕ್ಕನೇ ನಿಮ್ಮ ವೃತ್ತಿ ಅಥವಾ ಪ್ರವೃತ್ತಿಯಲ್ಲಿನ ನಿಮ್ಮ ಅತ್ಯಂತ ಉತ್ಕೃಷ್ಟ ಅನುಭವದ ಬಗೆಗಿನ ಒಳನೋಟಗಳು ದೊರೆತ ಧನ್ಯತೆಯ ಭಾವ ಉಂಟಾದದ್ದಿದೆಯೆ?

□ ಕಾವ್ಯದ ಓದು ಸುಪ್ತವಾಗಿರುವ ನನ್ನ ಪೂರ್ವಜರ ಬಗ್ಗೆಗಿನ ಸ್ಮೃತಿಯನ್ನು ಎಚ್ಚರಿಸಿದೆ; ಒಟ್ಟಾರೆಯಾಗಿ ಲೋಕದ ಬಗ್ಗೆ, ಮನುಷ್ಯನ ಬಗ್ಗೆ ಅತ್ಯಮೂಲ್ಯವಾದ ಒಳನೋಟಗಳನ್ನು ನೀಡಿದೆ; ಹಾಗೂ ವೃತ್ತಿಧರ್ಮವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸುವಂತೆ ಒತ್ತಾಯಿಸಿದೆ. ವೃತ್ತಿ-ಪ್ರವೃತ್ತಿಗಳು ಅಂತಿಮವಾಗಿ ಬದುಕಿನ ಅಂಗಗಳೆ ಆಗಿರುವುದುರಿಂದ, ಸಮಾಜದಲ್ಲಿ ವ್ಯಕ್ತಿ ವಿಶಿಷ್ಟತೆಯನ್ನು ಕಾಪಾಡಿಕೊಳ್ಳುವದರ ಅಗತ್ಯದ ಬಗ್ಗೆ (ಪ್ರಾರ್ಥನೆ-ಅಡಿಗ), ಹಾಗೆಯೇ ಜಗತ್ತಿನ ಒಟ್ಟು ಜೀವರಾಶಿಗಳ ಸಂದರ್ಭದಲ್ಲಿ ವ್ಯಕ್ತಿಯೊಬ್ಬ ಇತರ ವ್ಯಕ್ತಿಗಳಿಗಿಂತ ಅಥವಾ ಇತರ ಜೀವಿಗಳಿಗಿಂತ ಶ್ರೇಷ್ಠನೆಂಬ ಅಹಂಕಾರದಲ್ಲಿ ಭ್ರಮಿಸುವುದರ ವಿರುದ್ಧ ಎಚ್ಚರಿಸುವ ('ಹಕ್ಕಿ ಹಾಡಿತು'.- ಕೆ.ಎಸ್.ನ. ಹಾಗೂ 'ಹಣತೆ ಹಚ್ಚುತ್ತೇನೆ'- ಜಿ.ಎಸ್. ಎಸ್.) ಕಾವ್ಯಗಳು ಸಹಜವಾಗಿಯೇ ನನ್ನ ವೃತ್ತಿ-ಪ್ರವೃತ್ತಿಗಳೆರಡರಲ್ಲೂ ನನ್ನನ್ನು ಅತ್ಯಂತ ಅರ್ಥಪೂರ್ಣವಾಗಿ ತೊಡಗಿಸಿಕೊಳ್ಳುವಂತೆ ಮಾಡಿವೆಯೆಂದಷ್ಟೇ ಹೇಳಬಹುದು.

○ ಇಂದು ಸದ್ಯದಲ್ಲಿ ಬರೆಯುತ್ತಿರುವ ಯಾವ ಯಾವ ಕವಿಗಳು ನಿಮಗೆ ಇಷ್ಟ ? ಯಾಕೆ?

□ ಕಾವ್ಯೋದ್ಯೋಗದ ಬಗ್ಗೆ ತೋರಿಸುತ್ತಿರುವ ಅಸಲಿ ಶ್ರದ್ಧೆಯಿಂದಾಗಿ ಹಿರಿಯರಾದ ಕಂಬಾರ, ಕಣವಿ, ಜಿ. ಎಸ್. ಎಸ್. ಇವರುಗಳಲ್ಲದೆ ಶಿವಪ್ರಕಾಶ್, ಎಚ್.ಎಸ್. ವೆಂಕಟೇಶಮೂರ್ತಿ, ಲಕ್ಷ್ಮಣರಾವ್, ವೈದೇಹಿ ಹಾಗೂ ಸರ್ವಮಂಗಳ ಅವರ ಕವನಗಳನ್ನು ಇಷ್ಟಪಡುತ್ತೇನೆ.

ಡಾ॥ ರಾಜಾರಾಮ ಹೆಗಡೆ

ವೃತ್ತಿ : ಇತಿಹಾಸ ಶಾಸ್ತ್ರದ ಅಧ್ಯಾಪಕರು
ಪ್ರವೃತ್ತಿ : ಸಂಶೋಧನೆ-ಸಂಘಟನೆ

○ ಭಾರತೀಯ ಸಾಮಾಜಿಕ ಸಂದರ್ಭದಲ್ಲಿ ಧರ್ಮವು ಸಡಿಲಗೊಂಡಿರುವುದನ್ನು ಮತ್ತ ಅದೇ ಸಂದರ್ಭದಲ್ಲಿ ಸಂಪೂರ್ಣ ವೈಜ್ಞಾನಿಕ ಮನೋಭಾವವು ಬೆಳೆಯದಿರುವುದನ ಕಾಣುತ್ತೇವೆ. ಇಂಥ ವಿಕ್ಷಿಪ್ತ ಸಂದರ್ಭದಲ್ಲಿ ಸಮಕಾಲೀನ ಕನ್ನಡ ಕಾವ್ಯ ಯಾ ಮೂಲಗಳಿಂದ ಪ್ರೇರಣೆಗಳನ್ನು ಪಡೆಯುತ್ತಿದೆ? ಇಂದು ಬರುತ್ತಿರುವ ಕಾ ಮತ್ತು ನೀವು ಗುರುತಿಸುವ ಪ್ರೇರಣೆಗಳ ನಡುವೆ ಹೇಗೆ ಹೊಂದಾಣಿಕೆಗಳನ ಗುರುತಿಸುತ್ತೀರಿ?

○ ಇಂದಿನ ಕಾವ್ಯ ಜನಸಂಬಂಧಿಯಾಗಿದೆ ಎಂದು ಭಾವಿಸುತ್ತೀರಾ?

○ ಇಂದಿನ ಕನ್ನಡ ಕಾವ್ಯದಲ್ಲಿ ಸಾಮಾಜಿಕತೆ ಕಲಾತ್ಮಕ ಪರಿಪೂರ್ಣತೆಯೊಂದಿ ಅಭಿವ್ಯಕ್ತಗೊಳ್ಳುತ್ತಿದೆ ಎಂದು ಭಾವಿಸುತ್ತೀರಾ?

□ ನಿಮ್ಮ ಪ್ರಶ್ನೆಗಳಿಗೆ ಸಂಬಂಧಿಸಿ ಕೆಲ ಪ್ರಶ್ನೆಗಳಿವೆ. ಅಥವಾ ಸಮಸ್ಯೆಗಳಿವೆ. ಸದ್ಯಕ್ಕೆ ನ ಅಭಿಪ್ರಾಯವಾಗಿ ಅವನ್ನು ಕಳುಹಿಸುತ್ತಿದ್ದೇನೆ. 1) ವೈಜ್ಞಾನಿಕ ಮನೋಭಾ ಧರ್ಮ(Religion)ವನ್ನು ಓಡಿಸುತ್ತದೆ ಎಂಬುದು ತಪ್ಪು ಗ್ರಹಿಕೆ. ಇಲ್ಲಿ ಧರ್ಮ ಎನ್ನುವದ ಶುದ್ಧ ನಂಬಿಕೆ, ವಿಜ್ಞಾನ ಎಂಬುದು ಶುದ್ಧ ವಿಚಾರ; ಒಂದು ಶುದ್ಧರೂಪದಲ್ಲಿ ಇರಬೇಕಾದ ಮತ್ತೊಂದು ಅಸ್ತಿತ್ವದಲ್ಲಿ ಇರಬಾರದು ಎಂಬ ಪೂರ್ವಾಗ್ರಹ ಇದೆ ಎನ್ನಿಸುತ್ತದೆ. ಅದ ಜೊತೆಗೆ ವಿಚಾರ ಎಂಬುದು ನಂಬಿಕೆಯ ವಿರುದ್ಧ ಶಬ್ದ ಎಂಬ ಇಂಗಿತವೂ ಇದೆ. ನನ ವಾಸ್ತವ ಹೀಗಿದೆ ಅನ್ನಿಸುವದಿಲ್ಲ. ಧರ್ಮದಲ್ಲಿ ವಿಚಾರವೂ, ವಿಜ್ಞಾನದಲ್ಲಿ ನಂಬಿಕೆಯ ಕೂಡ ಇರಬಹುದು. ನಾನು ಹೀಗೆ ಹೇಳಿದರೆ ಧರ್ಮದ ಕುರಿತಾಗಲೀ, ವಿಜ್ಞಾನ ಕುರಿತಾಗಲೀ ಮೌಲ್ಯ ಪ್ರತಿಪಾದನೆ ಮಾಡಿದಂತಲ್ಲ. ಏಕೆಂದರೆ ನಂಬಿಕೆ ಮತ್ತು ವಿಚಾರಗ ಮಧ್ಯ ವಿಚಾರ ಶ್ರೇಯಸ್ಕರವಾದುದು, ನಂಬಿಕೆ ಕೆಟ್ಟದ್ದು ಎಂಬ ಪೂರ್ವಾಗ್ರಹವನ ಕಲ್ಪಿಸಿದಾಗ ಧರ್ಮದಲ್ಲಿ ವಿಚಾರ ಇದೆ ಎಂಬ ಹೇಳಿಕೆ ಧರ್ಮದ ವೈಭವೀಕರಣವಾಗಬಹುದ ನನಗೆ ವಿಚಾಲ ಮತ್ತು ನಂಬಿಕೆಗಳ ಕುರಿತೂ ಈ ಸಂಬಂಧಿಸಿ ಗೊಂದಲ ಇದೆ. ಅಂದರೆ ವಿಚಾ ಮತ್ತು ನಂಬಿಕೆ ಇವೆರಡನ್ನು ಈ ಮೇಲಿನಂತೆ ಪ್ರತ್ಯೇಕಿಸುವದು ಸಾಧ್ಯವಿಲ್ಲ. ಹಾಗ ಅವುಗಳಿಗೆ ಸಾಮಾಜಿಕ ಸಂಧರ್ಭಕ್ಕೆ ಅತೀತವಾಗಿ ಒಂದು ಮೌಲ್ಯವನ್ನು ಆರೋಪಿಸುವುದ ಸಾಧ್ಯವಿಲ್ಲ. 'ವೈಚಾರಿಕ' ಎನ್ನುವದನ್ನು ಒಂದು ಸಮಾಜಕ್ಕೆ ಒಳ್ಳೆಯದು, ನ್ಯಾಯಯು ಎಂದು ನಂಬಿಯೇ 'ವಿಚಾರ' ವಾದದ ಮೌಲ್ಯವನ್ನು ಪ್ರತಿಪಾದಿಸಬೇಕಾಗುತ್ತದೆ. ಒಂ ಸಮಕಾಲೀನ ಸಂದರ್ಭದಲ್ಲಿ ಹೊಸ ವೈಚಾರಿಕತೆ ಹೀಗೆ ಹಳೆ ನಂಬಿಕೆಗಳನ್ನು ವೈಚಾರಿಕತೆಯನ್ನು ಸೂಕ್ತವಲ್ಲ ಎಂದು ಹೊಸ ನಂಬಿಕೆಗಳನ್ನು ಸೃಷ್ಟಿಸುತ್ತದೆ. ನಂಬಿ ಇಲ್ಲದೆ ಯಾವ ಸಂಪ್ರದಾಯವೂ ಬೆಳೆಯಲಿಕ್ಕೆ ಸಾಧ್ಯವಿಲ್ಲ. ಅಂದರೆ ಧರ್ಮ ಮತ

ವಿಜ್ಞಾನದ ಮಧ್ಯದ ಘರ್ಷಣೆ ನಂಬಿಕೆ-ನಂಬಿಕೆಯ ಮಧ್ಯದ, ವಿಚಾರ-ವಿಚಾರಗಳ ಮಧ್ಯದ ಘರ್ಷಣೆಯೇ ಹೊರತು ನಂಬಿಕೆ-ವಿಚಾರಗಳ ಮಧ್ಯದ ಕಪ್ಪು-ಬಿಳುಪಿನ ಭೇದ ಅಲ್ಲ ಎಂಬುದು ನನ್ನ ಅಭಿಪ್ರಾಯ.

ಇಂಥ ಘರ್ಷಣೆ ಕೂಡ ಒಂದು ಸ್ವರೂಪದಲ್ಲಿರುತ್ತದೆ ಎಂದು ನಮಗನಿಸುವದಿಲ್ಲ. ಸಾಂದರ್ಭಿಕವಾಗಿರುತ್ತದೆ ಎಂದ್ಧರೇ ಹೆಚ್ಚು ಸರಿ. ಅದಿಲ್ಲದಿದ್ದರೆ ಹಲವಾರು ಧಾರ್ಮಿಕ-ವೈಜ್ಞಾನಿಕ ನಂಬಿಕೆಗಳೆಲ್ಲ ಒಟ್ಟಾಗಿಯೇ ಕ್ರಿಯೆಯಲ್ಲಿ ಕಾಣಿಸಿಕೊಳ್ಳಬಹುದು. ಇದು ಬಹುಶಃ ನಮ್ಮ ಸಮಾಜದಲ್ಲಿ ಯಾವಾಗಲೂ ಇದ್ದ ಸಮಸ್ಯೆಯೇ. ಆಧುನಿಕ ಕಾಲದಲ್ಲಿ ತೀವ್ರವಾಗಿರಬಹುದು. ಈಗ ಸಧ್ಯದಲ್ಲಿ ಇವುಗಳಿಗೆಲ್ಲ ರಾಜಕೀಯ ಆಯಾಮ ಬಂದಿದ್ದರಿಂದ ಕೂಡ ಹಾಗೆ ಕಾಣಿಸಬಹುದು. ಧರ್ಮ-ವಿಜ್ಞಾನದ ಮಧ್ಯೆ ರಾಷ್ಟ್ರೀಯವಾದಿ- ವಸಾಹತುವಾದೀ ರಾಜಕೀಯಗಳಿವೆ. ಕೋಮುವಾದಿ- ಧರ್ಮನಿರಪೇಕ್ಷವಾದೀ ರಾಜಕೀಯವೂ ಇದೆ. ಆದರೆ ನಿಜವಾಗಿ ಅದು ಹಾಗಿಲ್ಲ. ಏನಾದರೂ 'ವಿಕ್ಷಿಪ್ತತೆ' ಇದ್ದರೆ ಇದೇ. ಬಹುಶಃ ಒಬ್ಬ ಕವಿಗೆ ವಯಕ್ತಿಕ ನೆಲೆಯಲ್ಲಿ ಹೇಗೆ ಈ ಘಷಣೆ ಪ್ರಸ್ತುತವಾಗುತ್ತದೆ ಎಂಬುದು ಕಾವ್ಯದ ಸಂದರ್ಭದಲ್ಲಿ ಮುಖ್ಯ. ಎಂದರೆ ಸಂಪದ್ರಾಯ ಕುರಿತು ಕವಿಯ ಆಧುನಿಕತೆ ಅಥವಾ ಆಧುನಿಕತೆಯ ಕುರಿತು ಕವಿಯ ಸಂಪ್ರದಾಯ ಯಾವ ದೃಷ್ಟಿಯನ್ನು ತಳೆಯಬೇಕು ಎಂಬ ಸಮಸ್ಯೆ. ಸಂಪ್ರದಾಯ ಮತ್ತು ಆಧುನಿಕತೆಯ ಕುರಿತು ಅವುಗಳ ಹೊರಗೆ ನಿಂತು ಒಂದು ನಿರ್ವಿಕಲ್ಪ ನಿಲುವು ತಳೆಯುತ್ತೇನೆ ಎಂಬುದು ಕೂಡ ಕವಿಯ ಮಧ್ಯವರ್ತಿ ಆಯ್ಕೆಯೇ ಆಗುತ್ತದೆ. ಇದನ್ನು ಪ್ರತ್ಯೇಕ ಕವಿಯ ಸಂದರ್ಭದಲ್ಲಿ ಪ್ರತ್ಯೇಕವಾಗಿಯೇ ವಿಶ್ಲೇಷಿಸಬಹುದೇ ಹೊರತು ಸಾಮಾನ್ಯೀಕರಣ ಮಾಡುವದು ಯಥಾರ್ಥವಾಗುತ್ತದೆ ಎಂಬ ನಂಬಿಕೆ ನನಗಿಲ್ಲ. ಸಾಮಾನ್ಯೀಕರಣ ಮಾಡುವದಾದರೆ ಒಂದು 'ಹೆಜೆಮಾನಿಕ್' ಸಂಪ್ರದಾಯವನ್ನೇ ಪ್ರಾತಿನಿಧಿಕವಾಗಿ 'ಸತ್ವ' ಎಂದು ತಿಳಿದು ಮಾಡಬೇಕಾಗುತ್ತದೆ.

ಜಿ.ಎನ್. ಮಲ್ಲಿಕಾರ್ಜುನಪ್ಪ

ವೃತ್ತಿ : ವಾಣಿಜ್ಯ ಶಾಸ್ತ್ರದ ಅಧ್ಯಾಪಕರು
ಪ್ರವೃತ್ತಿ : ಸಂಘಟನೆ-ಸಾಹಿತ್ಯ

○ ಕಾವ್ಯ ವೈಯುಕ್ತಿಕ ನೆಲೆಯಲ್ಲಿ ಮೂಡಿಬಂದರೂ ಸಮೂಹ ಪ್ರಜ್ಞೆಯಲ್ಲಿ ಬೇರು ನೆಟ್ಟಿರುತ್ತದೆ. ಹೀಗಿರುವಾಗ ಕನ್ನಡದ ಇಂದಿನ ಕಾವ್ಯ ಈ ದೃಷ್ಟಿಯಿಂದ ನಿಮಗೆ ತೃಪ್ತಿದಾಯಕ ಎನಿಸುತ್ತಿದೆಯೆ?

□ ವೈಯುಕ್ತಿಕ ಬದುಕು ಸಾಮೂಹಿಕ ಚಟುವಟಿಕೆಗಳ ಪ್ರಭಾವಕ್ಕೊಳಪಟ್ಟೇ ರೂಪಿತವಾಗುವುದರಿಂದ ವೈಯುಕ್ತಿಕ ಗ್ರಹಿಕೆಗಳು ಸೂಕ್ಷ್ಮವಾಗಿ ಮೂಲತಃ ಸಾಮೂಹಿಕ ಗ್ರಹಿಕೆಗಳೇ ಆಗಿರುತ್ತವೆ. ವೈಯುಕ್ತಿಕ ನೆಲೆಯಲ್ಲಿ ಮೂಡಿದ ಅನುಭವಗಳನ್ನು ಸಾಮೂಹಿಕ ನೆಲೆಯವರೆಗೆ ಹಿಗ್ಗಿಸುವ ಅಥವಾ ಬೆಳೆಸುವ ಕ್ರಿಯೆಯೇ ಕಾವ್ಯ ಸೃಷ್ಟಿಯ ಸಂದರ್ಭದಲ್ಲಿ ಒಂದು ಸವಾಲು. ಕನ್ನಡದ ಇತ್ತೀಚಿನ ಕಾವ್ಯ ಕಲಾತ್ಮಕತೆಯ ಇಂಥ ಕೊರತೆಯಿಂದಾಗಿ ಸೊರಗುತ್ತಿದೆ ಎನಿಸುತ್ತೆ.

○ ಕನ್ನಡ ಕಾವ್ಯಕ್ಕೆ ಧರ್ಮದ ಪ್ರೇರಣೆಗಳು ದೊರಕಿದ ಇತಿಹಾಸವಿದೆ. ಆದರೆ ಇಂದು ಧರ್ಮ ಎನ್ನುವದು ಜಾತೀಯ ನೆಲೆಗಳಿಗೆ ವಿಘಟನೆಹೊಂದಿ ನಿಂತಿರುವಾಗ ಅದು ಕಾವ್ಯಕ್ಕೆ ಪ್ರೇರಣೆ ನೀಡಲಾರದಲ್ಲವೆ? ಕಾವ್ಯವನ್ನು ಕೊಲ್ಲುವ ಟೆಕ್ನಾಲಜಿಯ ರುಕ್ಷತೆಯ ಸಂದರ್ಭದಲ್ಲಿ ಧಾರ್ಮಿಕತೆಯಂತಹದರ ಪ್ರೇರಣೆಗಳು ಅವಶ್ಯವಾಗಿರುವುದಲ್ಲವೆ? ಇಂಥ crisis ಗೆ ಏನಾದರೂ ಪರಿಹಾರಗಳು ನಿಮಗೆ ತೋರುತ್ತವೆಯೆ?

□ ಕನ್ನಡದ ಎಲ್ಲಾ ಕಾವ್ಯಗಳಿಗೆ ಧರ್ಮದ ಪ್ರೇರಣೆ ಇದೆ ಎಂದು ತೋರುವುದಿಲ್ಲ ಅಲ್ಲವೆ? Non metaphysical values ಅಥವಾ events ಗಳೂ ಕಾವ್ಯ ಸೃಷ್ಟಿಗೆ ಪ್ರೇರಕವಾಗಿವೆ. ತುಂಬಾ ಮಾನವೀಯವಾಗಿದ್ದಂತಹ ಧರ್ಮ ಇಂದು ಸ್ಥಾಪಿತ ಹಿತಾಸಕ್ತಿಗಳ ಕಪಿಮುಷ್ಟಿಯಲ್ಲಿ ಸೇರಿ ಜಡವಾಗಿದೆ, ಜೀವ ವಿರೋಧೀ ನಿಲುವು ತಳೆದಿದೆ. ಧರ್ಮದ ಈ ನೇತ್ಯಾತ್ಮಕ ಪರಿಣಾಮಗಳೇ ಸೃಜನಶೀಲ ಮನಸ್ಸುಗಳಿಗೆ ಸಾಹಿತ್ಯಕ ಪ್ರೇರಣೆಗಳನ್ನು ನೀಡಬಹುದು. ಇದಲ್ಲದೆ ನಿಮ್ಮ ಅನಿಸಿಕೆಯಂತೆ ಟೆಕ್ನಾಲಜಿಯ ಇಂದಿನ ಅಸಮಂಜಸ ಅಭಿವೃದ್ಧಿ ಮತ್ತು ಬಳಕೆಯೇ ಇವತ್ತಿನ ಎಲ್ಲಾ ದುಷ್ಪರಿಣಾಮಗಳಿಗೆ (ಪರಿಸರ ಮಾಲಿನ್ಯ-ಡಂಕೆಲ್ ಒಡಂಬಡಿಕೆ ಇವೆಲ್ಲವುಗಳೂ ಸೇರಿದಂತೆ) ಕಾರಣ. Metaphysical values ಈ ಪರಿಸ್ಥಿತಿಗೆ ತಕ್ಕ ಪರಿಹಾರಗಳಾಗಬಹುದೇನೋ?

○ ಕನ್ನಡದ ಇಂಧಿನ ಕಾವ್ಯ ಜನಸಂಬಂಧಿಯಾಗಿ (functional) ಇದೆ ಎಂದು ನಿಮಗೆ ಅನಿಸುತ್ತದೆಯೇ?

□ ವಸ್ತುವಿನ ದೃಷ್ಟಿಯಿಂದ ಇಂದಿನ ಕನ್ನಡದ ಕಾವ್ಯ ಜನಸಂಬಂಧಿಯಾಗಿದೆ ಎನ್ನುವುದರ ಬಗ್ಗೆ ನನಗೆ ಅನುಮಾನವೇನೂ ಇಲ್ಲ.

ಎಂ.ಜಿ. ಎಸ್. ಶಾಸ್ತ್ರಿ

ವೃತ್ತಿ : ಪೋಸ್ಟ್ ಮಾಸ್ಟರ್
ಪ್ರವೃತ್ತಿ : ಖುಶಿಕೊಡುವ ಓದು

○ ಕಾವ್ಯದ ಓದು ನಿಮಗೆ ದೊರಕುತ್ತಿರುವುದು ಯಾವ ಮಾಧ್ಯಮದ ಮೂಲಕ?

□ ನೀವೇ ಬರೆದಂತೆ ಪತ್ರಿಕೆ, ಚಿತ್ರ ಕವನ, ಕ್ಯಾಸೆಟ್ ಇತ್ಯಾದಿ ಮಾಧ್ಯಮಗಳಲ್ಲಿ. ಎಲ್ಲಾ ಮಾಧ್ಯಮಗಳು ಸಕ್ರಿಯವಾಗಿ ಬೆಳೆಯುತ್ತಾ ಆಸಕ್ತಿಗಳನ್ನು ಬೆಳೆಸುತ್ತಿವೆ. ನನ್ನ ಪ್ರಕಾರ ಓದು ಜ್ಞಾನಕ್ಕಾಗಿಯೋ ಅಥವಾ ಬದುಕಿನ ನೈಜ ತುಡಿತವೋ ಎಂಬ ಅಂಶದಿಂದ ಈ ಮಾಧ್ಯಮಗಳು ಪ್ರಸ್ತುತ ಅಪ್ರಸುತ್ತ ಎನಿಸುತ್ತವೆ. ನೈಜ ತುಡಿತವಿರುವ, ಓದು ಬರೆಯಲು ಬಾರದ ಹಳ್ಳಿಯ ಒಬ್ಬ ಸಾಧಾರಣ ಮನುಷ್ಯನಲ್ಲಿ ಅಸಾಧಾರಣ ಕಾವ್ಯ ಗುಣಗಳನ್ನು ಸಾಹಿತ್ಯ ಸತ್ವವನ್ನು ಕಂಡಿರುವೆ. ಹಾಗಾಗಿ ಈ ಮಾಧ್ಯಮಗಳು ಸಾಧಾರಣವಾಗಿ ಜ್ಞಾನ ದಾಹವನ್ನು ಸ್ವಲ್ಪಮಟ್ಟಿಗೆ ತಣಿಸಿ ಚಿಗುರುತ್ತಿರುವ ಬದುಕಿನ ಕುರಿತಾದ ಆಸಕ್ತಿಗೆ ರೂಪ ಕೊಡಬಲ್ಲವು. ನನ್ನ ಪ್ರಕಾರ ಬದುಕೆಂಬ ಕಾವ್ಯಕ್ಕೆ ಬೆಳಗಿನಿಂದ ಸಂಜೆಯುತನಕದ ದಿನಚರಿಯ ಎಲ್ಲವೂ ಕಾವ್ಯದ ಓದಾಗಬಲ್ಲದು. ನೋಡುವ ಕಣ್ಣು ಮಾತ್ರ ಸದಾ ತೆರೆದಿರಬೇಕು. ಇನ್ನು ಪ್ರಶ್ನೆಗೆ ಉತ್ತರ

ಎಂಬಂತೆ ದೈನಿಕ ಪತ್ರಿಕೆಗಳು ಉದಾ: ಕನ್ನಡ ಪ್ರಭದಲ್ಲಿ ವೈ.ಎನ್.ಕೆ. ಬಂದ ನಂತರ ಪ್ರಾರಂಭ ಆದ ಸಾಹಿತ್ಯ ಲೋಕ ಹಲವಾರು ರೀತಿಯಲ್ಲಿ ನನ್ನಂತಹ ಹಲವಾರು ಮಂದಿಗೆ ಹೊಸ ಹೊಸ ಪುಸ್ತಕಗಳ ಪರಿಚಯ ಮಾಡಿಸಿದೆ. ಹಾಗೆ ವಾರ ಪತ್ರಿಕೆಗಳು ಕೂಡ ತುಂಬಾ ಪರಿಣಾಮ ಕಾರಿಯಾಗಿ ಈ ಕೆಲಸ ಮಾಡುತ್ತಿವೆ. ನನಗೆ 'ಕಾವ್ಯದ ಓದು' ದೊರೆಯುತ್ತಿರುವುದು ನನ್ನ ಒಳಗಿನ ಸಂವಾದ ನಿರಂತರ ಕ್ರಿಯೆ ಆದುದರಿಂದ ಬದುಕಿನ ಎಲ್ಲ ಅಂಶಗಳಿಂದ.

○ ಇಂದಿನ ಕನ್ನಡ ಕಾವ್ಯದ ಬಗ್ಗೆ ಉತ್ಸಾಹ? ಏಕೆ? ಹೇಗೆ?

□ ಈ ಪ್ರಶ್ನೆಯನ್ನು ಪುನಃ ನನ್ನಂತಹ ಸಾಮಾನ್ಯ ವ್ಯಕ್ತಿ ಹೇಗೆ ಉತ್ತರಿಸಿದ್ರು, ಪ್ರಶ್ನೋತ್ತರ ಮಾತ್ರವಾಗುತ್ತದೆ. ಪಾಶ್ಚಿಮಾತ್ಯ ಸಾಹಿತ್ಯವನ್ನು ಅಲ್ಪ ಸ್ವಲ್ಪ ಓದಿ ಅದರ ಹಿನ್ನಲೆಯಲ್ಲಿ ಈ ಪ್ರಶ್ನೆಯನ್ನು ಕೇಳಿಕೊಂಡಾಗ, ವಿಶ್ವದ ಸಾಹಿತ್ಯಗಳನ್ನು ಓದಿ ಅವರ ಜಾಡಿನಲ್ಲಿ ನಮ್ಮ ಪರಂಪರೆ ದಿನದಿಂದ ದಿನಕ್ಕೆ ವಿಶಾಲವಾಗುತ್ತ ಹೋಗಲು ಸಹಕರಿಸುತ್ತಿರುವ ಕನ್ನಡ ನಾಡಿನ ಸಾಹಿತ್ಯ ದಿಗ್ಗಜಗಳ ಕುರಿತು ನನಗೆ ಸದಾ ಹೆಮ್ಮೆ ಹಾಗೂ ಅಭಿಮಾನವಿದೆ. ಆ ಕುರಿತು ಉತ್ಸಾಹವಿದೆ.

○ ಇಂದಿನ ಸಾಮಾಜಿಕ ಸಂದರ್ಭದಲ್ಲಿ ಕನ್ನಡ ಕವಿತೆ ತನ್ನ ಸಾಮಾಜಿಕ ಜವಾಬ್ದಾರಿಯನ್ನು ನಿರ್ವಹಿಸುತ್ತಿದೆ ಎಂದು ಭಾವಿಸುತ್ತೀರಾ? ಹೇಗೆ? ಏಕೆ?

□ ಯಾವುದೇ ಜವಾಬ್ದಾರಿಯುತ ಕೆಲಸಕ್ಕೆ ಖಂಡಿತಾ ಜವಾಬ್ದಾರಿಯುತ ಪ್ರತಿಕ್ರಿಯೆ ಲಭ್ಯ. ಹೆಸರಿಗಾಗಿ, ಸಾಹಿತ್ಯಕ್ಕಾಗಿ ಸಾಹಿತ್ಯ, ದುಡ್ಡಿಗಾಗಿ ಸಾಹಿತ್ಯ ಎಂಬಂಶವನ್ನು ಹೊರತುಪಡಿಸಿ ಹರಿಯುವ ನದಿಯಂತೆ ನೈಜವಾಗಿ ಪ್ರವಹಿಸುವ ಸಾಹಿತ್ಯ ವಿಚಾರಧಾರೆ ಮಾಧ್ಯಮಗಳ ಮೂಲಕ ಖಂಡಿತ ಹೊಸ ದಿಶೆಯಲ್ಲಿ ಸಾಗುತ್ತಿದೆ. ಕೃಷಿಗೆ ಸಂಬಂಧಿಸಿದಂತೆ, ಮನೋವಿಜ್ಞಾನಕ್ಕೆ ಸಂಬಂಧಿಸಿದಂತೆ ಎಲ್ಲ ರಂಗಗಳಲ್ಲಿನ "ಬುದ್ಧಿ ಜೀವಿಗಳು" ಎಂಬ ಹಣೆ ಪಟ್ಟಿಯ ಹೊರತಾಗಿಯು ಕನ್ನಡ ಕವಿತೆಗಳು ಬದುಕಿಗೆ ತೀರಾ ಹತ್ತಿರವಾಗಿ ಮನಸ್ಸಿಗೆ ಮುದ ನೀಡಿ ಬದುಕನ್ನ ಅಲ್ಲಲ್ಲಿ ಚಿಗುರಿಸುತ್ತಿರುವುದು ಸತ್ಯ. ಬೇಂದ್ರೆಯವರ ಪದ್ಯವೊಂದು ಚಲನ ಚಿತ್ರ ಮಾಧ್ಯಮದ ಮೂಲಕ (ನೀ ಹಿಂಗ ನೋಡಬೇಡ ನನ್ನಾ) ಬಂದು ರೇಡಿಯೊದಲ್ಲಿ ಪ್ರಸಾರವಾದಾಗ ಆ ಐದು ನಿಮಿಷ ಸಾಕಷ್ಟು ಜೀವಿಗಳ ತುಡಿತವನ್ನು ಸೇರಿ ಅದರದೇ ಆದ ರೀತಿಯಲ್ಲಿ ಕಂಪನಗಳನ್ನು ಉಂಟು ಮಾಡುತ್ತದೆ. ಒಳಗಿನ ತುಡಿತಕ್ಕೆ ಹತ್ತಿರವಾಗುವ ಈ ಕ್ರಿಯೆಗಳು ತನ್ನದೇ ಆದ ರೀತಿಯಲ್ಲಿ ಮನಸ್ಸನ್ನು ಹಗುರಾಗಿಸಿ ಬದುಕಿಗೆ ನೆರವಾಗುತ್ತದೆ.

○ ಕನ್ನಡದ ಇಂದಿನ ಕವಿತೆ ಜನಸಂಬಂಧಿಯಾಗಿ ಸಂವಹನಶೀಲವಾಗಿದೆ ಎಂದು ಭಾವಿಸುತ್ತೀರಾ?

□ ಸಾಮಾಜಿಕವಾಗಿ ದಿನದಿಂದ ದಿನಕ್ಕೆ ಸಂಕೀರ್ಣವಾಗುತ್ತಿರುವ ಆರ್ಥಿಕ ಸಾಮಾಜಿಕ

ಹಿನ್ನೆಲೆಗಳನ್ನು ಅನುಸರಿಸಿ ಇದು ಏರುಪೇರಾಗುತ್ತಿರುತ್ತದೆ. ಬದುಕಿನ ಕುರಿತಾದ, ದೈನಂದಿನ ಬದುಕಿಗೆ ಆದ್ಯತೆ ನೀಡಿ, ಬದುಕಿನ ಸಂಕೀರ್ಣತೆಗಳಿಗೆ ಸುಲಭ ರೀತಿಯ ಶಾಂತಿ ಕೊಡಬಲ್ಲ ಸತ್ತ್ವಯುತ ಬರಹಗಳು ಕವಿತೆಗಳು ಎಲ್ಲಾ ಕಾಲದಲ್ಲಿ ಬಾಳಿ ಬದುಕಿವೆ, ಇಂದೂ ಕೂಡ. ಜೊಳ್ಳು ಸಾಹಿತ್ಯ ತಂತಾನೆ ತೂರಿ ಹೋಗಿ ಉಳಿದೆಲ್ಲವೂ ಸಂವೇದನಶೀಲ ವಾಗಿರುವಾಗ ಅದು ಮಲ್ಲಿಗೆಯಂತೆ ಇಂದೂ ಪಸರಿಸುತ್ತದೆ ಎಂದು ಭಾವಿಸಿರುವೆ. ಇನ್ನು ಸಂವಹನಶೀಲವಾಗಿದೆ ಅಥವಾ ಇಲ್ಲ ಎಂದು ನಿರ್ಧರಿಸಲು ಆ ಚೌಕಟ್ಟಿನಲ್ಲಿ ನಿಂತು ನೋಡುವದಕ್ಕಿಂತ ಬದುಕಿನ ಎಲ್ಲ ಸ್ತರಗಳಲ್ಲಿ ಅದು ಉಂಟು ಮಾಡುವ ಅಲೆಯನ್ನು ನೋಡಿಯೇ ಅಳೆಯಬೇಕು. ಸಂವೇದನಾಶೀಲವಾದ ಎಲ್ಲವೂ ಸಂವಹನಶೀಲ ವಾಗುವುದಕ್ಕೆ ಖಂಡಿತ ಪೂರ್ತಿ ಅವಕಾಶವಿದೆ. ಆ ದಿಶೆಯಲ್ಲಿ ಸರ್ಕಾರ ಮತ್ತು ಆ ನಿಟ್ಟಿನಲ್ಲಿ ಸ್ಥಾಪಿತವಾದ ಎಲ್ಲ ಸಂಸ್ಥೆಗಳ ಹಾಗೂ ಹಿತಾಸಕ್ತಿಗಳ ಜವಾಬ್ದಾರಿಯ ಕಾಣಿಕೆಯನ್ನು ಅದು ಅವಲಂಬಿಸುತ್ತದೆ.

○ ಇಂದು ಬರೆಯುತ್ತಿರುವ ಯಾವ ಯಾವ ಕವಿಗಳು ಇಷ್ಟ? ಯಾಕೆ ?

□ ನಾನೊಬ್ಬ ಪೂರ್ಣ ಪ್ರಮಾಣದ ಓದುಗನಲ್ಲ. ಹಾಗಾಗಿ ಹೆಸರಿಸಿ ಪಟ್ಟಿ ಮಾಡುವ ಶಕ್ತಿ. ನನಗಿಲ್ಲ. ಆದರೆ ಈ ಮಿತಿಯಲ್ಲಿ ಕೂಡ ನನ್ನನ್ನು ಆಕರ್ಷಿಸಿದ ಕವಿಗಳು ಪ್ರಪಂಚವೆಲ್ಲ ಕೊಂಡಾಡುವ ಅಗ್ರಗಣ್ಯರ ಹೊರತಾಗಿ, ತಾವೋ ಪದ್ಯಗಳನ್ನು ಕನ್ನಡಕ್ಕೆ ಅನುವಾದಿಸಿದ ಮಂಜುನಾಥ, ಸಿದ್ಧಲಿಂಗಯ್ಯ ಮುಂತಾದ ಉತ್ಸಾಹೀ ತರುಣ ಧ್ವನಿ ನನಗೆ ತೀರ ಸಮೀಪವಾಗಿ ನನ್ನಲ್ಲಿ ಆ ಕುರಿತು ಆತ್ಮೀಯತೆಯನ್ನು ಬೆಳಸುತ್ತಿದೆ. ಯಾಕೆಂದರೆ ಯಾವುದೇ ಕಾವ್ಯ ಅದು ಪೂರ್ಣ ಪ್ರಮಾಣದ "involvement" ಇಲ್ಲದೆ ಅರಳಲಾರದು. ಬದುಕಿಗೆ ಹತ್ತಿರವಾಗಿ ಬದುಕಿಗೆ ಸಂಬಂಧಿಸಿದ ‘‘ಇಹ’’ದ ಕುರಿತಾದ ಬದುಕಿನ ಸಂಕೀರ್ಣತೆಯನ್ನು ಬಿಚ್ಚಿಡಲು ಹೊರಡುವ ಪ್ರಯತ್ನ ಮತ್ತು ಓದುಗನನ್ನು ತಿಳಿಯಾಗಿಸಿ ಈ ನಿರಂತರ ಪ್ರವಾಹದಲ್ಲಿ ಸಾಗಲು ಸಹಕಾರಿಯಾಗುವ ತಾವೊ ಪದ್ಯಗಳ ಅಂತರಾಳವನ್ನು ಅರಿಯಲು ತನ್ನ ಅಂತರಾಳದಲ್ಲಿ ತಿದ್ದಿ ತೀಡಿ ಸರಳವಾಗಿ ಮನ ಮುಟ್ಟುವ ಸುಲಲಿತವಾದ ಶೈಲಿಯನ್ನು ಹೊಮ್ಮಿಸಿದ ಮಂಜುನಾಥರ ಪದ್ಯ ಸದಾ ಮೆಲುಕಾಡಲು ಯೋಗ್ಯವಾಗಿದೆ. ■

ಾವ್ಯಮಾಧ್ಯಮನಾದ ಕವಿ

ಜಗವೆ ದೇವತನುವೆಂದು ಮಣಿದೆ ನೀನೇನು ನಿನ್ನ ಮತಿಯು
ರತಿಯು ನಿನ್ನ ರಸದಲ್ಲಿ ನಾಂದು ಆಗಿಹಳು ಮುಕ್ತಿ ಸತಿಯು ॥
ಭಕ್ತಿ ನೀನು ಅನುರಕ್ತದಿವ್ಯದಲಿ ಉಳಿದ ಕಣ್ಣು ಭವಿಯು
ಎಲ್ಲಕಡೆಗೆ ಚೈತನ್ಯ ಲೀಲೆ ಕಂಡವನೆ ನೀನೆ ಕವಿಯು ॥
– ಅಂಬಿಕಾತನಯದತ್ತ

ಇಂದಿನ ಒಟ್ಟು ಸಂದರ್ಭದಲ್ಲಿ ಕವಿತೆರಚಿಸುತ್ತಿರುವ ನೀವು, ಕಾವ್ಯದ ಜನಸಂಬಂಧಿತ್ವ (functional ಗುಣ) Anxiety of influence.... ಇವುಗಳೆಲ್ಲ ಸೇರಿದಂತೆ ಸೃಜನಶೀಲನೆಲೆಯಲ್ಲಿ ಎದುರಿಸುತ್ತಿರುವ ಸವಾಲುಗಳೇನು?

ಈ ಪ್ರಶ್ನೆಯನ್ನು ಕುರಿತಂತೆ ಕವಿಗಳು ವ್ಯಕ್ತಿಪಡಿಸಿದ ವೈವಿಧ್ಯದ ಅಭಿಪ್ರಾಯಗಳ ವರ್ಣಪಟ್ಟಿಕೆ ಇಲ್ಲಿದೆ.

ಯಾವ ರೂಟ್ಸ್..? ಯಾರು ಅನುಮೋದಿಸುತ್ತಿರುವ ಸಂವಹನಶೀಲತೆ?

– ಡಾ॥ ಕೆ.ವಿ. ತಿರುಮಲೇಶ್

ಸಾಹಿತ್ಯ, ವಿಜ್ಞಾನ, ಸಮಾಜ ವಿಜ್ಞಾನ, ತತ್ವ ಜ್ಞಾನ ಇವೆಲ್ಲದರ ಕುರಿತ ನಮ್ಮ ಪರಿಕಲ್ಪನೆಗಳು ಆಘಾತಕ್ಕೆ ಒಳಗಾಗಿರುವ ಸಂದರ್ಭದಲ್ಲಿ ನಾನು ಎದುರಿಸುತ್ತಿರುವ ಸವಾಲುಗಳ ಬಗ್ಗೆ ಬರೆಯಲು ಹೇಳಿದ್ದೀರಿ. ಕೃತಿಯ ಬಗೆಗಿನ ಸಂಬಂಧದ ಬಗ್ಗೆ ಕೇಳದೆ ಇದ್ದುದು ಒಳ್ಳೇದೇ ಆಯಿತು. ಯಾಕೆಂದರೆ ಇಲ್ಲಿ ಫೂಕೊ, ಬಾರ್ತ್ ಮುಂತಾದ ಫ್ರೆಂಚ್ ವಿಮರ್ಶಕರೂ ಅಮೇರಿಕನ್ ಪೋಸ್ಟ್ ಸ್ಟ್ರಕ್ಚರಿಸ್ಟರೂ ಸಾಕಷ್ಟು ಹೇಳಿರೋದನ್ನೇ ಹೇಳಬೇಕಾಗುತ್ತೆ. ಆದರೆ ನೀವು ಕೇಳಿದ್ದು ಬರಹಗಾರನ ಸಮಸ್ಯೆಗಳ ಬಗ್ಗೆ–ಇದರಲ್ಲಿ ಕಾವ್ಯದ ಜನಸಂಬಂಧತ್ವ, ಸಂವಹನಶೀಲತೆ, ಪ್ರಭಾವದ ಭೀತಿ ಇತ್ಯಾದಿ ಪದಗಳನ್ನು ಬಳಸಿದ್ದೀರಿ. ಇವೆಲ್ಲ ಕೆಲವು ವರ್ಷಗಳಿಂದ ಕನ್ನಡದಲ್ಲಿ ಚಾಲ್ತಿಯಲ್ಲಿರುವ ನಾಣ್ಯಗಳು–ಒಂದೊಂದಕ್ಕೂ ಒಂದೊಂದು ಬೆಲೆ, ಒಂದೊಂದು ಅರ್ಥ.

ಪ್ರಭಾವದ ಭೀತಿಯ ಬಗ್ಗೆ ಹೇಳುವುದಾದರೆ ಇದು, ಎಂದರೆ ಈ ಭೀತಿ, ಸ್ವಲ್ಪ ಹಳೆ ಪ್ರಣಾಳಿಕೆಗೆ ಸಂಬಂಧಿಸಿದ್ದು. ಮನುಷ್ಯನ ವ್ಯಕ್ತಿತ್ವವೆಂದರೆ ಅದೊಂದು ಇಡಿಯ ಸಮಗ್ರ ಘಟಕವೆಂದೂ, ಸೃಷ್ಟಿಕ್ರಿಯೆಯೆಂದರೆ ಇತರ ಯಾರೂ ಇದುವರೆವಿಗೆ ಮಾಡದ ಅದ್ಭುತವೊಂದನ್ನು ನಿರ್ಮಿಸುವುದೆಂದೂ ತಿಳಿದ ಕಾಲದ್ದು. ಈ ವಿಚಾರಗಳೆಲ್ಲ ಇವತ್ತು ಅದಲುಬದಲಾಗಿರೋದರಿಂದ ಪ್ರಭಾವದ ಕುರಿತು ಯಾರೂ ಭಯಪಡಬೇಕಾದ್ದಿಲ್ಲ. ಹಾಗಿದ್ದರೂ ಕೇವಲ ಇಮಿಟೇಶನ್ ಅಂತ ಅನಿಸಿದಾಗ ಯಾಕೆ ನಮ್ಮ ಪ್ರತಿಕ್ರಿಯೆ ನೆಗೆಟಿವ್ ಆಗತ್ತೆ ಅನ್ನೋದರ ಬಗ್ಗೆ ಆಲೋಚಿಸಬೇಕಾಗುತ್ತೆ. ನಾನೂ ತಲೆಕೆಡಿಸಿಕೊಳ್ಳುತ್ತೇನೆ– ಅದಕ್ಕೆಂದೇ ಇತರ ಯಾವುದೇ ಬರಹಗಳನ್ನು ಓದದೆ ಇರೋದಾಗಲಿ, ಪ್ರಯತ್ನಪೂರ್ವಕವಾಗಿ ಏನೇನೋ ಕಸರತ್ತುಗಳನ್ನು ಮಾಡುವುದಾಗಲಿ ಸರಿಯಲ್ಲವೆಂದು ನನಗನಿಸುತ್ತದೆ. ನನ್ನ ಅನಿಸಿಕೆಗಳೆಲ್ಲ ನನ್ನ ಕೃತಿಗಳಲ್ಲಿ ಪದರೂಪವಾಗಿ ಬರುತ್ತವೆ ಅನ್ನೋ ಧೈರ್ಯ ಮಾತ್ರ ನನಗಿಲ್ಲ. ಆದ ಕಾರಣ ನಾನಿಲ್ಲಿ ಏನು ಹೇಳುತ್ತೇನೋ ಅದು ನನ್ನ ಕವಿತೆಗಳನ್ನು ಓದೋವಾಗ ಹೇಗೆ ಉಪಯೋಗವಾಗ್ತವೆ ಅನ್ನುವುದು ಕಷ್ಟ.

ಒಂದು ರೀತಿಯ ಕಲ್ಚರಲ್ ರಿವೈವಲಿಸಮ್ ಕಂಡುಬರ್ತಾ ಇದೆ. ಇದು ಪೋಸ್ಟ್‌ಕೊಲೋನಿಯಲ್ ಕಮಿಟ್‌ಮೆಂಟ್ ಅಂತ ಹಲವರು ತಿಳಿದುಕೊಂಡಿದ್ದಾರೆ. ನಮ್ಮ ಹಳೆ ಕಾವ್ಯಗಳು ಹೇಗಿದ್ದವು, ಪಂಥಗಳು ಏನು ಮಾಡಿದುವು ಎಂದು ಪುನರ್ನಿರೂಪಣೆ ಮಾಡ್ತಿದ್ದಾರೆ. ನಮ್ಮ ರೂಟ್ಸಿಗೆ ವಾಪಸಾಗಬೇಕು ಅಂತ ಹೇಳ್ತಿದಾರೆ. ಈ ಕಲ್ಚರಲ್ ಇಂಪರೇಟಿವ್ ನನಗೆಷ್ಟು ಸುಳ್ಳಾಗಿ ಅನಿಸಿದೆಯೆಂದರೆ ಇದರಲ್ಲಿ ಒಂತರದ ಬ್ಯಾಡ್ ಫೈತ್ ಇರೋಹಾಗೆ ಕಾಣಿಸ್ತದೆ. ಯಾಕೆಂಧ್ರೆ ಯಾರು ಹೀಗೆ ದೊಡ್ಡದಾಗಿ ಮಾತಾಡ್ತಾರೆ ಅವರೇ ಬೇರೆ ಕಲ್ಚರುಗಳು ಒದಗಿಸುವ ಪ್ರಣಾಳಿಕೆಗೆ ಹಾತೊರೆದು ಕೂತವರು. ಈ ಬ್ಯಾಕ್ ಟು ದಿ ರೂಟ್ಸ್ ಈ ಪೊಸ್ಟ್ ಕೊಲೋನಿಯಲ್ ಕಲ್ಚರಲ್ ಇಂಪರೇಟಿವ್ ಕೂಡ ಶುದ್ಧ ಥೀಯಲ್ಲಿ ತಯಾರಾದ ಪದಾರ್ಥಗಳೇನಲ್ಲ. ಅದೂ ಲೇಟ್ ಕನ್ವರ್ಟ್ಸ್‌ಗಳಿಂದ ಇಂಥ ಉಪದೇಶ ಕೇಳುವದು ಅಸಹ್ಯವೆನಿಸ್ತದೆ-ನಾವು ಯಾರೂ ಭಾರತೀಯತೆಗಾಗಿ ಹುಡುಕಬೇಕಾಗಿಲ್ಲ. ರೂಟ್ಸ್‌ಗೋಸ್ಕರ ಹೊರಡಬೇಕಾದ್ದಿಲ್ಲ. ಏನೇನು ಬೇಕೋ ಅದೆಲ್ಲ ನಮ್ಮ ಮೂಲಕನೇ ಇದೆ-ಆದರೆ ಈ ರೀತಿ ಹಿಂದಕ್ಕೆ ಹೊರಟವರಿಗೆ ಒಂದು ಪ್ರಶ್ನೆ ಕೇಳಬೇಕಾಗುತ್ತದೆ. ಯಾವ ಮೌಲ್ಯಗಳನ್ನು ಹುಡುಕ್ತ ಇದ್ದೀರಿ? ಜಾತಿ ಪದ್ಧತಿಯನ್ನೆ, ವರ್ಣ ವ್ಯವಸ್ಥೆಯನ್ನೆ, ಸ್ತ್ರೀ ವಿರೋಧಿ ತತ್ವಗಳನ್ನೆ? ಅಥವ ಪಾಶ್ಚಾತ್ಯರು ಭಾರತವನ್ನು ಕನ್‌ಸ್ಟ್ರಕ್ಟ್ ಮಾಡಿದ ಬಗೆ - ಭಾರತ ಹೀಗೆಂದೂ ಇರಲಿಲ್ಲ ಅನ್ನುವಿರ? ಹಾಗಿದ್ದರೆ ನೀವು ಹುಡುಕುವ ಭಾರತ ನಿಮಗೆ ಯಾವತ್ತೂ ಸಿಗೋದಿಲ್ಲ.

ಸಂವಹನಶೀಲತೆ-ಅಥವಾ ಪದ್ಯ ಅರ್ಥವಾಗಬೇಕು ಅನ್ನುವದು ಐಡಿಯಲಾಜಿಕಲ್ ಇಂಪರೇಟಿವ್. ಇಂಪರೇಟಿವ್ ಅಂದರೆ ಒತ್ತಾಸೆ-ಹೀಗೆ ಮಾಡೆನ್ನುವ ಹಿಂಸಾವಿಧಾನ. ನವ್ಯ ಸಾಹಿತ್ಯವೆನ್ನುವ ರೀತಿ ಕ್ಲಿಷ್ಟವಾಯಿತೆಂದು, ಭಾವುಕ ಕವಿಗಳು ಹಾಡಿಗೆ ಶರಣಾಗಿ ಹೋದರು. ಕೆಲವರು ಸರಳವಾಗಿ ಬರೆಯೋದಕ್ಕೆ ಸುರು ಮಾಡಿದರು. ಆಡು ನುಡಿಗಳನ್ನು ಹಾಗೆಯೆ ಬಳಸತೊಡಗಿದರು. ಸಾಹಿತ್ಯಕ್ಷೇತ್ರದಲ್ಲಿ ಯಾವುದೇ ಪೆನಾಲ್ಟಿಯಿಲ್ಲದೆ ಪ್ರಯೋಗ ನಡೆಸೋದು ಸಾಧ್ಯ. ಆಯಾ ರೀತಿ ಬರೆಯೋ ವ್ಯಕ್ತಿಗೆ ಆ ವಿಧಾನದಲ್ಲಿ ನಂಬಿಕೆಬೇಕು, ಪ್ಯಾಶನ್ (passion) ಅಗತ್ಯ. ಆದರೆ ಸ್ವಲ್ಪ ಸೆಲ್ಫ್-ಕ್ರಿಟಿಕಲ್ ಆದವನಿಗೆ (ಆದವಳಿಗೆ) ಈ ರೀತಿ ಕೂಡ ಹಲವು ರೀತಿಗಳಲ್ಲಿ ಒಂದು ಮಾತ್ರ, ಇದೇ ಕೊನೆಯಲ್ಲ ಎನ್ನೋದು ಗೊತ್ತಾಗುತ್ತೆ. ಸರಳತೆ, ಸಂವಹನಶೀಲತೆಗಳೂ ಕೂಡ ನಾವು ತಯಾರಿಸಿದ ಮೌಲ್ಯ ಅಥವಾ ಐಡಿಯಾಲಜಿ ಅನ್ನುವುದು ನೆನಪಲ್ಲಿಡಬೇಕು. ಬಾರ್ತ್ ಈ ಬಗ್ಗೆ ಒಂದು ಪ್ರಬಂಧವನ್ನೇ ಬರೆದಿದ್ದಾನೆ. ಪ್ರತಿ ಅಕ್ಷರ ಸಂಸ್ಕೃತಿಯಲ್ಲೂ ಒಂದು ಮಧ್ಯಮ-ಶ್ರೀಮಂತ ವರ್ಗದ ಜನವೇ ಸ್ಟಾಂಡರ್ಡನ್ನ ನಿರ್ಮಿಸಿರುತ್ತಾರೆ. ಅದೇ ಆಡಳಿತದ ಭಾಷೆ, ಶೈಲಿ, ಮೌಲ್ಯ ಎಲ್ಲ. ಜನರಿಗೆ ಅರ್ಥವಾಗುವ ಹಾಗೆ ಬರೆಯಬೇಕು ಎಂದರೆ ಈ ಆಡಳಿತ ವರ್ಗ ಅನುಮೋದಿಸುವ ಸ್ಟಾಂಡರ್ಡ್‌ನಲ್ಲಿ ಬರೆಯಬೇಕು ಎನ್ನುವ ಅರ್ಥ. ಇಡಿಯ ಕಾವ್ಯವೇ ಈ ಮೌಲ್ಯವನ್ನು ಅಥವ ಆಡಳಿತ ವರ್ಗವನ್ನು ಪ್ರಶ್ನೆಗೆ ಈಡು ಮಾಡುತ್ತಿರುವಾಗ ಇಂಥ

ಭಾಷೆಯನ್ನು ಎದುರಿಸಬೇಕಾಗುತ್ತದೆ. ಆದ್ದರಿಂದ ಸಂವಹನಶೀಲತೆ ಎನ್ನುವ ಪದ ಜನ ಅಂದುಕೊಂಡಷ್ಟು ಸಮಸ್ಯಾರಹಿತ ಪದವಲ್ಲ.

ನಾನು ಎದುರಿಸುತ್ತಿರುವ ಸವಾಲುಗಳ ಬಗ್ಗೆ ಕೇಳಿದ್ದೀರಿ. ನಾನು ಬರೆಯೋದಕ್ಕಿಂತ ಚಿಂತಿಸೋದರಲ್ಲೇ ಕಾಲಕಳೆಯುವ ವ್ಯಕ್ತಿಯಾದ್ದರಿಂದ ನನ್ನ ಮಟ್ಟಿಗೆ ಇದೇ ಒಂದು ದೊಡ್ಡ ಸವಾಲು. ನಾನು ಕವಿತೆಗಳನ್ನು ಬರೆಯುತ್ತಿದ್ದರೂ ಕಾವ್ಯಲೋಲುಪನಲ್ಲ. ಕವಿಯೆಂದು ಹೇಳಿಸಿಕೊಳ್ಳುವ ಇರಾದೆಯೇನಿಲ್ಲ. ಕೈಗೆ ಸಿಕ್ಕ ಪುಸ್ತಕಗಳನ್ನು ಓದ್ತಾ ಇರತೀನಿ. ಅವುಗಳಲ್ಲಿ ಫಾಸಿನೇಟಿಂಗ್ ಅನಿಸಿದ ವಿಚಾರಗಳ ಬಗ್ಗೆ ಚಿಂತಿಸ್ತ ಇರ್ತೀನಿ. ಇಂಥ ವಿಚಾರಗಳು ಕೇವಲ ಇರಾಶನಲ್ ಕನಸುಗಳಾಗಿರೋದು ಕೂಡ ಸಾಧ್ಯ. ಅಥವ ಇವತ್ತಿನ ಕಲ್ಚರ್ ಕ್ರಿಟಿಸಿಸಮಿಗೆ ಸಂಬಂಧಿಸಿದ ವಿರೋಧಾಭಾಸಗಳಾಗಿರಬಹುದು. ಕೆಲವೊಮ್ಮೆ ಇವಕ್ಕೆ ಕವಿತೆಯ ಅಕ್ಷರಸಂಬಂಧಗಳನ್ನು ಕೊಡಲು ಪ್ರಯತ್ನಿಸುತ್ತೇನೆ. ನನ್ನ ಅವಧ ಸಂಕಲನ ಒಂದು ಸ್ಕೆಚ್ ಬುಕ್ ಅಂತ ಮಿತ್ರ ಶ್ರೀರಾಮ್ ಒಂದೆಡೆ ಹೇಳಿದ್ದು ನೆನಪಾಗುತ್ತದೆ. ನಿಜ, ನನ್ನ ಕವಿತೆಗಳು ಸ್ಕೆಚ್ಚುಗಳ ತರನೇ. ಅವನ್ನು ತಿದ್ದಿತೀಡಿ ಫಳಫಳ ಹೊಳೆಯಿಸುವ ಇರಾದೆ ನನಗಿದ್ದ ಹಾಗಿಲ್ಲ. ಜನ ನೆನಪಿನಲ್ಲಿ ಇಡಬಹುದಾದ ಒಂದು ಸಾಲನ್ನು ನಾನು ಬರೆದಿಲ್ಲ ಎನ್ನುವುದು ರಾಮಚಂದ್ರ ಶರ್ಮರ ಅಭಿಪ್ರಾಯ. ಇದೂ ಸರಿಯಿರಬಹುದು. ಇದೆಲ್ಲ ಕವಿತೆಯ ಕ್ರೈಟೇರಿಯ ಅಂತ ನನಗನಿಸುವುದೇ ಇಲ್ಲ. ನಾನು ಪಾಸ್ಟರ್ ನಾಕ್‌ನ ಡಾಕ್ಟರ್ ಜವಾಗೊ ಕಾದಂಬರಿನ ಎರಡು ಬಾರಿ ಓದಿದ್ದೀನಿ. ಒಮ್ಮೆ ಹೈಸ್ಕೂಲ್‌ನಲ್ಲಿದಾಗ; ಆಗತಾನೆ ಪಾಸ್ಟರ್‌ನಾಕ್‌ಗೆ ನೋಬೆಲ್ ಪ್ರಶಸ್ತಿ ಘೋಷಿಸಿದ್ದರು. ಇನ್ನೊಮ್ಮೆ ಈಚೆಗೆ ಎರಡುಮೂರು ವರ್ಷಗಳ ಹಿಂದೆ. ಈಗಲೂ ಆ ಕೃತಿ ಅಮೋಘವಾಗಿ ಅನ್ನೋದು ಬಿಟ್ಟರೆ ಅದರ ಹೆಚ್ಚಿನ ವಿವರಗಳು ನನ್ನ ತಲೆಯಲ್ಲಿ ಉಳಿದಿಲ್ಲ. ಆ ಕಾರಣಕ್ಕೆ ನಾನು ಡಾಕ್ಟರ್ ಜಿವಾಗೊವನ್ನ ವಿಮರ್ಶೆ ಮಾಡೋದು ಹೇಗೆ? ಕವಿತೆಯಲ್ಲಿ ನಾದಲೋಲುಪತೆಯೆ ಮುಖ್ಯಾಂತ ನಾನು ತಿಳಿದಿಲ್ಲ. ಕುವೆಂಪು, ಬೇಂದ್ರೆ, ನರಸಿಂಹಸ್ವಾಮಿ ಅಂಥ ಒಳ್ಳೆ ಕವಿತೆಗಳನ್ನು ಬರೆದಿದ್ದಾರೆ ನಿಜ. ಆದರೆ ಅದೇ ರೀತಿ ಇವತ್ತು ನಾನು ಬರೆಯ ಹೊರಟರೆ ನನ್ನ ವಿಚಾರಗಳನ್ನು ಯಾರು ಹೇಳಬೇಕು?

ಹೀಗೆನ್ನುತ್ತ ನನ್ನ ಬರಹಗಳನ್ನು ಡಿಫೆಂಡ್ ಮಾಡಿಕೊಳ್ತ ಇದ್ದೇನೆ ಅಂತಲ್ಲ. ನನ್ನ ಹಲವು ರಚನೆಗಳು ನನಗೇ ಇಷ್ಟವಾಗಿಲ್ಲ, ಕಿತ್ತು ಬಿಸಾಕಬಿಡುವಂಥವು ಇವೆ. ಕಾಲವೇ ಆ ಕೆಲಸ ಮಾಡಲಿರುವಾಗ ನಾನು ಯಾತಕ್ಕೆ ಮಾಡಬೇಕೆಂದು ಸುಮ್ಮನಿದ್ದೇನೆ. ಅದೂ ಅಲ್ದೆ ನನಗೆ ಚೆನ್ನಾಗನಿಸದ ರಚನೆಗಳು ಬೇರೆಯವರಿಗೆ ಚೆನ್ನಾಗಿ ಅನಿಸುವ ಸಾಧ್ಯತೆಯನ್ನು ಅಲ್ಲಗಳೆಯೋದೂ ಸಾಧ್ಯವಿಲ್ಲ. ಬರೆದ ರಚನೆಗಳು ಹೇಗೆ ಬದುಕುತ್ತವೆ ನೋಡೋಣ ಅಂತ ಒಂದು ಕೆಟ್ಟ ಕುತೂಹಲ ಕೂಡ ನನಗಿದೆಯಂತ ತೋರುತ್ತದೆ.

ಇವತ್ತು ತುಂಬಾ ಮಂದಿ ಬರೀತಿದ್ದಾರೆ. ಅಕ್ಷರ ವಿಸ್ಫೋಟಗೊಳ್ಳುವ

ಉತ್ಸಾಹದ ಸಮಯ ಇದು. ಹಲವು ಕವಿತೆಗಳು ಚೆನ್ನಾಗಿವೆ ಅನ್ನಿಸುತ್ತವೆ. ನನಗಿಂತ ಬೇರೆ ರೀತಿಯಲ್ಲಿ ಬರೆಯುವವರನ್ನು ಕುತೂಹಲದಿಂದ ನೋಡ್ತೇನೆ. ಯಾಕೆ ಇವು ಚೆನ್ನಾಗಿವೆ ಅಂತಲೂ ಕೇಳಿಕೊಳ್ಳುತ್ತೇನೆ. ಎಲ್ಲೋ ಒಂದು ಶಬ್ದ, ಒಂದು ವಾಕ್ಯ ವಿಧಾನ, ಪ್ರಾಸ ತಂದ ಬಗೆ, ಮನಸ್ಸನ್ನು ಅಲ್ಲಿ ಆಕರ್ಷಿಸುತ್ತದೆ. ಉಳಿದದ್ದನ್ನು ಮನಸ್ಸು ತಾನೇ ರಚಿಸಿಕೊಳ್ಳುತ್ತದೆ. ಪ್ರತಿ ಓದುಗರೂ ತಮ್ಮ ಕವಿತೆಗಳನ್ನು ತಾವು ನಿರ್ಮಿಸಿಕೊಳ್ಳುತ್ತಾರೆ-ಒಂದರ್ಥದಲ್ಲಿ. ಆದರೆ ಕವಿತೆಯ ಯಾವುದಾದರೊಂದು ವಿಶೇಷ ಇದಕ್ಕೆ ಆಸ್ಪದ ಕೊಡಬೇಕು.

ಈ ದಿಸೆಯಲ್ಲಿ ವಿಮರ್ಶೆ ಕೂಡ ಕ್ರಿಯಾತ್ಮಕವಾಗಿ ಕೆಲಸಮಾಡೋದು ಸಾಧ್ಯ. ಜನರು ತೀರ ಸಾಮಾನ್ಯವೆಂದು ಬದಿಗಿರಿಸಿದ ಸಾಲುಗಳನ್ನು ಒಳ್ಳೆ ವಿಮರ್ಶಕರು ಎತ್ತಿಕೊಂಡು ಅರ್ಥಪೂರ್ಣವಾದ ಸಂಬಂಧಗಳನ್ನು ನಿರೂಪಿಸುವುದರಿಂದ ಆ ಸಾಲುಗಳು ಮತ್ತೆ ಜೀವಂತವಾಗಿ ನಮಗೆ ಒದಗುತ್ತವೆ. ಕಿ.ರಂ. ನಾಗರಾಜರ ಬಾಯಿ ಮಾತಿನ ವಿಮರ್ಶೆಯಲ್ಲಿ ನಾನಿದನ್ನ ಗಮನಿಸಿದ್ದೇನೆ. ಕುರ್ತಕೋಟಿಯವರು ತಮ್ಮ ಲಿಮಿಟೇಶನ್‌ನಲ್ಲಿ ಇದನ್ನ ಮಾಡಿದ್ದಾರೆ. ಡಿ. ಆರ್. ನಾಗರಾಜರಿಂದ ಈ ಕೆಲಸ ಸಾಧ್ಯ. ನಮ್ಮಲ್ಲಿ ಮೌಖಿಕಪರಂಪರೆಯೇ ಪ್ರಧಾನವಾದ್ದರಿಂದ ಹೆಚ್ಚಾಗಿ ಮಾತುಕತೆಗಳಲ್ಲಿ ಇದು ನಡೀತಿರ್ತದೆ; ಬರಹದಲ್ಲಲ್ಲ. ಹಾಗೂ ಹೆಚ್ಚಿನ ವಿಮರ್ಶಕರು ಪರಂಪರಾಗತ ಕ್ಯಾನನ್‌ಗಳನ್ನ ಒಪ್ಪಿಕೊಂಡೇ ವಿಮರ್ಶೆಗೆ ಹೊರಡುತ್ತ ಕ್ಯಾನನ್ ಹೊರಗಿರುವ ಕೃತಿಗಳು ಅಲ್ಲಿಗೇ ಉಳಿದು ಬಿಟ್ಟಿವೆ.... ಮಧ್ಯರಾತ್ರಿಯಾಗಿದ್ದು ರೆಪ್ಪೆ ಮೇಲೆ ನಿದ್ದೆ ಕೂತಿರೋದರಿಂದಲೂ, ನೀವಂದ ಮೂರು ಪುಟಗಳು ಸಮೀಪಿಸ್ತ ಇರೋದರಿಂದಲೂ ಇಲ್ಲಿಗೆ ನಿಲ್ಲಿಸುವೆ.

ಬಂಡಾಯ ಸಾಹಿತ್ಯ ಸಂಘಟನೆ ಬಹಳ ಒಳ್ಳೆಯ ಉದ್ದೇಶದಿಂದ ಶುರುವಾಯಿತು. ಆದರೆ ಮಹಾದೇವ, ಡಿ. ಆರ್. ನಾಗರಾಜ ಥರದವರೆಲ್ಲ ಯಾಕೆ ಸಂಘಟನೇನ ಬಿಟರು, ಮುಖ್ಯವಾದ ಲೇಖಕರು ಯಾಕೆ ನಿರ್ಗಮಿಸಿದರು ಅಂತ ಯೋಚನೆ ಮಾಡಿದರೆ, ನನಗನ್ನಿಸುತ್ತೆ-ಸೈದ್ಧಾಂತಿಕ ಸಂಘಟನೆಯ ಮೂಲಕ ಸಾಹಿತ್ಯ ನಿರ್ಮಾಣ ಮಾಡುತ್ತೇವೆನ್ನುವದೇ ಒಂದು ಭ್ರಮೆ ಅಂತ.

– ಡಾ॥ ಸಿದ್ಧಲಿಂಗಯ್ಯ
(ಒಂದು ಸಂದರ್ಶನದಲ್ಲಿ)

ನವ್ಯತೆಯ ಗೀಳು...

– ಡಾ॥ ಎಚ್.ಎಸ್. ವೆಂಕಟೇಶ ಮೂರ್ತಿ

ತಾವು ಬೇಂದ್ರೆಯ ಪ್ರಭಾವದಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಅನೇಕ ವರ್ಷ ಕಾವ್ಯರಚನೆಯನ್ನು ನಿಲ್ಲಿಸಿದ್ದಾಗಿ ಅಡಿಗರು ಒಮ್ಮೆ ಹೇಳಿದರು. ಅದು ಅಡಿಗರ ಕಾವ್ಯ ಕೃಷಿಯ ಆರಂಭಿಕ ಕಾಲ. ತೀರ ವಿಶಿಷ್ಟವೂ ವೈಯಕ್ತಿಕವೂ ಆದ ಧ್ವನಿಯನ್ನು ಸಾಧಿಸಲೇ ಬೇಕೆಂಬ ಹಠವುಳ್ಳ ಕವಿ ಇಂಥ ಸಮಸ್ಯೆಯನ್ನು ಎದುರಿಸಿಯೇ ಎದುರಿಸುತ್ತಾನೆ. ಈ ವೈಯಕ್ತಿಕತೆ ಎರಡು ನೆಲೆಯನ್ನು ಹೊಂದಿದೆ. ಒಂದು ಅನುಭವಕ್ಕೆ ಸಂಬಂಧಿಸಿ. ಇನ್ನೊಂದು ರೀತಿಗೆ ಸಂಬಂಧಿಸಿ. ಅಡಿಗರ ತುಡಿತ ಈ ಎರಡೂ ನೆಲೆಗಳಲ್ಲೂ ತಾವು ಭಿನ್ನತೆ ಸಾಧಿಸಬೇಕು ಎಂಬುದಾಗಿತ್ತು. ಚಂಡೆ-ಮದ್ದಳೆಯಲ್ಲಿ ಕಾಣುವ ಅಡಿಗರ ಕವಿತೆ ಹೇಗೆ ಬೇಂದ್ರೆ, ಕುವೆಂಪು, ಪು.ತಿ.ನ. ಮೊದಲಾದವರು ಆವರೆಗೆ ಬರೆಯುತ್ತಿದ್ದ ಕಾವ್ಯದಿಂದ ಎದ್ದು ಕಾಣುವ ಭಿನ್ನತೆ ಸಾಧಿಸಿದೆ ಎಂಬುದನ್ನು ಕಾವ್ಯದ ಸಾಮಾನ್ಯ ಓದುಗನೂ ತಕ್ಷಣ ಗುರುತಿಸಬಲ್ಲ; ಆದರೆ ಅಷ್ಟೇ ಸುಲಭವಾಗಿ, ಅಡಿಗರ ಮೋಹನ ಮುರಲಿ ಪದ್ಯ, ಹೇಗೆ ನವೋದಯ ಸಂಪ್ರದಾಯದ ಬೇರೆ ಕವಿಗಳ ಕವಿತೆಗಳಿಗಿಂತ ಭಿನ್ನ ಎಂಬುದನ್ನು ಅಸೂಕ್ಷ್ಮ ಕಾವ್ಯ ಓದುಗ ಗುರುತಿಸಲಾರ. ಕಾರಣ ಇಲ್ಲಿ ಕಲೆಯಲ್ಲಿ ಪರಂಪರೆಯ ಗುಣವೂ, ಅನುಭವದ್ರವ್ಯದಲ್ಲಿ ಕವಿಯ ವಿಶಿಷ್ಟ ವೈಯಕ್ತಿಕತೆಯೂ ಕಾಣಿಸಿಕೊಂಡಿದೆ. ಕಲೆ ಪರಂಪರೆಯದೂ, ಅನುಭವದ್ರವ್ಯ ಆಧುನಿಕವೂ ವ್ಯಕ್ತಿ ವಿಶಿಷ್ಟವೂ ಆಗುವುದು ಯುಕ್ತ ಎಂಬ ನಿಲುವು ಕನ್ನಡ ಸಂದರ್ಭದಲ್ಲಿ ಪ್ರಚಲಿತವಿದ್ದೇ ಇದೆ. ಒಂದು ಬೆಳೆಸುವ ಶಕ್ತಿ; ಇನ್ನೊಂದು ಉಳಿಸುವ ಶಕ್ತಿ. ಬೆಳೆಸುವ ಶಕ್ತಿಗೆ ನವ್ಯಸಂದರ್ಭದಲ್ಲಿ ಅತೀವ ಪ್ರಾಮುಖ್ಯ ಸಿಕ್ಕು ಉಳಿಸುವ ಶಕ್ತಿ ಅವಜ್ಞೆಗೆ ಗುರಿಯಾದದ್ದು ಆಧುನಿಕ ಕಾವ್ಯ ಕೊನೆಕೊನೆಗೆ ಜಾಳು ಜಾಳಾದುದಕ್ಕೆ ಬಹುಮುಖ್ಯ ಕಾರಣ ಎಂಬುದನ್ನು ನಾವು ಈಗಲಾದರೂ ಗ್ರಹಿಸಬೇಕಾಗಿದೆ. ಪ್ರತಿಕ್ಷಣದಲ್ಲೂ ಹೊಸದಾಗಬೇಕು, ಹೊಸದಾಗಬೇಕು ಎಂಬ ಆಧುನಿಕತೆಯ ಗೀಳು ಪರಂಪರೆಯನ್ನು ಮುರಿದು ಹಾಕುತ್ತದೆ ಮಾತ್ರವಲ್ಲ, ಆಧುನಿಕ ವಿಕಾರಗಳಿಗೂ ಎಡೆಮಾಡಿಕೊಡುತ್ತದೆ. ಕನ್ನಡ ನವ್ಯ ಕಾವ್ಯದಲ್ಲೇ ಇದಕ್ಕೆ ಧಂಡಿಯಾದ ಉದಾಹರಣೆಗಳೂ ಇವೆ. ಈವಾಗ ಚೆನ್ನಾಗಿ ಬರೆಯುತ್ತಾರೆಂದು ಹೆಸರಾಗಿರುವ

ಕವಿಗಳಕವಿತೆಗಳಲ್ಲಿ ಕೂಡ ಕಸಬುಗಾರಿಕೆ, ಕಲೆಗಾರಿಕೆ, ಬಂಧ ಪ್ರಜ್ಞೆ ಲಯಪ್ರಜ್ಞೆ ಕೈಕೊಡುತ್ತಾ ಕವಿತೆ ಗದ್ಯಕ್ಕೆ ಸಮೀಪವಾಗುವುದು, ಕೆಲವೊಮ್ಮೆ ಪಕ್ಕಾ ಗದ್ಯವೇ ಆಗುವುದನ್ನು ನೋಡಿದರೆ ಕಾವ್ಯ ಒಂದು ಕಲೆಯೂ ಹೌದು ಎಂಬುದನ್ನೇ ಮರೆಯುವ ನೆಲೆಗೆ ನಾವು ಬಂದಿದ್ದೇವೆಯೇ ಎಂದು ನನಗೆ ಗಾಭರಿಯಾಗುತ್ತದೆ. ಅಗ್ನಿ ಸ್ತಂಭ, ಎಷ್ಟೊಂದು ಮುಗಿಲು ಸಂಗ್ರಹಗಳಿಗಿಂತ ಮೊದಲು ಇಂಥ ಅನೇಕ ಗಪದ್ಯಗಳು ನನ್ನ ಸಂಗ್ರಹಗಳಲ್ಲೇ ಬೇಕಾದಷ್ಟಿವೆ.

ಸಾಯುವುದು ಎಂದರೆ
ನಮ್ಮ ನೆಳಲೊಂದಿಗೆ ನಮ್ಮ ಸಂಬಂಧ
ಕಡಿದು ಕೊಳ್ಳುವುದು ಎಂದು

(ಸಾಯುವುದು ಎಂದರೆ)

–ನನ್ನ ಒಣಮರದಗಿಳಿಗಳು ಸಂಗ್ರಹದ ಮೇಲಿನ ವಾಕ್ಯ (!)ವನ್ನು ಓದುವಾಗ ನನಗೀಗ ಮೈಪರಚಿಕೊಳ್ಳುವಂತೆ ಆಗುತ್ತದೆ. Poetic Idea ಗಳನ್ನೇ ಭಾಷೆಯಲ್ಲಿ ಮಂಡಿಸುವ ಮೂಲಕ ಕವಿತೆ ರಚಿಸಿದ ಭ್ರಮೆಗೆ ಒಳಗಾಗುವುದು ಈವಾಗ ಬರೆಯುತ್ತಿರುವ ಬಹುಪಾಲು ಕವಿಗಳಿಗೆ ಬಡಿದಿರುವ ಗರ. ನಾವು ಎದುರಿಸುತ್ತಿರುವ ಬಹುದೊಡ್ಡ ಸಮಸ್ಯೆ ಇದು. ವೈಯಕ್ತಿಕತೆ ತೀರ ಅತಿಗೆ ಹೋದಾಗ ಪರಂಪರೆ ನಾಶವಾಗುವುದು ಮಾತ್ರವಲ್ಲ, ಸಂವಹನತೆಯ ತೊಡಕುಗಳೂ ತಾವಾಗಿಯೇ ಉದ್ಭವಿಸುತ್ತವೆ. ಬರೆದುದೆಲ್ಲಾ ಕಾವ್ಯ ಎಂಬ ಭ್ರಮೆಗೆ ಕವಿ ತುತ್ತಾಗುತ್ತಾನೆ. ಲಕ್ಷಣಗಳು ಮೂಲೆಗುಂಪಾಗಿ ವಿಲಕ್ಷಣತೆಯೇ ಕವಿತೆಯ ಸ್ವರೂಪವಾಗಿ ಪರಿಣಮಿಸುತ್ತದೆ. 'ಸೃಷ್ಟಿ' ಮತ್ತು 'ಪಾಲನೆ'ಯ ತತ್ವಗಳನ್ನು ಸಮ್ಮಿಳಿತಗೊಳಿಸಿಕೊಂಡ ಕಾವ್ಯ ಪ್ರಜ್ಞೆಮಾತ್ರ ನಮ್ಮ ಹೊಸಕಾವ್ಯಕ್ಕೆ ಸ್ವಧರ್ಮವನ್ನು ಕರುಣಿಸಬಲ್ಲುದು. ಕವಿತೆ ನನ್ನ ಪಾಲಿಗಂತೂ ವೈಯಕ್ತಿಕ ಅನುಭವದ ಅಭಿವ್ಯಕ್ತಿ ಆಗಿರುವಂತೆಯೇ ಕಲೆಯ ಪಾರಂಪರಿಕ ಅನುಸಂಧಾನವೂ ಹೌದು. ಅಡಿಗರಲ್ಲಿ ನವ್ಯತೆ ಹೊಸ ಅನ್ವೇಷಣೆಯ ಸ್ವರೂಪದ್ದಾಗಿತ್ತು. ಆದುದರಿಂದಲೇ ಅವರು ನಮ್ಮ ಬಹುದೊಡ್ಡ ಕವಿಯಾಗಿ ಪರಿಣಮಿಸಿದರು. ಅವರ ನವ್ಯತೆ ಪರಂಪರೆಯ ಸತ್ವದಿಂದಲೇ ಪೋಷಿತವಾದದ್ದು ಎಂಬುದನ್ನೂ ನಾವು ಮರೆಯುವಂತಿಲ್ಲ. ಆದರೆ ಉಳಿದ ಬಹು ಪಾಲು ನವ್ಯರಿಗೆ ಈ ಮಾತು ಅನ್ವಯಿಸುವುದಿಲ್ಲ. ಎಲ್ಲಿ ನವ್ಯತೆ ಒಂದು ಗೀಳಾಗಿ ಕಾಣಿಸಿಕೊಂಡಿತೋ ಅಲ್ಲೇ ಕಾವ್ಯದ ಶಿಥಿಲೀಕರಣವೂ ಶುರುವಾಯಿತು. ಸದ್ಯ ಕನ್ನಡ ಕಾವ್ಯ ಆ ಶಿಥಿಲೀಕರಣದ ಶೃಂಗದಲ್ಲಿದೆ. ನಡೆದು ಬಂದದಾರಿಯ ಕಡೆ ಒಮ್ಮೆ ತಿರುಗಿ ನೋಡಿಯೇ ಈಗ ನಾವು ಮುನ್ನಡೆಯಬೇಕಾಗಿದೆ.

ನನ್ನ ಕಾವ್ಯ ಪ್ರತಿಮೆಗಳು

– ಸುಬ್ರಾಯ ಚೊಕ್ಕಾಡಿ

ಕವಿತೆ ಎಂದರೇನು? ನೀನು ಕವಿತೆ ಯಾಕೆ ಬರೀತೀಯೆ? ಹೇಗೆ ಬರೀತೀಯೆ? – ಎಂಬಂಥ ಪ್ರಶ್ನೆಗಳನ್ನು ಅನೇಕರು ನನ್ನಲ್ಲಿ ಕೇಳಿದ್ದಿದೆ. ಅದಕ್ಕೆಲ್ಲ ನನ್ನ ಉತ್ತರವೆಂದರೆ 'ಗೊತ್ತಿಲ್ಲ' ಎಂದೇ ಆಗಿದೆ. ಇದು ನಿಮಗೆ ವಿಚಿತ್ರ ಅನ್ನಿಸಬಹುದು. ಆದರೂ ಸತ್ಯ. ಕಳೆದ ಅನೇಕ ವರ್ಷಗಳಿಂದ ನಾನು ಕವಿತೆ ಬರೆಯುತ್ತಾ ಬಂದಿದ್ದೇನಾದರೂ ಈ ಪ್ರಶ್ನೆಗಳಿಗೆ ನನಗೆ ಉತ್ತರ ದೊರೆತಿಲ್ಲ. ಆದರೂ, ಬರೆಯುತ್ತಾ ಹೋಗುವ ಮೂಲಕವೇ ಇವಕ್ಕೆ ಉತ್ತರ ಹುಡುಕುವ ಪ್ರಯತ್ನ ನಡೆಸಿದ್ದೇನೆ.

ಕವಿತೆ ಎಂದರೇನು? ಅದು ಹೇಗೆ ರೂಪ ತಳೆಯುತ್ತದೆ? ಕವಿತೆ ಎಂದರೆ ವಿಚಾರಗಳ ಮಂಡನೆಯೇ? ಲಯಬದ್ಧ, ಛಂದೋಬದ್ಧ ರಚನೆಯೇ? ಪ್ರತಿಮೆಗಳ, ಸಂಕೇತಗಳ, ರೂಪಕಗಳ, ಅಲಂಕಾರಗಳ ಸಮೂಹವೇ? ವಿಚಿತ್ರ ಪದಬಂಧವೇ? ಇವೆಲ್ಲವೂ ಹೌದು ಮತ್ತು ಅಲ್ಲ ಎನ್ನುವುದು ನನ್ನ ಅನುಭವ. ಪ್ರತಿಯೊಂದು ಕವಿತೆಯ ರಚನೆಯ ನಂತರವೂ ತೃಪ್ತಿ ಮತ್ತು ಅತೃಪ್ತಿ ಎರಡೂ ನನ್ನಲ್ಲಿ ಉಳಿದು ಕಾಡುತ್ತಿರುತ್ತದೆ. ತೃಪ್ತಿ: ಅಷ್ಟರ ಮಟ್ಟಿಗಾದರೂ ನಾನು ಕನಿಸಿದ್ದು ಸಾಕ್ಷಾತ್ಕಾರವಾದದ್ದಕ್ಕೆ. ಅತೃಪ್ತಿ: ನಾನು ಕನಸಿದ್ದು, ಹೇಳಬೇಕೆನಿಸಿದ್ದು ಇದಲ್ಲ ಎಂಬುದಕ್ಕೆ. ಹಾಗಾದರೆ, ಹಗಲು ಎಚ್ಚರದಲ್ಲಿ, ರಾತ್ರಿ ಕನಸಿನಲ್ಲಿ ತೃಪ್ತಿ ಅತೃಪ್ತಿಗಳ ನಡುವೆ ಇಟ್ಟು ನನ್ನನ್ನು ಕಾಡುವ, ಕವಿತೆ ಎನ್ನುವ ಈ ಮಾಯಾಂಗನೆಯನ್ನು, ಈ ಕಾಡುವ ದೈವವನ್ನು ಖಚಿತ ಮಾತುಗಳಲ್ಲಿ ಹಿಡಿದಿಡುವುದಾದರೂ ಹೇಗೆ!

ಕವಿತೆಯ ಸೃಷ್ಟಿಕ್ರಿಯೆಯ ಸಂದರ್ಭ ಒಂದು ಸ್ವಾಪ್ನಿಕವಾದ, ನಿಗೂಢವಾದ ಮಾಯಾ ಜಗತ್ತು ಸೃಷ್ಟಿಯಾಗಿಬಿಡುತ್ತದೆ. ಒಂದು ವಿಚಾರ, ಭವದ ಒಂದು ಅನುಭವ ಕವಿಯ ಭಾವಕೋಶದೊಳಗೆ ಪ್ರವೇಶಿಸಿದ ಸಂದರ್ಭದಿಂದ ಈ ಸ್ವಾಪ್ನಿಕ ಜಗತ್ತು ನಿರ್ಮಾಣವಾಗಿ ಬಿಡುತ್ತದೆ. ಇಲ್ಲಿಂದ ನಂತರದ ಕ್ರಿಯೆಗಳೆಲ್ಲ, ಕವಿಯ ಎಚ್ಚರದ ಜಗತ್ತಿನ ತಾರ್ಕಿಕತೆಯನ್ನೆಲ್ಲ ಒಳಗೊಂಡೂ, ಅದನ್ನು ಮೀರಿದ ಅತಾರ್ಕಿಕ ಆವರಣದಲ್ಲಿ ನಡೆಯುವಂಥವುಗಳು.

ತಕ್ಕರೂಪವನ್ನು ಹುಡುಕುವ ಈ ಪ್ರಯತ್ನದಲ್ಲೇ ಹೊಸರೂಪಕಗಳ, ಪ್ರತಿಮೆಗಳ, ಸಂಕೇತಗಳ ಆವಿರ್ಭಾವವಾಗಿ, ಕವಿತೆಯ ಸ್ವರೂಪ, ಖಚಿತ ಶಿಲ್ಪವು-ಆಯಾ ಕವಿಯ ಪ್ರಜ್ಞೆಯಲ್ಲಿ, ಅಪ್ರಜ್ಞೆಯಲ್ಲಿಹುದುಗಿರುವ ಅನುಭವಗಳಿಗೆ ಅನುಗುಣವಾಗಿ- ನಿರ್ಮಾಣವಾಗುತ್ತದೆ ಎಂದು ನನ್ನ ಭಾವನೆ.

ನನ್ನ ಕಾವ್ಯದಲ್ಲಿ ಎಂಥ ಪ್ರತಿಮೆಗಳು ಬಳಕೆಯಾಗಿವೆ? ಯಾವ ಪ್ರತಿಮೆಗಳನ್ನು ಹೇಗೆ ಬಳಸಿಕೊಂಡಿದ್ದೇನೆ-ಎಂಬುದನ್ನು ವಿವರಿಸುವುದು, ಒಂದು ತಿಂಡಿಯನ್ನು ಯಾವುದನ್ನೆಲ್ಲಾ ಹಾಕಿ ತಯಾರಿಸಲಾಗಿದೆ ಎಂದು ಹೇಳುವಷ್ಟು-ಸುಲಭವಲ್ಲ. ಕವನ ಸೃಷ್ಟಿಯ ಸ್ವಾಪ್ನಿಕ ಜಗತ್ತಿನಲ್ಲಿ ಕಂಡೂ ಕೈಗೆಸಿಕ್ಕದೆ ಕವಿಯನ್ನು ಕಾಡುವ ಭಾವಗಳಿಗೆ, ವಿಚಾರಗಳಿಗೆ ಮೂರ್ತರೂಪ ದಕ್ಕಲು ಅನಿವಾರ್ಯವಾಗಿ ಪ್ರತಿಮೆಯೊಂದರ ನಿರ್ಮಾಣವಾಗುತ್ತದೆ. ಹಾಗೆ ಅಯಾಚಿತವೆನ್ನುವ ಹಾಗೆ ಪ್ರತಿಮೆಯೊಂದು ರೂಪಗೊಂಡಾಗ ಮಾತ್ರ ಅದು ನಿಜದ ನೆಲೆಯಲ್ಲಿ ಸ್ಥಾಪಿತವಾಗುತ್ತದೆ. ಅದಲ್ಲದೆ, ಎಚ್ಚರದಲ್ಲಿ ರೆಡಿಮೇಡ್ ಪ್ರತಿಮೆಗಳನ್ನು ಬಳಸಿ, ಪದ್ಯರಚಿಸುವ ಹವ್ಯಾಸವು ಸಂತೆಯ ಹೊತ್ತಿಗೆ ನೆಯ್ದ ಮೂರು ಮೊಳವಾಗುವ ಸಂಭವವೇ ಹೆಚ್ಚು. ರೆಡಿಮೇಡ್ ಯಾವುದು, ಸಹಜ ಯಾವುದು ಎನ್ನುವ ವಿಂಗಡಣೆ ಕೂಡ ಕೂದಲೆಳೆಯ ಅಂತರದ್ದಾಗುವ ಸಾಧ್ಯತೆ ಇದೆ. ಯಾಕೆಂದರೆ ಒಂದು ಅರ್ಥದಲ್ಲಿ ಎಲ್ಲವೂ ಸಿದ್ಧವಾದದ್ದೇ, 'ಇರು'ವಂಥದ್ದೇ! ಆದರೂ ಅದು ಹೊಸತಾದದ್ದು, ಸಹಜವಾದದ್ದು ಅನ್ನಿಸುವುದು ಕವಿ ಅದನ್ನು ಬಳಸಿಕೊಳ್ಳುವ ಅನನ್ಯತೆಯಲ್ಲಿ.

ನನ್ನ ಕವಿತೆಗಳನ್ನೇ ನೋಡುವುದಾದರೆ, ಕಳೆದ ಅನೇಕವರ್ಷಗಳಿಂದ ನಾನು ಬರೆಯುತ್ತಾ ಬಂದಿರುವ ಕವಿತೆಗಳಲ್ಲಿ-ಯಾವ ಪ್ರತಿಮೆಗಳೆಲ್ಲಾ ಇವೆ ಎಂಬುದನ್ನು ನಾನು ನೆನಪಿಟ್ಟುಕೊಂಡಿಲ್ಲ. ಅದು ಸಾಧ್ಯವೂ ಇಲ್ಲ. ಆದರೆ, ಈಚಿನ ನನ್ನ ಆಸಕ್ತಿಯನ್ನು ಹೇಳಿಕೊಂಡರೆ, ಈ ಪ್ರಶ್ನೆಗೆ ಒಂದು ಮಟ್ಟಿನ ಉತ್ತರವಾದರೂ ದೊರಕೀತೋ ಏನೋ!

ಈಚೆಗೆ ನಾನು ಕವಿತೆಗಳ ಮೂಲಕ, ಮನುಷ್ಯನ ಸಮಗ್ರಬದುಕನ್ನು ಮತ್ತು ಆಮೂಲಕ ವಿಶ್ವದ ಒಟ್ಟೂ ಬದುಕನ್ನು ಸೆರೆಹಿಡಿದು ಸ್ಥಿರಗೊಳಿಸಬಲ್ಲ ಸಾರ್ಥಕ ಪ್ರತಿಮೆಯೊಂದರ ಹುಡುಕಾಟ ನಡೆಸಿದ್ದೇನೆ. ಸುರಿಯುವ ಮಳೆಯನ್ನು, ಅರಳುವ ಹೂವನ್ನು, ಮಳೆ ಬಿಸಿಲು ಗಾಳಿಗಳಿಗೆ ಮೈಯೊಡ್ಡಿ ನೆಲದಲ್ಲಿ ಬೇರೂರಿಯೂ ಮುಗಿಲತ್ತ ಕೈ ಚಾಚುವ ಹಸುರು ಮರಗಳನ್ನು, ಆಕಾಶದಲ್ಲಿ ಹಾರಾಡುತ್ತಾ ವಿಚಿತ್ರ ವಿನ್ಯಾಸಗಳನ್ನು ನಿರ್ಮಿಸುವ ಹಕ್ಕಿಗಳನ್ನು ಕಾಡ ನಿಗೂಢಗಳಾದ ಪ್ರಾಣಿಗಳನ್ನು ಬೆರಗಿನಿಂದ ನಿರೀಕ್ಷಿಸುತ್ತಾ, ಇವುಗಳ ನಿರಂತರ ಹೊಸತನದ, ಲವಲವಿಕೆಯ ರಹಸ್ಯ ಏನು, ಇವುಗಳ ನಡುವೆ ಮನುಷ್ಯನ ಸ್ಥಾನ ಯಾವುದು ಎಂಬುದನ್ನು ಚಿಂತಿಸಿದ್ದೇನೆ. ಹಾಗೆ ಚಿಂತಿಸುತ್ತಿರುವಾಗಲೇ ಪ್ರಕೃತಿಯ ಈ ಸಹಜ ಅಂಗಗಳು ನನ್ನ ಕವಿತೆಗಳಲ್ಲಿ ಪ್ರತಿಮೆಗಳಾಗಿ ಮೂಡಿಕೊಳ್ಳುತ್ತಾ, ಮನುಷ್ಯನ ಕುಬ್ಜತೆ, ಇತಿ-ಮಿತಿಗಳನ್ನು ಮನುಷ್ಯ ಜೀವಿತದ, ಆ ಮೂಲಕ ವಿಶ್ವದ ಒಟ್ಟೂ ಬದುಕಿನ ವಿನ್ಯಾಸಗಳನ್ನೂ, ಅರ್ಥವಂತಿಕೆಯನ್ನು, ವಿಶ್ವ-ಹಾಗೂ ಅದರ ನಡುವೆ ಮನುಷ್ಯನ ಸ್ಥಾನ-ಮಾನಗಳನ್ನು ಸೂಚಿಸುವ

ಪ್ರಯತ್ನ ನಡೆಸಿವೆ. ನನ್ನ 'ಅಳಿಲು-ಕವಿತೆ'ಯಲ್ಲಿ ಬರುವ ಅಳಿಲು, ಮುಚ್ಚಿದ ಕೋಣೆಯೊಳಗೆ ಕುಳಿತು ಕವಿತೆ ಬರೆಯಲು ಯತ್ನಿಸುತ್ತಿರುವ ಕವಿಯನ್ನು 'ಕೋಣೆಯೊಳಗೆ ಕುಳಿತು ಬರೀತಾನಾ ಪದ್ಯ?' ಅಂತ ಪ್ರಶ್ನಿಸುತ್ತಾ ಮನುಷ್ಯನ ಕುಬ್ಜತೆಯನ್ನು, ಮಿತಿಯನ್ನು ಅಣಕಿಸುತ್ತದೆ. 'ಹಕ್ಕಿ ಮತ್ತು ಕಣ್ಣು' ಕವಿತೆಯಲ್ಲಿ ಹಕ್ಕಿ ತನ್ನತ್ತ ಕಲ್ಲು ಬೀರಿದ ವ್ಯಕ್ತಿಯನ್ನು ಧಿಕ್ಕರಿಸುತ್ತದೆ; ತನ್ನ ಸ್ವಾತಂತ್ರ್ಯಕ್ಕೆ ಅಡ್ಡಿಮಾಡಿದ್ದನ್ನು ತಿರಸ್ಕಾರದಿಂದ ಕಾಣುತ್ತದೆ. ಅದೇಹಕ್ಕಿ 'ಗಂಗೋತ್ರಿ'ಯಲ್ಲಿ ಯುವಚೇತನಗಳಿಗೆ ಪ್ರತಿಮೆಯಾಗಿ ಬಂದರೆ, 'ಆ ಹಕ್ಕಿ ಹಿಂದೆ' ಕವಿತೆಯಲ್ಲಿ ನಮ್ಮ ಬೆನ್ನಹಿಂದೆಯೇ ಅಡಗಿರುವ ಸಾವಿನ ಸಂಕೇತವಾಗಿ ಕಾಣಿಸಿಕೊಳ್ಳುತ್ತದೆ. 'ಚೊಕ್ಕಾಡಿಯ ಹಕ್ಕಿಗಳು' ಹಾಗೂ 'ಎಲ್ಲಿಹೋದವೋ' ಕವಿತೆಗಳಲ್ಲಿ ನಾವು ಕಳಕೊಂಡ ಜೀವನಸಮೃದ್ಧಿಯ ಪ್ರತಿಮೆಗಳಾಗಿ ಹಕ್ಕಿ ಕಾಣಿಸಿಕೊಂಡರೆ 'ಕಾಡು ಹಕ್ಕಿಯ ಪಾಡಿ'ನಲ್ಲಿ ಇರಲು ಗೂಡಿಲ್ಲದ, ಹಾಡಿಕೊಳ್ಳಲು ತನ್ನದನಿಯಿಲ್ಲದ, ಬದುಕಿಕೊಳ್ಳಲು ತಕ್ಕಉಸಿರಿಲ್ಲದ, ಕಾಡು ಹಕ್ಕಿಯ ಪಾಡು ಸದ್ಯ ಅಸ್ತಿತ್ವಕಳೆದುಕೊಂಡ ಆಧುನಿಕ ಮನುಷ್ಯನ ಪಾಡೂ ಆಗುತ್ತದೆ.

ನನ್ನನ್ನು ಕಾಡಿದ, ಕಾಡುತ್ತಿರುವ ಇನ್ನೊಂದು ಪ್ರತಿಮೆಯೆಂದರೆ ಮರ. ಒಂದು ಮಾತು ನೆನಪಾಗುತ್ತದೆ: ಲಾರೆನ್ಸನ 'I am free as a rooted tree is free'. ನೆಲದಲ್ಲಿ ಬೇರಿಳಿಸಿ, ಆಕಾಶಕ್ಕೆ ಕೈಚಾಚುವ, ಮಣ್ಣಿನಿಂದ ಸತ್ವಹೀರಿ ಕೊಂಬೆಕೊಂಬೆಗಳಿಗೆ ಅದನ್ನು ಹರಿಯಿಸುವ, ಆದಷ್ಟೂ ದೂರ ತನ್ನ ಬೀಜವನ್ನೆಸೆದು ಅಲ್ಲೆಲ್ಲ ತನ್ನ ಮಾಯಪಟವನ್ನು ಬಿಚ್ಚುವ ಮರವು ನನ್ನ ಅನೇಕ ಪದ್ಯಗಳಲ್ಲಿ ಒಟ್ಟೂ ಮನುಷ್ಯ ಚೇತನದ ಮಿತಿ ಹಾಗೂ ಸಾಧ್ಯತೆಗಳಿಗೆ, ಅವನ ಸ್ವಾತಂತ್ರ್ಯದಕಾಂಕ್ಷೆಗೆ, ಆವರ್ತಗೊಳ್ಳುವ, ಶಾಶ್ವತಗೊಳ್ಳಲು ಹವಣಿಸುವ ಮನುಷ್ಯ ಜೀವಿತಕ್ಕೆ ತಕ್ಕ ಪ್ರತಿಮೆಯಾಗಿ ಮೂಡಿಕೊಳ್ಳಲು ಹವಣಿಸಿದೆ. 'ಧ್ಯಾನಸ್ಥ' ಕವಿತೆಯಲ್ಲಿ ತ್ರಿಭಂಗಿ ನಿಲುವಲ್ಲಿ ಧ್ಯಾನಸ್ಥವಾಗಿ ನಿಂತು ಆಕಾಶಕ್ಕೆ ಲಗ್ಗೆಯಿಟ್ಟಂಥ ಪಾರಿಜಾತದ ಪ್ರತಿಮೆ, ಈ ನೆಲದಲ್ಲಿ ನೆಲೆಯೂರಿಯೇ ಆಕಾಶದ ಸಾಧ್ಯತೆಗಳ ಕಡೆಗೆ ಕೈಚಾಚುವ ಮನುಷ್ಯ ಚೈತನ್ಯದ ಎಲ್ಲ ಮುಖಗಳನ್ನು ಸೂಚಿಸುವ ಪ್ರಯತ್ನ ಮಾಡುತ್ತದೆ ಎಂದು ನಾನು ಭಾವಿಸಿದ್ದೇನೆ.

ಹಾಗೆ ನೋಡಿದರೆ, ಈ ಮರದ ಪ್ರತಿಮೆ ಹೊಸತೇನೂ ಅಲ್ಲ. ನನ್ನದೂ ಅಲ್ಲ. ವೇದಗಳಿಂದ ಹಿಡಿದು ನಮ್ಮ ಭಾರತೀಯ ಕಾವ್ಯ, ಶಾಸ್ತ್ರ, ಪುರಾಣಗಳಲ್ಲಿ ಪ್ರಧಾನವಾಗಿ ಪ್ರಸ್ತಾಪವಾಗುವ ಪ್ರತಿಮೆಯೇ ಇದು. ಇದರ ಈ ನಿಗೂಢವಾದ ಚಿರಂತನ ಯೌವನದ ಗುಣದಿಂದಾಗಿಯೇ ಇದು ಬದುಕಿಗೆ ಸಮರ್ಥ ಪ್ರತಿಮೆಯಾಗಿ ನನಗೆ ಕಂಡಿದೆ. 'ಒಂದು ಮರ'ದಲ್ಲಿ ಬದುಕಿನ ನಿರಂತರ ಚಕ್ರಕ್ಕೆ ಪ್ರತಿಮೆಯಾಗಿ ಈ ಮರ ಕಾಣಿಸಿಕೊಂಡರೆ, 'ಈ ಮರದ ಕೆಳಗೆ', ಕವಿತೆಯಲ್ಲಿ ಈ ಸನಾತನ ವೃಕ್ಷವೇ ಮತ್ತೆ, ಈಚಿನ ಕೋಮು ಗಲಭೆಯ ವಿವರಗಳ ಹಿನ್ನೆಲೆಯಲ್ಲಿ ಪ್ರಸ್ತಾಪಗೊಳ್ಳುತ್ತದೆ. ಸ್ಥಿತಪ್ರಜ್ಞವಾದ ಧ್ಯಾನಸ್ಥವಾದ, 'ಉದುರಿದೆಲೆಗಳ ಮರೆತು ಹೊಸ ಚಿಗುರ ಉಳಿಸುವ, ಕಣ್ಬಿಡುವ ಹಕ್ಕಿಗಳ ಕಾಪಾಡುವ, ಆಸರೆಗೆ ಕಾದವಗೆ ನೆರಳೆರೆವ ನಿತ್ಯ ನೂತನ ಕಾರ್ಯ' ನಡೆಸುತ್ತಿರುವ ಈ ಮರದ ಅಡಿಯಲ್ಲಿ

ನಿಂತ ಮನುಷ್ಯ ಯಾಕೆ ಅದರಿಂದ ಪಾಠಕಲಿತಿಲ್ಲ ಎಂದು ಕೇಳಿಕೊಳ್ಳಲು, ಅರ್ಥೈಸಿಕೊಳ್ಳಲು ಯತ್ನಿಸಿದ್ದೇನೆ.

ಮುಖ್ಯವಾಗಿ ಹೇಳುವುದಾದರೆ, ನನ್ನ ಕಾವ್ಯ ಪ್ರತಿಮೆಗಳೆಲ್ಲ ನನ್ನ ಸುತ್ತಲಿನ ಪ್ರಕೃತಿಯಲ್ಲಿನ, ಅಳಿಲು, ಬೆಕ್ಕು, ನಾಯಿ, ಹಾವು, ಕಪ್ಪೆ, ಹಕ್ಕಿಗಳು, ಮರಗಳು, ಮೊದಲಾದವುಗಳೂ ಆಗಿವೆ. ಇವು ಪ್ರಕೃತಿಯಿಂದ ನನ್ನ ಮನಸ್ಸಿನೊಳಗೆ ನುಗ್ಗಿ, ನನ್ನ ಅನುಭವದೊಂದಿಗೆ ಬೆರೆತು, ಅಲ್ಲಿನ ಅಮೂರ್ತವೂ ಅಲೆಮಾರಿಯೂ ಆದ ಭಾವಗಳಿಗೆ, ಗ್ರಹಿಕೆಗಳಿಗೆ ರೂಪವಾಗುತ್ತಾ ಕಾವ್ಯದಲ್ಲಿ ಕಾಣಿಸಿಕೊಂಡಿವೆ. 'ನನ್ನ ಪುಟ್ಟ ಪ್ರಪಂಚ' ಕವಿತೆ ಇದನ್ನೇ ಸೂಚಿಸುತ್ತದೆ. ಇವೆಲ್ಲವನ್ನೂ ಒಟ್ಟಾಗಿ ಹಿಡಿಯುವ ಬಗೆ ಹೇಗೆಂದು ನಾನು ಚಿಂತಿಸುತ್ತಿದ್ದೇನೆ. ಅಂದರೆ ಇವುಗಳ ಮೂಲಕ, ನಾನು ಈ ಮೊದಲೇ ಹೇಳಿದಂತೆ ಸಾರ್ಥಕ ಪ್ರತಿಮೆಯೊಂದನ್ನು ಹುಡುಕುತ್ತಿದ್ದೇನೆ. ಪ್ರತಿಯೊಬ್ಬ ಕವಿಯೂ ಇಂಥ ಸಮರ್ಥ ಪ್ರತಿಮೆಯೊಂದರ ಅನ್ವೇಷಣೆಯಲ್ಲೇ ಇರುತ್ತಾನೆ ಮತ್ತು ಅಂಥ ಪ್ರತಿಮೆಯೊಂದು ದಕ್ಕಿದಾಗ ಅವನ ಕಾವ್ಯ ಸಫಲವಾದಂತೆ ಎಂದು ನಾನು ಭಾವಿಸುತ್ತೇನೆ. (ಅಲ್ಲದೆ ಬಹುಶಃ ಕವಿ ತನ್ನ ಜೀವಿತದಲ್ಲಿ ಇಂಥ ಒಂದು ಪ್ರತಿಮೆಯನ್ನು ಮಾತ್ರ ಕಂಡುಕೊಳ್ಳಬಲ್ಲನೇನೋ?) ಆದರೆ ಈ ಅನ್ವೇಷಣೆಯ ಕಾರ್ಯ ನಿಜವಾಗಿಯೂ ಸೃಜಶೀಲತೆಯ ಸುಳಿಯಲ್ಲಿ ಸಿಲುಕಿಕೊಂಡ ಕವಿಗೆ–ಇನ್ನೊಬ್ಬ ಅಂಥ ಕವಿಗೆ ಮಾತ್ರ ಅರ್ಥವಾಗುವಂತಹ–ಅತ್ಯಂತ ತಲ್ಲಣದ, ಉದ್ವಿಗ್ನತೆಯ, ನೋವಿನಕಾರ್ಯ. ನನಗೆ ಅದು ಎಂದು ದಕ್ಕೀತು? ಎಂದು ಈ ತಲ್ಲಣದಿಂದ ನೋವಿನಿಂದ ಬಿಡುಗಡೆ ಸಿಕ್ಕೀತು? ಗೊತ್ತಿಲ್ಲ. ನನ್ನ 'ಅದು ನಾನು' ಎನ್ನುವ ಕವಿತೆಯಲ್ಲಿ ಸೂಚಿಸುವಂತೆ ' ಆ ಮರವೇ ನಾನು' ಎಂದಾದಾಗ ಇರಬಹುದೇ? 'ಸೋಽಹಂ' ಎನ್ನುವುದು ಇದೇ ಏನು?

ಘನವ ಮನಕಂಡು
ಅದನೊಂದು ಮಾತಿಂಗೆ ತಂದು ನುಡಿದು ನೋಡಿದಡೆ
ಅದಕ್ಕದೇ ಕಿರಿದು ನೋಡಾ!
ಅದೇನೂ ಇಲ್ಲದ ನಿಸ್ಸಂಗದ ಸುಖವು ಗುಹೇಶ್ವರ.

– ಅಲ್ಲಮ ಪ್ರಭು

ಕಾವ್ಯ ಕಾರಣ...

– ಜಯಂತ ಕಾಯ್ಕಿಣಿ

ಕಾವ್ಯ ಮನುಷ್ಯನನ್ನು ಅವನ ಸೀಮೆಗಳತ್ತ ಹಿಗ್ಗಿಸುವ ಒಂದು ಮಾಂತ್ರಿಕ ಶಕ್ತಿ. ಬಾಳು ಬರೇ ಮೂರ್ತವಲ್ಲ, ಶರೀರವಲ್ಲ. ಬರೇ ವಿವರವಲ್ಲ. ಈ ವಿಫಲ ಬದುಕಿನ ಹೊರ ವಿವರಗಳಿಗೆ ಒಂದು ಒಳ ಅರ್ಥಪೂರ್ಣತೆಯ ಭ್ರಮೆಯನ್ನು ಕಾವ್ಯ ಉಂಟುಮಾಡುತ್ತದೆ. ಬದುಕಿನ ಶರೀರಕ್ಕೆ ಮಾರ್ದವತೆಯ ಆತ್ಮವನ್ನು ಕಾವ್ಯ ಕೊಡುತ್ತದೆ ಅಥವಾ ಸರಿಪಡಿಸಿ ಹೇಳುವದಾದರೆ ಬಾಳಿನ ಧಡೂತಿ ವಾಸ್ತವ ಶರೀರದ ಹೃದಯವೇ ಕಾವ್ಯ. ಇದು ಪ್ರತಿ ಜೀವಿಯಲ್ಲೂ ಇದೆ. ಮತ್ತು ಭಾಷೆಯಂಥ ಮೂರ್ತ ಮಾಧ್ಯಮಗಳನ್ನೂ ಮೀರಿದೆ. ಅಂತೆಯೇ ಎಷ್ಟೋ ಸಂವತ್ಸರ ಕಂಡ ಮಾಗಿದ ವೃದ್ಧರು, ಸೂಲಗಿತ್ತಿಯರು, ವಿಧವೆಯರು, ಓದು ಬರಹ ಬಾರದೆಯೂ ಈ ಕಾವ್ಯದ ತುರೀಯ ಕ್ಷಣಗಳನ್ನು ಪಡೆವ ಭಾಗ್ಯ ಉಳ್ಳವರಾಗಿದ್ದಾರೆ. ಹುಟ್ಟುಕುರುಡ ಸಂಗೀತಗಾರನೊಬ್ಬ ಕಂಪನಿ ನಾಟಕದಲ್ಲಿ ಕಾಲಿನ ಪೇಟಿ ಬಾರಿಸುತ್ತಲೇ ಅತ್ಯುನ್ನತ ವಿವೇಕದ, ಸಂವೇದನೆಯ ನೆಲೆ ತಲುಪಿದ್ದನ್ನು ನಾನು ನೋಡಿದ್ದೇನೆ. ಹೀಗಾಗಿ ಕಾವ್ಯವನ್ನು ನಾನು ಈ ಭಾಷೆಯ ಅಹಂಕಾರದ ನೆಲೆಯ ಆಚೆಗೇ ಇಡಬಯಸುತ್ತೇನೆ. ಪ್ರತಿಜೀವಿಯ ಅಹಂಕಾರಶೂನ್ಯ ಕ್ಷಣವೇ ಆತನ ಸೃಜನ ಕ್ಷಣ. ಅತ್ಯುತ್ತಮ ಕ್ರೀಡಾ ಪಟುವಿನ ಶಿಖರ ಕ್ಷಣ, ಸಂಗೀತಗಾರನ ತನ್ಮಯ ಕ್ಷಣ, ಶಸ್ತ್ರಕ್ರಿಯೆಯ ನಡುವಿನ ವೈದ್ಯನ ಶ್ರದ್ಧಾವಂತ ಕ್ಷಣ ಮತ್ತು ಕಾವ್ಯ ನಿರ್ಮಿತಿಯ ಕ್ಷಣ ಇವು ಒಂದೇ.

ಗಿಡದ ಒಳಮೈಯಿಂದಲೇ ಹೊರಬರಬೇಕು ಎಲೆಗಳು. ಎಷ್ಟೇ ಸುಂದರವಾಗಿದ್ದರೂ ಬೇರೆ ಎಲೆಗಳನ್ನು ಅಂಟಿಸುವದಕ್ಕಾಗುವದಿಲ್ಲ. ಕಾವ್ಯ ಕೊನೆಗೂ ನೋಡುವ ಬಗೆಗೆ, ಗ್ರಹಿಕೆಯ ಕ್ರಮಕ್ಕೆ, ಭಾವಿಸುವ ನಮೂನೆಗೆ ಸಂಬಂಧಿಸಿದ್ದು. ದಾಖಲೆಗೆ ಸಂಬಂಧಿಸಿದ್ದಲ್ಲ. ಭಾಷೆಯಲ್ಲಿನ ಕಾರಕೂನಿಗೆ ಸಂಬಂಧಿಸಿದ್ದಲ್ಲ. ಯಾಕೆಂದರೆ ಈ ಕಾರಕೂನಿ ಎಂಬುದು ನಮ್ಮನ್ನು ಸದಾ ನಿರ್ಮಾನುಷಗೊಳಿಸುವದರಲ್ಲಿ ತೊಡಗಿರುತ್ತದೆ. ಕತ್ತರಿಸುತ್ತಿರುತ್ತದೆ. ಇಸ್ತ್ರಿ ಹಾಕುತ್ತಿರುತ್ತದೆ. ಕಾವ್ಯ ಒಂದು ಹುಡುಗ ಹುಡುಗಿಯ ನಡುವಿನ ಪ್ರೇಮವಾದರೆ ಆ ಹುಡುಗ ಹುಡುಗಿ ಸಾಮಾಜಿಕವಾಗಿ ವಿಧಿವತ್ತಾಗಿ ಮದುವೆ ಗಿದುವೆ ಮಾಡಿಕೊಂಡು ಹೂಡಿದ ಅಡಿಗೆ ಗಿಡಿಗೆ ಪಾತ್ರೆ ಪಡಗ ಸಂಸಾರವೇ ಸಾಹಿತ್ಯ ಅನ್ನಬಹುದು. ಭಾಷಾತೀತವಾದ ಕಾವ್ಯ ಭಾಷಾವಲಂಬಿ ಸಾಹಿತ್ಯ ಅನ್ನಿಸಿಕೊಳ್ಳುವದು ಹೀಗೆ. ಆದರೆ ಮದುವೆಯ ನಂತರ, ಪ್ರೇಮ role play ಗಳ ಗೊಂದಲದಲ್ಲಿ ಬೀಳುವಂತೆ ಕಾವ್ಯವೂ ಭಾಷೆಯ ದೇಹದ role play ಗಳ

ಗೊಂದಲದಲ್ಲಿ ಬೀಳುತ್ತದೆ . ಮತ್ತು ಈ ಗೊಂದಲದ ಏಳುಬೀಳುಗಳ ದಾಖಲೆಯನ್ನು ಜಾಣರು ಸಾಹಿತ್ಯ ಚರಿತ್ರೆ ಎಂದು ಕರೀತಾರೆ.

ಮನುಷ್ಯನ ಸಾರ್ವತ್ರಿಕ ಒಳ ಜೀವದ ಚೂರೊಂದು ಭಾಗ ಮಾತ್ರ ಭಾಷೆಯ ಸೆರಗಿನಲ್ಲಿ ಅದೂ ಇಸ್ತ್ರಿ ಹಾಕಲ್ಪಟ್ಟು ಬರುತ್ತದೆ ಎನ್ನುವ ಅರಿವಿನ ಹಿನ್ನೆಲೆಯಲ್ಲಿ ನಿಂತರೆ ಈ ದಾಖಲೆಗೊಂಡ ಅಥವಾ encash ಆದ ಕಾವ್ಯದ ಲಿಖಿತ ರೂಪದ ಖಾನೇಸುಮಾರಿ ಕೆಲಸ ಎಷ್ಟೊಂದು ತಮಾಷೆಯದು ಅನಿಸುತ್ತದೆ. ಇದು ವಿಶ್ಲೇಷಣೆ, ಅಂಕಿ ಸಂಖ್ಯೆ, data ಗಳ ಪರ್ವ. ಮಲೆನಾಡು, ಕರಾವಳಿ, ಮರುಭೂಮಿ ಅಂತ ವಿಂಗಡಿಸುವಂತೆ ಅಥವಾ ಮರ ಗಿಡ-ಪೊದೆ ಅಂತ ವಿಂಗಡಿಸುವಂತೆ ಅಷ್ಟೇ ನಿಖರತೆಯಿಂದ ನವೋದಯ, ನವ್ಯ, ನವ್ಯೋತ್ತರ ಅಂತ ವಿಂಗಡಿಸುತ್ತೇವೆ. ಸಧ್ಯ ! ಪ್ರಕೃತಿಗೆ ನಮ್ಮ ವಿಂಗಡಣೆಗಳು ಗೊತ್ತಿದ್ದಂತಿಲ್ಲ. ಗೊತ್ತಿದ್ದರೆ ಎಂತೆಂಥ ಪೀಕಲಾಟಗಳನ್ನು ಒಡ್ಡುತ್ತಿದ್ದವೋ. ಆದರೆ ಹುಲುಮಾನವನಿಗೆ ಎಲ್ಲಾ ಗೊತ್ತುಂಟು. ಲಾತೂರಿನಲ್ಲಿ ಸತ್ತವರು ಮೂವತ್ತೆರಡಲ್ಲ ಮೂವತ್ತೈದು ಸಾವಿರ ಅಂತ ಅವ ಹೇಳುತ್ತಾನೆ. ಇದು ಆತ್ಮಹತ್ಯೆಯಲ್ಲ ಕೊಲೆ ಅಂತ ಹೇಳುತ್ತಾನೆ. ತುಂಬಿದ ಬಜಾರಿನಲ್ಲಿ ಚಡ್ಡಿ ತೆಗೆಸಿ ಮುಸ್ಲಿಮನೋ ಹಿಂದುವೋ ಅಂತ ಪತ್ತೆ ಹಚ್ಚಿ ಚೂರಿ ಹಾಕುತ್ತಾನೆ. ಚೂರಿ ಹಾಕುವ ರೀತಿಯಲ್ಲೂ ವಿಧ ವಿಧಾನ ಕಂಡು ಹಿಡಿಯುತ್ತಾನೆ. ಒಂದೇ ಇರಿತದಲ್ಲಿ ಒಳಕರುಳುಗಳನ್ನೆಲ್ಲ ಬಗೆಯುವಂತೆ ಹಿಡಿ ತಿರುಗಿಸುವ ಕಲೆ ಇತ್ತೀಚಿನ ಬೆಳವಣಿಗೆ ಎಂದು ಕೋಮು ಗಾಯಾಳುಗಳ ಮೇಲೆ ಶಸ್ತ್ರ ಕ್ರಿಯೆ ನಡೆಸಿದ ವೈದ್ಯರ ಅಭಿಪ್ರಾಯ ಇದೆ. ಇಂಥ ಮನುಷ್ಯನೇ ಕವಿ ಆಗಿಬಿಟ್ಟರೆ ! ವಿಶ್ಲೇಷಣ ತಂತ್ರದ ಹುರುಳನ್ನೆಲ್ಲ ಅರೆದು ಕುಡಿದು ಅತ್ಯಂತ 'ಯಶಸ್ವಿ' ಸರಕನ್ನೆ ಆತ ಉತ್ಪಾದಿಸಬಹುದು. ಈ ಪರಿಭಾಷೆ ನೋಡಿ- ''ಭಾಷೆಯನ್ನು ದುಡಿಸುವದು'' (ಕವಿ ದುಡಿಯುವದಲ್ಲ !) ''ಭಾವದ ಮೂಲ ದ್ರವ್ಯ'' ''ಅನುಭವದ ಅಸಲು'' ಇವೆಲ್ಲ 'ಉತ್ಪಾದನೆ'ಯ ಉಕ್ತಿಗಳು. ಬುದ್ಧಿಯ ಆಟಾಟೋಪಗಳು. ಆದರೆ ಈ ಬುದ್ಧಿ ಭಾಷೆಯ ಅಹಂಕಾರವೂ ಅಲ್ಲಲ್ಲಿ ಮುರಿಯುವದುಂಟು. ಮತ್ತು ಈ ಅಹಂಕಾರ ಮುರಿದ ಸಂದಿಯಲ್ಲಿ ಒಳ ಕಾವ್ಯದ ಉಸಿರು ನಮಗೆ ಕೇಳಿ ಬರುತ್ತದೆ.

ಈ ಉಸಿರಿಗೆ ಇಡೀ ಪೇಟೆಯ ಗಂಧ ಇರುತ್ತದೆ. ಈ ಗಂಧದಲ್ಲಿ ಹೂವಿನಂಗಡಿ, ಚಪ್ಪಲಿ ಅಂಗಡಿ, ದಿನಸಿ ಅಂಗಡಿ. ಭಜಿ ಅಂಗಡಿ, ಎಲ್ಲ ಇದೆ. ಶಿಲೆಯ ಕಲ್ಲು ಹೊರುವ ಮುದಿಕೂಲಿಯ ಬೆವರು, ಗರ್ಭಗುಡಿಯಲ್ಲಿ ಆರತಿ ಎತ್ತುವಾಗಿನ ಬೊಜ್ಜು ಬೆವರು, ಸಂತರ್ಪಣೆಯಲ್ಲಿ ಕಂಠಪೂರ್ತಿ ಕಜ್ಜಾಯ ಹೊಡೆದ ಬೆವರು, ಪ್ರಸೂತಿ ಕ್ಷಣದಲ್ಲಿಯ ಬಾಣಂತಿಯ ಹಣೆ ಮೇಲಿನ ಬೆವರು ಎಲ್ಲ ಇವೆ. ಎಲ್ಲ ಬೇರೆ ಇದ್ದೂ ಒಂದಾಗುತ್ತವೆ. ಕರುಗುತ್ತವೆ. ಒಂದರೊಳಗೊಂದು ಹಾಯುತ್ತವೆ ಕಿರಣಗಳಂತೆ. ಕಾವ್ಯ ಹಾಯುತ್ತದೆ ವಸ್ತುಗಳ ಮೂಲಕ, ಹಿಗ್ಗುತ್ತ, ಹಿಗ್ಗಿಸುತ್ತ. ವಸ್ತುಗಳ 'ಬಗ್ಗೆ' ಅಲ್ಲ. ಅನುಭವಗಳ 'ಮೂಲಕ'. ಅನುಭವಗಳ 'ಬಗ್ಗೆ' ಅಲ್ಲ. ಒಬ್ಬ ಜೀವಿ ತನ್ನ ಕಾಲಖಂಡದಲ್ಲಿ ಎಲ್ಲ ಕಾವ್ಯಮಾರ್ಗಗಳನ್ನೂ ಚಿಂತನಾಮಾರ್ಗಗಳನ್ನೂ ದಾಟುತ್ತಾನೆ ಮತ್ತು ಅವುಗಳ ಮೂಲಕ ಬೆಳೆಯುತ್ತಾನೆ. ಪ್ರತಿ ಶಿಶುವೂ ತನ್ನ ಅಂಬೆಗಾಲು, ಶಿಶುಗೀತೆ, ಬಾಲಗೀತೆ, ಭಾವ ಗೀತೆಗಳ ದಾರಿಯಲ್ಲೇ ತನ್ನ ಸಂವೇದನೆಯ ಪಕ್ವತೆಯೆಡೆ ನಡೆದಂತೆ ಯಾವದೇ ಕಾಲದ

ಮನಸ್ಸಿಗೂ ಎಲ್ಲ ಕಾವ್ಯ ಮಾರ್ಗದ ಸಂವೇದನೆಯ ಸಂಸ್ಕಾರ ಅನಿವಾರ್ಯವಾಗಿದೆ. (ಕಾರಕೂನಿಯ ಭಾಷೆಯ ಉದಾಹರಣೆ ಕೊಡುವುದಾದರೆ ಯಾವ ಜೀವಿಗೂ-ನವೋದಯದ ತನ್ಮಯತೆ, ರಸಪ್ರಜ್ಞೆ, ವಿನಯ, ನವ್ಯದ ಪ್ರಾಮಾಣಿಕತೆ, ಅಮೂರ್ತದ ಅರಿವು ಮತ್ತು ಬಂಡಾಯದ ಸಾಮಾಜಿಕ ನೈತಿಕತೆ ಆತ್ಮವಿಮುಖತೆ, ಪ್ರಜ್ಞಾವಂತಿಕೆ-ಇವು ಒಂದೇ ಕಾಲಕ್ಕೆ ಅನಿವಾರ್ಯವಾಗಿದೆ.) ಪ್ರತಿ ಜೀವಿಯೊಳಗಿನ ಮಾನವ್ಯದ ಹೂರಣವೇ ಕಾವ್ಯ ಎಂದು ನಂಬಿರುವದರಿಂದ 'ಕವಿ' ಎನ್ನುವ ಶಬ್ದವನ್ನು ಬಳಸುತ್ತಿಲ್ಲ. ಯಾವುದಕ್ಕೆ ನಾವು ಕರುಗುತ್ತೇವೋ, ಯಾವುದರಿಂದ ನಮ್ಮೊಳಗಿನ ಮಾನವೀಯ ಸಂಘರ್ಷಗಳು active ಆಗುತ್ತವೆಯೋ ಯಾವುದರಿಂದ ಸಾರ್ವತ್ರಿಕ ಆತ್ಮವೊಂದರ ಜುಮ್ಮೆನಿಸುವ ಸ್ಪರ್ಶ ಕಿಂಚಿತ್ತಾದರೂ ಆಗುತ್ತದೋ ಅದನ್ನು ಕಾವ್ಯ ಅನ್ನಬೇಕೇ ಹೊರತು ಯಾವುದರಿಂದ ಬುದ್ಧಿವಂತರಾಗುತ್ತೇವೋ ಯಾವುದಕ್ಕೆ ತಲೆದೂಗುತ್ತೇವೋ ಅದನ್ನಲ್ಲ.

ಮನುಷ್ಯ ಈಗ ಅತ್ಯಂತ ಸಂಕಟ ಸ್ಥಿತಿಯಲ್ಲಿದ್ದಾನೆ. ಆತನಿಗೆ ತನ್ನೊಳಗಿನ ನಿಷ್ಕಪಟ ಮಗುವಿನ ಸಂಪರ್ಕವೇ ಕಡಿದುಹೋಗಿದೆ. ಆ ಮಗುವನ್ನು ತಾನು ಕಳಕೊಂಡಿದ್ದೇನೆ ಎಂದು ಭ್ರಮಿಸುವಷ್ಟು ಆತ ಮೊಂಡಾಗಿ ಹೋಗಿದ್ದಾನೆ. ಮರಗಟ್ಟಿದ್ದಾನೆ. ಆದರೆ ಈ ಮನುಷ್ಯನೂ-ಎಂಥ ಬಿಸಿಲಿನಲ್ಲೂ ಎಂಥ ಅಪರಿಚಿತ ಶಿಶು ನಕ್ಕರೂ ಪ್ರತಿಯಾಗಿ ನಗದೇ ಇರಲಾರ; ಪೋಸ್ಟ್ ಆಫೀಸಿನಲ್ಲಿ ನಡುಗುವ ಕೈಗಳ ವೃದ್ಧ ವಿಳಾಸ ಬರೆಯಲು ತಡಕಾಡುತ್ತಿದ್ದರೆ ಆತನಿಗೆ ನೆರವಾಗದೇ ಇರಲಾರ; ಬಸುರಿ ಹೆಂಗಸು ನಿಂತಿದ್ದರೆ ಎದ್ದು ಆಕೆಗೆ ಸೀಟು ಕೊಡದೇ ಇರಲಾರ. ಇದು ಆತನೊಳಗೆ ಇನ್ನೂ ಜೀವ ಹಿಡಿದಿರುವ ಕಾವ್ಯ. ಮನುಷ್ಯನೇನು ಕಬ್ಬಿಣದ ಪುಡಿಯೆ? ಆತ ಒಂದು ಮಣ್ಣಿನ ಗುಪ್ಪೆ. ತುಸು ನೀರು ಹಾಕಿದರೂ ಕೊನರಬಲ್ಲ. ಸುಟ್ಟು ಮಾಡಿದ ಇಟ್ಟಿಗೆಯ ಬೇಲಿಗಳೂ ಮಳೆ ಬಿದ್ದರೆ ಹಸಿರಾಗಿ ಬಿಡುತ್ತವಂತೆ- ಮನುಷ್ಯನೇಕೆ ಮೊಳೆಯಲಾರ?

ಒಳ್ಳೆಯ ಕಾವ್ಯಕ್ಕೆ ಈಗ ಬೇಕಾಗಿರುವದು ಒಳ್ಳೆಯ ಕವಿಗಳಲ್ಲ! ಒಳ್ಳೆಯ ಜೀವಿಗಳು. ಕೆಲವರು ಹೇಳುತ್ತಾರಲ್ಲ ಪ್ರೇತಾತ್ಮಗಳು ತಮಗೆ ಬೇಕಾದ ಶರೀರವನ್ನು ಅರಸುತ್ತ ಈ ಅವಕಾಶದಲ್ಲಿ ಅಲೆಯುತ್ತವೆ ಅಂತ. ಅದೇ ಥರ ಕಾವ್ಯಾತ್ಮವೂ ತಾನು ಪ್ರವೇಶಿಸಲು ನೆಲೆಸಲು ಒಳ್ಳೆಯ ಮನಸ್ಸಿನ ಜಾಗವನ್ನು ಅರಸುತ್ತ ಅಲೆಯುತ್ತಲೇ ಇರುತ್ತದೆ. (ಮಕ್ಕಳಲ್ಲಿ ಅದು ಈಗಾಗಲೇ ನೆಲೆಸಿದೆ). ನಮ್ಮ ಹೃದಯ ವಿಶಾಲವಾದಷ್ಟೂ ಕಾವ್ಯಕ್ಕೆ ಅಷ್ಟು ಜಾಗ ಸಿಕ್ಕಂತೆ. ಲಿಖಿತ ಕಾವ್ಯದಲ್ಲಿ ಸಮಾಜ ತರುವದೇನೂ ಕಷ್ಟವಲ್ಲ. ಮುಖ್ಯವೂ ಅಲ್ಲ. ಆದರೆ ಸಮಾಜದಲ್ಲಿ ಕಾವ್ಯ ತರುವದು ಮತ್ತು ಉಳಿಸುವದು ಅತ್ಯಂತ ಮುಖ್ಯ. ಇದೊಂದೇ ತನ್ನ ಶುದ್ಧ ರೂಪದಲ್ಲಿ ಮನುಷ್ಯನನ್ನು ಬರ್ಬರತೆಯಿಂದ ಕಾಪಾಡುವ ಸಂಜೀವಿನಿ ಆಗಬಹುದು. ಈ ನೆಲೆಯಲ್ಲೇ ಪ್ರತಿಜೀವಿಯ ಹವ್ಯಾಸಗಳು ಗುರಿಗಳು ಅಭಿವ್ಯಕ್ತಿಗಳು ಮುಖ ಮಾಡಲಿ. *ಪ್ರತಿವ್ಯಕ್ತಿಯ ಬದುಕಿನ ಭಾವಗುಣ, (emotional quality) ಅನುಭವ ಗ್ರಹಿಕೆಯ ಆಳ, ವಿಸ್ತಾರ ಹೆಚ್ಚಾಗಲಿ. ಬರೆಯದ ಕವಿತೆಗಳ ಮೊತ್ತ ಬರೆದ ಕವಿತೆಗಳಿಗಿಂತ ಸದಾ ಹೆಚ್ಚಿಗೇ ಇರಲಿ. ■

* ಪ್ರತಿ ವ್ಯಕ್ತಿಯ ಬದುಕಿನ ಭಾವಗುಣ (emotional qualities) ಅನುಭವ ಗ್ರಹಿಕೆಯ ಆಳ, ವಿಸ್ತಾರ ಹೆಚ್ಚಾಗಲಿ.

ನಾನೇನೋ ನನ್ನ ಕಾವ್ಯವೂ ಅದೇ...

– ಬಿ.ಆರ್. ಲಕ್ಷ್ಮಣರಾವ್

ಕನ್ನಡ ಕಾವ್ಯ ನವೋದಯ, ನವ್ಯ ಮತ್ತು ಬಂಡಾಯ ಮಾರ್ಗಗಳಲ್ಲಿ ಹಾದು, ಇಂದು ಆ ಎಲ್ಲ ಮಾರ್ಗಗಳ ಗುಣಾತ್ಮಕ ಅಂಶಗಳನ್ನೂ ಒಳಗೊಂಡು, ಋಣಾತ್ಮಕ ಅಂಶಗಳನ್ನು ನಿವಾರಿಸಿಕೊಂಡು, ಒಂದು ಹೊಸ ಸಮನ್ವಯ ಮಾರ್ಗದ ಆವಿಷ್ಕಾರದಲ್ಲಿ ತೊಡಗಿರುವಂತೆ ನನಗೆ ತೋರುತ್ತದೆ. ನವೋದಯದ ಹೃದಯವಂತಿಕೆ ಮತ್ತು ಭಾವಗೀತಾತ್ಮಕತೆ, ನವ್ಯದ ವಿಚಾರವಂತಿಕೆ ಮತ್ತು ಧ್ವನಿ ಸೂಕ್ಷ್ಮತೆ, ಬಂಡಾಯದ ಸಾಮಾಜಿಕ ಕಳಕಳಿ ಮತ್ತು ಹೊಣೆಗಾರಿಕೆ–ಇವುಗಳನ್ನು ಮೈಗೂಡಿಸಿಕೊಳ್ಳಲು ಇಂದಿನ ಕಾವ್ಯ ಯತ್ನಿಸುತ್ತಿದೆ. ಹಾಗೆಯೇ ನವೋದಯದ ಅತಿವಾಚ್ಯತೆ ಮತ್ತು ಭಾವಾತಿರೇಕದಿಂದ, ನವ್ಯದ ಅತಿಕ್ಲಿಷ್ಟತೆ ಮತ್ತು ಸಿನಿಕತನದಿಂದ, ಬಂಡಾಯದ ಆಕ್ರೋಶ ಮತ್ತು ಆರ್ಭಟಗಳಿಂದ ಪಾರಾಗಲೂ ಸಹ ಇಂದಿನ ಕಾವ್ಯ ಬಯಸುತ್ತಿದೆ.

ಪ್ರತಿಮೆಗಳಿಂದ ಇಡಿಕಿರಿದು, ಜಟಿಲ ಹೆಣಿಗೆಯಿಂದ ಕೂಡಿ, ಸಂಕೀರ್ಣವಾಗಿರುವ, ಸುಲಭ ಗ್ರಾಹ್ಯವಲ್ಲದ ಕಾವ್ಯವೇ ಶ್ರೇಷ್ಠ ಕಾವ್ಯ ಎಂಬ ಹಠ ಇಂದು ಸಡಿಲಗೊಂಡಿದೆ. ಕಾವ್ಯ ಸರಳವಾಗಿದ್ದೂ ಗಹನವಾಗಿರಲು, ಮಹತ್ವದ್ದಾಗಿರಲು ಸಾಧ್ಯ ಎಂಬ ನಂಬಿಕೆ ಇಂದು ಬಲಗೊಳ್ಳುತ್ತಿದೆ. ಹೀಗಾಗಿ ಕಾವ್ಯ ತನ್ನ ಜನಸಂಬಂಧಿತ್ವವನ್ನು ಮತ್ತು ಸಂವಹನ ಶೀಲತೆಯನ್ನು ಇಂದು ಮತ್ತೆ ಗಳಿಸಿಕೊಳ್ಳುತ್ತಿದೆ.

ನವೋದಯ ಕಾಲದ ಮುಕ್ತ ಮನಸ್ಸು, ವೈವಿಧ್ಯತೆ ಮತ್ತು ಪ್ರಯೋಗ ಶೀಲತೆ ಇಂದು ಕಾವ್ಯಕ್ಕೆ ಮತ್ತೆ ಹಿಂತಿರುಗುತ್ತಿವೆ. ನವ್ಯದ ಏಕ ಶಿಲಾರೂಪ ಮಾಯವಾಗಿ, ಮತ್ತೆ ಕಥನ ಕವನ, ಸುನೀತ, ಭಾವಗೀತೆ, ಅನುಭಾವ ಕವಿತೆ, ಹನಿಗವಿತೆ, ಹಾಸ್ಯ ಕವಿತೆ, ಮಕ್ಕಳ ಕವಿತೆ ಇಂದು ಮರುಹುಟ್ಟು ಪಡೆಯುತ್ತಿವೆ. ಮಹತ್ವದ ಸಂಗತಿಯೆಂದರೆ, ಕಾವ್ಯದಲ್ಲಿ ಇಂದು ಪಾಶ್ಚಾತ್ಯ ಪ್ರಭಾವ ಕುಗ್ಗುತ್ತಿದೆ; ದೇಸಿ ಗುಣ, ಕನ್ನಡತನ ಹೆಚ್ಚುತ್ತಿವೆ.

ಇಂದು ಅತ್ಯಂತ ಪ್ರಭಾವಶಾಲಿ ಸಮೂಹ ಮಾಧ್ಯಮಗಳಾದ ಪತ್ರಿಕೆಗಳು, ನಿಯತ ಕಾಲಿಕಗಳು, ರೇಡಿಯೊ, ಟಿ.ವಿ., ಸಿನಿಮ, ಆಡಿಯೋ ಮತ್ತು ವಿಡಿಯೋ ಕ್ಯಾಸೆಟ್ಟುಗಳು ಕೇವಲ ವ್ಯಾಪಾರೀ ದೃಷ್ಟಿಯಿಂದ, ಅಗ್ಗದ ಜನಪ್ರಿಯತೆಗೆ ಆದ್ಯತೆ ನೀಡಿ, ಜನತೆಯ ಅಭಿರುಚಿಯನ್ನು ಹದಗೆಡಿಸುತ್ತಿವೆ ಮತ್ತು ಬಹುಪಾಲು ಅನಕ್ಷರಸ್ಥರೇ ಆದ ನಮ್ಮ

ಗ್ರಾಮೀಣ ಜನರ ಜನಪದ ಸಂಸ್ಕೃತಿ ಹಾಗೂ ಲಲಿತ ಕಲೆಗಳ ಮೇಲೆ ದುರಾಕ್ರಮಣ ಮಾಡಿ, ಅವುಗಳನ್ನು ಹಾಳುಗೆಡವುತ್ತಿವೆ, ಎಂಬ ಆರೋಪ ಬಹುಮಟ್ಟಿಗೆ ನಿಜ. ಹಾಗೆಂದು, ಗಂಭೀರ ಸಾಹಿತ್ಯ, ಅದರಲ್ಲೂ ಕಾವ್ಯ ಈ ಸಮೂಹ ಮಾಧ್ಯಮಗಳನ್ನು ಸಾರಾಸಗಟಾಗಿ ಧಿಕ್ಕರಿಸಿ, ಬಹಿಷ್ಕರಿಸಿ, ತಾನೊಂದು ಪ್ರತ್ಯೇಕ ದ್ವೀಪವಾಗಿ ಉಳಿಯಬೇಕೆ? ಅಥವ, ಇದನ್ನೊಂದು ಅನಿವಾರ್ಯ ಸಾಂಸ್ಕೃತಿಕ ಸವಾಲಾಗಿ ಸ್ವೀಕರಿಸಿ, ಈ ಸಮೂಹ ಮಾಧ್ಯಮಗಳನ್ನು ಔಚಿತ್ಯಪೂರ್ಣವಾಗಿ ಬಳಸಿಕೊಂಡು, ತನ್ನನ್ನು ಹಾಗೂ ತನ್ನ ಸಂಸ್ಕೃತಿಯ ಬೇರುಗಳನ್ನು, ಎಲ್ಲ ಗಂಭೀರ ಕಾಳಜಿಗಳನ್ನು, ಉನ್ನತ ಮೌಲ್ಯಗಳನ್ನು ಕಾಪಾಡಿಕೊಳ್ಳಲು ಯತ್ನಿಸಬೇಕೆ? ಈ ಪ್ರಶ್ನೆ ಇಂದು ಎಲ್ಲ ಸೃಜನಶೀಲ ಬರಹಗಾರರನ್ನೂ ಬಾಧಿಸುತ್ತಿದೆ.

ನನ್ನ ಮಟ್ಟಿಗೆ, ನಾನು ನನ್ನ ಕಾವ್ಯದ ಸಂವಹನಕ್ಕಾಗಿ ಸಮೂಹ ಮಾಧ್ಯಮಗಳನ್ನು ಬಳಸಿಕೊಳ್ಳಲು ಎಂದೂ ಹಿಂಜರಿದವನಲ್ಲ. ಅವು ನನ್ನ ಕಾವ್ಯ ಸತ್ವವನ್ನು ಭ್ರಷ್ಟಗೊಳಿಸಬಹುದೆಂಬ, ದುರ್ಬಲಗೊಳಿಸಬಹುದೆಂಬ ಭಯ ನನಗಿಲ್ಲ. ಏಕೆಂದರೆ ನನಗೆ ನಾನು ಸುಳ್ಳಾಗಿ, ಆತ್ಮವಂಚನೆಯಿಂದ ಎಂದೂ ಬರೆದವನಲ್ಲ. ನಾನು ವ್ಯಕ್ತಿಯಾಗಿ ಮತ್ತು ಕವಿಯಾಗಿ ಬೇರೆ ಬೇರೆಯಲ್ಲ; ನಾನೇನೋ ನನ್ನ ಕಾವ್ಯವೂ ಅದೇ. ನನ್ನಲ್ಲಿ ಪ್ರೀತಿ, ಸ್ನೇಹ, ವಿಷಾದ, ಹಾಸ್ಯ ಮತ್ತು ಋಷಿ ಸಹಜವಾಗಿ ಇರುವುದರಿಂದಲೇ ನನ್ನಿಂದ ಪ್ರೇಮ ಕವಿತೆ, ಹಾಸ್ಯಕವಿತೆ, ಹನಿಗವಿತೆ ಇತ್ಯಾದಿಗಳು ಮೂಡಿಬಂದಿವೆಯೆಂದು ನಾನು ಭಾವಿಸುತ್ತೇನೆ. ಹಾಗೆಯೇ ನನ್ನಲ್ಲಿ ಗಂಭೀರ ಕಾಳಜಿಗಳೂ ಇರುವುದರಿಂದ ನಾನು ಗಂಭೀರವಾದ ಕವಿತೆಗಳನ್ನೂ ಬರೆದಿದ್ದೇನೆ.

ನನ್ನ ಕಾವ್ಯ ಸಹೃದಯರನ್ನು ತಲುಪಿದಾಗಲೇ ಅದರ ಸಾರ್ಥಕತೆ ಎಂಬ ನಿಲುವು ನನ್ನದು. ಹಾಗೆಂದು ಜನಪ್ರಿಯತೆಗೆಂದೇ ನಾನು ಬರೆದವನಲ್ಲ. ನನ್ನ ಹಲಕೆಲವು ಕವಿತೆಗಳು ಮತ್ತು ಹಾಡುಗಳು ತಮ್ಮಲ್ಲಿರಬಹುದಾದ ಕಾವ್ಯಗುಣಗಳಿಂದ ಸಹೃದಯರಿಗೆ ಪ್ರಿಯವಾಗಿದ್ದಲ್ಲಿ ಅದು ನನ್ನ ತಪ್ಪಲ್ಲ.

ಇಷ್ಟಾಗಿ ನಾನು ಸಂತುಷ್ಟನೇನಲ್ಲ. ಆಳದಲ್ಲಿ ತೀವ್ರವಾದ ಅತೃಪ್ತಿ ನನಗಿದೆ. ಇನ್ನೂ ಉತ್ತಮವಾದ, ಅನನ್ಯವಾದ, ಮೌಲಿಕವಾದ ಕಾವ್ಯವನ್ನು ಸೃಷ್ಟಿಸಬೇಕೆಂಬ ಹಂಬಲ ನನಗಿದೆ. ಇದಕ್ಕಾಗಿ ನನ್ನ ಪ್ರಯತ್ನ ಮತ್ತು ಪರಿಶ್ರಮ ನನ್ನ ಪರಿಮಿತಿಗಳಲ್ಲಿ ಮುಂದುವರಿಯುತ್ತಿದೆ. ಆದರೆ ಇಂಥ ಸಿದ್ಧಿ ಕೇವಲ ಹಠ ಹಿಡಿದು ಕೂತು ಸಾಧಿಸಿದರೆ ವಶವಾಗುವಂಥದಲ್ಲ, ಸಾಧಕನಿಗೆ ಅದು ಬಾಹ್ಯದ ಚಾರಿತ್ರಿಕ ಒತ್ತಡ ಮತ್ತು ಆಂತರ್ಯದ ಸ್ವಯಂ ಸ್ಫೂರ್ತಿಯಿಂದ ತಾನಾಗಿ 'ಒದಗಿ' ಬರುವಂಥದು ಎಂಬ ಪರಿಜ್ಞಾನವೂ ನನಗಿದೆ. ■

ಮುಟ್ಟಿ ಇಡುವ ಶಬ್ದ... ಸೋಸಿಹೋಗುವ ಸಿದ್ಧಾಂತ...

– ಎಸ್. ಮಂಜುನಾಥ

ನಾನು ನನ್ನ ''ಹಕ್ಕಿ ಪಲ್ಟಿ'' ಸಂಕಲನದ ಪದ್ಯಗಳನ್ನು ಬರೆಯಲು ಕಲಿತ ಶುರುವಿನಲ್ಲಿ ವರ್ಡ್ಸ್‌ವರ್ತ್‌ನ ಒಂದು ಮಾತು ಮನಸ್ಸಿನೊಳಗೆ ನಾಟಿಕೊಂಡಿತ್ತು. ಅದು ''ನಾನು ನನ್ನ ಪದ್ಯದ ವಿಷಯವನ್ನು ತದೇಕವಾಗಿ ನೋಡುತ್ತೇನೆ'' (I look steadily at my subject) ಎಂಬುದು. ಕಣ್ಣಿನ ಪ್ರಪಂಚವೆಂದರೆ ನನಗೆ ಬಹಳ ಆಸೆ. ಬೆರಗು ತುಂಬಿ ನಾನೇ ಸ್ವತಃ ನೋಡಿದ್ದನ್ನು ಬರೆದಿದ್ದರಿಂದ ನನ್ನ ಪದ್ಯವನ್ನು ಬರೆಯಲು ಆಯಿತು. ತನಗೇ ಆಗಿದ್ದನ್ನು ತಿಳಿಯುವುದು ಕವಿಯ ಒಂದು ಮುಖ್ಯ ಗುಣ ಎಂದು ನನಗೆ ಅನ್ನಿಸಿದೆ.

ಆದರೆ ಈ 'ನಾನು' ಎಂಬುದು ಬರೇ ವೈಯುಕ್ತಿಕವಾದುದೂ ಅಲ್ಲ, ತುಂಬ ನಿರ್ದಿಷ್ಟವಾದುದೂ ಅಲ್ಲ ಮತ್ತು ಸುಲಭವಾಗಿ ತಿಳಿಯಬರುವಂಥದೂ ಅಲ್ಲ. ಒಂದು ಆಳದಲ್ಲಿ 'ನಾನು 'ಬರೇ ವೈಯುಕ್ತಿಕವಾಗಿದ್ದು, ಇನ್ನೊಂದು ಆಳದಲ್ಲಿ ವಿಶಿಷ್ಟ ವ್ಯಕ್ತಿಯಾಗಿದ್ದು ಇನ್ನೂ ಆಳದಲ್ಲಿ ಸಮಸ್ತವೂ ಆಗಿದೆಯೆನಿಸುತ್ತದೆ. ಹೀಗೆ ನಾನೆಂಬುದು ನಾನಾ ಆಗಿ ಆ ಉದ್ದಕ್ಕೂ ತುಯ್ಯುತ್ತಿರುವ ಜೀವ, ಪದ್ಯದಲ್ಲಿ ಮೈದಾಳುವಂತಾಗಬೇಕು. ಇದರ ಸಹಜ ಸ್ಥಿತಿಯನ್ನು ಕಾಪಾಡಿಕೊಳ್ಳಲೆಂದೇ ನಾವು ಇರುವ ನೋಡುವ ಭಾವಿಸುವ ರೀತಿಗಳಲ್ಲಿನ ಸೂಕ್ಷ್ಮ ಹೊಂದಾಣಿಕೆಗಳು. ಹೀಗೆ ನನ್ನನ್ನು ನಾನು ಕಂಡುಕೊಳ್ಳುವ ತಿದ್ದಿಕೊಳ್ಳುವ ಪ್ರಯತ್ನಗಳೇ ಪದ್ಯಗಳಾಗುತ್ತವೇನೋ.

ನಂತರ ''ಸುಮ್ಮನಿರುವ ಸುಮ್ಮಾನ'' ಎಂದು ತಾವೋ ಪದ್ಯಗಳನ್ನು ನನ್ನದಾಗಿಸಿಕೊಂಡು ಅನುವಾದಿಸುವಾಗ ನನ್ನೊಳಗೇ ಇರುವ ಕನ್ನಡದ ಚೇತನದ ಜೊತೆ ಸಂಪರ್ಕಕ್ಕೆ ಬಂದಂತೆನಿಸಿತು. ನಮ್ಮೊಳಗಿನ ಕನ್ನಡ ಮಾತಾಡದೇ,ಹಲವು ಚೇತನಗಳಿಗೆ ನಮ್ಮ ಮನಸ್ಸು ಮನೆಯಾಗದೆ ತುಂಬ ಚೆನ್ನಾಗಿರುವ ಬರಹ ಬಾರದೇನೋ. ನಮ್ಮ ಮನಸ್ಸು ನಿಜಕ್ಕೂ ಹಾಗೇ ಇರುತ್ತದೆ, ನಾವು ಆ ಎಲ್ಲ ಆಳಗಳಲ್ಲಿ ಅದನ್ನು ಕಾಣವುದಿಲ್ಲ ಅಷ್ಟೆ. ಕುಮಾರವ್ಯಾಸನನ್ನು ಓದಿ ನನಗೆ ಮತ್ತೊಂದು ನಂಬಿಕೆ ಉಂಟಾದುದು ಏನೆಂದರೆ- ತನ್ನ

ಮೂಲ ಆಕರದಿಂದ ಒಬ್ಬ ಸೃಜನಶೀಲ ವ್ಯಕ್ತಿ ಪಡೆದುಕೊಳ್ಳುವಂತಾಗಬೇಕಾದರೆ ಅದಕ್ಕೆ ಒಂದು ವಿಗ್ರಹದ (deity) ಅಗತ್ಯವಿದೆ ಎಂದು.

ಈಗ ನನಗೆ ಗಾಢವಾಗಿ ಅನಿಸುತ್ತಿರುವ ಒಂದು ಅಂಶ ಇದು: ನಾವು ಮುಟ್ಟಿ ಇಡುವ ಒಂದು ಶಬ್ದ ಅದೂ ನಮ್ಮನ್ನು ಮುಟ್ಟಬೇಕು. ಮನ ಮುಟ್ಟಿ ಬರೆಯಬೇಕು ಹೀಗೆ. ಇದು ಮುಖ್ಯವೋ ಅಮುಖ್ಯವೋ, ಯಾವ ತಾತ್ವಿಕತೆಯಿಂದ ಬಂದುದೋ ಗೊತ್ತಿಲ್ಲ. ಆದರೆ ಪದ್ಯ ಬರೆಯುವವರಿಗೆ ಹೀಗೆ ಸಣ್ಣದಾಗಿ ಅನ್ನಿಸುವ ಸಂಗತಿಗಳೇ ಅವರ ಪದ್ಯಗಳ ದಾರಿಯನ್ನು ನಿಶ್ಚಯಿಸುತ್ತವೆ. ಪದ್ಯದ ಬಗ್ಗೆ ನಾವು ಅಂದುಕೊಳ್ಳುವ ಇನ್ನುಳಿದ ಸಿದ್ಧಾಂತಗಳೆಲ್ಲ ಬರೆಯುವ ಕ್ರಿಯೆಯಲ್ಲಿ ಸೋಸಿಹೋಗುತ್ತವೆ. ■

ಕಾವ್ಯದ ಮೂಲಕ ಅಭಿವ್ಯಕ್ತಿ ಅನ್ನೋದು ಅಗತ್ಯ, ತುರ್ತು ಎನ್ನುವುದಕ್ಕಿಂತ ಸಾಧ್ಯತೆ ಅನ್ನುವದು ಹೆಚ್ಚು ಸರಿ. ಮನುಷ್ಯನ ಶಕ್ತಿಗೆ ಮಿತಿ ಇದೆ. ಯಾರೂ ನಿರಂತವಾಗಿ ಒಂದೇ ಗತಿಯಲ್ಲಿ ಬರೆಯಲು ಸಾಧ್ಯವಿಲ್ಲ. ಭಾವತೀವ್ರತೆ ಕಡಿಮೆಯಾಗಬಹುದು. ಮರೆವು ದೇಹಧರ್ಮ ಕಾರಣವಾಗಬಹುದು. ಕಾವ್ಯ ಬರೆಯುವದು ಮಾತ್ರವೇ ಸೃಜನಾತ್ಮಕ ಕ್ರಿಯೆಯಲ್ಲ. ಕಾವ್ಯಕ್ಕೆ ಸ್ಪಂದಿಸುವುದು ಕೂಡಾ ಸೃಜನಾತ್ಮಕ ಪ್ರತಿಕ್ರಿಯೆಯೇ.

– ಡಾ॥ ಜಿ.ಎಸ್. ಶಿವರುದ್ರಪ್ಪ

ಪಂಚಭೂತಸಂಗದಿಂದ ಜ್ಯೋತಿಯಾಯಿತ್ತು
ಪಂಚಭೂತಸಂಗದಿಂದ ಕರ್ಪೂರವಾಯಿತ್ತು
ಈ ಎರಡರ ಸಂಗವೇನಾಯಿತ್ತು ಹೇಳಾ?
ವಾಙ್ಮನಕ್ಕತೀತ ಗುಹೇಶ್ವರ.

– ಅಲ್ಲಮ ಪ್ರಭು

ನಾವೆ ಯಾವುದಕ್ಕಾ ಕಾವ್ಯ ಜಗಕೆ?

-ವೈದೇಹಿ

ಕನ್ನಡದ ಆಧುನಿಕ ಪ್ರಾಚೀನ ಕವಿಗಳ ಬಗ್ಗೆ ಯಾವ ಗಂಭೀರ ಗೋಚರವಿಲ್ಲದೆ ಬೆಳೆದವಳು ನಾನು. ಪಠ್ಯ ಪುಸ್ತಕದಲ್ಲೆಷ್ಟೋ ಅಷ್ಟೇ. ಅದಕ್ಕಿಂತ ಮುಂದೆ, ಬಿಡಿ ಅಧ್ಯಯನ ವೆನ್ನಬಹುದೇನೋ.

ನಾನು ಬೆಳೆಯುವ ಕಾಲಕ್ಕೆ ನಮ್ಮೂರಿನಲ್ಲಿ ಭಾವಗೀತೆಗಳ ಈಗಿನ ಜನಪ್ರಿಯತೆಯೂ ಇರಲಿಲ್ಲ. ಶೋಭಾನೆ ಹಾಡುಗಳು ನಳಿಸುತ್ತಿದ್ದ, ಅವನ್ನು ಹಾಡುವವರೂ ಅವರ ದನಿ-ಧಾಟಿಗಳೂ ಅಸಹ್ಯ ಕಾಣುತ್ತಿದ್ದ ಕಾಲವದು. ಆ ಜಾಗದಲ್ಲೆ ಗ್ರಾಮೋಫೋನು ರೆಕಾರ್ಡುಗಳು ಬಂದು ಗಡದ್ದಾಗಿ ಕೂಗಿ, ಕೇಳಬೇಕಾದ್ದು ಇನ್ನೆಲ್ಲ ಇಂಥದೇ ಎಂದು ಸಿನೆಮಾ ಪದ್ಯಗಳನ್ನು ಕಿವಿಯೊಳಗೆ ತುಂಬಿಸತೊಡಗಿದ್ದುವು. ರೇಡಿಯೋ ಇನ್ನೂ ನಿಧಾನವಾಗಿ ಒಂದೊಂದೇ ಮನೆಯ ಕದ ತಟ್ಟುತ್ತಿತ್ತಷ್ಟೆ. ಟೈಪ್‌ರೈಟರ್, ಷಾರ್ಟ್‌ಹ್ಯಾಂಡ್ ಕ್ಲಾಸುಗಳು ತೆರೆದುಕೊಳ್ಳುತ್ತಿದ್ದುವು. ಜನ ಬ್ಯಾಂಕ್ ಉದ್ಯೋಗದತ್ತ ಕಣ್ಣಿಟ್ಟು ಕೈಗೇರುವ ಪುಸ್ತಕಗಳನ್ನು ನಿರ್ಧರಿಸಿಕೊಳ್ಳುವ ಯುಗದ ಆರಂಭದಲ್ಲಿದ್ದರು. ಕಾವ್ಯವಾಚನ-ಶ್ರವಣ ಎಲ್ಲ ನನ್ನ ಹಿಂದಿನ ಪರಂಪರೆಯಲ್ಲಿ ಇತ್ತಂತೆ. ಆದರೆ ನಾವು ವಾಸಿಸುತ್ತಿದ್ದ ತಾಲೂಕು ಕೇಂದ್ರ-ಕುಂದಾಪುರದಲ್ಲಿ ಅದೇನೂ ಅಷ್ಟು ಇರಲಿಲ್ಲ. ಸುತ್ತಮುತ್ತಲಿನ ಹಳ್ಳಿಗಳಲ್ಲಿ ಇದ್ದಿರಬಹುದು. ಆದರೆ ಕೇಳುವುದೇ ಉದ್ದೇಶವಾಗಿ ನಾವು ಮನೆಯಿಂದ ಹೊರಗೆ ಹೋದವರಲ್ಲ. ಆಟವೆಂದು ಕರೆಯಿಸಿಕೊಳ್ಳುವ ಯಕ್ಷಗಾನದ ಹಾಡುಗಳೂ ನಮ್ಮ ಕಿವಿಯ ಮೇಲೆ ಬೀಳುತ್ತಿದ್ದದ್ದು ನವರಾತ್ರಿಯ ಒಂಭತ್ತು ದಿನಗಳಲ್ಲಿ ಮನೆಗೆ ಬಂದು ಹಾಡುವ-ಮಾತಾಡುವ "ಹೂವಿನ ಕೋಲು" ಎಂಬ ತಂಡಗಳಿಂದ. ಈ ತಂಡದ ಪ್ರಮುಖನಾದವ ಯಾವುದಾದರೂ ಪ್ರಸಂಗದ ಹಾಡುಗಳನ್ನು ಹಾಡುತ್ತಿದ್ದ. ಬಿಳೀ ಟೊಪ್ಪಿ ಧರಿಸಿದ ಪುಟ್ಟ ಹುಡುಗರಿಬ್ಬರು ಬೆಗಡೆ ಜರಿ ಸುನೆರಿ ಬಣ್ಣದ ಕಾಗದ ಮುಂತಾದ್ದರಿಂದ ಮಾಡಿದ 'ಹೂವಿನ ಕೋಲ'ನ್ನು ಮುಂದಿಟ್ಟುಕೊಂಡು ಆ ಹಾಡಿಗೆ ಸರಿಯಾಗಿ ಪರಸ್ಪರ ಪಾತ್ರಗಳಾಗಿ ಸಂಭಾಷಿಸುತ್ತಿದ್ದರು. ನಾವು ನೇರ ಎದುರು ಬರದೆ ಅಡ್ಡದಲ್ಲಿ ನಿಂತು ಕೇಳುತ್ತಿದ್ದೆವು. ಅಂದಿನ ಹೆಣ್ಣು ಮಕ್ಕಳಂತೆ ಮನೆಗೆಲಸಕ್ಕೆ, ಪಾಠಕ್ಕೆ

ನಮ್ಮನ್ನು ಕೊಟ್ಟುಕೊಂಡವರು. ಬಹಳ ಬಹಳ ತಡವಾಗಿ ನನಗೆ ಅರ್ಥವಾದ-ಅರ್ಥವಾದಂತೆ ಅನಿಸಿದ-ನನ್ನ ಅಮ್ಮ, ಜೆನ್ ಗುರುವಿನ ತರಹ. ಏನಾದರೂ ಆಕೆ ಕೊನೆಗೂ ಬಂದು ಮುಟ್ಟಿಕೊಳ್ಳುವುದು "ಹ್ನಂ-ಕೆಲಸ ಕಾಣು" ಎಂಬುದಕ್ಕೆ. ಬದುಕಿನ ಪ್ರೀತಿ-ರೀತಿ ಏನಿದ್ದರೂ ಆಕೆಗೆ ಅದು ಅವರವರ ಕೆಲಸದ ಮೂಲಕವೇ ಸಾಕ್ಷಾತ್ಕಾರಗೊಳ್ಳಬೇಕು, ಅವರವರು ನಿಂತ ನೆಲದಲ್ಲಿಯೇ. ಕೆಲಸ ಅಲ್ಲಲ್ಲೇ ಬಿಟ್ಟು ಹಾಡುತ್ತ ಓದುತ್ತ ಕುಳಿತರೆ-ಕುಳಿತರೆ ಎಂಬುದೇ ಇಲ್ಲ, ಹಾಗೆ ಕೂಡಲಾಗದು. ನಮ್ಮ ಹಾಡುಗಳೆಲ್ಲ ಮನೆಗೆಲಸದೊಡನೆಯೇ. ಅದರರ್ಥ ಹಾಡೆಂದರೆ ಆಕೆಗೆ ಇಷ್ಟವಿಲ್ಲವೆಂತಲ್ಲ. ದನಿ ಅಷ್ಟೇನೂ ನಯವಿಲ್ಲದ ಆಕೆ ಹಾಡಲು ತೊಡಗಿದಳೆಂದರೆ ಮಡಿಲಲ್ಲಿ ಅವಳದಲ್ಲದ ಮಗು ಕೂಡ ಆ ದನಿಯಲ್ಲಿನ ಭಾವಭಾರಕ್ಕೋ ಅವಳದೇ ಸ್ವಂತ ಧಾಟಿಯ ವಿಶಿಷ್ಟ ಹರಿವಿಗೋ ಹಠ ನಿಲ್ಲಿಸಿ ಕಿಲ ಕಿಲವಾಗಬೇಕು, ನಿದ್ದೆಯ ತೆಕ್ಕೆಗೆ ಒರಗಿಕೊಳ್ಳಬೇಕು-ಹಾಗೆ.

ಕವನಗಳನ್ನು 'ವಾಚಿಸುವುದು' ಕವಿಗೋಷ್ಠಿ ಇವೆಲ್ಲವನ್ನೂ ಆಗ ಕಂಡವರೂ ನಾವಲ್ಲ. ಕವನಗಳೆಂದರೆ ಅವು ಹಾಡುವುದಕ್ಕೆ ಇರುವವೆಂದೇ ನಮ್ಮರ್ಥ. ಹಾಡುವ ಮೂಲಕವೇ ಅದನ್ನು ನಮ್ಮದಾಗಿಸಿಕೊಳ್ಳುವುದು ಹೊರತು ಹೂರಣದಿಂದಲ್ಲ. ಹೂರಣಕ್ಕಿಂತ ರಾಗಕ್ಕೆ ಶರಣಾದವರು. "ಅಭಿವ್ಯಕ್ತಿ" ಎಂಬ ಶಬ್ದದ ಅರ್ಥವೇ ಆಗದೆ ಎಷ್ಟು ದಿನ ಬಳಲಿದ್ದೆನೋ!

ಹೆಣ್ಣು ಮಕ್ಕಳು ತಾವು ನಿಂತ ಕ್ಷಣದಿಂದ ಇನ್ನೊಂದು ಕ್ಷಣಕ್ಕೆ ತೇಲಿ ಹೋಗುವುದಾಗಲೀ, ಅಲ್ಲಿ ನೆಲೆಸುವುದಾಗಲೀ, ಅದನ್ನು ಚಿಂತಿಸುವುದಾಗಲೀ ಎಲ್ಲೆಲ್ಲಿಯೂ ಯೋಗ್ಯ ವಿಷಯವಲ್ಲವಷ್ಟೆ. ಒಂದನ್ನು ಇನ್ನೊಂದಾಗಿ ಕಾಣುವ ಪ್ರಕೃತಿ ಬೆಳೆಸಿಕೊಳ್ಳಬಾರದು. ಅದು ಗೃಹಸ್ಥೋಳಿಕೆಗೆ ಒಳಿತಲ್ಲ. ಗಂಡಸರಿಗೆ ಹೇಗೋ ನಡೆಯುತ್ತದೆ. ಹೆಂಗಸರಿಗೆ ಅದೆಲ್ಲ ನಡೆಯುತ್ತದೆಯೆ?... ಹೀಗೆ!

ವಿಶೇಷವೆಂದರೆ ಹಳೆ ಮೈಸೂರಿನಲ್ಲಿದ್ದಂತೆ ನಮ್ಮಲ್ಲಿ ಹುಡುಗಿ ಮತ್ತು ಸಂಗೀತ ಅಥವಾ ಹಾಡುಗಾರಿಕೆಯನ್ನು ಒಟ್ಟು ಮಾಡಿಯೇನೂ ನೋಡುತ್ತಿರಲಿಲ್ಲ. ಬದಲು ಮನೆಗೆಲಸವೆಲ್ಲ ಬರುತ್ತದಾ? ಎಂಬುದರೊಂದಿಗೆ ಅತಿ ಮುಖ್ಯ ಪ್ರಶ್ನೆ-ಚಿನ್ನ ಎಷ್ಟು ಹಾಕುತ್ತೀರಿ? ಇದರಿಂದ ಒಂದು ಅದೃಷ್ಟವೆಂದರೆ ಗೀತಲೋಕದ ಗರ್ಜು ಎಂದೂ ಒತ್ತಾಯವಾಗದೆ ನಮ್ಮ ವೈಯಕ್ತಿಕ ಗರ್ಜು ಆಗಿ ಮಾತ್ರ ಉಳಿಯುತ್ತಿತ್ತು. ಅದೃಷ್ಟವೆಂದರೂ, ಅದರ ಇತರ ಮಗ್ಗುಲುಗಳ ವಿಚಾರ ಈಗ-ಇಲ್ಲಿ-ಬೇಡ.

ನನಗೆ ಮೊತ್ತಮೊದಲಿಗೆ ಬರಹದ ಒತ್ತಡವಿದ್ದದ್ದು ಇಪ್ಪತ್ತು ವರ್ಷಗಳ ಒಳಗೇನೇ. ಆದರೆ ಆಗೆಲ್ಲ ಹೇಳಲಾರದ ಬಗೆಯ ಗಾಬರಿ. ಈ ಗಾಬರಿಯನ್ನೇ ಬರೆದಿದ್ದರೂ ಉತ್ತಮ ಕಾವ್ಯ ಗುಣ ಅದಕ್ಕಿರುತ್ತಿತ್ತೋ ಏನೋ-ಅಂತಿತ್ತು. ಆದರೆ ಹಾಗಾಗುವ ಬದಲು ಆ ಗಾಬರಿಯಿಂದಾಗಿ ನನ್ನ ಶಬ್ದಗಳೇ ತೋಚದೆ ಹೋದವು. ಪರ ಶಬ್ದಗಳಲ್ಲಿ ಬರೆಯುತ್ತ ಅವು ಪರ ಶಬ್ದಗಳೆಂದು ತಿಳಿಯದೆ, ಬರೆದದ್ದು ನನ್ನದೆನಿಸದೆ ಅಸ್ವಸ್ಥಳಾಗುತ್ತಿದ್ದೆ. ಈ ಅವಸ್ಥೆಯೂ ಸರ್ವಸಾಮಾನ್ಯವಾಗಿ ಎಲ್ಲರದೂ ಎಂದು ತಿಳಿಯುತ್ತೇನೆ. ಅದರಲ್ಲಿಯೂ

ಅಧಿಕವಾಗಿ ಹೆಣ್ಣು ಮಕ್ಕಳದು. ಹದಿಹರೆಯ ಕವಿಯೊಬ್ಬನ ಒಂದು ಪ್ರಮುಖ ಘಟ್ಟವಲ್ಲವೆ? ಆದರೆ ಆ ಘಟ್ಟವನ್ನು ಅನೇಕ ಕವಿಗಳು ವಿಶೇಷತಃ ಮಹಿಳೆಯರು ಕಾವ್ಯವಾಗಿಸದೇನೇ ಸವೆಸುತ್ತಾರೆ. ಕಾವ್ಯವಾಗಿಸುವ ಹಟದಿಂದ ಹೊರಟು ಅದೇ ಗಾಬರಿಯಲ್ಲಿ ಕೈಗೆ ಸಿಕ್ಕ ಶಬ್ದಗಳನ್ನೇ ಎರಚಾಡುವುದೋ ಬಲವಂತದಿಂದ ಎಳೆದು ತಂದು ಕಟ್ಟಿ ಹಾಕುವುದೋ ಮಾಡಿ ಕೃತಕವಾಗಿಸಿದ್ದು ಆ ವರ್ಷಗಳನ್ನು ಕಳೆದ ಬಳಿಕವಷ್ಟೇ ತಿಳಿಯುತ್ತಾರೆ. ಈ ಸುಕೋಮಲ ಘಟ್ಟವನ್ನು ಕವಿ ಯಶಸ್ಸಿನಿಂದ ಕಳೆದವರು ಎಷ್ಟು ಮಂದಿ? ಕೈ ಬೆರಳಲ್ಲಿ ಎಣಿಸಲು ಬರುತ್ತದಲ್ಲವೆ. ಯೋಚಿಸಿದರೆ ಅನಿಸುತ್ತದೆ, ಸರಿಯೋ ತಪ್ಪೋ, ಕೊನೆಗೂ ಈ ಸಾಂಸ್ಕೃತಿಕ ಒತ್ತಡವೇ ಮುಂದೆ ಕಾವ್ಯದ ಮೊರೆ ಹೋಗಲೇ ಬೇಕಾದ ಅನಿವಾರ್ಯ ಕಾರಣಗಳಲ್ಲಿ ಒಂದಾಗಿ ಬಿಡುತ್ತದೆ. ಬಹುಶಃ ಗಡಿಯಾರದ ಮುಳ್ಳಿನ ಚಲನೆಯ ರಹಸ್ಯವನ್ನೂ ಅದು ತಿಳಿ ಹೇಳುತ್ತದೆ. ''ಹೇಳಲೇ ಬಾರದ್ದಕ್ಕೆ'' ಮಗುಚಿಕೊಂಡವರಿಗೆ ''ಹೇಳದೇ ಹೇಳುವ'' ಕಾಯಕದ ನೆನಪೆಬ್ಬಿಸಿ ಕೊಡುತ್ತದೆ. ಅವರವರ ಸಾಂಸ್ಕೃತಿಕ ಒತ್ತಡವೇ ಅವರವರ ಕಾವ್ಯ ವ್ಯಕ್ತಿತ್ವವನ್ನೂ ಶಬ್ದವನ್ನೂ ಅಭಿವ್ಯಕ್ತಿ ಸ್ವರೂಪವನ್ನೂ ನಿರ್ಧರಿಸಿ ಬಿಡುತ್ತದೆ.

ಇರಲಿ.

ಒಟ್ಟಿನಲ್ಲಿ ಅಂದು ನನ್ನ ಕಿವಿಯ ಮೇಲೆ ಬೀಳುತ್ತಿದ್ದ ಕಾವ್ಯ ಸ್ವರೂಪಗಳೆಂದರೆ ಭಕ್ತಿಗೀತೆಗಳು, ದಾಸರ ಪದಗಳು, ಭಜನೆಗಳು, ಜೋಗುಳ, ಶೋಭಾನೆ ಹಾಡುಗಳು – ಕೊನೆಕೊನೆಗೆ ಸಿನೆಮಾ ಹಾಡುಗಳು, ಭಾವಗೀತಗಳು. ಇವುಗಳಲ್ಲಿ ಮುಖ್ಯವೆಂದರೆ ಭಜನೆ, ದಾಸರಪದ ಭಕ್ತಿಗೀತೆಗಳು. ಕಾವ್ಯವೆಂಬುದು ನನ್ನ ಗ್ರಹಿಕೆಗೆ ಬಂದದ್ದಿದ್ದರೆ ಅದು ಮೂಲತಃ ಈ ಮುಖಾಂತರವೇ.

ಕಟ್ಟಾ ಸಂಪ್ರದಾಯವಾದಿಗಳಲ್ಲವಾದರೂ ಸಂಪ್ರದಾಯದ ಕೆಲ ಅಂಶಗಳನ್ನಿಟ್ಟು ಕೊಂಡಿದ್ದ ನನ್ನ ತವರಿನಲ್ಲಿ ರಾತ್ರಿ ಭಜನೆಯ ನಂತರವೇ ಊಟ. ಭಜನೆಯೆಂಬುದು ಮನೆ ಮನೆಗಳಲ್ಲಿ ಸಾಮಾನ್ಯವಾಗಿದ್ದ ದಿನಗಳವು. ಈ ಭಜನೆಗೆ ಗಂಡು ಮಕ್ಕಳೂ ಬಂದು ಕುಳಿತರೆಂದರೆ (ಅವರು ದಿನನಿತ್ಯ ಹೀಗೆ ಬರುವ ರಿವಾಜಿರಲಿಲ್ಲ. ಏನಿದ್ದರೂ ನಿಯಮಿತವಾಗಿ ಅದು ಹೆಣ್ಣು ಮಕ್ಕಳ 'ಕೆಲಸ') ನಮಗೊಂದು ಜಾಸ್ತಿ ಬಲ, ಭಜನೆಗೊಂಚೂರು ಜಾಸ್ತಿ ಮರ್ಯಾದೆ ಬಂದಂತೆ ಅನಿಸುತ್ತಿತ್ತು! ನಮ್ಮ ಭಜನೆಯೆಂದರೆ ಉತ್ಸವ ಸಮಯದಲ್ಲಿ ದೊಡ್ಡ ಕಾಲುದೀಪದ ಸುತ್ತ ಹೆಜ್ಜೆ ಕುಣಿಯುತ್ತಾ ಹಾಡುತ್ತಾರಲ್ಲ-ಅಂಥದಲ್ಲ. ಮನೆ ಮಟ್ಟಿನದು. ಭಜನೆ ಮತ್ತು ಸಂಜೆ ದೀಪ ಹಚ್ಚದಿರಬೇಕಾದರೆ ಯಾವುದಾದರೂ ಸೂತಕ ಬಂದಿರಬೇಕು ಅಷ್ಟೇ. ಭಜನೆಯ ಹೊತ್ತಿನಲ್ಲಿ ಬರೀ ಪದ್ಯಗಳಷ್ಟೇ ಅಲ್ಲ, ಶ್ಲೋಕಗಳು, ಸ್ತೋತ್ರಗಳು– ಒಟ್ಟು ದೇವರು ಕೇಂದ್ರ.

ಭಜನೆ ಮಾಡುವಾಗ ಯಾರಾದರೊಬ್ಬರು ಹೇಳಿ ಕೊಡುತ್ತಿದ್ದರು. ಉಳಿದವರೆಲ್ಲ ಹಿಂಬಾಲಿಸಿ ಹಾಡುತ್ತಿದ್ದೆವು. ಝುಣ ಝುಣ ತಾಳ, ಕೈ ಪೆಟ್ಟಿನ ಸದ್ದಿನ ಲಯಬದ್ಧ ಹಿನ್ನೆಲೆ. ಅದೇನೂ ಸುಶ್ರಾವ್ಯ ಭಜನೆ ಖಂಡಿತ ಇದ್ದಿರಲಾರದು. ನಿತ್ಯ ಹಾಡುವಾಗ ಒಂದೊಂದು

ಬಗೆಯ ಮೆರುಗು ಬರುತ್ತದೆ. ಒಂದಿನ ಸಪ್ಪೆ, ಒಂದಿನ ಕರ್ಕಶ. ಒಂದಿನ ಇಂಪು, ಒಂದಿನ ಭಾವುಕ. ಒಂದು ನಿಮಿಷ ಕೂಡ ಕಣ್ಣು ಮುಚ್ಚಿ ಕೂಡಲಾಗದೆ ಪಟ ಪಟನೆ ರೆಪ್ಪೆ ಮುಚ್ಚಿ ಮುಚ್ಚಿ ತೆರೆಯುವ ಆ ದಿನಗಳನ್ನು ಏನೆನ್ನುವುದು! ಹಾಡಿನ ಸಾಲನ್ನು ಅನುಸರಿಸಿ ಎಲ್ಲರೂ ಒಕ್ಕಂಠದಿಂದ ಹಾಡುವಾಗ, ತಾಳ ಹಾಕುವಾಗ, ಪುನರಾವರ್ತನೆ ಮಾಡುವಾಗಲೆಲ್ಲ ಅದಕ್ಕನುಸಾರ ಭಾವದ ಪಕ್ವ ಪರಿಚಯವೇ ಇಲ್ಲದೆಯೂ ಭಾವಾವೇಶ. ಕಣ್ಣು ಮೂಗು ಬಾಯಿ ಚಲನೆಯಲ್ಲಿಯೇ ಪರಸ್ಪರ ಅಭಿನಯ ತುಂಟಾಟ. ಶಬ್ದಗಳಿಗೆ ಬೇರೆಲ್ಲೋ ಒತ್ತು ಕೊಟ್ಟು ನಗೆ. ಹಾಡಿನ ಸಾಲಿನಲ್ಲಿ ಅಲ್ಲಿದ್ದ ಯಾರದಾದರೂ ಹೆಸರು-ಲೀಲ ಎಂದೋ ರಾಮಕೃಷ್ಣ ಎಂದೋ ಬಂದರೆ ಅಷ್ಟೇ ಸಾಕು ನಗೆಗೆ. ಆಗ ಹಿರಿಯರಿಂದ ಕಣ್ಣಲ್ಲೇ ಗದರಿಸಿಕೊಳ್ಳುತ್ತಿದ್ದೆವು. ತಾಳದ ಪೆಟ್ಟು ಅವರ ತೊಡೆ ತಪ್ಪಿ ನಮ್ಮ ತೊಡೆಗೋ ಬೆನ್ನಿಗೋ ಬಿದ್ದು ಮತ್ತೆ ಅತ್ತಲಾಗುತ್ತಿತ್ತು. ಎಷ್ಟೋ ಸಲ ಕ್ಯಾಲೆಂಡರು ದೇವರನ್ನು ಆವಾಹಿಸಿಕೊಂಡು "ಭಕ್ತಿಪರವಶ"ರಾಗುತ್ತಿದ್ದೆವು. ಆಗ ಗಂಗೆ ಚಿಮ್ಮುವ, ಕೊರಳ ಸರ್ಪದ ಈಶ್ವರ, ಈಶ್ವರನೆಂದರೆ ತಾನೇ ಎಂದು ಎಷ್ಟು ಖಂಡಿತ ಎದುರು ಬಂದು ನಿಲ್ಲುತ್ತಿದ್ದ! ಕೃಷ್ಣನೆಂದರೆ ಬಿಳೀ ಗೋವಿಗೊರಗಿ ಕತ್ರಿಗಾಲು ಹಾಕಿ ನಿಂತು ಕೊಳಲನೂದುವವ. ಮುಗುಳು ನಗೆಯವ, ನವಿಲುಗರಿಯವ. ಶ್ರೀ ರಾಮನೆಂದರೆ ಬಿಲ್ಲು ಬತ್ತಳಿಕೆ ಹಿಡಿದು ಸೀತೆಯೊಡನೆ ಶಾಂತ ನಿಂತವ. ಕಣ್ಣಲ್ಲೇ ನಾನಿದ್ದೇನೆನ್ನುವವ. ರಾಮ ರಾಮ ಎಂದು ಎಲ್ಲರೂ ಸೇರಿ ಭಜಿಸುವಾಗ ಅಲ್ಲೆಲ್ಲಾದರೂ ಹನುಮಂತ ಕುಳಿತು ಕೇಳುತ್ತಿದ್ದಾನೆಯೇ... ಕಡೆಗೆ ನಮ್ಮಲ್ಲೇ ಯಾರಲ್ಲಾದರೂ ಆತ ಪ್ರವೇಶಿಸಿ ಕುಳಿತಿರಬಹುದೇ..!? ಹಾಡುವ ಮನಸ್ಸಿನಲ್ಲಿ ಏನೆಲ್ಲ. ದೊಡ್ಡವರಾದ ಮೇಲೆ ನಾವು ಹಿರಿಯರಂತಾದೆವು. ಹಾಡುವ ಪದ್ಯಗಳಲ್ಲಿ ಮನ ತುಂಬಿಕೊಂಡೆವು. ಮಕ್ಕಳು ನಮ್ಮಂತಾದರು. ಅವರ ಹುಡುಗಾಟಿಕೆಗೆ ನಮ್ಮ ಕಣ್ಣು ಗದರುವುದನ್ನು ಕಲಿಯಿತು. ದೇವರು ನಮ್ಮ ಪ್ರೇಮಿಯೇ ಆದ! ಎಷ್ಟೋ ಭಕ್ತಿಗೀತೆಗಳು ನಮಗೆ ಪ್ರೇಮಕಾವ್ಯವೇ ಆಗಿಬಿಟ್ಟವು.

ಕೆಲವೊಮ್ಮೆ ನಮ್ಮ ತಂದೆ ಬಿಡುವು ಮಾಡಿಕೊಂಡು ನಮ್ಮೊಡನೆ ಸೇರುವುದಿತ್ತು. ದೇವರ ಮನೆಯಲ್ಲಿ ಅತ್ತಿಂದ ಇತ್ತ ಇತ್ತಿಂದ ಅತ್ತ ಚಲಿಸುತ್ತ ನಮಗೆ ಸೊಲ್ಲು ಎತ್ತಿ ಕೊಡುವುದೋ ನಮ್ಮೊಂದಿಗೆ ದನಿಗೂಡಿಸುವುದೋ ಒಂದು ಪದ್ಯವನ್ನು ತಾನೇ ಇಡಿಯಾಗಿ ಹಾಡುವುದೋ ಮಾಡುತ್ತಿದ್ದರು. ಅವರು ಬಂದಾಗ ಮಾತ್ರ ನಾವೆಲ್ಲ ನೂರಕ್ಕೆ ನೂರು ಭಕ್ತಿ ನಟನಟಿಯರೇ, ನಗೆಗಿಗೆಯ ಕುಡಿ ಸಮೇತ ಇಲ್ಲ. ಅವರ ಇಡಿಯ ಪರ್ಸನಾಲಿಟಿ ಕಂಡ ಮುಖಭಾವ ಎಲ್ಲವೂ ಅಂತಿತ್ತು. ಅವರು ಎಂದೂ ಗದರದಿದ್ದರೂ ಅವರಿಂದ ಬೈಸಿಕೊಳ್ಳಬಾರದು. ಶಾಭಾಸ್ ಎನಿಸಿಕೊಳ್ಳಬೇಕು-ಎಂದು ಆಸೆ ಹುಟ್ಟುವಂತೆ. ಭಜನೆ ಒಮ್ಮೊಮ್ಮೆ ಸಮಯದ ಪರಿವೆ ಮೀರಿ ಗೊತ್ತುಗುರಿಯಿಲ್ಲದೆ ಮುಂದುವರಿಯುತ್ತಿದ್ದರೆ ಆಚಿಂದ ತಾಯಿಯ 'ಯಜಮಾನಿ' ದನಿ. "ಮುಗಿಯಲಿಲ್ಲವೇ ಇನ್ನೂ? ಆಯಿತು ಹೋಯಿತು ಅಂತಿಲ್ಲ. ಸಾಕು, ದೇವರು ಓಡಿ ಹೋದಾನು. ಮಂಗಳ ಹಾಡಿ. ಬಟ್ಟಲಿಡಿ" (ಬಟ್ಟಲು ಎಂದರೆ ಊಟದ ತಟ್ಟೆ)- ಅದು ಮಕ್ಕಳ ಪಂಕ್ತಿಯ ಹೊತ್ತು.

ಭಜನೆಯೆಂಬುದು ನನಗೆ ಅದಷ್ಟೇ ಮಾತ್ರವಾಗಿರಲಿಲ್ಲ. ಮನೆಮಂದಿಯೆಲ್ಲ ಒಟ್ಟು ಸೇರುವ ಜಾಗವೂ ಆಗಿತ್ತು. ಊಟದ ಹೊತ್ತಿಗೂ ನಾವೆಲ್ಲ ಒಟ್ಟಾಗುತ್ತಿರಲಿಲ್ಲ. ಆಗೆಲ್ಲ ಮಕ್ಕಳ ಪಂಕ್ತಿಯಾದ ಮೇಲೆಯೇ ಹಿರಿಯರು ಉಣ್ಣುತ್ತಿದ್ದರಷ್ಟೇ. ಇದರಿಂದೆಲ್ಲ ಇವತ್ತಿಗೂ ನನಗೆ ಭಜನೆಯೆಂದರೆ ನನ್ನ ಒಡಹುಟ್ಟು, ತಂದೆ ತಾಯಿಯರ ನಡುವೆ ಕುಳಿತಂತಾಗುತ್ತದೆ. ಎಲ್ಲಿಂದಲೋ ಅದು ಕೇಳಿ ಬಂತೆಂದರೆ ಪ್ರಿಯವಾದ ವೇದನೆ, ಹೊರ ಬರಲು ಮನಸ್ಸಾಗದಂತಹ ವ್ಯಾಮೋಹ, ವೇದನೆ, ಉಂಟಾಗುತ್ತದೆ. ನಮ್ಮ ಮಟ್ಟಿಗೆ ಅದೇ ರಂಗಸ್ಥಳವೂ ಆಗಿದ್ದಿತಲ್ಲದೆ, ನಾಟಕ, ಕಾವ್ಯಗೋಷ್ಠಿ, ಸಂಗೀತಗೋಷ್ಠಿಯೂ.

ಮುಂದೆ ಕೂಡ ಕಾವ್ಯ ಪ್ರಪಂಚವನ್ನು ಶಿಸ್ತುಬದ್ಧ ಗಾಂಭೀರ್ಯದಿಂದ ಅಧ್ಯಯನ ಮಾಡಲು ಆಗದೇ ಹೋದ ಸಂಕಟದಿಂದಲೇ ಹೇಳುತ್ತಿದ್ದೇನೆ–ನಾನು ಈ ನಷ್ಟ ಮತ್ತು ಈ ಲಾಭದ ಅರಿವಿನಲ್ಲಿಯೇ ನನ್ನ ಬೆಳೆ ಏನಿದ್ದರೂ ಬೆಳೆಯಬೇಕು. ಈ ಪಾತಳಿಯಲ್ಲಿ ಮನಸ್ಸನ್ನು ಹಾಯಿಸಿಕೊಂಡು ಅಲ್ಲಿ ಕಂಡ ಶಬ್ದ ಕಚ್ಚಿ ಬಿಸುಟು ಹೆಕ್ಕಿಕೊಂಡೇ ಮುಂದರಿಯಬೇಕು.

ಉದ್ದವಾಗುತ್ತಿದೆ, ಆದರೂ ಹೇಳಲೇಬೇಕೆನಿಸಿದ್ದರಿಂದ ಹೇಳಿ ಬಿಡುತ್ತೇನೆ. ಈಗ ಭಜನೆಯ ಸಂಪ್ರದಾಯವೇ ನಶಿಸಿ ಬಿಟ್ಟಿದೆ. ಅದು ತುಂಬ ಮಕ್ಕಳಿರುವ ಮನೆಯ ಸಂಸ್ಕೃತಿ ಮಾತ್ರವಾಗಿ ಉಳಿದು ಎಲ್ಲೋ ಒಳ ಹಳ್ಳಿಗಳಲ್ಲಿ ಮಾತ್ರ ಕ್ಷೀಣವಾಗಿ ಕೇಳಿ ಬರುತ್ತ, ಸಣ್ಣ ಕುಟುಂಬದ ಇವತ್ತಿನಲ್ಲಿ ಬಿದ್ದು ಹೋಗಿದೆ. ಬೆಳೆಯುವ ಮಗುವಿಗೆ ಈ ಸರಳ ಸಂಸ್ಕಾರ ನಾನಾ ಕಾರಣಗಳಿಗಾಗಿ ಅತಿ ಅವಶ್ಯವೆಂದು ಕಾಣುತ್ತಿರುವಾಗ ನನ್ನ ಪೀಳಿಗೆಯಲ್ಲಿಯೇ ಇದು ಹೊರತಾಗಿ ಹೋದದ್ದು ನೆನೆದರೆ ಸಖೇದ ಆಶ್ಚರ್ಯವಾಗುತ್ತದೆ. ಈ ಮಾತು ಕೇವಲ "ದೇವರು" ಎಂಬ ಶಬ್ದದ ಅಥವಾ ಕಲ್ಪನೆಯ ಪ್ರದಕ್ಷಿಣೆಗೆ ಹೊರಟ ಮಾತಲ್ಲ ಎಂಬುದು ತಿಳಿಯುತ್ತದಷ್ಟೆ.

ಹೀಗಿದ್ದ ನಮ್ಮನ್ನು ಕ್ರಮೇಣ ಆವರಿಸಿದ್ದು ಸಿನಿಮಾ ಪದ್ಯಗಳು. ಸಿನೆಮಾ ಪದ್ಯಗಳು ಇಡೀ ಇಡೀ ಸಮುದಾಯದ ಮೇಲೆಯೇ ಮಂತ್ರದಂಡ ಬೀಸುತ್ತಿದ್ದಾಗ ಅವನ್ನು ಬಿಟ್ಟು ಬೇರೆ ಕಾವ್ಯವೇ ಇಲ್ಲವೆಂಬಂತಾಯಿತು. ಭಾವಗೀತೆಗಳೂ ಆ ಮೂಲಕವೇ ಬಂದವು. ಕದ ತಟ್ಟುತ್ತ ತಟ್ಟುತ್ತ ನಿಧಾನ ರೇಡಿಯೋ ನಮ್ಮ ಮನೆಗೆ ಬಂದದ್ದು ನಾನು ಪ್ರಥಮ ಬಿ.ಕಾಂ. ನಲ್ಲಿರುವಾಗ. ಆಗ ಭಾವಗೀತೆಗಳಿಗೆ ಒಂದು ಕಿವಿಯಾದರೆ ಚಿತ್ರಗೀತೆಗಳಿಗೆ ಇನ್ನೊಂದು ಕಿವಿಯಾಯಿತು. ಜೀವ ಬಿಟ್ಟುಕೊಂಡು ಕೇಳುತ್ತಿದ್ದೆವು, ಹಾಡುತ್ತಿದ್ದೆವು, ಅಲ್ಲಿಯೂ ಭಕ್ತಿರಸ ಪ್ರಧಾನವಾದದ್ದಕ್ಕೇ ಅಂಟಿಕೊಳ್ಳುತ್ತಿದ್ದೆವು. ಎಂತಲೇ ಹೆಚ್ಚಾಗಿ ಕುವೆಂಪು ಗೀತೆಗಳ ಆರಾಧಕರಾಗಿದ್ದೆವು. ಬೇಂದ್ರೆ ಎಂದರೆ ಥಟ್ಟನೆ "ನನ್ನ ಹರಣ ನಿನಗೆ ಶರಣ". ಇವೆಲ್ಲ ಭಜನೆಗೆ ಕೂಡ ಸಂದವು.

ಕೊನೆಗೊಂದು ದಿನ

ಭಜನೆಯ ಮನೆಯಿಂದ ಹೊರಬಿದ್ದು ನೋಡುತ್ತೇನೆ, ಪ್ರಪಂಚವಿಡೀ ಭಜನೆಯಲ್ಲಿದೆ!

ನಾನಾ ವಿಧ ಎಲ್ಲಿ ನೋಡಿದರೂ! ಭಜನೆಯ ಈ ಮುಖಗಳನ್ನೆಲ್ಲ ನಾನು ಕಂಡೂ ಇರಲಿಲ್ಲ, ಊಹಿಸಿಯೂ ಇರಲಿಲ್ಲ. ಸಂಸ್ಕೃತ ಸುಭಾಷಿತಗಳನ್ನು ಕಲಿಯುತ್ತೇವಲ್ಲ, ಅದೇನೋ ರುಚಿಗೆ, ಬಾಯಿಪಾಠ ಬರುವ ಗರ್ವಕ್ಕೆ. ಅವುಗಳ ಅರ್ಥದ ಅರ್ಥ ಜೀವನದ ಎಲ್ಲೆಲ್ಲೋ ಗುರುತಾಗಿ ಬಳಿ ಸಾರುವಂತೆ ಈ ಲೋಕದ ಎಲ್ಲವೂ ನಾನಂದು ಸುಮ್ಮನೆ ಕಲಿತ ಹಾಡುಗಳಲ್ಲೇ ಇದ್ದವೆ! ಪ್ರೀತಿ ಪ್ರೇಮ ಹರ್ಷ ಆತಂಕ ದುಃಖ ಶರಣಾಗತಿ, ಸಮಾಜ ಧರ್ಮ ರೀತಿ ನೀತಿ- ಜಗತ್ತಿನ ಸತ್ಯಗಳೆಲ್ಲ. ಮೊನ್ನೆ ಮೊನ್ನೆ ಬಸ್ಸಿನಲ್ಲಿ ಬರುವಾಗ ಒಬ್ಬ ಪುಟಾಣಿ ಪುಟ್ಟ ಹುಡುಗ ಬಾರಿಸು ಕನ್ನಡ ಡಿಂಡಿಮವ, ಧರಣಿ ಮಂಡಲ ಮಧ್ಯದೊಳಗೆ ಅಂತೆಲ್ಲ ಕಂಠದ ನರ ಸಿಡಿಯುವಂತೆ ಉಬ್ಬಿಸಿ ತೊದಲಲ್ಲಿ ಹಾಡುತ್ತಿದ್ದ. ಹೀಗೆ ಮುಂದರಿದು ಆತ ಪದ್ಯಗಳ ನಿಜ ಸಮೀಪ ಬಂದು ಮುಟ್ಟಿಕೊಂಡು ಅವನ್ನು ಪರೀಕ್ಷಿಸಿ ಉಳಿಸಿಕೊಳ್ಳುವ ಅಥವಾ ಅಳಿಸುವ ದೀರ್ಘ ಪಯಣದ ಕುರಿತು ಮತ್ತೆ ಬೆರಗು ಪಡುತ್ತಲೇ ಆ ಎಳೆಯ ದನಿಯನ್ನು ಕಿವಿ ತುಂಬಿಸಿಕೊಂಡೆ.

ಬದುಕಿನ ಒಳಗೆ ಸ್ವತಃ ಹೊಕ್ಕು ಪಯಣ ಹೊರಟಾಗಲೇ ನನಗೆ ಕ್ರಮೇಣ ಗಾಬರಿ ಕಳೆದು ನನ್ನನ್ನೇ ಕೇಳಿಸಿಕೊಳ್ಳುವ ಧೈರ್ಯ ಮತ್ತು ಅಗತ್ಯ ಕಾಣಿಸಿದ್ದು. ಸಾಧ್ಯವಾದಾಗೆಲ್ಲ ಹಿಂದೆ ಹೇಳಿದಂತೆ ಕಾವ್ಯದ 'ಬಿಡಿ ಅಧ್ಯಯನ'ವನ್ನಾದರೂ ಮಾಡಲು ತೊಡಗಿದ್ದು. ನನ್ನ ಈ ಪಯಣ ಆರಂಭವಾದದ್ದು ಶಿವಮೊಗ್ಗೆಯಲ್ಲಿ. ಇಲ್ಲಿಯೇ ನಾನು ಒಂದೆಡೆ ಪಟ್ಟಾಗಿ ಕುಳಿತು ನಾಟಕ ನೋಡುವ ಕಾವ್ಯ ಸಂಗೀತ ಗೋಷ್ಠಿಗೆ ಸತತ ನೆರೆಯುವ ಮಂದಿಯನ್ನು ಕಂಡು ಬೆಚ್ಚಿದ್ದು. (ಈಗ ದ.ಕ. ಜಿಲ್ಲೆಯಲ್ಲಿಯೂ ಸಂಗೀತ ಕಾವ್ಯ ಗೋಷ್ಠಿಗಳು ಸಾಮಾನ್ಯ) ಅಲ್ಲಿಗೆಲ್ಲ ಜೊತೆಗೇ ಹೊರಡಿಸಿಕೊಂಡು ಹೊರಡುವ ಪತಿಯಿಂದಾಗಿ ಆ ಸುಖಕ್ಕೆ ತೆರೆದುಕೊಂಡದ್ದು. ನನ್ನ ಅಂದಿನ ಬರವಣಿಗೆ ಬಗ್ಗೆ ಮತ್ತಷ್ಟು ಅಸ್ವಸ್ಥಳಾದದ್ದು. ಕವನ ಬರೆಬರೆದು ಹರಿದದ್ದು.

ಅದು ಕರ್ನಾಟಕದಲ್ಲಿ ರಂಗಚಳವಳಿ ಹುರುಪುಗೊಳ್ಳುತ್ತಿದ್ದ ಕಾಲ ಕೂಡ. ಬೆಂಗಳೂರಿನ ಕೆಲ ನಾಟಕ ತಂಡಗಳು ಶಿವಮೊಗ್ಗೆಯಲ್ಲಿ ಹೊಸ ಹೊಸ ಪ್ರದರ್ಶನ ನೀಡಿದ್ದುವು. ಹತ್ತಿರದ ಹೆಗ್ಗೋಡಿನ ನೀನಾಸಮ್ ಹೊಸ ಚೈತನ್ಯ ತುಂಬಿಕೊಂಡು ಕ್ರಿಯಾಶೀಲವಾಗಿತ್ತು. ತನ್ನ ಪ್ರಯೋಗಗಳನ್ನು ಶಿವಮೊಗ್ಗೆಯಲ್ಲಿಯೂ ಪ್ರದರ್ಶಿಸಿ ಜನಮನದ ಸನಿಹ ಬಂದಿತ್ತು. ಅದರ ಚಟುವಟಿಕೆಗಳನ್ನ ದೂರದಿಂದಲೇ ಗಮನಿಸುತ್ತಿದ್ದಂತೆ, ನನ್ನ ತಾಯಿ ಒರಟಾಗಿ ತನ್ನದೇ ರೀತಿಯಲ್ಲಿ ಅನುಸರಿಸುತ್ತಿದ್ದ - "ನಿಂತ ನೆಲದಲ್ಲೆ ಮಾಡುವ ಕಾಯಕದಲ್ಲೆ ಇರುವ ಬದುಕಲ್ಲೆ ಸ್ವಂತ ಅನುಭವಗಳನ್ನು ಸದರ ಮಾಡಿಕೊಳ್ಳದೇನೇ ನಮ್ಮ ಮಾರ್ಗವನ್ನು ಕಂಡು ಕೊಳ್ಳುವ, ಹೊಳವು ಮತ್ತೆ ತನ್ನ ವಿಶಾಲ ಅರ್ಥದಲ್ಲಿ ಆಳ ವಿಸ್ತಾರದೊಂದಿಗೆ ಕಾಣಿಸಿ ಕೊಂಡಂತಾಯಿತು. ಹೊರಕು ಹೊರಕಾಗಿ ಅಲ್ಲಲ್ಲಿ ಬರೆಯುತ್ತಿದ್ದವಳಿಗೆ ಸಾಹಿತ್ಯ ಈಗ ಗಂಭೀರವಾಗಿ ನನ್ನ ಮಾರ್ಗವಾಗಿ ಬೇಕೇ ಬೇಕೆಂಬ ಪ್ರೇರಣೆ ಹುಟ್ಟಿತು.

ಅಷ್ಟರೊಳಗೇ ನಾನಾ ಕಾರಣಗಳಿಂದ ನನ್ನ ಮಾಮೂಲಿ ಭಜನೆ 'ಘಟ್ಟ ಹತ್ತಿ' ನಾನು

ತಪತಾಪತೊಪಗಿದ್ದೆ. ಬದುಕಿನ ಒಳಬಳಗೆ ಬರುತ್ತ ಗಲಿಬಿಲಿ ಗೊಂದಲ ಅನುಭವಗಳ ಗೋಜಲು ಮೊಟ್ಟೆಯಾಗಿದ್ದೆ. ಈ ಗೋಜಲುಗಳನ್ನೇ ಹಿಂಬಾಲಿಸಿ ಶಬ್ದಗಳನ್ನು ಬಿಡಿಸಿ ಕೂಡಿಸಿ ಇದೇನು? ಇದೇನು? ಕೇಳಿಕೊಳ್ಳುತ್ತ ನಡೆದೆ. ನನ್ನ ಶಬ್ದಗಳಿಗಾಗಿ ಪರಿತಪಿಸಿದೆ. ಶಬ್ದದ ಸಂಪೂರ್ಣ ಸಾಕ್ಷಾತ್ಕಾರವೆಂಬುದು ಅನಂತ ಕಾಲದ ತಪಸ್ಸಿನ ಫಲವಷ್ಟೆ. ಅದರ ದೂರ ಎಷ್ಟೋ. ಆ ಬಗ್ಗೆ ಚಿಂತೆ ಮಾಡದೆ ನಡೆಯುತ್ತಿರಬೇಕು. ಕೈ ಬಾಯಿ ಕಿವಿಯಲ್ಲಿದ್ದ ಕೆಲವೇ ಶಬ್ದ ಪರಿಕರಗಳಿಂದಲೇ ಕಂಡುಕೊಳ್ಳಬೇಕೆನಿಸಿದ್ದನ್ನು ಹೇಳಬೇಕೆನಿಸಿದ್ದನ್ನು ಹುಡುಕ ಹೊರಟೆ. ಅದರಲ್ಲಿ ಕೆಲವು ಕಥೆಯ ರೂಪ ತಳೆದವು.

ಶಿವಮೊಗ್ಗೆಯಿಂದ ಉಡುಪಿಗೆ ಬಂದು ನೆಲೆಸುವಂತಾಯಿತು. ಮನಸ್ಸು ವಿಚಿತ್ರ ಸ್ಥಿತಿ ಯಲ್ಲಿತ್ತು. ಅಥವಾ ಬಂದೂ ಬಂದೂ ಕಾವ್ಯದ ಬಾಗಿಲ ಹೊರಗೆ ಕಾದು ಕುಳಿತಂತೆ ಇತ್ತೋ. ಒಮ್ಮೆ ಏನಾಯಿತೆಂದರೆ

ತೆರೆದಿಟ್ಟೆ ಹೃದಯವನು
ಆಯಿತದು ಕವಿತೆ
ಇರುವ ವಿಷಯ ಇಷ್ಟೆ.

ನಾನು ಇಷ್ಟೇ ಹೆಡ್ಡೆ, ಇಷ್ಟೇ ಬುದ್ಧಿವಂತೆ, ನಿಧಾನ ನಡಿಗೆ ಸಾಗಿಸಿದ್ದೇನೆ.

ಪ್ರಭಾವ ಹಿನ್ನೆಲೆ ಸಂವಹನಶೀಲತೆ ಇತ್ಯಾದಿ 'ಸಂವಾದ' ಕೇಳಿದೆಯಲ್ಲ- ಅವೆಲ್ಲ ಇದರ ಮೇಲಿಂದ ನೀವು ಎಷ್ಟು ಊಹಿಸುತ್ತೀರೋ ಅಷ್ಟು.

ಈಗ ಬಂಡಾಯ ಸಾಹಿತ್ಯ ಸಂಘಟನೆಯಲ್ಲಿ 'ಸಂಘಟನೆ ಮಾಡಿದವನೇ ಸಾಹಿತಿ' ಅನ್ನುವ ಅಭಿಪ್ರಾಯ ಬೆಳೀತಾ ಇದೆ... ಕನ್ನಡ ರಾಜ್ಯೋತ್ಸವದ ರೀತೀಲಿ ಚಂದಾಕೊಟ್ಟವನೇ ಸಾಹಿತಿ ಅನ್ನೋ ರೀತಿ ಇದು ಆಗ್ಬಿಡಬಹುದು! ಈವತ್ತಿಗೂ ಬಂಡಾಯ ಸಂಘಟನೆಯ ಕಡೆಗೆ ನೋಡುತ್ತಿರುವ ತರುಣರಿದ್ದಾರೆ.. ಜಗತ್ತಿನ ಶ್ರೇಷ್ಠ ಸಾಹಿತ್ಯ ಕುರಿತು ಮಾರ್ಗದರ್ಶನ ನೀಡಲು ಸಂಘಟನೆಯನ್ನು ಬಳಸಿಕೊಳ್ಳಬಹುದು. ಆದರೆ ಅತಿ ಸಾಮಾಜಿಕ ಪ್ರಜ್ಞೆಯ ಸಮಸ್ಯೆ ಏನೆಂದರೆ- ಪಂಪ ರಾಜಾಸ್ಥಾನದಲ್ಲಿದ್ದ, ಅವನು ಕವಿ ಅಲ್ಲ ಅಂತ ಡಿಸ್ ಮಿಸ್ ಮಾಡಿಬಿಡೋದು!.. ಒಂದು ಸಾಹಿತ್ಯ ಸಂಘಟನೆ ಸಾಹಿತ್ಯ ಓದುವದನ್ನು ಹೇಳಿ ಕೊಡುವದು ಬಹಳ ಮುಖ್ಯ.

– ಡಾ॥ ಸಿದ್ದಲಿಂಗಯ್ಯ

ಕಾವ್ಯವೆಂದರೆ...

– ಸವಿತಾ ನಾಗಭೂಷಣ

ಮುಕ್ಕಣ್ಣನಿಗೆ ಮುಟ್ಟೊ ಹಾಗೆ
ಹಾಡೆ ಹನುಮವ್ವಾ...

ಅವನನ್ನು ಮುಟ್ಟಿದರೆ ಎಲ್ಲರನ್ನು ಮುಟ್ಟಿದಂತೆಯೆ. ಎಲ್ಲರನ್ನು ಮುಟ್ಟಿದರೆ ಅವನನ್ನು ಮುಟ್ಟಿದಂತೆಯೆ. ಅವನನ್ನು ಮುಟ್ಟುವಂತೆ ಹಾಡುವುದೆ ನನ್ನ ಆಶೆ. ಅವನೆ ನನ್ನ ಹಾಡಿನ ಬೀಜ. ಅವನೆ ಆ ಬೀಜದೊಳಗ್ಗಿನ ಮರ.

ಅವನ ಹೆಸರು ಹೇಳಿ ಬೀಜ ನೆಡುವೆನಾದರೂ ಒಳಗೊಳಗೆ ನಡುಕ. ಮೊಳಕೆ ಸೂಜಿಮೊನೆಯಾದರೆ.. ಎಲೆಗಳು ಗರಗಸದ ಹಲ್ಲುಗಳಾದರೆ.. ಒಂದೊಂದು ದಳವೂ ಕತ್ತಿಯ ಅಲಗಾದರೆ ಎಂದು ಆತಂಕ.

ಅದಕ್ಕೆ ಹಾಡಿನ ಬೀಜ ಮಣ್ಣಲ್ಲಿ ಊರುವ ಮುನ್ನವೆ ಪ್ರಾರ್ಥನೆ. ದೇವರೇ ಇದು ಹೀಗೆಯೆ ಮೊಳಕೆಯೊಡೆಯಲಿ, ಅದರ ಕುಡಿ ಕೆಂಪಗಿರಲಿ, ಕಾಂಡವು ಶಕ್ತವಾಗಿರಲಿ, ಮೊಗ್ಗು ನವಿರಾಗಿ ಬಿರಿಯಲಿ, ಬಿರಿದ ದಳಗಳು ನಯವಾಗಿರಲಿ, ಬಣ್ಣಗಳು ಎಲ್ಲರ ಕಣ್ಣಿಗೆ ತಂಪುಣಿಸಲಿ, ಸುಗಂಧ ಎಲ್ಲರ ಸೆಳೆಯಲಿ ಇದರ ಹಣ್ಣುಗಳು ಸಕ್ಕರೆಸಿಹಿಯಾಗಿರಲಿ, ಕೊಂಬೆಗಳು ಮುಗಿಲಿಗೆ ಕೈಚಾಚಿ ಅವನನ್ನು ಮುಟ್ಟಲಿ....

ಅವನಾದರೂ ಎಂತಹವನು? ಸೂರ್ಯನಂತಹ, ಚಂದ್ರನಂತಹ, ನದಿಯಂತಹ, ಬೆಟ್ಟದಂತಹ ನೂರಾರು ಹಾಡುಗಳ ಸೃಷ್ಟಿಸಿ ಬಿಸುಟು ಅದರ ಮೇಲೆಯೆ ನಡೆದು ಹೋದವನು. ಅವನನ್ನು ಒಲಿಸುವುದು ಅಷ್ಟು ಸುಲಭವೆ? ಇನ್ನು ನನ್ನ ಬಳಿ ಇರುವ ಶಬ್ದಗಳೊ... ಎಲ್ಲವೂ ಎಂಜಲುಮಯ. ನನ್ನ ಹಿಂದಣ ಕವಿಗಳೆಲ್ಲರೂ ಆ ಶಬ್ದಗಳ ರೂಪ ಸ್ಪರ್ಶ ರಸ ಗಂಧಗಳನ್ನು ಹೀರಿ ನಗೆಯಾಡುತ್ತಿದ್ದಾರೆ. ಹೂವಿನಂತಹ ಶಬ್ದಗಳಲ್ಲಿ ಮಕರಂದವ ಹೀರಿ ಚಪ್ಪೆ ದಳಗಳನ್ನಷ್ಟೇ ಚೆಲ್ಲಿ ಹೋಗಿದ್ದಾರೆ. ದಳಗಳನ್ನು ಸುಂದರವಾಗಿ ಪೋಣಿಸಿದರಷ್ಟೇ ಸಾಕೆ?

ಆದರೂ ಎದೆಗಾರಿಕೆ ಎಂಬ ವಸ್ತುವೊಂದು ಇದೆಯಲ್ಲ.. ಅದೆ ಕಲಿಸುವುದು. ಇನ್ನೇನದು? 'ಅಹಂ'. ಎಂಜಲೊಳಗೆ ಹೊರಳಿ ಹೊರಳಿ ಒದ್ದೆಯಾದ ಮುದ್ದೆಯಾದ ಶಬ್ದಗಳನು ನುಡಿಸುವುದು ಹೇಗೆಂದು ಅದು ಕಲಿಸುವುದು. ಈ ಅಹಂನ ಬಲದಿಂದಲೆ ಮಳೆಯ ನೀರಲ್ಲಿ

ಅವುಗಳನು ತೊಳೆದು, ಸೂರ್ಯನ ನೆರವಿನಿಂದ ಒಣಗಿಸಿ, ಚಂದ್ರನ ಬೆಳಕಲ್ಲಿ ಹದಗೊಳಿಸಿ, ಅಂತಹ ಹದಗೊಳಿಸಿದ ನೂರಾರು ಶಬ್ದಗಳನ್ನು ಒಂದು ಬುಟ್ಟಿಯಲ್ಲಿ ತುಂಬಿಟ್ಟು ಇನ್ನು ನಿರ್ಭಯವಾಗಿ ಹಾಡು ಕಟ್ಟಬಹುದೆಂದು ಮನದಲ್ಲೆ ತರ್ಕಿಸಿ, ಸಮಾಧಾನದ ಉಸಿರು ಬಿಡುವ ಮೊದಲೆ...

ಅಗೊ.. ಅವನೆ ಬಾಗಿಲಲ್ಲಿ ನಿಂತಿದ್ದಾನೆ. ಆ ಜಡ್ಡುಗಟ್ಟಿದ ಜಟೆಗೆ ಅರ್ಧ ಚಂದ್ರನನ್ನು ಮುಡಿದ ಪರಿಯೊ.. ಒಂದು ಕೈಯಲ್ಲಿ ಕಪ್ಪರ ಇನ್ನೊಂದು ಕೈಯಲ್ಲಿ ತ್ರಿಶೂಲ. ಬಾಯಲ್ಲಿ ಹಸಿವಿನ ಹಾಡು.

ಅದು ರುದ್ರನೊಡ್ಡಿದ ಕೈ ಎಂದು ನನಗಾದರೂ ಹೇಗೆ ಅರ್ಥವಾಗಬೇಕು? ಅವನ ಒಡಳೊಳಗೆ ಸಮಸ್ತ ಹಸಿವಿನ ಲೋಕವೆ ಮನೆಮಾಡಿಕೊಂಡಿದೆ ಎಂದು ನನಗಾದರೂ ಹೇಗೆ ಹೊಳೆಯ ಬೇಕು?

ಅವನೊ ತಪ್ಪಲೆ ಅನ್ನವನ್ನ ಕ್ಷಣಾರ್ಧದಲ್ಲಿ ಮುಗಿಸಿ ಮತ್ತೆ ಹಸಿವು ಎಂದು ಕೂಗುತ್ತಿದ್ದಾನೆ. ಅಳಿದುಳಿದದ್ದನ್ನೆಲ್ಲ ಬಳಿದು ತರುವಷ್ಟರಲ್ಲಿ ಬುಟ್ಟಿಯಲ್ಲಿ ಸೇರಿಸಿಟ್ಟಿದ್ದ ಶಬ್ದಗಳನ್ನೆಲ್ಲ ನುಂಗಿ ನೀರು ಕುಡಿದಿದ್ದಾನೆ. ನಾನು ಬಾಯ್ದೆರೆಯುವ ಮೊದಲೆ 'ಹಸಿವು ನೀಗಿತು' ಎಂದುಸುರಿ ನಡೆದೇಬಿಟ್ಟಿದ್ದಾನೆ.

ಸದ್ಯ.. ನಿಷ್ಕರುಣಿಯಂತೂ ಅಲ್ಲ. ಬುಟ್ಟಿಯಲ್ಲಿ ಒಂದು ಶಬ್ದ ಇನ್ನೂ ಹಾಗೆಯೆ ಇದೆ. ಕಂಡೂ ಬಿಟ್ಟಿದ್ದಾನೋ ಕಾಣದೇ ಬಿಟ್ಟಿದ್ದಾನೋ ... ತಿಳಿಯದು. ಬೇರೆ ಬೇರೆ ಶಬ್ದಗಳ ಒತ್ತಡಕ್ಕೆ ಸಿಕ್ಕಿ ಹಾಕಿಕೊಂಡಿದ್ದರಿಂದಲೊ ಏನೊ ನಲುಗಿ ಹೋದಂತಿದೆ ಆ ಶಬ್ದ. ಮುಟ್ಟುವುದಿರಲಿ, ಕಣ್ಣೋಟಕ್ಕೂ ನಲುಗುವಂತಹ ಕೋಮಲವಾದ ಶಬ್ದ. ಆ ಅದೇ 'ಪ್ರೇಮ'ವೆಂಬ ಚೂರು ಅಕ್ಷರವನು ಸಂಭ್ರಮದಿಂದ ನಾಲಗೆಯ ಮೇಲಿರಿಸಿಕೊಂಡು ನಾನು ಹಾಡಲು ಮೊದಲಾಗಿರುವುದು-

ಅದು ಅವನು ಕೊಟ್ಟು ಹೋದ ಶಬ್ದ: ಅವನು ಮುಟ್ಟಿಯೂ ನನಗೆಂದೇ ಬಿಟ್ಟು ಹೋದ ಶಬ್ದ.

ಆ ಒಂದು ಶಬ್ದವೇ ನನ್ನ ಹಾಡಿನ ಜೀವ ಮತ್ತು ದೇಹ.
ಆ ಒಂದು ಶಬ್ದವೇ ನನ್ನ ಹಾಡಿನ ಮಂತ್ರ ಮತ್ತು ತಂತ್ರ.
ಇದು ಕಟ್ಟುಕತೆಯೊ, ಕನಸೊ, ಎಚ್ಚರವೊ, ಮಂಪರೊ...
ಕಲ್ಪನೆಯೊ ಅಥವ ಹುಚ್ಚೊ? ಏನಿದರ ನಿಜಾರ್ಥ?!
ಅರ್ಥವೇ ಇಲ್ಲದ್ದು ಅಥವಾ ಸಕಲಾರ್ಥವನ್ನೂ ಒಳಗೊಂಡಿರುವಂತಾದ್ದು!
ಇದೇ ಇರಬಹುದೇನೋ ಕಾವ್ಯ...?!

ನಾನು, ನನ್ನ ಕಾವ್ಯ...

- ಆನಂದ ಝುಂಜರವಾಡ

ಮನುಷ್ಯ ಹುಟ್ಟಿದ ಕ್ಷಣದಿಂದಲೇ ಸಾವಿನ ಪ್ರಕ್ರಿಯೆ ಶುರು ಆಗುತ್ತದೆ. ಒಂದೊಂದು ಉಸಿರಾಟ ಸಾವು ಸಮೀಪಿಸುತ್ತಿದೆ ಎಂಬುದನ್ನು ತೋರುವ ಮೈಲಿಗಲ್ಲು. ಪ್ರಜ್ಞೆಯಲ್ಲಿ ಒಮ್ಮೆ ಈ ಸತ್ಯದ ಅರಿವು ಮೂಡಿಬಿಟ್ಟರೆ ಮುಂದೆ ಮನುಷ್ಯನ ಪ್ರತಿ ಕ್ಷಣವೂ ಪಡೆಯುವ ಸೃಜನಶೀಲತೆಯೇ ನಿಜವಾದ ಸೃಜನಶೀಲತೆ. 'ಹುಟ್ಟಿ'ನ ಯಜ್ಞದ ಪೂರ್ಣಾಹುತಿ ಸಾವಿನಲ್ಲಿ. ದೀಕ್ಷಾಬದ್ಧನಾದ ಜೀವ ಕವಿ. ತನ್ನ ಬಾಳಯಜ್ಞಕ್ಕೆ ಆತ ಬಳಸುವ ಮಂತ್ರ ಅವನ ಕಾವ್ಯ.

ಕವಿಯಾಗಿ ನಾನು ನನ್ನ ಕಾವ್ಯವನ್ನು ಹೀಗೆ ಬಗೆದಿದ್ದೇನೆ. ಜಗತ್ತನ್ನು ತಿಳಿಯುವ ಆಸಕ್ತಿಗಿಂತ, ನನ್ನನ್ನು ನಾನು ತಿಳಿಯುವದು ನನ್ನ ಮುಖ್ಯ ಗಮನ. 'ಸಾಮಾಜಿಕತೆ' ಎನ್ನುವದು ಮನುಷ್ಯ ತನ್ನ ದೌರ್ಬಲ್ಯಗಳಿಗಾಗಿ ತಾನೇ ಮಾಡಿಕೊಂಡ ದುರ್ಬಲ ಒಪ್ಪಂದ. ತನ್ನ ಬಯಕೆಗಳನ್ನ ಮಿತಗೊಳಿಸಿಕೊಳ್ಳುತ್ತ ಹೋಗುವದೊಂದೇ ಸಾಮಾಜಿಕತೆಯನ್ನು ಮೀರಿ ಹೋಗುವ ಮಾರ್ಗ. ಶೋಷಣೆ-ಭ್ರಷ್ಟತೆ- ಕ್ರೌರ್ಯ-ಇವೆಲ್ಲವುಗಳ ಮೂಲವಿರುವದು ನಮ್ಮ ಆಶೆಗಳಲ್ಲಿ. ಅವುಗಳ 'ನಿರಸನ'ವೇ ನಿಜವಾದ ಮಾನವೀಯತೆಯ ಸಾಕ್ಷಾತ್ಕಾರದ ಹಾದಿ.

ಶಬ್ದಗಳು ಏನಿದ್ದರೂ ಅನುಭವವನ್ನು ಯಥಾವತ್ತಾಗಿ ಅಭಿವ್ಯಕ್ತಿಸಲಾರವು. ಶಬ್ದಗಳಿಂದ ಅಶಾಬ್ದಿಕ ಕೆಲಸ ಮಾಡಿಸುವದೊಂದೇ ಕವಿಯ ಕೆಲಸ. ಯಾವ ಕಾವ್ಯವೂ ನಿಷ್ಫಲವಲ್ಲ. ಕಾವ್ಯದಲ್ಲಿ ತರ-ತಮಗಳಿಲ್ಲ. ವೈವಿಧ್ಯತೆಗಳಿವೆ. ನನ್ನ ಕಾವ್ಯ ಜನರಿಗೆ ತಲುಪುವದು-ತಲುಪದಿರುವದು, ನನ್ನ ಸೃಜನಶೀಲತೆಯನ್ನು ಮಾತ್ರ ಆಧರಿಸಿದ ಕ್ರಿಯೆಯಲ್ಲ. ಆದ್ದರಿಂದ ಅದರ ಬಗೆಗೆ ನಿರ್ಲಕ್ಷವೇ ಸೂಕ್ತ ಪ್ರತಿಕ್ರಿಯೆ. ಆದರೆ ಶಕ್ತಿ ಇದ್ದಷ್ಟೂ, ಸಹಜಕಾವ್ಯಕ್ಕೆ ವಂಚನೆಮಾಡಿಕೊಳ್ಳದೇ, ಮಾಡುವಷ್ಟು ಪ್ರಯತ್ನ ಮಾಡಬೇಕು. ವಿಮರ್ಶಕನೂ ಒಂದು ರೀತಿಯ ಕವಿಯೇ. ಜೀವನಾನುಭವವನ್ನು ಕಲಾನುಭವವನ್ನಾಗಿ ಪರಿವರ್ತಿಸುವವ ಕವಿ. ಕಲಾನುಭವವನ್ನು ರಸಾನುಭವವನ್ನಾಗಿ ಪರಿವರ್ತಿಸುವವ ವಿಮರ್ಶಕ.

ಕಾವ್ಯದಲ್ಲಿ ಕವಿ ಜೀವನಕ್ಕೆ ಸ್ಪಂದಿಸುವ ರೀತಿ, ವಿಮರ್ಶಕ, ಕಾವ್ಯಕ್ಕೆ ಸ್ಪಂದಿಸುವ ರೀತಿ, ಎರಡಕ್ಕೂ ಮೂಲ ಅವರವರ ದೃಷ್ಟಿ ಕೋನಗಳೇ.

ಕೊನೆಗೂ, ಒಳ್ಳೆಯ ಕವಿಯಾಗಿ ಕೆಟ್ಟ ಮನುಷ್ಯನಾಗುವದಕ್ಕಿಂತ, ಒಳ್ಳೆಯ ಮನುಷ್ಯನಾಗಿ ಕೆಟ್ಟ ಕವಿಯಾದರೂ ತಪ್ಪಿಲ್ಲ.

ಹಿಂಗೆ ಬದುಕುತ್ತಾ ಬರೆಯುತ್ತಿರುವಾಗ...

– ಚಂದ್ರಶೇಖರ ತಾಳ್ಯ

ಹೊಸ ಅನುಭವ ಮುಖಾ ಮುಖಿಯಾದಾಗ ಅದಕ್ಕೆ ತಕ್ಕ ಅಭಿವ್ಯಕ್ತಿಯನ್ನು, ಅದಕ್ಕೆ ತಕ್ಕ ಪ್ರತಿಮೆ ಪ್ರತೀಕಗಳನ್ನೂ ಹೊಳೆಸಿಕೊಳ್ಳುವುದು, ಹೊಂದಿಸಿಕೊಳ್ಳುವುದು ಭಾಷೆಯ ಬಳಕೆಯ ಹೊಸ ನೆಲೆಯನ್ನೇ ಅಪೇಕ್ಷಿಸುತ್ತದೆ. ನನಗೆ ಇವತ್ತು ಷಟ್ಪದಿಯಲ್ಲೋ ಸಾಂಗತ್ಯದಲ್ಲೋ ಬರೆಯುವುದು ಅಸಾಧ್ಯ. ಬದುಕಿನ ಕ್ರಮ ಹೊಸದಾದಂತೆಲ್ಲ ಅದು ತನ್ನ ಭಾಷೆಯನ್ನು ತಾನು ಕಂಡುಕೊಳ್ಳುವುದು ಅನಿವಾರ್ಯ. ಎಷ್ಟೇ ಪ್ರತಿರೋಧವಿದ್ದರೂ ಹಳೆಯದು ತನ್ನ ಪರೆ ಕಳಚಿಕೊಂಡು ಹೊಸ ಹೊಳಪಿನಲ್ಲಿ ತನ್ನನ್ನು ಪ್ರಕಟಿಸಿಕೊಳ್ಳಲು ತವಕಿಸುತ್ತದೆ. ಈ ಸಂಘರ್ಷವೇ ಹೊಸ ಕಲೆಯ ನೆಲೆಯಾಗಿರುತ್ತದೆ. ಹೊಸದಾಗಿ ಬರೆಯುವುದೆಂದರೆ ಹೊಸದಾಗಿ ಬದುಕುವುದೆಂದೇ ನನಗೆ ಅರ್ಥವಾಗುತ್ತದೆ. ಅಲ್ಲಿ ಹೊಸ ಮೌಲ್ಯಗಳ ಹುಡುಕಾಟ, ಅವನ್ನು ಬದುಕಿಗೆ ಹಚ್ಚಿ ನೋಡುವ, ಅತ್ಯಂತ, ಗಾಢವೆನಿಸುವ ಕ್ರಿಯೆ ಇರುತ್ತದೆ. ಹಳೆಯ ಲಯಗಳಲ್ಲೇ ಮನಸ್ಸು ಓಡಾಡಿಕೊಂಡಿದ್ದರೆ ಅಷ್ಟರ ಮಟ್ಟಿಗೆ ನಾವು ಬದುಕುವುದು ಕೂಡ ಹಳೆಯ ಲಯದಲ್ಲೇ. ಆದ್ದರಿಂದ ತಹ ತಹ, ಕುದಿ, ನಡುಕ, ನೈತಿಕ ಮೌಲ್ಯಗಳ ಅದಃ ಪತನದಿಂದಾಗುವ ಶಾಕ್ ಇವೆಲ್ಲವೂ ಪ್ರತಿ ತಲೆಮಾರಿನ ಬರಹಗಾರನಿಗೆ ಮುಖ್ಯವಾಗುತ್ತವೆ. ಮತ್ತು ಮುಖ್ಯವಾಗಬೇಕು. ಹಂಗೆ ಬದುಕುತ್ತಾ ಬರೆಯುವಾಗ ಹಳೆಯದೆಲ್ಲವನ್ನೂ ಸಾರಾಸಗಟಾಗಿ ತಿರಸ್ಕರಿಸುವುದೂ ಕಷ್ಟ. ಬಂಡಾಯದ ಹೊಸ ಲೋಕದಲ್ಲಿ ಕಾಲಿಡುತ್ತಿದ್ದ ಅಥವಾ ನಮ್ಮೊಳಗೇ ಏಳುತ್ತಿದ್ದ ಬಂಡಾಯದ ಕನಸಿನ ಸಂದರ್ಭದಲ್ಲಿ ನಮಗೆಲ್ಲಾ ಅನಿಸುತ್ತಿದ್ದದ್ದು 'ವಸ್ತು' ಪ್ರಧಾನ ಅಂಶ. ಅಲ್ಲಿ ವಸ್ತು ನೇರ ಸಂವಹನಗೊಳ್ಳಬೇಕು. ಒಂಟಿ ಬದುಕು ಎಲ್ಲರ ಬದುಕಾಗಬೇಕು ಅಥವಾ ಎಲ್ಲರ ಬದುಕು ಏಕಾಂತದಲ್ಲಿ ಅರಳಬೇಕು ಎಂಬ ಹಂಬಲ. ಆದರೆ ಕಲೆಯ ಮುಖ್ಯ ಪಾತ್ರವನ್ನೇ ಆಗ ನಾವು ತಿರಸ್ಕರಿಸಿದ್ದೆವೋ ಏನೋ ಅನ್ನಿಸುತ್ತದೆ. ಸಂವಹನವನ್ನೇ ಪ್ರಧಾನ ಮಾಡಿಕೊಂಡಾಗಲೆಲ್ಲ ಸರಳೀಕರಣ, ಸುಲಭೀಕರಣ ನಮ್ಮನ್ನು ಸುಲಭವಾಗಿ ಸೆಳೆದು ಬಿಡಬಲ್ಲದು. ಹಾಗಾಗಿಯೇ ಇವತ್ತು ಬಂಡಾಯದ ಮನಸ್ಸು ಮಾಗಿ ಏಕಾಂತದತ್ತ ತನ್ನ ದಿಕ್ಕನ್ನು ಹಿಡಿಯುತ್ತಿರುವುದು. ಇದು ಮತ್ತೊಂದು ತುದಿ ಮುಟ್ಟಿದರೆ ಅದರಲ್ಲಿಯೂ ಅಪಾಯ ತಪ್ಪಿದ್ದಲ್ಲ. ಅಥವಾ ಇದಕ್ಕೆ ಇನ್ನೊಂದು ಮುಖವೂ ಇದ್ದಿರಬಹುದೇನೋ. ಮುಕ್ತತೆ, ಸ್ವಾತಂತ್ರ್ಯದ ಪ್ರಶ್ನೆ ಬಂದಾಗಲೆಲ್ಲ, ಯಾವ ಕಾಲಕ್ಕೂ

ಸ್ಥಿರತೆಯನ್ನು ಬಯಸುವ ವ್ಯವಸ್ಥೆ ಈ ಪ್ರತಿರೋಧವನ್ನು ಸಹಿಸದೆ ಅಡ್ಡಿಪಡಿಸುತ್ತಿರುವಾಗೆಲ್ಲ ಇದೊಂದು ರೀತಿಯ ಕಲೆಯ ಹೆಸರಿನ ಪಲಾಯನವೂ ಆಗಿ ಬಿಡುತ್ತದೆನ್ನುವ ಆತಂಕ ಕಾಡುವುದು. ಹಳೆಯದನ್ನು ಕೂಡಿಸಿಕೊಳ್ಳುವಾಗ ಕಲೆಯ ಸಾತತ್ಯ ನೆಲೆಗೊಂಡೇ ಹೊಸದು ಹುಟ್ಟುತ್ತದೆನ್ನುವುದು ನಿಜವಾದರೂ ಆ ಹಳೆಯ ಮೌಲ್ಯವೂ ತನ್ನನ್ನು ವೈಭವೀಕರಿಸಿಕೊಂಡು ವಾಸ್ತವದ ಕಠೋರತೆಯನ್ನು ಮರೆಸಿಬಿಡುವ ಅಪಾಯವೂ ಕಾಡುತ್ತದೆ. ಒಂದು ಕಡೆ ಸರಳೀಕರಣದ ಭಯ, ಒಂದು ಕಡೆ ಪಲಾಯನದ ಭಯ ಇವುಗಳ ನಡುವೆಯೇ ಎಲ್ಲೋ ನಮ್ಮ ನೆಲೆ ಇದೆ ಎನಿಸುತ್ತದೆ. ಇವತ್ತಿಗೂ ನಾನು ಪ್ರಯತ್ನಿಸುತ್ತಿರುವುದು ಇಂಥ ಕವಿತೆಯ ರಚನೆಯನ್ನೇ. ಆದರೆ ಅದು ಸಾಧ್ಯವಾಗಿಲ್ಲ ಎನಿಸುತ್ತೆ. ಭಾಷೆಯಲ್ಲೇ ಸಂಭವಿಸಬೇಕಾದ ಹೊಸ ಅನುಭವ ಸಂಭವಿಸುತ್ತಲೇ ಇಲ್ಲ ಎನ್ನುವ ಕೊರತೆ ಇವತ್ತಿಗೂ ಕಾಡುತ್ತಿದೆ. ನನ್ನೊಳಗೆ ಘಟಿಸಿದ್ದು ಸಾರ್ವತ್ರಿಕ ಆಗುವ ತನಕ, ಎಲ್ಲರನ್ನೂ ತಟ್ಟುವ ತನಕ ನಾನು ಮುಟ್ಟಿದ್ದು ಕಲೆಯಾಗುತ್ತಿಲ್ಲ ಎಂಬ ನೋವು ಇದ್ದದ್ದೆ. ಅಥವಾ ಹಾಗೆ ನಾನು ಪ್ರಾಮಾಣಿಕ ಬದುಕು ಬದುಕುತ್ತಲೇ ಇಲ್ಲದಿರಬಹುದು. ನನ್ನನ್ನು ಗಾಢವಾಗಿ ಪ್ರಭಾವಿಸಿರುವ ವಚನ ಚಳುವಳಿ, ಅದು ಭಾಷೆಯಲ್ಲಿ ಮೈತಳೆದ ವಿಧಾನ, ಆನಂತರದ ಕುವೆಂಪು, ಬೇಂದ್ರೆ ಎಲ್ಲರೂ ನನ್ನೊಳಗೆ ಇನ್ನೂ ಆಟವಾಡುತ್ತಿರುವಾಗ ಸ್ವಂತದ ಜೀವನ ಅಸಾಧ್ಯ. ಹಂಗಾಗಿ ಕವಿತೆಯ ರಚನೆಯೇ ಅಸಾಧ್ಯವಾಗುತ್ತಿದೆ. ಬರೆಯುವಾಗೆಲ್ಲ ಕೈಹಿಡಿಯುತ್ತದೆ. ಮನಸ್ಸು ತಡೆಯುತ್ತದೆ. ತಡವರಿಸುತ್ತಾ ಇದ್ದಲ್ಲೇ ಇರುವುದು ಎಷ್ಟು ಸರಿಯೋ ಏನೋ? ಅಂತೂ ಮುಂದಕ್ಕೆ ಹೋಗುತ್ತಿದ್ದೇನೆಂಬ ಭ್ರಮೆಯಲ್ಲಿ ನಾನಿರಬಹುದೇ?

ನಾದಲೀಲೆಯ ಗುಂಗಿನಲ್ಲೇ ಕರುಳು ಬಗೆಯುವ ನೋವು ಹೊಮ್ಮಿಸುವ ಯತ್ನ ಕೂಡ ಅಪ್ರಾಮಾಣಿಕವಾದದ್ದೇ. ತುಂಬಿದ ಈ ಗೊಂದಲ ವಿವರಿಸುವುದು ಕಷ್ಟ. ಅಗಾಧ ನೋವಿನ ಸೆಲೆಗಳಲ್ಲೇ ಹಳೆಯದನ್ನು ಕೂಡಿಸಿಕೊಂಡೇ ಚಂದದ ನಡಿಗೆಯನ್ನು ಸೃಷ್ಟಿಸುವುದನ್ನು ನೋಡಬೇಕು. ಅದು ಸಾಧ್ಯವೋಅಸಾಧ್ಯವೋ ಹೇಳುವುದು ಕಷ್ಟ. ಆದರೆ ನೋವಿನಲ್ಲೂ ನವಿಲು ಕುಣಿಯುವ ದೃಶ್ಯ ಅನಿವಾರ್ಯವೇ ಇರಬೇಕು. ತಮ್ಮ ಚಿಂದಿಗಳಲ್ಲೇ ಎಲ್ಲ ನೋವನ್ನೂ ಮರೆಗಿರಿಸಿ ಕಳೆ ತೆಗೆಯುತ್ತಾ ಹಾಡುವ ನಮ್ಮ ಹಳ್ಳಿಯ ಹೆಣ್ಣು ಮಕ್ಕಳ ಹಾಡುಗಾರಿಕೆ, ಇದ್ದಕ್ಕಿದಂತೆ ಹಾಡುಕಟ್ಟುತ್ತಿದ್ದ ನಮ್ಮೂರಿನ ಹರಿಜನರ ರಾಮಪ್ಪ ಇವರೆಲ್ಲ ಹೇಗೆ ನಗುತ್ತಾ ಹಾಡುತ್ತಿದ್ದರೆಂಬುದೇ ನನಗೆ ಅಚ್ಚರಿ ಹುಟ್ಟಿಸುತ್ತೆ. ಈಗಲೂ ಆ ಸ್ಥಿತಿಯೇನೂ ಬದಲಾಗಿಲ್ಲ. ಆದರೆ ಯಾವ ಬದಲಾವಣೆಯೂ ಇಲ್ಲದೆ ಸುಮ್ಮನೆ ಹಾಡುತ್ತಾ ಹೋಗುವುದು ಎಷ್ಟು ಸರಿ ಅಥವಾ ಹಾಡೇ ಇಲ್ಲದೆ ಬರೀ ಬದಲಾವಣೆಗೆ ತುಡಿಯುವುದು ಎಷ್ಟೊಂದು ಶುಷ್ಕ. ಈ ಗೊಂದಲ ನೋವನ್ನು ಹೆಚ್ಚಿಸುತ್ತದೆ. ನೋವು ಉರಿಯಾಗುತ್ತದೆ. ಹಿಂಸೆಯಾಗುತ್ತದೆ. ಅಸಹಾಯಕತೆಯಿಂದ ಮೈ ಪರಚಿಕೊಳ್ಳುವ ಅನುಭವ ಇದು. ಹೀಗೆ ಎಲ್ಲವನ್ನೂ ಒಳಗೊಂಡೇ ಎಲ್ಲ ಮೀರಿದ ಅಪರಿಚಿತ ನೆಲೆಗಳನ್ನು ಮುಟ್ಟುವ ಹಿಗ್ಗಿಗಾಗಿ ಇನ್ನೆಷ್ಟು ಕಾಯಬೇಕೋ? ಒಳ ಕತ್ತಲಿನ ಗುಮ್ಮದಲ್ಲೇ ಹಣತೆಯ ಬೆಳಕಿಗಾಗಷ್ಟೇ ನಾನೀಗ ಯೋಚಿಸುತ್ತಿರುವುದು. ಇದು ನನ್ನಂಥವರ ಮಿತಿ ಕೂಡ. ಸಮೂಹ ಒಡಕಾಗಿ, ಕನ್ನಡಿಯ ಚೂರುಗಳಲ್ಲಿ ಪ್ರಜ್ವಲಿಸುವ ಈ

ದುರಂತವೇ ನನ್ನಂಥವರ ಕಲೆಯ ನೆಲೆ ಇರಬೇಕೆನಿಸುತ್ತೆ. ಆಯುಷ್ಯ ತೀರುವ ನೀಲಾಂಜನೆ ತನಗೆ ಅರಿವಿಲ್ಲದೆಯೇ ನರ್ತಿಸುವ ವಿಷಾದ, ಅದನ್ನು ಅರಿತವನ ವಿಷಾದ ಈ ಎರಡೂ ಸೇರಿ ಬದುಕು ಎತ್ತರ ಶಿಖರದ ಕಿರಣಗಳಿಗೆ ಮೈಯೊಡ್ಡಿದರೆ ಚಂದ. ಇದು ಭಾಷೆಯಲ್ಲಿ ರೂಪುಗೊಳ್ಳಬೇಕಾದ ಸತ್ಯ. ಈ ಅರೆಕೊರೆಗಳಲ್ಲೇ ನಮ್ಮ ಪೂರ್ಣತ್ವದ ಹುಡುಕಾಟ. ಈ ಅನ್ವೇಷಣೆಯ ಗರ್ಭದಲ್ಲಿರುವ ಶ್ರೇಷ್ಠ ಅಂಶವೆಂದರೆ ಪ್ರಾಯಶಃ ನೀಶೆಯ Tragic optimism. ಬ್ಯಾಕಸ್ ಮತ್ತು ಅಪೋಲೋಗಳ ಸಂಗಮ. ರೌದ್ರ ಮತ್ತು ಶಿವದ ಐಕ್ಯವಾದ ಐಕ್ಯೆಕ ದೇವತೆ ಈಶ್ವರ. ಸೃಷ್ಟಿ ಮತ್ತು ಲಯಗಳ ಈ ಬೆಸುಗೆ ಇಡೀ ಪೃಥ್ವಿಯ ಅಷ್ಟೇ ಯಾಕೆ ಇಡೀ ವಿಶ್ವದ ಅದ್ಭುತ ಸಮರಸ ಸಂಕೇತ. ಈ ಎತ್ತರಕ್ಕೆ ಏರುವ ಆಸೆ. ಆದರೆ ನನ್ನ ಆಯುಷ್ಯ ಮಾತ್ರ ತುಂಬಾ ಕಿರಿದು...

■

ಒಬ್ಬ ಲೇಖಕ ಯಾವಾಗಲೂ defenceless ಆಗಿರಬೇಕು. ಬರವಣಿಗೆಯ ಹೊತ್ತಿನಲ್ಲಿ ಯಾವ ರಕ್ಷಣೆಯ ಉಪಾಯಗಳೂ ಇರಬಾರದು. ಯಾವ ರಕ್ಷಣೆಯ ಉಪಾಯವೂ ಇಲ್ಲದೆ ಒಬ್ಬ ಬಂಡಾಯ ಸಾಹಿತಿ ಹೊರಟರೆ ತನಗೇ ಬಂಡಾಯದಲ್ಲಿರುವ ಎಲ್ಲ ಅನುಮಾನಗಳೂ ಕಂಡೇ ಕಾಣಬೇಕಲ್ಲ? ದಾಸ್ತೊವ್‌ಸ್ಕಿಗೆ ಯಾವ ಕೊಲೆಗಾರನ್ನ ನೋಡಿದರೂ ಇದು ನಾನು ಮಾಡಬಹುದಾದ ಕೊಲೆ ಅಂತ ಅನಿಸ್ತಾ ಇತ್ತು. ನಾವೆಲ್ಲರೂ ರಕ್ಷಣೋಪಾಯಗಳನ್ನು ಹುಡುಕಿಕೊಂಡಿರುತ್ತೇವೆ. ನಿಜ. ಆದರೆ, ಕೆಲವು ಸಾರಿಯಾದರೂ ಆ ರಕ್ಷಣೋಪಾಯಗಳನ್ನು ಬಿಡದೇ ಇರುವ ಲೇಖಕನನ್ನು ನಾನು ಓದುವದಿಲ್ಲ.. ಬಂಡಾಯದ ಸಮಸ್ಯೆ ಏನೆಂದರೆ ವೇದಿಕೆ ಮಾಡಿಕೊಂಡು ಒಬ್ಬರಿಗೊಬ್ರು ರಕ್ಷಣೆ ಮಾಡಿಕೊಂಡು ನಿಂತು ಬಿಟ್ಟರು.

– ಪ್ರೊ ॥ ಯು. ಆರ್. ಅನಂತಮೂರ್ತಿ

(ಸಂದರ್ಶನ ಒಂದರಲ್ಲಿ)

ಮಿತವಾದ ಕ್ಷೇತ್ರದಲ್ಲಿ ಲಯಬದ್ಧ ಕುಣಿತ...

– ಚಿಂತಾಮಣಿ ಕೊಡ್ಲೆಕೆರೆ

ಕಾವ್ಯದ ಬಗೆಗೆ ಬರೆಯುವುದು, ಯೋಚಿಸುವುದು, ಮಾತನಾಡುವುದು- ಇವೆಲ್ಲಾ ನನಗೆ ಪ್ರೀತಿಯ ಸಂಗತಿಗಳು. ಕ್ರಿಯೆಯಲ್ಲಿ ವಿರೋಧಿಸಲು ಸಾಧ್ಯವಿಲ್ಲ ಅನ್ನಿಸಿದ ಸಂಗತಿಗಳನ್ನು ಕುರಿತು ಬಹುಶಃ ನಾನು ನನ್ನ ಬಾಲ್ಯದಲ್ಲಿ ಮೊದಲಿಗೆ ರೊಚ್ಚಿನಿಂದ ಬರೆಯಲಾರಂಭಿಸಿದೆ. ಕಾವ್ಯ ಸಹಜವಾಗಿಯೇ ಪ್ರೀತಿಯದಾಗಿ ಕಾಣುತ್ತಿದ್ದ ಕಣ್ಣುಗಳಿಗೆ ಕಾವ್ಯವನ್ನು ಆರಾಧಿಸುವ ಕುಟುಂಬದ ಹಿನ್ನೆಲೆಯೂ ಇದ್ದು ಬೇಂದ್ರೆ, ಕುವೆಂಪುರಂಥ ಕವಿಗಳು ದೇವಾತಾಪುರುಷರಾಗಿ ಕಾಣಿಸಿದರು. ಕಾವ್ಯ ಗೌರವಿಸಲ್ಪಡಬೇಕಾದುದು, ಸಂತೋಷವನ್ನು ಕೊಡಬೇಕಾದುದು ಎಂಬುದೆಲ್ಲವನ್ನೂ ಇಂಥ ವಾತಾವರಣವೇ ನನಗೆ ಕಲಿಸಿಕೊಟ್ಟಿತು. ನನ್ನ ಮೊದಲ ಪ್ರಯತ್ನಗಳು-ಜನಪ್ರಿಯ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದ ಕವಿತೆಗಳ, ಜನರ ಬಾಯಲ್ಲಿ ನಲಿದಾಡುತ್ತಿದ್ದ ಹಾಡುಗಳ ಅನುಕರಣೆಗಳಾಗಿದ್ದವು. ಕಾವ್ಯದ ಮೈ ಝುರೆಸಬಲ್ಲ ಶಕ್ತಿಯೇ ಅದರತ್ತ ನನ್ನನ್ನು ಎಳೆದುಕೊಂಡು ಹೋಯಿತು. ಇಂದಿಗೂ ಅದರ ಮೈ ಮರೆಸಬಲ್ಲ ಗುಣ ನನಗೆ ಅಪೂರ್ವವೆನಿಸುತ್ತದೆ.

ಆ ಚಿಕ್ಕಂದಿನ ದಿನಗಳಲ್ಲಿಯೇ ನಾನು ನವ್ಯದತ್ತ ಒಲಿದೆ. ಸ್ವಚ್ಛಂದದ ಸಾಧ್ಯತೆಗಳು ನನ್ನಲ್ಲಿ ಬೆರಗು ಹುಟ್ಟಿಸಿದವು. ಆಗಲೂ ಶುರುವಿನಲ್ಲಿ ನನ್ನನ್ನು ಸೆಳೆದಿದ್ದು ಕಟಕಿ, ವ್ಯಂಗ್ಯ ಉಳ್ಳ ಕವಿತೆಗಳು. ಈ ಹಂತದಲ್ಲಿಯೇ ನಾನು ಸಾಕಷ್ಟು ಕಾಲ ಕಳೆದಿದ್ದೇನೆ ಎಂಬುದನ್ನು ಸಂಕೋಚವಿಲ್ಲದೆ ತಿಳಿಸಬೇಕು. ಆದರೆ ಹೀಗೆ ಇಂಥ ಕವಿತೆಗಳನ್ನು ಮೆಚ್ಚುತ್ತಿದ್ದಾಗಲೇ, ಹೊಗಳುತ್ತಿದ್ದಾಗಲೇ ದಿ। ಗಂಗಾಧರ ಚಿತ್ತಾಲರ ಗಂಭೀರ ಯಾತನಾಮಯ ಕವಿತೆಗಳು ಬೇರೆಯದೇ ಲೋಕವನ್ನು ತೋರಿಸಿದವು. ಕಾವ್ಯದ ಸಾಮರ್ಥ್ಯದ ಬಗೆಗೆ, ಭಾವನೆಯ, ಚಿಂತನೆಯ ಎಂಥ ಎತ್ತರವನ್ನೂ ಹಿಡಿದಿಡಬಲ್ಲ ಅದರ ಹಿಗ್ಗಬಲ್ಲ ಸಾಧ್ಯತೆಗಳ ಬಗೆಗೆ ನನ್ನನ್ನು ಮತ್ತೆ ಮತ್ತೆ ಯೋಚಿಸುವಂತೆ ಮಾಡಿದ್ದು ಚಿತ್ತಾಲರ, ಕೆ.ಎಸ್.ನ.ರ ಮತ್ತು ಆ ರೀತಿಯ ಬೇರೆ ಕವಿಗಳ ಗಂಭೀರ ರಚನೆಗಳು. ಅಡಿಗರ ಶ್ರೇಷ್ಠ ಕವಿತೆಗಳನ್ನು ಅರಗಿಸಿಕೊಳ್ಳಬಲ್ಲ ಜೀರ್ಣ ಶಕ್ತಿ ಆಗ ಇನ್ನೂ ಪಕ್ವವಾಗಿರಲಿಲ್ಲ. ಅಡಿಗರು ತುಂಬ ದೊಡ್ಡ ಆದರ್ಶವಾಗಿ ಕಾಣಿಸುವಾಗಲೂ ಅವರ ಕವಿತೆಗಳು ಎಲ್ಲ ಆದರ್ಶಗಳಂತೆಯೇ ದೂರ-ದೂರ ಎನಿಸುತ್ತಿದ್ದವು. ಅವರ ಕವಿತೆಗಳನ್ನು ಸವರುವುದೊಂದೇ ನನ್ನಿಂದ ಸಾಧ್ಯವಾಗುವಂತಿದ್ದುದು.

ಮುಂದೆ ನನ್ನ ಕಾವ್ಯ ಜೀವನದಲ್ಲಿ ತಿರುಮಲೇಶ್ ಒಂದು ವಿಲಕ್ಷಣವಾದ ನೋಟ ಕಾಣಿಸಿದರು. ಕಾವ್ಯದ ಈ ವಿಲಕ್ಷಣ ಸೌಂದರ್ಯಕ್ಕೆ ತಿರುಮಲೇಶ್ ಮೂಲಕ ನನಗೆ ಸಿಕ್ಕ ಪ್ರವೇಶ ಮುಂದೆ ರಾಮಾನುಜನ್‌ರ ಕಾವ್ಯದ ಓದಿಗೆ ನನ್ನನ್ನು ಸಜ್ಜುಗೊಳಿಸಿತು. ಇದೇ ಹೊತ್ತಿನಲ್ಲಿ ಎಕ್ಕುಂಡಿಯವರ ಕಥನ ಕವಿತೆಗಳು ಕನ್ನಡ ಕಾವ್ಯ ಪರಂಪರೆಯನ್ನು ಬೇರೆಯದೇ ರೀತಿಯಲ್ಲಿ ಬೆಳೆಸುತ್ತಿದ್ದವು. ಇದಕ್ಕಿಂತ ಸ್ವಲ್ಪ ಮುಂದೆ ಬಂದರೆ ಕಾವ್ಯ ನಿಜವಾಗಿ ಒಂದು ಕಲಾಶಿಲ್ಪ ಎಂಬಂತೆ ಬರೆಯುತ್ತಿರುವ ಎಚ್.ಎಸ್.ವಿ ಇದ್ದಾರೆ. ತುಂಬ ಮಹತ್ವಾಕಾಂಕ್ಷೆಯಿಂದ ಬರೆಯುತ್ತಿರುವ ಶಿವಪ್ರಕಾಶ್ ಇದ್ದಾರೆ. 'ಗೋಪಿ ಮತ್ತು ಗಾಂಡಲೀನ'ದ ಲಕ್ಷ್ಮಣರಾವ್ ಇದ್ದಾರೆ. 'ಒಂದು ಪರ್ವತ ನನಗೆ ಏನು ಹೇಳುತ್ತದೆ?' ಎನ್ನುವ ಜಯಂತ ಇದ್ದಾರೆ..

ಇದು ಸ್ಥೂಲವಾಗಿ ನಾನು ಬರೆಯುತ್ತಿರುವ ಕಾಲದ ಹಿನ್ನೆಲೆ. ಈಗ-ನನ್ನ ಜನಾಂಗದ ಜನರು ಹೇಗೆ ಬರೆಯಬೇಕು? ಹಂಗೆ ನಾಲ್ಕು ಜನ ಕುಳಿತು ನಿರ್ಧಾರ ಮಾಡಿ ಅದರಂತೆ ಬರೆಯುತ್ತಹೋಗುವುದು ಸಾಧ್ಯವೆ? ಅಂಥದರ ಕುರಿತು ಅನುಮಾನವಿರುವ ನಾನು ನನ್ನ ದಾರಿಯನ್ನು ಹುಡುಕಿಕೊಳ್ಳಬೇಕು. ಅದು ಕಷ್ಟದ ಹಾದಿಯಾದರೂ ಅದರಲ್ಲಿ ಒಂದು ಸುಖವಿದೆ ಮತ್ತು ಅದರ ಹಿಂದೆ ತುಂಬ ತೇಜಸ್ವಿಯಾದ ಬೆಳಕಿದೆ. ನಾನು ಈ ತನಕ ಬರೆದ ಕವಿತೆಗಳ ಬಗೆಗೆ ನನಗೆ ಅಪರಾಧದ ಭಾವನೆ ಇಲ್ಲವಾದರೂ-ಅದು ಮಿತ ಸಲಕರಣೆಗಳೊಡನೆ ಒಂದು ಮಿತವಾದ ಕ್ಷೇತ್ರದಲ್ಲಿ ನಡೆಸಿದ ಲಯಬದ್ಧ ಕುಣಿತ ಎಂಬ ಭಾವನೆ ಉಂಟಾಗುತ್ತಿದೆ. ಮತ್ತು ಹೀಗೇ ಕುಣಿಯುತ್ತ ಹೋಗುವುವರಲ್ಲಿ ವಿಶೇಷ ಸ್ವಾರಸ್ಯವಿಲ್ಲ ಅನಿಸುತ್ತಿದೆ.

ಕಾವ್ಯದ ಕುರಿತು ಇಷ್ಟೆಲ್ಲ ಯೋಚಿಸುವಾಗ ಬರೆಯುವವನನ್ನು ಮತ್ತೆ ಮತ್ತೆ ಬೇಸರಕ್ಕೀಡು ಮಾಡುವ ಸಂಗತಿ ಎಂದರೆ ಕಾವ್ಯ ವಿಮುಖಿಯಾಗಿ ಬಾಳು ತೆಗೆದುಕೊಳ್ಳುತ್ತಿರುವ ಸ್ವರೂಪ. ಇಲ್ಲಿ ಕವಿಯೇ ತನ್ನ ಕವಿತೆಗಳ ವರ್ತಕನೂ, ಪ್ರವರ್ತಕನೂ ಆಗಬೇಕಾಗಿ ಬಂದಿದೆ. ಇದೇನೂ ಸಂತೋಷದ ಸಂಗತಿಯಾಗಿರಲು ಸಾಧ್ಯವಿಲ್ಲ. ಕಾವ್ಯವನ್ನು ಪುನಃ ಅದರ ಕೇಂದ್ರದಲ್ಲಿ (ಸ್ಥಾನದಲ್ಲಿ) ನಿಲ್ಲಿಸುವ ಕೆಲಸವನ್ನು ಗಂಭೀರವಾಗಿ ಮಾಡಬೇಕಾಗಿದೆ.

ಹಾಗಾದರೆ-ಇವನ್ನೆಲ್ಲ ಕವಿ ಹೇಳಿಕೆಗಳನ್ನು ಕೊಟ್ಟು ಸರಿಪಡಿಸುತ್ತಾನೆಯೆ? ಇಲ್ಲ, ಈ ಕೆಲಸ ಕಾವ್ಯಕ್ರಿಯೆಯಲ್ಲಿಯೇ ಸೂಕ್ಷ್ಮವಾಗಿ ನಡೆಯುತ್ತ ಹೋಗುತ್ತದೆ ಎಂಬುದನ್ನು ಬಲ್ಲವರು ಬಲ್ಲರು. ಇಷ್ಟೆಲ್ಲದರ ನಡುವೆ, ಬರೆಯುತ್ತಿರುವ ನನ್ನಲ್ಲಿ ಕಾವ್ಯದ ಕುರಿತು ಪ್ರೀತಿಯಿದೆ, ಸಂತೋಷವಿದೆ, ದಿಗ್ಭ್ರಮೆ ಇದೆ ಮತ್ತು ಬದುಕಿನ ಆಳವಾದ ದುರಂತದ ಅರಿವು ಕೂಡ ಇದೆ. ನನ್ನ ಕವಿತೆ ಮತ್ತು ಬದುಕು ತಮಗೆ ಸಿಗುವ ಎಲ್ಲ ಅವಕಾಶಗಳಲ್ಲಿ ಅಡ್ಡಗಲ ಹಾಯಲಿ ಎಂದು ತೀವ್ರವಾಗಿ ಹಂಬಲಿಸುತ್ತೇನೆ. ಇದು ಅಷ್ಟೊಂದು ಭರವಸೆಯ ವ್ಯವಸಾಯ ಅಲ್ಲವಾದರೂ, ನೋವು ಮತ್ತು ಸಂತೋಷದ ಈ ಹಾದಿಯಲ್ಲಿ ತಲ್ಲಣಗೊಳ್ಳುತ್ತಲೂ- ನಾನು ಮುಂದೆ ನಡೆಯಬೇಕು.

ಏನೋ ಹೇಳಬೇಕೆಂಬ ತಹ ತಹಿಕೆ...

– ಸರಜೂ ಕಾಟ್ಕರ್

ಅನೇಕ ಸಲ, ನಾನೇಕೆ ಬರೆಯುತ್ತೇನೆ-ಎಂದು ನನ್ನನ್ನೇ ನಾನು ಕೇಳಿಕೊಂಡಿದ್ದೇನೆ. ನನಗಾದ ಆನಂದ, ದುಃಖ, ಅನುಭವ, ಸಂಕಟಗಳನ್ನು ಬೇರೆಯವರ ಜೊತೆ ಹಂಚಿಕೊಳ್ಳಬೇಕೆಂಬ ಅದಮ್ಯ ಆಶೆಯೇ ನನ್ನ ಬರವಣಿಗೆಯ ಮೂಲವಿದ್ದೀತು. ಎಂ.ಎ ಮುಗಿದ ಕೊಡಲೇ ನಾನು ಪತ್ರಿಕೋದ್ಯಮ ಸೇರಿದೆ. ಕಾಲೇಜಿನಲ್ಲಿ ನೌಕರಿ ಬಂದಿದ್ದರೂ ಪತ್ರಿಕೋದ್ಯಮಕ್ಕೆ ಅಂಟಿಕೊಂಡೆ. ''ಯಾರಿಗೋ ಏನೋ ಹೇಳಬೇಕೆಂಬ ತಹತಹಿಕೆ''ಇದ್ದುದರಿಂದಲೇ ಈ ವೃತ್ತಿ ಸೇರಿರಬಹುದೆಂದು ನನ್ನ ನಂಬಿಕೆ. ಪತ್ರಿಕೋದ್ಯಮ ಸಾಹಿತ್ಯದ ಇನ್ನೊಂದು ಮುಖ. 'ಅವಸರದ ಸಾಹಿತ್ಯ' ಎನ್ನಬಹುದು.

ಹದಿನೈದು-ಹದಿನಾರು ವರ್ಷಗಳ ಹಿಂದೆ ಬರವಣಿಗೆ ಆರಂಭಿಸಿದಾಗ-ಬರೆಯದಿದ್ದರೆ ಮನಸ್ಸಿಗೆ ಹಿಂಸೆ ಅನ್ನಿಸುತ್ತಿತ್ತು. ಬರೆದ ಕೂಡಲೇ ಮನಸ್ಸು ಪಂಜರದಿಂದ ಆಕಾಶಕ್ಕೆ ನೆಗೆದ ಪಕ್ಷಿಯಂತೆ ಖುಷಿಯಾಗುತ್ತಿತ್ತು. ಬರೆದದ್ದು ಪತ್ರಿಕೆಗಳಲ್ಲಿ ಪ್ರಕಟವಾದಾಗ ಇನ್ನೂ ಹೆಚ್ಚು ಖುಷಿಯಾಗುತ್ತಿತ್ತು. ಪ್ರಕಟಿತ ಕವನಗಳನ್ನು ಕಾಲೇಜಿನ ನೋಟೀಸ್ ಬೋರ್ಡ್ ಮೇಲೆ ಹಚ್ಚಿ, ಅವನ್ನು ಯಾರಾದರೂ ಓದುತ್ತಾರೋ ಇಲ್ಲವೋ ಎಂದೂ ಗಮನಿಸುವ ವಯಸ್ಸು. ಓದುತ್ತಿದ್ದರೆ ಸಂತೋಷ; ಓದದಿದ್ದರೆ ಉದಾಸೀನತೆ. ಆ ಕಾಲದಲ್ಲಿ ನನ್ನಂತೆಯೇ ಒದ್ದಾಡಿದವ ಸತೀಶ ಕುಲಕರ್ಣಿ. ಅವನೂ ತನ್ನ ಕವಿತೆಗಳನ್ನು ನೋಟೀಸ್ ಬೋರ್ಡಿಗೆ ಹಚ್ಚುತ್ತಿದ್ದ. ಕಾವ್ಯ ನಂತರದ ದಿನಗಳಲ್ಲಿ ನಮ್ಮಿಬ್ಬರನ್ನು ಹತ್ತಿರಕ್ಕೆ ತಂದಿತು.

ಮುಂದೆ ಕವಿತೆ, ಕತೆ, ನಾಟಕ, ವಿಮರ್ಶೆ, ಲೇಖನ ಹೀಗೆ ನಾನಾ ರೀತಿಯಲ್ಲಿ ಬರೆದೆ. ಕೊನೆಗೆ ಅಂಟಿಕೊಂಡಿದ್ದು ಕಾವ್ಯಕ್ಕೆ. ಈಗ ಮತ್ತೆ ಕತೆ ಬರೆಯಬೇಕೆನಿಸುತ್ತದೆ; ಬರೆಯಲೂ ಬಹುದು. However ಶಬ್ದಶಿಲ್ಪ. ಒಬ್ಬ ಸಾಹಿತಿಯ ಸೃಜನಾತ್ಮಕ expression. ಸಾಹಿತಿ ಬಹಿರಂಗಗೊಳ್ಳುವದು ಅಕ್ಷರಗಳ ಮುಖಾಂತರವೇ; ಅಕ್ಷರ-ಶಬ್ದಗಳಲ್ಲಿ ಆತ ತನ್ನನ್ನು ತಾನು ಪ್ರತಿಷ್ಠಾಪಿಸಿಕೊಳ್ಳುತ್ತಾನೆ.

ನನ್ನ ಮೊದಲ ಕವನ ಸಂಕಲನ ನಾನು ಎಂ.ಎ ಓದುತ್ತಿರುವಾಗಲೇ ಬಂತು – 'ಹಸಿದ ನೆಲ.' ವಿಮರ್ಶಕರು ಓದುಗರು ಅದನ್ನು ಚೆನ್ನಾಗಿಯೇ ಸ್ವಾಗತಿಸಿದರು. ಮುಂದೆ

'ಸೂರ್ಯ'ಬಂತು. ಇಷ್ಟೊತ್ತಿಗಾಗಲೇ ನವ್ಯ ಮಾರ್ಗ ದಿವಾಳಿಯಾಗಿ ಸಾರಸ್ವತ ಲೋಕ ಹೊಸ ಅನುಭವಗಳಿಗಾಗಿ ತಡಕಾಡುತ್ತಿತ್ತು. ಅನಿಶ್ಚಿತತೆಯ ಪ್ರಭಾವ ನನ್ನ ಮೇಲೂ ಆಯಿತು. 'ಮ್ಯಾನಿಫೆಸ್ಟೋ' ಕವನ ಸಂಕಲನದಲ್ಲಿರುವ ಕವನಗಳೆಲ್ಲ ಈ ತಲ್ಲಣದ ಅವಧಿಯವುಗಳೇ. ಈ ಸಂಕಲನವನ್ನು, 'ಗ್ರಂಥಲೋಕ'ದ ವಾರ್ಷಿಕ ವಿಮರ್ಶೆಯಲ್ಲಿ "ಇಲ್ಲಿಯ ಕವಿತೆಗಳು ಬಂಡಾಯ ಸಾಹಿತ್ಯಕ್ಕೆ ವ್ಯಾಖ್ಯೆ" ಎಂದು ಸಿ.ಪಿ.ಕೆ. ಬರೆದರು. 'ಏಕಾಂತದ ಮನುಷ್ಯ'ದಲ್ಲಿ 'ಮ್ಯಾನಿಫೆಸ್ಟೊ'ಗಿಂತ ತೀರ ಭಿನ್ನವಾದ ಕವಿತೆಗಳಿವೆ. ಈ ವರ್ಷ ಗಝಲ್‌ಗಳ ಸಂಕಲನವೊಂದು ಬರಲಿದೆ.

ನನ್ನ ಮೇಲೆ ಇಂಗ್ಲಿಷ್, ಮರಾಠಿ ಸಾಹಿತಿಗಳ ಪ್ರಭಾವವಿದೆ. ಒಂದು ಭಾಷೆಯಲ್ಲಿ ಬಂದ ಕವಿತೆ ಇನ್ನೊಂದು ಭಾಷೆಗೂ ಅಷ್ಟೇ ಪ್ರಸ್ತುತವಾದರೆ ಮಾತ್ರ ಅದು ಒಳ್ಳೆಯ, ಶ್ರೇಷ್ಠ ಕವಿತೆಯೆಂದು ನನ್ನ ಅನ್ನಿಸಿಕೆ.

ಹೆಚ್ಚು ಅನುಕೂಲತೆಗಳಿರುವಾಗ ಸೃಜನಶೀಲತೆ ಕಮರಿಹೋಗುತ್ತದೆಂದು ನನ್ನ ಭಾವನೆ. ನಾಮದೇವ ಢಸಾಳನಂತಹ ಮರಾಠಿಯ ಕವಿ ಯಾವ ಅನುಕೂಲತೆಗಳಿಲ್ಲದೇ ಕವಿತೆಗಳನ್ನು ಬರೆದ. ಅಂತಹ ಕವಿತೆಗಳು ನಮ್ಮಲ್ಲಿ ಇನ್ನೂ ಸೃಷ್ಟಿಗೊಳ್ಳಬೇಕಾಗಿದೆ.

ಹಾಡುಗಳೆಲ್ಲ ಕಾವ್ಯ ಅಂತ ನಾನು ಒಪ್ಪಲ್ಲ. ಹಾಡಿಗೆ ಅದರದೇ ಆದ ಮಿತಿ ಇದೆ. ಸಂಕೀರ್ಣವಾದದ್ದನ್ನು ಹೇಳಲಿಕ್ಕೆ ಹಾಡಿಗೆ ಸಾಧ್ಯವಿಲ್ಲ. ಕಿವಿಗೆ ಹಿತವಾಗಿರಬೇಕು ಎನ್ನುವ ಮಿತಿಯಲ್ಲಿ ಎಷ್ಟೋ ವಿಷಯಗಳನ್ನು ಹೇಳಲು ಆಗುವುದಿಲ್ಲ. ಒಂದು ಕ್ರಾಂತಿಗೀತೆ, ಒಳ್ಳೆಯ ಭಾಷಣ ತತ್ಕಾಲದ ಪ್ರಭಾವ ಬೀರಬಹುದೇ ಹೊರತು ಸಾಹಿತ್ಯದ ಹಾಗೆ ಮತ್ತೆ ಮತ್ತೆ ಅದಕ್ಕೆ ಹೋಗುವ ಗುಣವನ್ನು ಅದು ಹೊಂದಿರುವುದಿಲ್ಲ. ಬದುಕಿನ ಜೊತೆ ಸಾಹಿತ್ಯಕ್ಕಿರುವ ಸಾಂಗತ್ಯ ಕೊನೆತನಕ ಉಳಿದುಕೊಂಡಿರುವಂತಹದ್ದು. ಹೊಸ ಹೊಸ ಅರ್ಥ ಹೊಳೆಸುವಂತಹದ್ದು.

– ಡಾ॥ ಬಿ.ಸಿ.ರಾಮಚಂದ್ರ ಶರ್ಮ

ಕಾವ್ಯ-ಸಂವಹನಶೀಲತೆ.. ಇತ್ಯಾದಿ..

– ಶಂಕರ ಕಟಗಿ

ಕವಿತೆ ಬರೆದಾಗ "ಮೂರ್ತವಾಗುವ" ವಸ್ತು ಬರೆಯುವ ಮುಂಚೆ ಅಮೂರ್ತವಾಗಿಯೇ ಇರುತ್ತದೆ. ಕವಿತೆಯನ್ನು ಹೋಲುವ ವಸ್ತು, ವ್ಯಕ್ತಿ, ವಿಷಯ, ಜಗತ್ತಿನಲ್ಲಿ ಇರಬಹುದು. ಆದರೆ ಕವಿತೆ ಓದಿದಾಗ ಆಗುವ ಅನುಭವವು ಇತರ ಯಾವುದೇ ವಸ್ತುವಿನಲ್ಲಿಯೂ ದೊರಕದು. ಕವಿತೆಗೆ ಭಾಷೆಯ ಹೊರತು ಅನ್ಯ ಭೌತಿಕ ರೂಪ ಇರುವುದಿಲ್ಲ. ಭಾಷೆಯಲ್ಲಿ ಸಾಧ್ಯವಾಗುವ, ಸಾರ್ಥಕವಾಗುವ ಕವಿಯ ಅನುಭವಾಭಿವ್ಯಕ್ತಿ ಮಾತ್ರ ಕವಿತೆಯಾಗುತ್ತದೆ. ಭಾಷೆ ಯಾವಾಗಲೂ ಕವಿತೆಯ (ಸೃಜನಶೀಲತೆಯ) ಮೂಲ ಮತ್ತು ಅಂತಿಮ ಅನಿವಾರ್ಯವಾದ ಆಸರೆಯಾಗುತ್ತದೆ. ಒಂದು ಕವಿತೆ ಕವಿಯ ವ್ಯಕ್ತಿತ್ವದ ಅಭಿವ್ಯಕ್ತಿ ಅಥವಾ ಆ ವ್ಯಕ್ತಿತ್ವದಿಂದ ಪಾರಾಗುವ ಪ್ರಯತ್ನ ಎಂದು ತಿಳಿದುಕೊಂಡಾಗಲೂ ಭಾಷೆಯು ಅದರ ಶಕ್ತಿ ಮತ್ತು ಮಿತಿ ಎರಡೂ ಆಗುತ್ತದೆ. ಭಾಷೆಯಾಚೆಗಿನ ಮೌನವು ಸಂವೇದಿಸುವ ಪ್ರಕ್ರಿಯೆಗೂ ಕವಿತೆ ಎನ್ನುವವರಿದ್ದಾರೆ. ಆ ಭಾಷಾತೀತ ಸಂವೇದನೆಯು ದೃಶ್ಯಾಭಿವ್ಯಕ್ತಿಯಾಗಬಹುದಷ್ಟೆ. ಅಂತಿಮವಾಗಿ ಕವಿತೆಯಾಗುವುದಿಲ್ಲ. ಕವಿತೆಗೆ ಭಾಷೆ ಬೇಕೆಂಬುದು ಆದರ ಮಿತಿ ಎಂಬರ್ಥವಲ್ಲ. ತನ್ನ ಆಶಯಕ್ಕೆ ಅನುಭವದಾಳಕ್ಕೆ ಕವಿ ಭಾಷೆಯನ್ನು ದುಡಿಸಿಕೊಳ್ಳುತ್ತಾನೆ. ಭಾಷೆಯೂ ತನ್ನನ್ನು ಕೊಟ್ಟುಕೊಳ್ಳುವಿಕೆಯಲ್ಲಿ ಹೊಸ ಆಕಾರ, ಆಯಾಮ ಹೊಂದುತ್ತಿರುತ್ತದೆ ಮತ್ತು ಹೊಸ ಪರಿಕಲ್ಪನೆಯನ್ನು ಮೂಡಿಸುತ್ತದೆ. ಅನುಭವಕ್ಕೆ ತಕ್ಕ ಹಾಗೆ ಸಂಕೀರ್ಣವಾಗುವುದು, ಸರಳವಾಗುವುದು ಭಾಷೆಯ ಜಾಯಮಾನ. ಸಂಕೇತ, ಪ್ರತಿಮೆಗಳ ಮೂಲಕವೂ ಭಾಷೆಯನ್ನು ಗಟ್ಟಿಗೊಳಿಸಬಹುದು. ಅದರ ಧ್ವನಿಪೂರ್ಣತೆಯನ್ನು ಲಯ ನಾದದಲ್ಲಿಯೂ ತಿಳಿಯಾಗಿ ಹೇಳಬಹುದು. ಭಾಷೆಯ ಮೇಲೆ ಹಿಡಿತವಿದ್ದಷ್ಟು ಕವಿಗೆ ಕೃತಿಯನ್ನು ಹಿಗ್ಗಿಸುವದಕ್ಕೆ ಹಾಗೂ ತನ್ನೊಳಗಿನದನ್ನು ಯಥಾರ್ಥವಾಗಿ, ಕಲಾತ್ಮಕವಾಗಿ ಹೊರಹೊಮ್ಮಿಸುವುದಕ್ಕೆ ಸಾಧ್ಯವಾಗುತ್ತದೆ.

ಇಂದಿನ ಕವಿತೆಯ ಭಟ್ಟಿ ಕೆಟ್ಟಿರುವುದಕ್ಕೆ ಮೂಲ ಕಾರಣ: ಕವಿಗೆ ಭಾಷೆಯ ಮೇಲೆ ಹಿಡಿತವಿಲ್ಲದಿರುವದು, ಮತ್ತು ಮುಕ್ತವಾಗಿ ಬದುಕನ್ನು ಸ್ವೀಕರಿಸದಿರುವದು. ಇಂಥ ಕೊರತೆಗಳನ್ನು ನೀಗಿಸುವ ದಿಶೆಯಲ್ಲಿ ಕವಿ ಧ್ಯಾನಿಸಬೇಕು ಹಾಗೂ ಅನ್ವೇಷಿಸಬೇಕು. ಕನ್ನಡದ ಉತ್ತಮ ಕಾವ್ಯಾಧ್ಯಯನವೂ ಅಗತ್ಯವಾದುದು. ಇಂದಿನ ಕವಿ ನಿನ್ನೆಮೊನ್ನೆಯ

ಕವಿಗಿಂತ ಭಿನ್ನವಾಗಿರಬೇಕಾದುದು ಸಹಜ ಸಂಕಲ್ಪ ಕೂಡಾ. ಕವಿಗೆ ಕವಿತೆ ಬರೆಯಬೇಕೆಂಬುದು ಸೌಂದರ್ಯಾಭಿವ್ಯಕ್ತಿಗೆಂದಾಗಲೀ, ತನ್ನ ಅಂತರಂಗದ ಸೊಗಸಾದ ಭಾವನೆಯ ಹೊರಗೆಡುವುದಕ್ಕಾಗಲಿ, ವಯಕ್ತಿಕ ನೋವು-ನಲಿವು, ಸಿಟ್ಟು-ಸಂತೋಷ, ಪ್ರೀತಿಯಂತಹ ಸಹಜ ಪ್ರತಿಕ್ರಿಯೆಗಳನ್ನು ಹಂಚಿಕೊಳ್ಳುವದಾಗಲಿ ಖಂಡಿತ ಅಲ್ಲ ಅನಿಸುತ್ತದೆ. ಕವಿ ಅಂತರಂಗವನ್ನು ಬುದ್ಧಿಪೂರ್ವಕವಾಗಿ ಉಳಿಸಿಕೊಳ್ಳುತ್ತಿಲ್ಲ. ಹೇಗಾದರೂ ಆಗಲಿ ಬದುಕಬೇಕು ಅಂಬುದು ಅವನ ಹಟವಾಗಿದೆ. ಸಂತನ ಸಾತ್ವಿಕ ರೊಚ್ಚು, ಆ ರೊಚ್ಚಿನ ಹಿಂದಿರುವ ಸಾಮಾಜಿಕ, ರಾಜಕೀಯ ಚಿಂತನೆ-ಕಾಳಜಿಗಳು, ಪರ್ಯಾಯ ಸಮಾಜದ ಪರಿಕಲ್ಪನೆ, ಬೋಧನೆ, ಕ್ರಾಂತಿಯ ನಿಷ್ಠುರತೆ, ತ್ಯಾಗದ ಆವೇಶ, ಮುಂತಾದ ಜೀವನಪರ ಅಂಶಗಳನ್ನು ಕವಿ ಹೊಂದಬೇಕು. ತನ್ನವೇ ಆದ ಜೀವನದ ಬಗೆಗಿನ ಕಲ್ಪನೆ ದೃಷ್ಟಿ ಇರಬೇಕಾದವುಗಳು. ತನಗೆ ತಾನಂತೂ ಮಹತ್ವ, ಈ ತನ್ನತನದ ಮನಃ ಸ್ಥಿತಿಯಿಂದ ಕಾವ್ಯ ಸೃಜನಗೊಳ್ಳುವುದು ಆರೋಗ್ಯಪೂರ್ಣವಾದುದು. ಕವಿತೆಗೆ ಮಿತಿ ಇದ್ದೇ ಇರುತ್ತದೆ. ಆ ಮಿತಿ ಕವಿಯ ಅಭಿವ್ಯಕ್ತಿಯ ಮಿತಿಯೂ ಆಗುತ್ತದೆ. ಆದರೂ ಅನುಭವ ಮತ್ತು ಪ್ರಾಮಾಣಿಕ ಮನಸ್ಸಿನಿಂದ ಸಫಲತೆ ಶಕ್ಯ. ಹೀಗೆ ಗುಣಾತ್ಮಕ ಸಂಘರ್ಷದೊಂದಿಗೆ ಸೃಜನಶೀಲ ಕೃತಿಯ ತಾತ್ವಿಕ ನೆಲೆಯನ್ನು ಗಟ್ಟಿಗೊಳಿಸಬಹುದು ಹಾಗೂ ಸಂವಹನಗೊಳಿಸಬಹುದು.

ನನ್ನ ಕಾವ್ಯಕ್ಕೆ ಮೂಲ ಪ್ರೇರಣೆ ನನ್ನ ಬಾಲ್ಯ (ಭೂತ)ದ ಅನುಭವಗಳು. ಹಾಗೂ ನನ್ನ ಅವ್ವ. ನನ್ನ ಪಾಲಿಗೆ ಆಕೆ ಅನುಭವದ ಹೊಂಡ. ತಾನು ಪಟ್ಟ ಪಾಡನ್ನೇ ಹಾಡಾಗಿಸುವ ತೋಂಡೀ ಕವಿ ಅವಳು. ಆಕೆಯ ಪ್ರಭಾವ ಅಲ್ಪಸ್ವಲ್ಪ ನನ್ನ ಮೇಲಿದೆ. ಆದರೆ ಈ ಎಲ್ಲ ಪ್ರೇರಣೆ ಪ್ರಭಾವಗಳೊಂದಿಗೆ, ಅಥವಾ ಅವುಗಳನ್ನು ಮೀರಿ ಹೊಸದನ್ನು ಪಡೆದುಕೊಳ್ಳುವ ತುರಾತುರಿ ಇದೆ. ಆ ತೀವ್ರತೆಯ 'ಪಾಕ'ವೇ ಕಾವ್ಯವೆನಿಸುತ್ತದೆ. ಅಂಥದು ಓದುಗನ ಅಭಿರುಚಿಯೂ ಆಗಬೇಕು. ಆಗಲೇ ಕವಿಯು ಸಂವಹನಗೊಳ್ಳುವುದು. ಅಂಥ ಹಿಕಮತ್ತು ಇಂದಿನ ನನ್ನಂಥ ಕವಿಗಳದು ಆಗಬೇಕೆಂಬ ಆಶೆಯೂ ಹೌದು. ಆದರೆ ಎಲ್ಲ ವರ್ಗದ ಓದುಗರಿಗೆ ಕಾವ್ಯ ತಲುಪಿಸಬೇಕು ಅಂಬುವ ಹಮ್ಮು ಮಾತ್ರ 'ಜನಪ್ರಿಯತೆ' ಮಟ್ಟಕ್ಕೆ ಇಳಿದುಬಿಡುವ ಅಪಾಯವಿರುತ್ತದೆ.

ಕಾವ್ಯ ಗುಚ್ಛ : ಇತ್ತೀಚಿನ ಕನ್ನಡ ಕಾವ್ಯ

ಏಳೆಗೀತಿ ವೇಳೆಬಂತು ಮೇಳದಲ್ಲಿಸೇರಲೂ
ಏಳು ಎತ್ತು ಕುದುರೆಹತ್ತು ಸಮಯವಿಲ್ಲ ಮೀರಲೂ
ಮೂಡದಿಕ್ಕು ಉಕ್ಕು ಉಕ್ಕು ನೀಲಿ-ಕೆಂಪು-ನೇರಿಲೂ
ಯಾಲಕ್ಕಿಯ ಮುಖವಾಸದ ಸುಖವಾಸದ ಕಂಪನಾ
ಸಿಂಪುಹನಿಯ ಮತ್ತಿನಗಣೆ ಜೇನುಹನಿಯ ಘನಘನಾ
ಯಾ ಸಿಂಫನಿ ಸ್ಫುಟಿಸುವದ್ಯೋ ಮುನ್ನೀರಿನ ಸುಸ್ವನಾ

-ಅಂಬಿಕಾತನಯದತ್ತ

ಅಚಾರ್ಯ ಅಡಿಗ

ಸಂಬಂಧಕ್ಕಿಂತ ಮೊದಲು
ಬಂಧಕ್ಕೆ, ಶಿಲ್ಪಕ್ಕೆ, ಸಾವಯವಕ್ಕೆ
ಸಮಗ್ರೀಕರಣ ಬಲಕ್ಕೆ
ಬಲಕ್ಕೆ,
ಒಲಿದ ಆಚಾರ್ಯ ಅಡಿಗ,
ಅಡಿಗಡಿಗೆ ನಡೆದದ್ದು
ಪೂರ್ಣತ್ವದ ಕಡೆಗೆ.

ತಲೆ ಎತ್ತಿ ಎದೆ ಸೆಟೆದ
ಹುಂಜದ ನಡಿಗೆ
ಮತ್ತೆ ಮತ್ತೆ ಅದೇ ಗತ್ತು
ಬಾಗದ ಛಲ
ಮಾಗಿದ ಜೀವಗಳಿಗೆ ತಲೆಬಾಗಿ
ವಂದಿಸುವ, ಆನಂದಿಸುವ ವಿನೀತಪುತ್ರ.

ಪದಪದಕ್ಕೆ ತಿದಿಯೊತ್ತಿ
ಕುಲುಮೆ ಕಾಯಿಸಿ
ಹೊಸ ಹೊಸ ನಾಣ್ಯ
ಟಂಕಿಸುವ ಟಂಕಸಾಲೆ

ಬತ್ತದ ಮೂಲಸೆಲೆ
ಬತ್ತಲಾರದ ಗಂಗೆಯ ನೆಲೆ
ಹೊಸ ನೀರು ಚಿಮ್ಮಿ ಹೊಮ್ಮಿ
ಅಬ್ಬರಿಸಿ ಭೋರ್ಗರೆದು
ಇಕ್ಕೆಲಗಳ ಧಿಕ್ಕರಿಸಿ
ಧಿಂಗುಡುವ ತುಡುಗು
ನಿಂತ ನೀರಿನ ಕೆಸರು, ಕಸಕಡ್ಡಿ ಕೊಳೆ
ಕೊಚ್ಚಿಸೆದು ಸ್ವಚ್ಛಗೊಳಿಸುವ ಆವೇಶ.

ಹೊಸ ಪಾತ್ರ ಹೊಸ ವೇಷ
ಮಂತ್ರ ದಂಡದ ಸ್ಪರ್ಶ

ಎದೆ ಎದೆಯ ಹರ್ಷ
ಹೊಸ ಫಸಲು ಸಮೃದ್ಧ ಕೊಯಿಲು.
ನುಡಿಸಿ ಹೊಸ ರಾಗ
ಕರೆದ ಮೋಹನ ಮುರಳಿ.

೨

ಜನ ಮಂದೆಯಲಿ ಹೊರ ನಿಂತು
ಚಿಂತಿಸಿ
ನಿಜದ ಸೂಜಿ ಮೊನೆಯಿಂದ ಚುಚ್ಚಿ
ಉದ್ಧ ಉದ್ಬುದ್ಧ ಬಲೂನುಗಳ ಸಿಡಿಸಿ
ಭೇದಿಸಿ, ಧೂಳು ಝಾಡಿಸಿ
ನೆಲ ಸಪಾಟಿಲ್ಲೆಂದು ರೇಗಿ

ಕೆರಳಿ ರೋಪು ಹಾಕಿ
ಹೊಸನಾಡು ಕಟ್ಟುವ ಹಂಬಲಕೆ
ಬಲಕೆ
ನಿಂತು
ಬಲವ ನಂಬಿ
ನೆಲದಿಂದ ಮುಗಿಲಿಗೆ ಜಿಗಿದು ಮತ್ತೆ ಮಣ್ಣಿಗೆ ಬಿದ್ದು
ರೆಕ್ಕೆ ಸುಟ್ಟರೂ
ಪಾಂಚಜನ್ಯ ಮೊಳಗಿಸುವ
ಹಿಂದುತ್ವದ ಉಡಾಫೆ.

೩

ಏಕಾಕಿ
ಅಂತರಂಗದ ಮುಂದೆ
ಅನಂತ ಚಿತ್ರ:
ಗಾಂಧಿ ಗೋಡ್ಸೆ, ದೇವ-ದಾನವ
ವಿಷ ಮಂಥನದ ಕವಾಯಿತು
ಎಡ-ಬಲ, ಬಲ-ಎಡಗಳ ಧಿಮಿಕಿಟ

ಕ್ರಿಮಿ ಕೀಟ ಕೋಶಾವಸ್ಥೆಗೆ ಬಾರದ ಹುಳು
ಕಾಡಲ್ಲಿ ಅಲೆವ ಪಾಂಡವರು
ಅರಗಿನರಮನೆಯು ಬೆಂಕಿ ಭಯ
ಅಭಯಕ್ಕಾಗಿ ಹುಡುಕುತ್ತಿದೆ ಮನ ಪುರುಷೋತ್ತಮನ

ಸುತ್ತ ಧಗಧಗ ಉರಿ
ಮಧ್ಯೆ ರೆಕ್ಕೆ ಮುರಿದ ಹಕ್ಕಿ
ಜೀವ-ಮೃತ್ಯು, ಇಹ-ಪರ,
ಪಾರವಿಲ್ಲದ ಅಪಾರ ದಿಕ್ಕಿಲ್ಲದ ದಿಗಂತ
ತಿಳಿಯಲಾಗದ ದ್ವಂದ್ವ;
ಆದರೂ ಕೈಕಟ್ಟಿ ಕುಳಿತದ್ದಿಲ್ಲ
ಕೊನೆವರೆಗು ಹುಟ್ಟು ಹಾಕುತ್ತಲೇ
ಹರಿಗೋಲ ಹರಿಯಬಿಟ್ಟ ಧೀರ.

೪

ಜೋಲು ಬಾವಲಿ ತೊಗಲು
ಸೋತ ಕೈ-ಕಾಲು
ಮೃತ್ಯು ಶಯ್ಯೆಯಲ್ಲಿ ಬದುಕು ಬರಿ ತೆವಲು
ಆಲಿಸುತ್ತ ಕುಳಿತರೆ
ಅಂತರಾಳದ ಶ್ರುತಿ ಗೀತಕ್ಕೆ
ತೇಲಿ ತೇಲಿ ಬರುತ್ತಿದೆ
ಚಿಂತಾಮಣಿಯಲ್ಲಿ ಕಂಡ ಮುಖ
ಅದರ ಸುಖ
ಯೌವನದ ಬಿಸಿ, ಆರದ ಖುಷಿ
ನೆನೆ ನೆನೆದು ಹಣ್ಣಾಗಿ
ಮಮ್ಮಲ ಮರುಗಿ

ನೆನಪಿನ ನಂದಾದೀಪ ಹಚ್ಚಿಟ್ಟು
ಎಣ್ಣೆ ತೀರುವುದನೆ ಕಾಯುತ್ತ ಕುಳಿತು
ಪ್ರೀತಿ ಕಣ್ಣುಗಳಲಿ ಕರಗುತ್ತ,
ತೋಳ ಬಲ ಕುಸಿದಾಗ

ತೋಳು ಚಾಚಿ ಕರೆಯುತ್ತ
ಸಾಗಿದ್ದು ಮೇಲು ಮೇಲಕ್ಕೆ

ಕಂಡಂತೆ ಅಲ್ಲಿ ತೀರ್ಥರೂಪರನು
ಬರುತ್ತೇನೆ, ಬಂದೇ ಬಿಟ್ಟೆ ಅಪ್ಪಯ್ಯ ಎಂದು
ಹೇಳಿ ಹೊರಟೇ ಬಿಟ್ಟ
ಆಚಾರ್ಯ ಅಡಿಗ,
ಬಿಟ್ಟು ರುಗ್ಣ ಶಯ್ಯೆ
ಕೊನೆಯ ಅವತಾರ.

–ಜಿ.ಪಿ. ಬಸವರಾಜು

ಈ ಕಾವ್ಯ ಗುಚ್ಛಕ್ಕೊಂದು ಚೌಕಟ್ಟು...

– ರಾಘುವೇಂದ್ರ ಪಾಟೀಲ

ಸಾಮಾನ್ಯವಾಗಿ 'ಗೋಲ್ಡನ್ ಟ್ರೆಸರಿ' ರೀತಿಯ, ಕಾವ್ಯದ ಆ್ಯಂಥಾಲಜಿಯ ಸಂಪಾದಕನು ತನಗಿಷ್ಟವಾದ ಕವಿ-ಕವಿತೆಗಳನ್ನು ಸಂಗ್ರಹಿಸಿ ತನ್ನ ಆಯ್ಕೆಗೆ ಚಿಂತನೆಯ ಮೆರುಗಿನ ತಾತ್ವಿಕ ವಿವರಣೆಯನ್ನು ಕೊಡಲು ಆರಂಭಿಸುತ್ತಾನೆ. ಎಂಥ ಆಯ್ಕೆಗಾದರೂ ಚಿಂತನೆಯ ಮೆರುಗಿನ ತಾತ್ವಿಕ ವಿವರಣೆ ಕೊಡಲು ಸಾಧ್ಯವಿದೆ. ಯಾಕೆಂದರೆ ಒಂದು ಕೆಟ್ಟದಾದ (ಒಳ್ಳೆಯದಲ್ಲದ ಎನ್ನುವದು ಹೆಚ್ಚು ಸರಿಯಾದದ್ದು) ಕವಿತೆಯೂ ಅದರದ್ದೇ ಆದ ಒಂದು ವ್ಯಕ್ತಿತ್ವವನ್ನು ಹೊಂದಿರುತ್ತದೆ. ಆ್ಯಂಥಾಲಜಿಕಾರನಿಗೆ ಕವಿತೆಯ ವ್ಯಕ್ತಿತ್ವವನ್ನು ಗುರುತಿಸುವ ಶಕ್ತಿ ಇದ್ದರಂತೂ ಅವನು ತನ್ನ ಆಯ್ಕೆಯನ್ನು ಸಮರ್ಥಿಸಿಕೊಳ್ಳುವ ಅದ್ಭುತವಾದ ವಿವರಣೆಯನ್ನೇ ಕಟ್ಟಿಬಿಡಬಹುದು. ಆದರೆ ತೀರ ವೈಯುಕ್ತಿಕ ಇಷ್ಟಾನಿಷ್ಟಗಳ ಹಿನ್ನೆಲೆಯಲ್ಲಿ ನಡೆಯುವ ಇಂತಹ ಆಯ್ಕೆಯಿಂದ ಕಾವ್ಯ ಪರಂಪರೆಯ ಹರಿವಿನ ಬಗೆಗೆ ಒಂದು ನಿರಪೇಕ್ಷನೋಟ ಸಾಧ್ಯವಾಗಲಾರದು. ಶುದ್ಧವಾದ 'ನಿರಪೇಕ್ಷತೆ' ಎನ್ನುವದು ಅಸ್ತಿತ್ವವಿಲ್ಲದ ತತ್ವವಾದರೂ ಅದು ಆದರ್ಶದಂತೆಯಾದರೂ ಸತ್ಯವಾದದ್ದು. ಕವಿತೆಗಳ ಆ್ಯಂಥಾಲಜಿಯ ಸಂಪಾದಕನನ್ನು ಕುರಿತು ಹೇಳುವುದಾದರೆ–ಈ ನಿರಪೇಕ್ಷತೆ ಎನ್ನುವದು ತನ್ನ 'ರುಚಿ'ಗೆ ಹೊರತಾದಂತೆ ಇದ್ದಿರುವ ಇನ್ನಿತರ 'ರುಚಿ'ಗಳನ್ನು ಗೌರವಿಸುವದು ಹೋಗಲಿ–ಬರೀ ಗುರುತಿಸಿಕೊಳ್ಳುವದು; ಮತ್ತು ತನ್ನ ರುಚಿಗೆ ಹೊರತಾದ ಅಂತಹ ರುಚಿಗಳ ಅಸ್ತಿತ್ವವನ್ನು ಒಪ್ಪಿಕೊಳ್ಳುವದು. ಇದು ಕಾವ್ಯದ ಬಹುಶ್ರುತತ್ವದ ಬಗೆಗಿನ ಕಲ್ಪನೆ. ಇಂಥ ಆಧಾರದ ಮೇಲೆ ಆಯ್ಕೆ ನಡೆದಾಗ ಆ್ಯಂಥಾಲಜಿ ಸಹಜವಾದ 'ನಿರಪೇಕ್ಷತೆಯ' ಹೊಳಪನ್ನು ಪಡೆಯತೊಡಗುತ್ತದೆ. ಆಗ ಕಾವ್ಯ ಪರಂಪರೆಯ ಬಗೆಗಿನ ಒಂದು ನಿರಪೇಕ್ಷ ನೋಟದ ಸಾಧ್ಯತೆ ಮೂಡುತ್ತದೆ. ಇಂಥ 'ತನ್ನದಲ್ಲದ ರುಚಿಗಳ' ಬಗೆಗೆ ಸಹಾನುಭೂತಿಯಿಲ್ಲದ ಸಂಪಾದಕನು ಕೊಡುವ ಆ್ಯಂಥಾಲಾಜಿಯು ಆ ಸಂಪಾದಕನ ರುಚಿಯ ಬಗ್ಗೆ, ಅವನ ಗ್ರಹಿಕೆ-ಪೂರ್ವಾಗ್ರಹಗಳ ಬಗೆಗೆ–ಅವನಿಗೆ ಇಷ್ಟರಾದವರಾರು ಇಷ್ಟರಲ್ಲದವರಾರು ಎನ್ನುವ ಈ ಮುಂತಾದ ವಿಷಯಗಳ ಬಗೆಗೆ ಸೂಚನೆ ಕೊಡಬಲ್ಲದು. ಆದರೆ ಇಂಥ ಕೆಲಸವನ್ನು ಆ ಸಂಪಾದಕನ ಸೃಜನಶೀಲ ಕೃತಿಗಳು ಅಥವಾ ವಿಮರ್ಶೆಯ ಬರೆಹಗಳು ಹೆಚ್ಚು ಚೆನ್ನಾಗಿ ಮಾಡಬಲ್ಲವಾದದ್ದರಿಂದ ಕಾವ್ಯದ ಆ್ಯಂಥಾಲಜಿಯ ಮಾರ್ಗವನ್ನು ಅವನು

ಆರಿಸಿಕೊಳ್ಳಬೇಕಾಗಿರುವುದಿಲ್ಲ. ಒಂದು ಕಾವ್ಯದ ಆ್ಯಂಥಾಲಜಿಯು ಖಂಡಿತವಾಗಿ ಓದುವ ಜನರಿಗಾಗಿ. ಅದೊಂದು ಏಕರೂಪದ್ದಲ್ಲದ ಸಮೂಹಕ್ಕೆ. ಇಂಥ ವೈವಿಧ್ಯಮಯರಾದ ಅವರೆಲ್ಲರನ್ನು ಒಳಗೊಳ್ಳುವ ಅವರ ಸಾಂಸ್ಕೃತಿಕ ಪರಂಪರೆಯು, ಸಂಸ್ಕೃತಿಯ ಅಂಗವಾದ ಕಾವ್ಯದಲ್ಲಿ ವಿವಿಧ ರೂಪ ಮಾರ್ಗಗಳನ್ನು ಸೃಷ್ಟಿಸಿರುತ್ತದೆ. ಕಾವ್ಯದ ಇಂಥ ವಿವಿಧ ರೂಪ ಮಾರ್ಗಗಳ ವರ್ಣಪಟ್ಟಿಕೆಯನ್ನು (Spectrum) ಆ್ಯಂಥಾಲಜಿಯು ನಿರೂಪಿಸಿಬೇಕೆನ್ನುವದು ನನ್ನ ನಂಬಿಕೆ.

•

ಇಂಥ ನಂಬಿಕೆಯ ಭಾವದಲ್ಲಿ ನಾನು ಈ ಕಾವ್ಯಗುಚ್ಛವನ್ನು ಸಿದ್ಧಪಡಿಸುತ್ತಿದ್ದೇನೆ. ಈ ಕಾವ್ಯಗುಚ್ಛ ಇತ್ತೀಚಿನ ಕನ್ನಡ ಕವಿತೆಯ ಒಂದು ಚಿತ್ರವನ್ನು ತೋರಬೇಕೆನ್ನುವದು ನನ್ನ ಆಸೆ. ಈ ಗ್ರಹಿಕೆಯಿಂದ ಅಡಿಗ, ಕೆ.ಎಸ್.ನ., ಪು.ತಿನ. ಜಿ.ಎಸ್.ಎಸ್. ಮೊದಲಾಗಿ.. ಕವಿ ಲಕ್ಷ್ಮೀನಾರಾಯಣಭಟ್ಟರ ವರೆಗಿನ ಕವಿಗಳನ್ನು ಆಯ್ಕೆಮಾಡಿಕೊಂಡಿಲ್ಲ. ನವ್ಯದ ನಂತರದ ಇಂದಿನ ಕಾವ್ಯಕ್ಕೆ, ಇವರೆಲ್ಲ ಹಿರಿಯರಾಗಿ, ಹಿಂದಿನವರಾಗಿ ಉಳಿಯುತ್ತಾರೆ. ಆದರೆ ಇವರಿಗಿಂತ ಕೆಲವೇ ವರ್ಷಗಳಿಂದ ಚಿಕ್ಕವ (ರಾಗಿರಬಹುದಾದ)ರಾದ ಕೆ.ವಿ. ತಿರುಮಲೇಶ ಅವರ ಕವಿತೆಗಳನ್ನು ಈ ಗುಚ್ಛದಲ್ಲಿ ಅಳವಡಿಸಲಾಗಿದೆ. ಇದಕ್ಕೆ ಮುಖ್ಯ ಕಾರಣವೆಂದರೆ, ನವ್ಯದ ನೆಲೆಯಿಂದ ಬಂದ ಇವರು ಇತ್ತೀಚಿಗೆ ಬರೆಯುತ್ತಿರುವ ಕಾವ್ಯವು ('ಮುಖಾಮುಖಿ,' 'ಅವಧ' ಕವನ ಸಂಕಲನಗಳು) ತುಂಬ ಭಿನ್ನವಾದ ಹೊಸರೂಪವನ್ನು ತೋರುತ್ತಿದೆ. ತುಂಬ ಸರಳವಾಗಿ ಹೇಳುತ್ತಲೇ ತೀವ್ರವಾದ ಸಾಂಕೇತಿಕತೆಯನ್ನು, ತಾಜಾ ರೂಪಕಗಳನ್ನು ಕಟ್ಟುವ ಇವರು ತಮ್ಮ ಕಾವ್ಯದ ಮೂಲಕ ಭಿನ್ನವಾದ ಸಮೃದ್ಧವಾದ ಅನುಭವಗಳನ್ನು ಸಾಗಿಸುತ್ತಾರೆ. ಇವರ ಕಾವ್ಯದ ಕಟ್ಟಡದಲ್ಲಿನ ಸರಳತೆ ಅದಕ್ಕೆ ಒಂದು ಹೊಸ ಶೋಭೆಯನ್ನು ತಂದಿದೆ. ಇಲ್ಲಿ ರೂಪದ ಸರಳತೆ ವಸ್ತುವಿನ ಸರಳತೆಯಾಗುವುದಿಲ್ಲ. ತಿರುಮಲೇಶರ ಕಾವ್ಯ, ಕಾವ್ಯದ ಓದುಗನಲ್ಲಿ ಅಪಾರವಾದ ನಂಬಿಕೆಯನ್ನು ವ್ಯಕ್ತಪಡಿಸುತ್ತದೆ ಮತ್ತು ಅವನ ಕಾವ್ಯರಸಾಸ್ವಾದನೆಗೆ ಅನುಕೂಲವಾಗುವಂತೆ ಸಂವಹನದ ಪ್ರಾಥಮಿಕ ಹಂತದ ಅಡೆ ತಡೆಗಳನ್ನು ಕಳಚಿಕೊಳ್ಳುತ್ತದೆ. ಈ ಸಂಗ್ರಹದಲ್ಲಿ ಸೇರಿದ 'ಗದ್ದೆಯಲ್ಲಿರುವ ಕಪ್ಪೆ' ಮತ್ತು 'ಆಮೆ' ಕವಿತೆಗಳು ಸರಳವಾದ ಅಲಿಗರಿಗಳಲ್ಲ. ಅವು ನಮ್ಮನ್ನು ಒಳಗೊಂಡು ಬಿಡುತ್ತವೆಯಾದ್ದರಿಂದ ಅವುಗಳಿಂದ ಹೊರಗೆ ನಿಂತು ಅಲಿಗರಿಗಳಂತೆ ಯೋಚಿಸಲು ಸಾಧ್ಯವಾಗುವುದಿಲ್ಲ. ರಾತ್ರಿ ರೈಲು ಹೋಗುತ್ತಿರುವಾಗ ಗದ್ದೆಯ ಬದುವಿನಲ್ಲಿ ಏನನ್ನೋ 'ಚಿಂತಿಸುತ್ತ' ಕುಳಿತಿರುವ ಕಪ್ಪೆ ಏನು? ಏನೆಲ್ಲಕ್ಕಿಂತ ಭಿನ್ನವಾದ, ಎಷ್ಟೆಲ್ಲ ವ್ಯಾವಹಾರಿಕ ಯಶಸ್ಸನ್ನು ತೋರುವ ಆಮೆಯೊಂದು ಮಗುಚಿಬಿತ್ತೆಂದರೆ ಅದರ ಅವಸ್ಥೆಯಾರಿಗೂ ಬೇಡವೆನ್ನುವಾಗ ಈ ಮಗುಚಿಬಿದ್ದ ಆಮೆ ಯಾರು? ಕವಿ ಇವುಗಳ ಬಗ್ಗೆ ನಮಗೆ ಯಾಕೆ ಹೇಳುತ್ತಿದ್ದಾನೆ? ಈ ಎಲ್ಲ ಪ್ರಶ್ನೆಗಳಿಗೆ ಉತ್ತರಗಳು ಸರಳವಾದ ಅಲಿಗರಿಯಲ್ಲಿ ಕೊನೆಗೊಳ್ಳದಂತಹ ಶಿಲ್ಪವನ್ನು ಈ ಕವಿತೆಗಳು ಹೊಂದಿವೆ.

ನವ್ಯದ ಅವಿಶದತೆಯಿಂದ ದೂರಸರಿಯುತ್ತಲೇ ಅನುಭವದ ಸಮಗ್ರತೆಯು

ಊನಗೊಳ್ಳದಂತೆ ಸಾಧಿಸಿರುವ ಅಭಿವ್ಯಕ್ತಿಯ ಮಾರ್ಗವು ಇವತ್ತಿನ ಪ್ರಮುಖ ರೀತಿಯಾಗಿ ತೋರುತ್ತದೆ. ಇದಲ್ಲದೆ, ನವ್ಯ ಮಾರ್ಗವು ನಮ್ಮ ಕವಿಗಳ ಮೇಲೆ ಹೇರಿದ ಮಹತ್ವಾಕಾಂಕ್ಷೆಯ ಭಾರವೂ ಕಡಿಮೆಯಾಗುತ್ತಿರುವದು ನನಗೆ ತೋರುವ ಇತ್ತೀಚಿನ ಕನ್ನಡ ಕಾವ್ಯದ ಇನ್ನೊಂದು ಪ್ರಮುಖ ಬೆಳವಣಿಗೆ. ನವ್ಯದ ತಂತ್ರಕ್ಕಿಂತ ಈ ಮಹತ್ವಾಕಾಂಕ್ಷೆಯ ಭಾರವೇ ನಮ್ಮ ಕಾವ್ಯದ ಅನೇಮಿಯಕ್ಕೆ ಮುಖ್ಯ ಕಾರಣವಾಗಿದ್ದಿತು. ಇಂಥ ಬಾಹ್ಯದ ಮಹತ್ವಾಕಾಂಕ್ಷೆಯಿಂದ ಬಿಡುಗಡೆ ಹೊಂದಿ ಅತ್ಯಂತ ಲವಲವಿಕೆಯ ಕಾವ್ಯ ರಚನೆಯಲ್ಲಿ ತೊಡಗಿರುವವರಲ್ಲಿ ಎಚ್. ಎಸ್.ವೆಂಕಟೇಶಮೂರ್ತಿಯವರು ಪ್ರಮುಖರು. ಕಾವ್ಯದ ರೂಪಕ್ಕೆ ಸಂಬಂಧಪಟ್ಟಂತೆ ವೆಂಕಟೇಶಮೂರ್ತಿಯವರು ಸಾಂಪ್ರದಾಯಕವಾದ ರುಚಿಯನ್ನು, ಶಿಸ್ತನ್ನು ಮತ್ತು ಅದೇ ಸಂದರ್ಭದಲ್ಲಿ ಪ್ರಯೋಗಶೀಲತೆಯನ್ನು ಸಾಧಿಸಿರುವದು ವಿಶಿಷ್ಟವಾಗಿರುವದು. 'ಅಗ್ನಿಸ್ತಂಭ' ಮತ್ತು 'ಎಷ್ಟೊಂದು ಮುಗಿಲುಗಳು' ಸಂಕಲನಗಳ ಪದ್ಯಗಳಲ್ಲಿ ಅವರು ತೋರುವ ಕಾವ್ಯ ಕ್ರಿಯೆಯು ಪಕ್ವವಾದದ್ದೂ ಸಫಲವಾದದ್ದೂ ಆಗಿದೆ. ವೆಂಕಟೇಶಮೂರ್ತಿಯವರಲ್ಲಿ ಸೃಷ್ಟಿಶೀಲತೆ ಅಪಾರವಾದ ನಂಬಿಕೆಯ ಮೂಲದಿಂದ ಹೊಮ್ಮುತ್ತದೆ. ಕವಿತೆಯ ಜೀವಂತಿಕೆ ಅವರಿಗೆ ಸಮಸ್ಯೆಯಾಗುವುದಿಲ್ಲ. ಅಂತಲೇ ಕಿರಿಶಿಲ್ಪಿ ಕಡೆದ ಸುಂದರ ಶಿಲ್ಪದ ಕಂಕುಳಲ್ಲಿ ಹಿರಿಶಿಲ್ಪಿ ನವುರಾಗಿ ಉಳಿಯಾಡಿಸಿದಾಗ ಆ ಶಿಲ್ಪವು ಫಕ್ಕೆಂದು ನಕ್ಕು ಅದರ ಮುಖದ ತುಂಬ ಮುಗುಳುನಗೆ ನಿಲ್ಲುತ್ತದೆ. ಕಾಲಡಿಯ ಹುಲ್ಲು ನಲುಗದಂತೆ, ಎಡಬಲಕ್ಕೆ ಬಾಗದೇ ನಿಲ್ಲಲು ಗೊಮ್ಮಟ ಶಿಲ್ಪಕ್ಕೆ ಸಾಧ್ಯವಾಗುತ್ತದೆ. ಆಳವಾಗಿರುತ್ತಲೇ ಖುಷಿನೀಡುವ ಹೆಚ್ಚಿನ ಸಂಖ್ಯೆಯ ಕವಿತೆಗಳನ್ನು ವೆಂಕಟೇಶಮೂರ್ತಿಯವರು ಸೃಷ್ಟಿಸಿದ್ದಾರೆ.

ವೆಂಕಟೇಶಮೂರ್ತಿಯವರ ಮಾದರಿಗೆ ಭಿನ್ನವಾಗಿ ಎಚ್. ಎಸ್. ಶಿವಪ್ರಕಾಶ ಅವರ ಕಾವ್ಯ ಬರುತ್ತದೆ. ಇತಿಹಾಸ ಪುರಾಣಗಳ ಘಟನೆಗಳನ್ನು ತಿಕ್ಕಿ, ಇಡೀ ಮಾನವಕುಲದ ಜೀವನ ಪರಿಕ್ರಮದ ಸಾಪೇಕ್ಷದಲ್ಲಿ ಮಹತ್ವದ್ದೆನ್ನಿಸುವ ಬೆಳಕಿನ ಮಿಂಚನ್ನು ಹುಟ್ಟಿಸುವ ಹಟ ಶಿವಪ್ರಕಾಶರ ಕಾವ್ಯದ ಹಿಂದಿದೆ. ಇಂಥ ಛಲದ ನೆಲೆಯಲ್ಲಿ ಶಿವಪ್ರಕಾಶರು ಕಾವ್ಯಾನುಭವವನ್ನು ಆದ್ಯಂತ ಪ್ರಮಾಣವೆಂದು ಪರಿಗ್ರಹಿಸದ ದಟ್ಟವಾದ ಪೌರಭೌತಿಕತೆಯ ಅರಣ್ಯವನ್ನು ಪ್ರವೇಶಿಸುತ್ತಾರೆ. ಇವರದು ಆದಿಮ ಪ್ರತಿಮೆಗಳನ್ನು ಹುಡುಕಿತೀರುತ್ತೇನೆನ್ನುವ ಹಟ. ಆದರೆ ಕಾವ್ಯದ ಇಂಥ ಮಾರ್ಗವು ಸಾಧಕನ ಮಾರ್ಗವಾಗುತ್ತ ಅದು ಕವಿಯ ವ್ಯಕ್ತಿತ್ವದ ಬಲಿದಾನವನ್ನು ಅಪೇಕ್ಷಿಸುವಂತಹದ್ದಾಗಬಹುದು. ಅಪಾಯಕಾರೀ ಮಾರ್ಗದಲ್ಲಿ ಏಕಾಂಗಿಯಾಗಿ ನಡೆಯುವ ದಾರಿಹೋಕನು ತನ್ನ ಅಂತರಂಗಕ್ಕೆ ತನ್ನ ಧೈರ್ಯದ ಬಗೆಗೆ ಮನವರಿಕೆ ಮಾಡಿಕೊಡಲು ಸಪ್ಪಳಾಗುವಂತೆ ದೃಢವಾದ ಹೆಜ್ಜೆ ಹಾಕುತ್ತಾನೆ-ದನಿ ಎತ್ತರಿಸಿ ಹಾಡು ಹೇಳುತ್ತಾನೆ. ಶಿವಪ್ರಕಾಶರು ರಿಸ್ಕೀ ಕಾವ್ಯ ಮಾರ್ಗದಲ್ಲಿ ಕ್ರಮಿಸುತ್ತಿರುವಾಗ, ಆ ಒಂಟಿ ದಾರಿಹೋಕನ ಪ್ರತಿಕ್ರಿಯೆಯ ರೀತಿಯಂತೆಯೇ, ಅಪಾರ ಗಾಂಭೀರ್ಯವನ್ನು ತಾಳುತ್ತಾರೆ-ಒಂದಿಷ್ಟೂ ಹಗುರವೆನ್ನಿಸುವ ಭಾವ ನುಸುಳದಂತೆ ನೋಡಿಕೊಳ್ಳುತ್ತಾರೆ. ಇಂಥ ನೆಲೆಯಲ್ಲಿಯೇ ಶಿವಪ್ರಕಾಶರು ಕಾವ್ಯದ ವಸ್ತು ಮತ್ತು ರೂಪಕ್ಕೆ ಸಂಬಂಧಪಟ್ಟಂತೆ ವಿಶೇಷ ಪ್ರಯೋಗಶೀಲತೆಯನ್ನು ತೋರುವುದಿಲ್ಲ. ಈ ಕಾವ್ಯ ಗುಚ್ಛದಲ್ಲಿ ಶಿವಪ್ರಕಾಶರ

ಇಂಥ ರೀತಿಗೆ ಸ್ವಲ್ಪ ಹೊರತೆನ್ನಿಸಬಹುದಾದ ಕವಿತೆಗಳನ್ನು ಆರಿಸಲಾಗಿದೆ. ಶಿವಪ್ರಕಾಶರಂತೆಯೇ, ಗಾಂಭೀರ್ಯದೊಂದಿಗೆ ತೊಡಗುವ ಕವಿಯಿತ್ರಿ, ಸ. ಉಷಾ ಅವರು. ಆದರೆ ಇವರು ಪಾರಭೌತಿಕತೆಯತ್ತ ಒಲಿದಿರದೇ ವೈಚಾರಿಕತೆಯತ್ತ ಹೆಚ್ಚು ಒಲವುಳ್ಳವರು. ಸ್ತ್ರೀವಾದೀ ವೈಚಾರಿಕತೆ ಇವರ ಕಾವ್ಯದ ಸ್ಥಾಯಿಭಾವವಾಗಿದೆ. ಆದರೆ ಈ ಸ್ತ್ರೀವಾದವು ಪಶ್ಚಿಮ ಪ್ರಣೀತವಾದದ್ದಲ್ಲ. ಇದು ಹೆಚ್ಚಿನ ಸಮತೋಲವನ್ನು ಸಾಧಿಸಿರುವಂತಹದು. ಉಷಾ ಅವರ ಕಾವ್ಯ ಅಚ್ಚುಕಟ್ಟಾದ ಕಾವ್ಯ–'ವೆಲ್‌ಮೇಡ್ ಪೊಯೆಟ್ರಿ'. ಕವಿತೆಯ exterior ಮತ್ತು interior decorationಗಳೆಲ್ಲ ಪೂರ್ಣಗೊಂಡಮೇಲೆ ಕಾಗದಕ್ಕೆ ಇಳಿದು ಬರುವಂತಹದು. ಅವರ 'ಈ ನೆಲದ ಹಾಡು' ಕವಿತೆ ಅಡಿಗರ 'ಭೂಮಿಗೀತ'ಕ್ಕೆ ನೀಡಿದ ಒಂದು ಸ್ತ್ರೀವಾದೀ ಉತ್ತರದಂತಿದೆ.

ಲಘುತ್ವ ಮೂಲದಿಂದಲೇ ಕಾವ್ಯವನ್ನು ಪ್ರವೇಶಿಸಿದವರು ಕವಿ ಬಿ. ಆರ್. ಲಕ್ಷ್ಮಣರಾವ್. ಇವರ ಕಾವ್ಯ ಇವರ ವ್ಯಕ್ತಿತ್ವದಂತೆಯೇ ಉತ್ಸಾಹಶೀಲವಾದದ್ದು, ಖುಷಿಯನ್ನು ಹುಡುಕುವಂತಹದ್ದು. ಲಕ್ಷ್ಮಣರಾವ್ ಅವರ ಮಹತ್ವಾಕಾಂಕ್ಷೆರಾಹಿತ್ಯದ ನಿಲುವು, ಘನವಾದದ್ದನ್ನೇ ಹುಡುಕಿ ಬರೆಯಬೇಕೆನ್ನುವ ಛಲದ ಅನುಪಸ್ಥಿತಿಯು ನವ್ಯ ನಿಲುವಿನ ಅನೇಕ ವಿಮರ್ಶಕರಿಗೆ ಲಕ್ಷ್ಮಣರಾವ್ ಅವರ ಕವಿತ್ವದ ನಾಶದಂತೆ ತೋರಿದೆ. ಆದರೆ ಇಂಥ ಟೀಕೆ ನಿರಪರಾಧಿಗೆ ವಿಧಿಸಿದ ಗಲ್ಲು ಶಿಕ್ಷೆಯಂತೆ ತೋರುತ್ತದೆ. ಅವರ 'ಲಿಲಿಪುಟ್ಟಿಯ ಹಂಬಲ', 'ಶಾಂಗ್ರಿ–ಲಾ' ಮತ್ತು 'ಅಪರಾಧಂಗಳ ಕ್ಷಮಿಸೊ' ಸಂಕಲನಗಳ ಅನೇಕ ಕವಿತೆಗಳು ಸಫಲವಾದವುಗಳಾಗಿವೆ. ('ಲಿಲಿಪುಟ್ಟಿಯ ಹಂಬಲ'ದ ಆರ್ತತೆ ಸಾಧಿಸಲೆಳಸುವ metaphysical ವಿನ್ಯಾಸಗಳನ್ನು ಗಮನಿಸಬಹುದು. ಹಾಗೆಯೇ 'ಗುಂಡಪ್ಪ ವಿಶ್ವನಾಥ,' 'ಶಾಂಗ್ರಿ–ಲಾ' ಗಳಲ್ಲಿನ ತೀವ್ರತೆ ಕಾವ್ಯನುಭವವನ್ನು ಯಶಸ್ವಿಯಾಗಿ ಸಾಗಿಸುತ್ತದೆ) ಲಕ್ಷ್ಮಣರಾವ್ ಅವರ ಯಶಸ್ವೀ ಕವಿತೆಗಳು ಐಂದ್ರಿಯಕದ, ನಿತ್ಯದ ಲೌಕಿಕದ ಆವರಣದಲ್ಲಿ ಬೇರೂರಿ ಇವುಗಳನ್ನು ಮೀರುವ ಹುನ್ನಾರವನ್ನು ತೋರುತ್ತವೆ. ಲಕ್ಷ್ಮಣರಾವ್ ಅವರ ಮನೋಭೂಮಿಕೆಯಿಂದಲೇ ಹೊರಡುವ ಕವಯಿತ್ರಿ ಪ್ರತಿಭಾ ನಂದಕುಮಾರ್ ಅವರು. ಮಧ್ಯಮವರ್ಗದ ಕೌಟುಂಬಿಕ ಅನುಭವಗಳನ್ನು ತನ್ನ ವಸ್ತುವಾಗಿ ಸ್ವೀಕರಿಸುವ ಪ್ರತಿಭಾ ಅವರ ಕಾವ್ಯದಲ್ಲಿಯೂ ಐಂದ್ರಿಯಕತೆಗೆ ಮಹತ್ವದ ಸ್ಥಾನ ದೊರಕುತ್ತದೆ. ಆದರೆ ಪ್ರತಿಭಾರಲ್ಲಿ ಲಕ್ಷ್ಮಣರಾವ್ ಅವರಲ್ಲಿ ಕಾಣುವಷ್ಟು ಕಾವ್ಯ ಶಿಲ್ಪಕ್ಕೆ ಸಂಬಂಧಪಟ್ಟಂತಹ ಕೌಶಲ ಮತ್ತು ಪ್ರಯೋಗಶೀಲತೆಗಳು ಕಾಣುವುದಿಲ್ಲ. ಲಘುತ್ವದ ನೆಲೆಯಿಂದ ತೊಡಗುವ ಎಚ್. ಡುಂಡಿರಾಜ ಅವರ ಕಾವ್ಯಕ್ರಿಯೆಯು ತಿಳಿಹಾಸ್ಯವನ್ನು ಒಳಗೊಳ್ಳುತ್ತಾ ಮುದ ನೀಡುತ್ತದೆ.

ಈ ಮೇಲೆ ಉಲ್ಲೇಖಿಸಿದ ಕವಿಗಳಲ್ಲಿ ಬಹುತೇಕರು ನವ್ಯ ಮಾರ್ಗದಲ್ಲಿ ತಮ್ಮ ಕಾವ್ಯೋದ್ಯೋಗವನ್ನು ಆರಂಭಿಸಿದವರು, ಮತ್ತು ಅದರ ಮೂಲಕ ದಾಟುತ್ತ ಬಂದು ಹೊಸ ಪ್ರಯೋಗಗಳನ್ನು ನಡೆಸಿದವರು. ಆದರೆ ಈ ದಾಟುವಿಕೆಯನ್ನು ತೋರದೆ ಇನ್ನೂ ನವ್ಯದ

ಕಾವ್ಯಾವರಣದೊಳಗೇ ಉಳಿದಂತೆ ತೋರುವ ಕವಿಗಳೆಂದರೆ ಸುಬ್ರಾಯ ಚೊಕ್ಕಾಡಿ ಮತ್ತು ಜಯಂತ ಕಾಯ್ಕಿಣಿ. ಕವಿಯಾಗಿರುವ ಜಯಂತ್ ತಮ್ಮ ಸಣ್ಣ ಕಥೆಗಳಲ್ಲಿ ಹೆಚ್ಚಿನ ಸಾಫಲ್ಯವನ್ನು ಸಾಧಿಸುತ್ತಾರೆ. ಚೊಕ್ಕಾಡಿ ಮತ್ತು ಜಯಂತ್ ಇಬ್ಬರೂ ವೈದೃಶ್ಯಗಳ ಮೂಲಕ ನಮ್ಮ ಅಂತಃಕರಣವನ್ನು ತಲುಪಲು ಪ್ರಯತ್ನಿಸುತ್ತಾರೆ. ಆ ಮೂಲಕ ಸಂಬಂಧದ ಸಾಂದ್ರತೆ ಮತ್ತು ಆರ್ದ್ರತೆಗಳನ್ನು ನಮ್ಮ ಅನುಭವಕ್ಕೆ ತರುತ್ತಾರೆ. ಆನಂದ ಝುಂಜರವಾಡ ಕೂಡ ಇಂತಹದೇ ತೀವ್ರವಾದ ಕಾವ್ಯವನ್ನು ಸೃಷ್ಟಿಸುತ್ತಾರೆ. ಇವರ ಕಾವ್ಯವು ಪೌರ್ವಾತ್ಯ ಪರಂಪರೆಯ ನೆಲೆಯಲ್ಲಿ ನಿಂತು ಮಾನವನ ಅಂತರಂಗದ ಶುದ್ಧಿಯ ಬಗ್ಗೆ ಚಿಂತಿಸುತ್ತದೆ. ಪಶ್ಚಿಮದ ಭೌತವಾದವು ತಂದ ನಿರಾರ್ದ್ರತೆಯ ಬಗೆಗೆ ಈ ಕವಿಗೆ ಸಂತಾಪವಿದೆ. ನಾಗರೀಕತೆಯ ಹರಿವಿನಲ್ಲಿ ಕಳೆದು ಹೋದ ಮಾನವೀಯನಾದ ಮನುಷ್ಯನನ್ನು ಮರಳಿಗಳಿಸಿಕೊಳ್ಳುವ ಬಗೆಗಿನ ವೈಚಾರಿಕತೆ ಇವರ ಕಾವ್ಯದ ಹಿನ್ನೆಲೆಗಿದೆ. ಎಚ್.ಎಸ್. ಭೀಮನಗೌಡರ, ಸ.ರಘುನಾಥ, ಎಲ್. ಎನ್. ಮುಕುಂದರಾಜ ಇವರು ನವ್ಯದ ಮುಕ್ತಛಂದದ ಆಸರೆಯಲ್ಲಿಯೇ ತಮ್ಮ ಅನುಭವಕ್ಕೆ ಕಾವ್ಯಾಭಿವ್ಯಕ್ತಿ ನೀಡುತ್ತಿದ್ದಾರೆ. ಇವರು ತಮ್ಮ ವಿಶಿಷ್ಟವಾದ ಧ್ವನಿಗಳನ್ನು ಕನ್ನಡ ಕಾವ್ಯಧಾರೆಗೆ ಸೇರಿಸುತ್ತಿದ್ದಾರೆ. ಎಚ್.ಎಸ್. ಮುಕ್ತಾಯಕ್ಕ, ಹೇಮಾ ಪಟ್ಟಣಶೆಟ್ಟಿ, ಎಂ. ಆರ್. ಕಮಲ ಮತ್ತು ಹಾ.ಮು. ಕನಕ ಸ್ತ್ರೀ ಪ್ರಜ್ಞೆಯ ವೈಶಿಷ್ಟ್ಯದ ಕಾವ್ಯ ನಿರ್ಮಿಸುತ್ತಿದ್ದಾರೆ. ಇವರಲ್ಲಿ ಕಾವ್ಯ ವಸ್ತುವಿನ ಧೋರಣಾತ್ಮಕ ಗ್ರಹಿಕೆ ನಡೆದು ಅದರ ಮಂಡನೆಯಲ್ಲಿ ಕಾವ್ಯವು ರೂಪತಾಳುತ್ತದೆ.

ಇತ್ತೀಚಿನ ಕನ್ನಡ ಕಾವ್ಯವು ಪಾರಭೌತಿಕತೆಯ ಅನುಭವವನ್ನು, ಮನುಷ್ಯ-ಪರಿಸರಗಳ ನಡುವಿನ ಸಂಘರ್ಷಹೊಂದಿಯೇ ಏರ್ಪಡುವ ಅದ್ವೈತವನ್ನು, ವೈದಿಕೇತರವಾದ-ಏಕಕಾಲದಲ್ಲಿ ಆತ್ಮಮುಖಿಯೂ ಸಮಾಜಮುಖಿಯೂ ಆಗುವ ಜೀವನನಿಷ್ಠ ಚಿಂತನೆಗಳನ್ನು ಗರಿಷ್ಠ ಪ್ರಮಾಣದಲ್ಲಿ ಒಳಗೊಳ್ಳಲು ಪ್ರಯತ್ನಿಸುತ್ತಿರುವುದನ್ನು ಕಾಣುತ್ತೇವೆ. ಇಂಥ ತಾತ್ವಿಕತೆ ಕೆ.ಬಿ. ಸಿದ್ಧಯ್ಯನವರ ಕಾವ್ಯದಲ್ಲಿ ಅತ್ಯಂತ ಶುದ್ಧರೂಪದಲ್ಲಿ ಮೈದಾಳುವುದನ್ನು ಕಂಡರೆ ಸವಿತಾ ನಾಗಭೂಷಣ, ವೈದೇಹಿ ಮತ್ತು ಎಸ್. ಮಂಜುನಾಥ ಇವರಲ್ಲಿ ಈ ತಾತ್ವಿಕತೆಯು ಕಾವ್ಯಾನುಭವದ ಪ್ರಾಮಾಣ್ಯದಲ್ಲಿ ನಿಜಗೊಂಡು ನಿಲ್ಲುತ್ತದೆ. ಸವಿತಾ , ವೈದೇಹಿ ಮತ್ತು ಮಂಜುನಾಥ್ ಇವರ ಕಾವ್ಯವು ಅಲಂಕಾರದ ವಡವೆ ತೊಡವೆಗಳನ್ನೆಲ್ಲ ಕಳಚುತ್ತ ಸ್ಫಟಿಕದ ಶಲಾಕದಂತಾಗುತ್ತ ನಮ್ಮತ್ತ ನಡೆದು ಬರುತ್ತವೆ. ಝೆನ್ ಬೌದ್ಧ ತತ್ವ, ಅಲ್ಲಮರಿಂದ ಪ್ರೇರಣೆ ಪಡೆಯುವ ಇವರು ಅಕ್ಕನ ಸಂವಹನಶೀಲವಾದ ಕಾವ್ಯಶಿಲ್ಪವನ್ನು ಸಾಧಿಸುತ್ತ ತಮ್ಮ ಕಾವ್ಯವು ಒಗಟುಗಳ ಕಗ್ಗಂಟಾಗುವುದನ್ನು ತಪ್ಪಿಸಿಕೊಂಡಿದ್ದಾರೆ. ಕಾವ್ಯ ಇವರಲ್ಲಿ ತೀವ್ರವಾದ ಪ್ರಾರ್ಥನೆ-ಧ್ಯಾನದ ಕ್ರಿಯೆ. ಇವರ ಕಾವ್ಯದ ತುದಿಗೆ ಅದು ಮಂತ್ರಶಕ್ತಿಯನ್ನು ಸಾಧಿಸಲೆನ್ನುವ-ಸಾಧಿಸುತ್ತದೆನ್ನುವ- ನಂಬಿಕೆಯ ಹಂಬಲವಿರುತ್ತದೆ. (ವೆಂಕಟೇಶ ಮೂರ್ತಿ-ಶಿವಪ್ರಕಾಶ- ಮತ್ತು ಈ ಮೂವರು ಕವಿಗಳು ನಿರ್ಮಿಸುವ ಕಾವ್ಯದ ಸ್ಪೆಕ್ಟ್ರಮ್ ನನಗೆ ಹೆಚ್ಚು ಇಷ್ಟವಾಗುವ ಕನ್ನಡ ಕಾವ್ಯವಲಯವು.)

೧೯೭೦ರ ದಶಕದಲ್ಲಿ ಸಾಮಾಜಿಕ ವೈಚಾರಿಕತೆಗೆ ಬದ್ಧವಾಗಿ ಮೂಡಿಬಂದ ಬಂಡಾಯಕಾವ್ಯ ಮಾರ್ಗವು ತನ್ನ ಸ್ವಂತದ ಸಾಧನೆಯಲ್ಲಿ ಹೆಚ್ಚಿನ ಸಫಲತೆಯನ್ನು ಗಳಿಸದಿದ್ದರೂ ಅದು ಕನ್ನಡ ಕಾವ್ಯ ಪರಂಪರೆಯ ಹರಿವಿನ ಮೇಲೆ ಬೀರಿದ ಪ್ರಭಾವವು, ಸಾಧಿಸಿದ ಪರಿಣಾಮವು ಖಂಡಿತವಾಗಿಯೂ ತುಂಬ ಮಹತ್ವದ್ದೂ ಇತ್ಯಾತ್ಮಕವಾದದ್ದೂ ಆಗಿದೆ. ಸಿದ್ಧಲಿಂಗಯ್ಯ, ಚಂದ್ರಶೇಖರ ತಾಳ್ಯ, ಶಂಕರ ಕಟಗಿ ಮತ್ತು ಸರಜೂಕಾಟ್ಕರ್ ಇವರು ಬಂಡಾಯ ಕಾವ್ಯ ಮಾರ್ಗದ ಮೂಲಕ ರಂಗಕ್ಕೆ ಬಂದವರು. ಆದರೆ ಈ ಕವಿಗಳು, ಸಂಘಟನೆಯ ಮೂಲಕ ಬಂಡಾಯ ಕಾವ್ಯ ಮಾರ್ಗದಲ್ಲಿ ಅಂತರ್ಗತವಾಗಿದ್ದ ಕೆಲವು ಮಿತಿಗಳನ್ನು ತಮ್ಮ ಪ್ರತಿಭೆಯ ಮೂಲಕ ಮೀರುತ್ತ ಸಫಲವಾದ ಕವಿತೆಗಳನ್ನು ರಚಿಸಿದ್ದಾರೆ. ಇವರಲ್ಲಿ ಸಿದ್ಧಲಿಂಗಯ್ಯ, ಶಂಕರಕಟಗಿ ಮತ್ತು ಸರಜೂಕಾಟ್ಕರ್ ಇವರುಗಳ ಕಾವ್ಯವು ಅನುಭವ ಪ್ರಾಮಾಣ್ಯದ ಮೂಲಕ ವಿಶಿಷ್ಟ ಶೋಭೆಯನ್ನು ಪಡೆದುಕೊಳ್ಳುತ್ತದೆ. ಸಿದ್ಧಲಿಂಗಯ್ಯ ಮತ್ತು ಶಂಕರ ಕಟಗಿ ಜಾನಪದ ಶಿಲ್ಪವನ್ನು ಅತ್ಯಂತ ಸೃಷ್ಟಿಶೀಲವಾಗಿ ಬಳಸಿದ್ದಾರೆ. ಚಂದ್ರಶೇಖರ ತಾಳ್ಯ ಅವರದು ವಿಚಿತ್ರವಾದ ಸಾಧನೆ. ಇವರು ಬಂಡಾಯದ ಮಿತಿಗಳನ್ನು ಮೀರಲು ವೈಯುಕ್ತಿಕ ಮಹತ್ವಾಕಾಂಕ್ಷೆಯ ಮಾರ್ಗವನ್ನು ಆಶ್ರಯಿಸುತ್ತಾರೆ. ಒಂದೊಮ್ಮೆ ಇಂಥ ಮೀರುವಿಕೆ ಸಾಧ್ಯವಾದ ಮೇಲೆ ಅವರು ಮಹಾತ್ವಾಕಾಂಕ್ಷೆಯ ನಿರಾಕರಣದ ಮೂಲಕ ಹೊಸ ಎತ್ತರಗಳನ್ನು ಹತ್ತುವ ಪ್ರಯತ್ನ ಮಾಡುತ್ತಾರೆ.

●

ಈ ಕಾವ್ಯ ಗುಚ್ಛವನ್ನು ರೂಪಿಸುವಲ್ಲಿ ನನಗಿರುವ ಮುಖ್ಯ ಆಸಕ್ತಿ ಎಂದರೆ- ಕನ್ನಡದ ಓದುಗರಿಗೆ ಆಸಕ್ತಿದಾಯಕವಾದ ಲವಲವಿಕೆಯ ಕವಿತೆಗಳ ಸಂಗ್ರಹ ಒಂದನ್ನು ನೀಡುವದು. (ಕಾವ್ಯದ ಓದುವಿಕೆಯೊಂದು ಏರ್ಪಟ್ಟ ಮೇಲೆ ತಾನೇ ಶ್ರೇಷ್ಠ-ಕನಿಷ್ಠದ ತರತಮದ ಪ್ರಶ್ನೆ ಬರುವದು) ಇಂಥ ಸಂಗ್ರಹ ಇತ್ತೀಚಿನ ಕನ್ನಡ ಕಾವ್ಯ ಮಾರ್ಗದ ವೈವಿಧ್ಯತೆಯನ್ನು ತೋರುತ್ತಿರಬೇಕು ಮತ್ತು ಅದು(ಆದಷ್ಟು ಮಟ್ಟಿಗೆ) ಉತ್ತಮ ಕವಿತೆಗಳ ಸಂಗ್ರಹವಾಗಿರಬೇಕು. ಈ ಉದ್ದೇಶಗಳಿಗೆ ಬದ್ಧನಾಗಿ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡಿದ್ದೇನೆ. ಈ ಕಾವ್ಯಗುಚ್ಛದಲ್ಲಿ ಸೇರಬೇಕಾದ ಇನ್ನಷ್ಟು ಕವಿಗಳು-ಕವಿತೆಗಳು (ಇದ್ದೇ ಇದ್ದಿರುತ್ತಾರೆ!) ಇರಬಹುದು. ಅವರೆಲ್ಲ ಇಲ್ಲಿ ಸಂಗ್ರಹಗೊಳ್ಳದಿರುವುದಕ್ಕೆ ಕಾರಣಗಳಿವೆ. ಈ ಕಾರಣಗಳು ಕಾವ್ಯದ ನೆಲೆಯಲ್ಲಿಯೇ ಮೂಡಿದವುಗಳಾಗಿದ್ದು ವೈಯುಕ್ತಿಕ ಪೂರ್ವಾಗ್ರಹಗಳು ಇವುಗಳ ಹಿನ್ನಲೆಯಲ್ಲಿಲ್ಲ.

■

ಈ ಕಾವ್ಯ ಗುಚ್ಛವು

ಕವಿ ಗೋಪಾಲ ಕೃಷ್ಣ ಅಡಿಗರ ನೆನಪಿಗೆ

ಅರ್ಪಿತ

ಕೆ.ವಿ ತಿರುಮಲೇಶ್

ಆಮೆ

ಆಮೆ ಏಡಿಯಂತಲ್ಲ
ಅದು ಸರೋವರದ ನಡುಗಡ್ಡೆಯಂತೆ ಪ್ರಶಾಂತವಾಗಿರುತ್ತದೆ.
ಏಡಿಯೋ
ಕೆಟ್ಟದಾಗಿ ಕಟ್ಟಿದ ಗಂಟಿನಂತೆ ಅಸ್ಪಷ್ಟವಾಗಿರುತ್ತದೆ.

ಆಮೆ ಆನೆಯಂತಲ್ಲ
ಅದು ಬೇಕೆಂದಾಗ ಕೈಕಾಲು ತಲೆಗಳನ್ನು ಒಳಗಿಟ್ಟುಕೊಳುತ್ತದೆ.
ಆನೆಯೋ
ಭಾರವಾದ ಸೊಂಡಿಲನ್ನು ಕೂಡ ತೂಗಿಕೊಂಡೇ ನಡೆಯ ಬೇಕಾಗುತ್ತದೆ.

ಆಮೆ ಮೊಲದಂತಲ್ಲ
ಅದು ಮೆಲ್ಲಮೆಲ್ಲಗೆ ನಡೆದುಕೊಂಡಾದರೂ ತನ್ನ ಗುರಿಯನ್ನು ತಲುಪುತ್ತದೆ
ಮೊಲವೋ
ಅರ್ಧ ಹಾದಿಯಲ್ಲಿ ನಿದ್ದೆಹೋಗಿ ವಾಪಸು ಮರಳುತ್ತದೆ.

ಆಮೆ ಮನುಷ್ಯನಂತಲ್ಲ
ಅದು ಇಡೀ ಜಗತ್ತನ್ನೆ ಬೆನ್ನಮೇಲೆ ಹೊತ್ತು ನಿಲ್ಲುತ್ತದೆ.
ಮನುಷ್ಯನೋ
ಭೂಮಿಗೆ ಭಾರವಾಗಿ ಸಂಚರಿಸುತ್ತಿರುವುದು ನಮಗೆಲ್ಲಾ ಗೊತ್ತೇ ಇದೆ.

ಆದರೆ ಮಾತ್ರ ಎಲ್ಲಾದರೂ
ಅದು ಮಗುಚಿ ಬಿತ್ತೆಂದರೆ ಅದರ ಅವಸ್ಥೆ ಯಾರಿಗೂ ಬೇಡ.
ಇಡೀ ಜಗತ್ತೇ
ಅದನ್ನು ನೋಡಿ ನಗುವುದು, ಹೊಟ್ಟೆಯನ್ನು ತಡವುವುದು.

ಗದ್ದೆಯಲ್ಲಿರುವ ಒಂದು ಕಪ್ಪೆ

ಗದ್ದೆಯಲ್ಲಿರುವ ಒಂದು ಕಪ್ಪೆ ಎಲ್ಲಾ ಕಪ್ಪೆಗಳಂತೆ
ಕುಪ್ಪಳಿಸುವುದು ಧೂಳಿನಲ್ಲಿ ತೆವಳುವುದು

ಮೇಲೆ ಕಾಗೆಗಳಿಂದಲೂ ಕೆಳಗೆ ಹಾವುಗಳಿಂದಲೂ ತಪ್ಪಿಸಲು
ಹುಲ್ಲುಗಿಡಗಳ ಮರೆಗೆ ಅಡಗುವುದು, ಕೆಸರನ್ನು ಹೊಗುವದು

ಮುಂಗಾರಿಗೆ ಸಂಗಾತಿಯನ್ನು ಹುಡುಕುವುದು
ಮೋಡದ ನೆರಳಲ್ಲಿ ವಟಗುಟ್ಟುವದು
ಪೇಟೆಯಲ್ಲಿ ಮಂಕಾಗಿ ಉರಿಯುವ ದೀಪಗಳ ಬೆಳಕು
ಇದರ ಕಣ್ಣಿನಲ್ಲೂ ಪ್ರತಿಫಲಿಸುವದು.

ಒಂದು ಕಪ್ಪೆಯ ಕಣ್ಣಲ್ಲಿ ಕಣ್ಣಿಟ್ಟು ನೋಡಿದರೆ
ಅದು ಎಲ್ಲರನ್ನೂ ಕಡೆಗಣಿಸುವಂತೆ ತೋರುವುದು
ಒದ್ದು ಜಾಡಿಸಿದರೆ ಆಚೆಗೆ ಮುಗ್ಗರಿಸಿ ಬೀಳುವುದು
ಹೋಯಿತು ಪೀಡೆಯೆಂದರೆ ಮತ್ತೆ ಕಾಣಿಸಿಕೊಳ್ಳುವುದು.

(ಗದ್ದೆಯಲ್ಲಿರುವ ಕಪ್ಪೆ ಒಂದು ರೂಪಕವೇನೂ
ಆಗಿರಬೇಕಾಗಿಲ್ಲ.) ರಾತ್ರಿ ರೈಲು ಹೋಗುತ್ತಿರುವಾಗ
ಒಂಟಿಯಾಗಿ ಬದುವಿನ ಮೇಲೆ ಕುಳಿತು ಅದು
ಏನನ್ನು ಚಿಂತಿಸುವುದೋ ದೇವರೆ ಬಲ್ಲ!

ಒಂದು ಕಲ್ಲಂಗಡಿ ಹಣ್ಣನ್ನು ಕತ್ತರಿಸುವುದು

ಒಂದು ಕಲ್ಲಂಗಡಿ ಹಣ್ಣನ್ನು ಕತ್ತರಿಸಿದರೆ ಅದನ್ನು
ಮತ್ತೆ ಒಟ್ಟಿಗೆ ಸೇರಿಸಲಿಕ್ಕಾಗುವುದಿಲ್ಲ ಎಂದೆಲ್ಲ
ನಾನೇಕೆ ಹೇಳಲಿ? ಎಲ್ಲರಿಗೂ ಗೊತ್ತಿರುವ ತೀರ
ಸಾಮಾನ್ಯವಾದ ಸಂಗತಿಗಳನ್ನು ಬಿಟ್ಟು ಬಿಡೋಣ. ಬರೇ
ಒಂದು ಕಲ್ಲಂಗಡಿ ಹಣ್ಣನ್ನು ಕತ್ತರಿಸುವುದು ಹೇಗೆ
ಎಂಬುದನ್ನಷ್ಟೆ ನೋಡೋಣ. ಮೊದಲು
ಒಂದು ಸರಿಯಾಗಿ ಕಳಿತ ಕಲ್ಲಂಗಡಿ ಹಣ್ಣನ್ನು ತೊಳೆದು
ತಟ್ಟೆಯಲ್ಲಿ ಇರಿಸಬೇಕು, ಅಡ್ಡಕ್ಕೋ ಉದ್ದಕ್ಕೋ
ಹೇಗೇ ಇರಿಸಿದರೂ ಅದು ದುಂಡಗೇ ಕುಳಿತುಕೊಳ್ಳುತ್ತದೆ ಬಿಡಿ.
ಆಮೇಲೆ ಹರಿತವಾದ ಒಂದು ಚೂರಿಯಿಂದ
ಅದನ್ನು ಮೇಲಿಂದ ಕೆಳಕ್ಕೆ ಅಥವ ಕೆಳಗಿನಿಂದ
ಮೇಲಕ್ಕೆ ಅಥವ ಎಡದಿಂದ ಬಲಕ್ಕೆ ಅಥವ

ಬಲದಿಂದ ಎಡಕ್ಕೆ ಅಥವ-ನಿಜಕ್ಕೂ ಹೇಳುವುದಾದರೆ
ಒಂದು ಕಲ್ಲಂಗಡಿ ಹಣ್ಣನ್ನು ಕತ್ತರಿಸುವುದಕ್ಕೆ ಅಸಂಖ್ಯ
ರೀತಿಗಳಿವೆ. ನನ್ನ ಅಫಘಾನೀಮಿತ್ರನೊಬ್ಬ
ಮಧ್ಯದಿಂದ ಅಡ್ಡಕ್ಕೆ ಕತ್ತರಿಸಿ ಒಳಗಿನ ತಿರುಳನ್ನು
ಚೂರಿಯಿಂದ ಹೆರೆದು ತೆಗೆಯುತ್ತಿದ್ದ. ಕೆಲವರು ನೀಟಾಗಿ ಕತ್ತರಿಸಿ
ಹೋಳುಗಳನ್ನು ಕಚ್ಚಿ ತಿನ್ನುತ್ತಾರೆ. ಕೆಲವರು ತಿನ್ನುವ ಮೊದಲು
ಬೀಜಗಳನ್ನು ತೆಗೆಯುತ್ತಾರೆ, ಇನ್ನು ಕೆಲವರು
ತಿನ್ನುವಾಗ ಉಗಿಯುತ್ತಾರೆ. ನಿಜಕ್ಕೂ ಹೇಳುವುದಾದರೆ
ಒಂದು ಕಲ್ಲಂಗಡಿ ಹಣ್ಣನ್ನು ತಿನ್ನುವುದಕ್ಕೆ ಅನೇಕ
ವಿಧಾನಗಳಿವೆ. ಎಲ್ಲಕ್ಕಿಂತ ಮುಖ್ಯವೆಂದರೆ-
ಅಥವಾ ನಾನೇಕೆ ಹೇಳಲಿ ಅದನ್ನು?

ಸಿದ್ದಲಿಂಗಯ್ಯ

ಮಾತಾಡಬೇಕು

ಕತ್ತಾಳೆಯ ಮುಳ್ಳುಗಳು ಹಾಲಿಲ್ಲದ ಕಳ್ಳಿಗಳು
ಮೈಸಿಗಿಯುವ ಬಾಡಬಕ್ಕದ ಗಿಡಗಳು
ಇವುದರ ಜೊತೆ ಕೊಂಚ ಮಾತಾಡಬೇಕು.

ಬಾಡಿಗೆ ಬೆಳಕಿನ ಚಂದ್ರನಿಗೆ ರವಷ್ಟು
ಪ್ರಶ್ನೆ ಕೇಳಬೇಕು
ಚಂದದ ಗುಲಾಬಿಯನ್ನು ಮುಳ್ಳುಗಳಿಂದ
ಬಿಡುಗಡೆ ಮಾಡಬೇಕು

ಜಲವಿಲ್ಲದ ಬಾವಿಗಳು ಮಾತಿಲ್ಲದ ಮಂತ್ರಿಗಳು
ಸೀಗೆ ಮೆಳೆಗಳು ಓಡಾಡುವ ಪೋಲೀಸರು
ಲೋಕವೇ ನಾನಿನ್ನ ನೋಡಬೇಕು
ಭಾಷಣಗಳಂತೆ ಬರುವ ಬಿಳಿ ಮೋಡಗಳಿಂದ
ತೊರೆ ಹರಿಯುವುದಿಲ್ಲ- ಹಸಿರು ಏಳುವುದಿಲ್ಲ.

ಕಾಲಕಾಲಕ್ಕೆ ಬರದಂತೆ ಮಳೆಯನ್ನು ತಡೆಯುತ್ತಿರುವವರಾರು?
ಕಾಮನ ಬಿಲ್ಲಿನಿಂದ ನಕ್ಷತ್ರಗಳನ್ನು ಕತ್ತರಿಸುತ್ತಿರುವವರಾರು?

ಸೂರ್ಯನನ್ನು ಸೆರಗಿನಿಂದ ಮರೆಮಾಡಿಕೊಂಡು
ಕೆದರಿದ ಕತ್ತಲೆಯನ್ನು ಎತ್ತರಿಸುತ್ತಿರುವವರಾರು?

ಮಾವು ಹಲಸುಗಳ ಫಲಕಿತ್ತುಕೊಂಡು
ಹೆಣ್ಣೂ ಅಲ್ಲ-ಗಂಡೂ ಅಲ್ಲದ
ಆತ್ಮಗಳನ್ನು ಹುಟ್ಟಿಸುತ್ತಿರುವವರಾರು?

ಲೋಕವೇ ನಾನಿನ್ನ ನೋಡಬೇಕು
ನಿನ್ನೊಡನೆ ಮಾತಾಡಬೇಕು.

ಅಲ್ಲೆ ಕುಂತವರೆ *

ಒಂದಾನೊಂದು ಊರು
ಊರಿಗೆ ಮಳೆಯಿಲ್ಲಾ
ಬೂಟಿನ ಸದ್ದು ಗುಂಡಿನ ಸದ್ದು
ಕತ್ತಿಯ ತಿವಿತ ಕೂಗಾಟ
ಊರಿಗೆ ಬೆಳೆಯಿಲ್ಲಾ

ಮಳೆರಾಯ ಕ್ಯಾಪದಲಿ ದೇಸಂತರಾ ಹೋಗಿ
ಅಂದಾವೆ ಹೋಯಿತಲ್ಲೋ
ನಗುತಿದ್ದ ಮಲ್ಲಿಗೆಯ ಮಕದಲ್ಲಿ ಕಳೆಗುಂದಿ
ಚಂದಾವೆ ಹೋಯಿತಲ್ಲೋ

ಬಡವನ ದನವೊಂದು ಸಗಣಿಯ ಇಕ್ಕದೆ
ನೆಲವತಾರಿಸಲಿಲ್ಲ
ಮದುವೇಯ ಮನೆಯಲ್ಲಿ ವಡವೇಯ ಮಾತೇರಿ
ಹಸೆಗೆ ಕೂರಿಸಲಿಲ್ಲ

ಅನ್ನ ನೀಡದೆ ಹೋದ ನೂರಾರು ದೇವರು
ಹೋದಾವು ಬಿದ್ದಾವು ಪಾಳುಬಾವಿ
ಅನ್ನ ನೀಡದ ದೊರೆಯ ದರಬಾರು ನಿರುವಾದು
ಬಡಜನ ಬುಡುತಾರೆ ಬಾಯಿ ಬಾಯಿ

ವಟ್ಟೆಗಿಲ್ಲದ ಜನರ ವಣನೆತ್ತಿ ಮ್ಯಾಲೇರಿ
ಕುಣಿಯುತ್ತ ಬರುತಾವೆ ಕರಿಬಾಣ
ಯಾರಾನ ಕದ್ದಾರೆ ಮರುಮಾತು ಕೊಟ್ಟಾರೆ
ಬಯಲಲ್ಲಿ ನ್ಯಡಸವರೆ ಕತ್ತಿವರಸೆ

ಸುತ್ತ ಮುತ್ತ ಹಸಿರು ಮಳೆ
ಬೆಳೆಯುತಾರೆ ಬೆಂಕಿಬೆಳೆ
ಕಪ್ಪುಜನರ ತಲೆಯಮ್ಯಾಲೆ
ಬಿಳಿ ಬಿಳಿ ಮಡಕೆ
ಪಾತಾಳದ ಆಳದಲ್ಲಿ
ಭರವಸೆಗಳ ಕೋಳದಲ್ಲಿ
ನರುಳುತಾದೆ ಉರುಳುತಾದೆ
ಜನರ ಜಂಗುಳಿ

ಈ ಬಾಳಿನ ಗೋಳನೆಲ್ಲ
ಗುಡಿಸು ಬಾರೋ ಮಳೆರಾಯ
ಆಕಾಸವ ಬಗೆದು ಬಾರೊ
ಸುಕಪ್ರೀತಿಯ ಬೆಳಕ ತೋರೊ
ಸುತ್ತ ಬಿಗಿದ ಬೇಲಿಯನ್ನು
ಬಿಳಿಸು ಬಾರೊ ಮಳೆರಾಯ
ಹುಯ್ಯೊ ಹುಯ್ಯೊ ಮಳೆರಾಯ
ಎದೆಗಳ ಕಡಲು ಬತ್ತೋದೊ
ಬಡವರ ಕಣ್ಣಲಿ ನೀರಿಲ್ಲ
ಹುಯ್ಯೊ ಹೊಯ್ಯೊ ಮಳೆರಾಯ....

(* ಖಂಡಕಾವ್ಯದ ಒಂದು ಭಾಗ)

ಎಚ್.ಎಸ್. ವೆಂಕಟೇಶಮೂರ್ತಿ

ಬೆಳಗೊಳದಲ್ಲಿ

೧

ಪಾದದಿಂದಲೆ ಎಲ್ಲ ಪ್ರಾರಂಭ. ಗೊಮ್ಮಟನ
ಪಾದವೆಂದರೆ ಸಾಮಾನ್ಯವಲ್ಲ.

ಪ್ರತ್ಯಕ್ಷಗೊಳಿಸಬೇಕಲ್ಲ ಕಲ್ಲನು ಕಡಿದು
ನೋಯಿಸದ ಹಾಗೆ ಕಾಲಡಿಯ ಹುಲ್ಲ.
ನೆಲವ ಬಿಟ್ಟವನವನು ಮುಟ್ಟಿಯೂ ಮುಟ್ಟದಂ
ತಿರಬೇಕು ತಿರೆಯಲಸ್ಥಿರವಾಗದೆ
ಎಡವಲ್ಲ ಬಲವಲ್ಲ ನೆಟ್ಟಗೆತ್ತರ ಬೆಳೆದು
ನಿಲ್ಲಬೇಕಲ್ಲವೇ ನಶ್ವರವಾಗದೆ?
ನಿಂತ ನಿಲುವಿಗೆ ಕಾಲೆ ಆಧಾರ, ಬದಲಿಸದೆ
ನಿಲವ, ನಿಲ್ಲುವ ಕಷ್ಟ ನಿಂತವರಿಗೆ.
ಬಾಗಿದರೆ ಕೂಗುವದು ಪೀಸಾದ ನೆರಳಲ್ಲಿ
ರೇಗುವದು ರೂಢಿ ನಮ್ಮಂಥವರಿಗೆ

೨

ಕಣ್ಣ ಮುಂದೆಯೆ ಮಾಯೆ ಬಿಚ್ಚುವಳು ಬಟ್ಟೆಗಳ
ಋತುಗತಿಗೆ ತಕ್ಕಂತೆ ಗೆಜ್ಜೆಕಟ್ಟಿ
ನಗ್ನ ತೊಡೆಗಳ ಪಕ್ಕ ನೀಡಿದ್ದರೂ ಕೈಯಿ
ಚಪ್ಪರಿಸುವಂತಿಲ್ಲ ತೊಡೆಯ ತಟ್ಟಿ.
ಸುತ್ತಿದ್ದರೂ ಬಳ್ಳಿ, ರೇಗಿಲ್ಲ ರಾಗ ವಿಕಾರ,
ಸತ್ಯದೊಡನೆ ಪ್ರಯೋಗ ಮಗ್ನನಾಗಿ
ಏಳೇಳು ರಾಗಿಣಿಯರೇಳು ಏಳೆಂದರೂ
ಯೋಗನಿದ್ದೆಯೊಳಿರುವ ಈ ವಿರಾಗಿ.
ಕೆತ್ತುವದು ಕಷ್ಟ ಪುರುಷಾಕಾರ ಬಯಲಲ್ಲಿ
ಧ್ವನಿಪೂರ್ಣ ಕವನ ವಟಪತ್ರಶಾಯಿ
ತುಂಬುಗೆಚ್ಚಲಿಗೆ ತುಟ್ಟಿಗುಮ್ಮುವನು ಗೋಪಾಲ
ನೋಡಿ ನಗುವಳು, ಮುದ್ದುಮಣಿಯ, ತಾಯಿ!

೩

ವಕ್ಷ ಬೆಳಕಿನ ಪಕ್ಷ, ಅಲ್ಲಿ ನಕ್ಷತ್ರಗಣ.
ಮೇಘಮಲ್ಹಾರ. ಕೊಕ್ಕರೆಯಹಾರ.
ಒಳಗೆ ಬೆಳುಗೊಳ. ಹಿಂದೆ ವೃಷಭಾಚಲದ ಕೋಡು.
ಯಾರು ನೋಡುವರು ಕೆಳಗಿರುವ ಊರ?

ಮುಖ ಮೂಡಬಹುದು. ಮೂಡಿಲ್ಲ ಮೂಡುವುದಿಲ್ಲ
ಮನವಿಲ್ಲದಿರುವಾಗ ಮಂದಹಾಸ!
ಕಷ್ಟವಲ್ಲವೆ ಹೇಳಿ ಮೌನದನುಸಂಧಾನ
ಶಬ್ದ ಜೀವಿಗಳಾದ ಕವಿಗಣಕ್ಕೆ?
ತುಟಿಬಿಡದ ಗರತಿ. ಗರ್ಭದಲ್ಲಿದ್ದು ಅರ್ಭಕ
ಹೂಂಗುಟ್ಟುತ್ತಿದ್ದಾನೆ ಆತ್ಮ ಕಥೆಗೆ
ಕಣ್ಣನೆದುರೇ ಮೂರ್ತಿಮತ್ತಾದ ಬಾಹುಬಲಿ
ಮಾತುಗಳ ಹಂಗಿಲ್ಲ ಇಂಥ ಕೃತಿಗೆ.

ಹಿರಿ ಶಿಲ್ಪಿ–ಕಿರಿಶಿಲ್ಪಿ

ಏಳೆಂಟು ವರ್ಷ ವ್ರತ ತೊಟ್ಟು ಈ ಕಿರಿ ಶಿಲ್ಪಿ
ಕಡೆದದ್ದು ಬಾಲಗೋಪಾಲನನು. 'ಅದ್ಭುತ !'
ಎಂದವನ ತಂದೆ ಹಿರಿಶಿಲ್ಪಿಯೇ ಬೆರಗಾದ.
ಮಗನಿಗೋ ಒಳಗೊಳಗೇ ಕೊರಗು. ಎಳೆದುಟಿಯನ್ನು
ಎಷ್ಟೆಷ್ಟು ಕಡೆದರೂ ನಗುವಿಲ್ಲ. ಯಾವುದೋ
ನೋವು ಮುಖದಗಲಕ್ಕು. ಹುಬ್ಬುಗಳ ತೀಡಿದರೆ
ತೀಡಿದರೆಕ್ಷಣದಲ್ಲೆ ಮತ್ತೆ ನೋವಿನ ಗಂಟು.
ಸೋತೆ ನಾನೆಂದು ಕಿರಿಶಿಲ್ಪಿ ನಾಚಿಕೆಯಿಂದ
ನುಡಿದ ನಡುಗುವ ಸಣ್ಣದನಿಯಲ್ಲಿ ತಲೆಬಾಗಿ.
ಹಿರಿಯ ಕಿರಿಯನ ಬೆನ್ನ ಮೃದುವಾಗಿ ತಟ್ಟಿದ.
ಇರುಳು. ಇಬ್ಬರೆ. ಸಣ್ಣದೀಪ. ಕಿರು ಉಳಿಯನ್ನು
ಹಿರಿಶಿಲ್ಪಿ ವಿಗ್ರಹದ ಬಗಲಲ್ಲಿ ನವುರಾಗಿ...
ನವುರಾಗಿ... ಆಡಿಸಿದ. ಫಕ್ಕೆಂದು ಒಮ್ಮೆಗೇ
ನಕ್ಕದ್ದು ಯಾರು? ಅರಳಿವೆ ಮೂರು ಮುಗಳು ನಗೆ!

ಎಚ್.ಎಸ್ ಶಿವಪ್ರಕಾಶ್

ದೆಮಾಕ್ರಿತೂಸ್‌ನ ಸೇಬು

ಕ್ರಿ. ಪೂ. ೬೦೦; ಅಯೋನಿಯಾ ದ್ವೀಪ:
ಹುಟ್ಟಾ ತತ್ವಜ್ಞಾನಿ ದೆಮಾಕ್ರಿತೂಸ್

ಕೈಯಲ್ಲಿ ಒಂದು ಸೇಬು ಹಿಡಕೊಂಡು
ಒಂದೇ ಸವನೆ ಧ್ಯಾನಿಸುತ್ತಿದ್ದ:
'ಎಷ್ಟು ಚೂರು ಮಾಡಬಹುದು ಈ ಸೇಬಿನಿಂದ?
ಎಷ್ಟು ಇರಬಹುದು ಆ ಚೂರುಗಳ ಸಂಖ್ಯೆ?
ಆ ಸಂಖ್ಯೆ
ಪರಿಮಿತವೋ? ಅಪರಿಮಿತವೋ?'
ಈ ಅಪರಿಮಿತ ಪ್ರಶ್ನೆಗೆ
ಪರಿಹಾರ ಸದಾ ಹುಡುಕುತ್ತಲೇ ಇದ್ದು
ವಿಫಲನಾಗಿ ಸತ್ತಾಗ
ಯಾವ ಫಲವನ್ನೂ ತಿಂದಿರಲಿಲ್ಲ ಆತ

ಅವನ ಮುಂದಿನ ಕತೆ
ಒಲಿಂಪಸ್‌ನಲ್ಲಿ ಜೆಯಸ್‌ನ ಒಡ್ಡೋಲಗದಲ್ಲಿ;
ಆ ಪ್ರಶ್ನೆಯಲ್ಲಿ ತಲ್ಲೀನನಾಗಿ
ಅಲ್ಲಿ ಬಂದಾಗ ದೆಮಾಕ್ರೂತಸ್
ಕೂಗಿ ಹೇಳಿದ ವಜ್ರಧಾರಿ ಜೆಯಸ್-
'ದಬ್ಬಿ ಆ ಮೂರ್ಖನನ್ನು ಹೊರಗೆ!'

ಯಾಕೆ ಎಂದು ಕೇಳಲಾಗದಷ್ಟು
ಬೆಬ್ಬರಗಾಗಿದ್ದ ಆ ತತ್ತ್ವಜ್ಞಾನಿಗೆ
ಮತ್ತೆ ಗುಡುಗಿ ಹೇಳಿದ:
'ಮೂರ್ಖ, ಸೇಬು ಹಣ್ಣಿರುವುದು ಹಾಗೆ ಯೋಚಿಸುವುದಕ್ಕಲ್ಲ
ತಿನ್ನುವುದಕ್ಕೆ'

ತಂದೆ ಮತ್ತು ಮಗ

ತಂದೆ ಮಗನನು ಕೈ ಹಿಡಿದು ನಡೆಸುವನು
ನಗುವ ನಂದನದಲ್ಲಿ ಕೊರಕಲಲ್ಲಿ
ಮುಂದೆ ಹೊಗೆ ನಗರ: ಅಲ್ಲಿಯೂ ಕೈಬಿಡದೆ
ಎಂದೆಂದು ಕಾಯುವನು ಗಲ್ಲಿಯಲ್ಲಿ.

ತಾಯಂಥ ತೋಪುಗಳ ನೆರಳಲ್ಲಿ ಹೂವುಗಳ
ಪಕಳೆ ಪಕಳೆ ಕಿತ್ತು ಚೆಲ್ಲವರಿದ

ಹಾದಿ ತೋರುವ ದೆಸೆಗೆ ನೋಟ ನೆಡಿಸಿದ
ಆಮೇಲೆ ಅತ್ತಿತ್ತ ನೋಟಗಳು ಮನ್ನಾ ಅಂದ

ದಟ್ಟ ಹಲಸಿನ ಮರದ ಬುಡದಲ್ಲಿ ಸತ್ತಿದ್ದ
ಹೆಬ್ಬಾವುಗಳ ತೋರಿ ಬೆಚ್ಚಿಸಿದನು
ಚೆಲ್ಲಿದ್ದ ಅಂಗನೆಯರಂಗರಚನಾಶಾಸ್ತ್ರ ಕಲಿಸಿ
ಬೆತ್ತಗಳಿಂದ ಶಿಕ್ಷಿಸಿದನು

ಜೇನು ದುಂಬಿಗಳನ್ನು ಮಗನತ್ತ ಛೂ ಬಿಟ್ಟು
ಏನೂ ಆಗದಹಾಗೆ ತಲೆಗಾಯ್ದನು
ನಿನ್ನ ಕಣ್ಣಿಗೆ ಮಬ್ಬು ಬಂತೆಂದು ಕನ್ನಡಕ
ರೋಮ ಕೂಪಗಳಲ್ಲಿ ಧರಿಸೆಂದನು

ಮೈಯೆಲ್ಲ ಕಣ್ಣಾದ ಮಗನಿಗೆಲ್ಲೆಲ್ಲೂ ಸೊರಗಿ
ಸಾಯುವ ತಂದೆ ಮುಂದೆ ಬಂದ
ಕೈಯಾರೆ ಕೊಂದ ಮಗ ತನ್ನ ಹೆತ್ತವನನ್ನ
ಎಲ್ಲಿ ನೋಡಿದರಲ್ಲಿ ಕಡಿದ ರುಂಡ

ಮಗನು ತಂದೆಯ ತಿಂದು ತಂದೆಯೇ ತಾನಾಗಿ
ನಗುವ ನಂದನದಲ್ಲಿ ಕೊರಕಲಲ್ಲಿ
ಭುಗಿಲೆದ್ದ ನಗರದಲ್ಲಿ ಗಗನದಲ್ಲಿ ಮಗನ
ಕೈಹಿಡಿದು ನಡೆಸುವನು ಹಿಂದಕೆಲ್ಲಿ?

ಬಿ.ಆರ್ ಲಕ್ಷ್ಮಣರಾವ್

ಏನೀ ಅದ್ಭುತವೇ!

ಏನೀ ಅದ್ಭುತವೇ, ಗೆಳತಿ
ಎಂಥಾ ಅದ್ಭುತವೇ!

ನಾನೇನು ಮಹಾ ಚೆಲುವಿಯೆ? ಅಲ್ಲ
ಆಸ್ತಿಪಾಸ್ತಿಯೆ? ಒಡವೆಯೆ? ಇಲ್ಲ

ಆದರೂ ಈ ಚೆಲುವ,
ಅದೇಕೋ ಕಾಣೆ, ನನ್ನೆ ಪ್ರೀತಿಸಿ
ತಂದೆ ತಾಯಿ ಎಲ್ಲರನೂ ವಿರೋಧಿಸಿ
ಮದುವೆಯಾಧನಲ್ಲ!
– ಏನೀ ಅದ್ಭುತವೇ!

ನೆರೆಮನೆಯಲ್ಲಿದೆ ಒಂದು ಹೆಂಗಸು
ಮಾತು ಮಾತಿಗೂ ಹಂಗಿಸು ಭಂಗಿಸು
ಇದೇ ಜಗಳಗಂಟಿ,
ನನಗೆ ಬಂದಾಗ ಹೆರಿಗೆಯ ಬೇನೆ
ಅಕ್ಕನಂತೆ ಆಸ್ಪತ್ರೆಗೆ ತಾನೇ
ಓಡಾಡಿದಳಲ್ಲ
–ಏನೀ ಅದ್ಭುತವೇ!

ಉಳಿದೀತು ಎಷ್ಟುದಿನ ಪ್ರಾಯದಕಾವು?
ಎಲ್ಲರಂತೀಗ ಗಂಡ ಹೆಂಡತಿ ನಾವು
ಇದ್ದದ್ದೇ ತಾಪತ್ರಯ
ಆದರೆ ಇಂದಿಗೂ ನನ್ನ ಮುಡಿಯಲ್ಲಿ ಮಲ್ಲಿಗೆ
ಗಂಡನ ದಣಿದ ಮುಖದಲ್ಲಿ ಮುಗುಳ್ನಗೆ
ಉಳಿದೇ ಇವೆಯಲ್ಲ!
–ಏನೀ ಅದ್ಭುತವೇ!

ಈ ನಗರವೋ ಒಂದು ಚಕ್ರವ್ಯೂಹ
ಯಾವ ಕ್ಷಣ ಹೇಗೋ! ಭೀತಿ, ಸಂದೇಹ
ಆದರೂ ಈ ವರೆಗೆ
ಪ್ರತಿಸಂಜೆ ಗಂಡ ಫ್ಯಾಕ್ಟರಿಯಿಂದ
ಮಕ್ಕಳು ಸುರಕ್ಷಿತ ಶಾಲೆಗಳಿಂದ
ಹಿಂದಿರುಗುತ್ತಿರುವರಲ್ಲ!
–ಏನೀ ಅದ್ಭುತವೇ!
ಮೊನ್ನೆ ಬಿರುಗಾಳಿ ಅದೆಂಥಾ ಜೋರು!
ಉರುಳಿತಲ್ಲ ಹೆಮ್ಮರ ಹತ್ತಾರು!
ಆದರೂ ಜಗ್ಗದೆ,

ಈ ಪುಟ್ಟ ಮನೆಯ ತಗಡಿನ ಸೂರು
ಬಟಾ ಬಯಲಲ್ಲಿ ದೇವರ ತೇರು
ನಿಂತೇ ಇವೆಯಲ್ಲ !

-ಏನೀ ಅದ್ಭುತವೇ !

ಮಾದರಿ

ಉಪ್ಪು ನನಗೆ, ನೀರು ನಿಮಗಿರಲಿ
ಎನ್ನುವ ಸಾಗರವೇ,
ಕಾರ್ಮುಗಿಲಿನ ಆಗರವೇ,
ತಡೆದು ಮುಗಿಲನ್ನು, ಇಳೆಗೆ ಮಳೆಯನ್ನು
ಸುರಿಸುವ ಓ ಗಿರಿಯೇ,
ಔದಾರ್ಯದ ಐಸಿರಿಯೇ,
ವಂದನೆ ನಿಮಗೆ
ನೀವೇ ಮಾದರಿ ನಮಗೆ

ನನಗೆ ಇಂಗಾಲ, ನಿಮಗೆ ತಂಗಾಳಿ
ಎನ್ನುವ ಓ ಮರವೇ,
ಹಸುರಿನ ಚಾಮರವೇ
ಹರಿದೆಡೆ ದವಸ, ಬಿದ್ದೆಡೆ ಬೆಳಕು
ನೀಡುವ ಓ ನದಿಯೇ,
ಚೈತನ್ಯದ ನಿಧಿಯೇ,
ವಂದನೆ ನಿಮಗೆ
ನೀವೇ ಮಾದರಿ ನಮಗೆ
ಹುಲಿ ಜಿಂಕೆಯಲ್ಲಿ ಭೇದವನೆಣಿಸದೆ
ಪೊರೆಯುವ ಕಾಡುಗಳೇ,
ಸಮತೋಲದ ಬೀಡುಗಳೇ,
ಅವಚಿ ಬುವಿಯನ್ನು ಕವಚದಂತೆ
ಕಾಪಾಡುವ ಮಾರುತವೇ,
ಜೀವದ ಅಮೃತವೇ,
ವಂದನೆ ನಿಮಗೆ
ನೀವೇ ಮಾದರಿ ನಮಗೆ

ಸುಬ್ರಾಯ ಚೊಕ್ಕಾಡಿ

ಒಂದು ಮರ...

ಗಾಳಿಯನ್ನು ಸೀಳಿನಿಂತ
ಒಂದು ಮರ
ಮರದ ಮೈಯ ಅಮರಿನಿಂತ
ಎಲೆಯ ಬಲೆ
ಬಲೆಯ ಕೊನೆಯ ಎಲೆಯ ನಡುವೆ
ಒಂದು ಹೂವು
ಹೂವ ನಡುವೆ ಹೂವಿಗಿಂತ
ಹಗುರ ಹಕ್ಕಿ.

ಹಕ್ಕಿ ಕೊರಳು ಉಕ್ಕಿಬಂದ
ಒಂದು ಹಾಡು
ಹಾಡಿನೊಳಗೆ ಕರಗಿ ಹೋದ
ನೂರು ಮನಸು
ಮನಸಿನೋವರಿಯಲಿ ತೆರೆದ
ಹಲವು ಕನಸು
ಕನಸಿನಲೆಯ ಮೇಲೆ ತೇಲಿ
ಬಂದ ನೌಕೆ.

ನೌಕೆಯನ್ನು ತುಂಬಿನಿಂತ
ಜೀವರಾಶಿ
ಬೀಜ-ಭೂಮಿ ನಡುವೆ ಮಾತು
ಮೌನ ಭಾಷೆ
ಹೂವು ಹಕ್ಕಿ ಹಾಡು... ಬೇರೆಯೆ
ಎಲ್ಲಿ ಪಾರ?
ಕಣಸು ಫಲಿಸಿದಂತೆ ಈಗ
ಒಂದು ಮರ?

ಒಂದು ಹನಿ ನೀರು

ಗಾಢ ಆವರಿಸಿಕೊಂಡ
ನಿಗೂಢ ನೀರವ
ಅರಿವಿನಿರವೇ ಇರದ
ಮೌನ-ಬ್ರಹ್ಮಾಂಡ
ದಲ್ಲಿ ಮುಳುಗಿದ ಪೃಥ್ವಿ

ಕಾಲಾತೀತದತ್ತ ನಿರಂತರ
ಚಲಿಸಿದಂತೆ
ಲಕ್ಷ ನಕ್ಷತ್ರಗಳ ಮೀಟಿದಂತೆ
ನೀಹಾರಿಕೆಗಳ ದಾಟಿದಂತೆ
ನಡುವೆ
ಹಠಾತ್ತನೆ ಉರುಳಿಬಿತ್ತು
ಠಪ್ಪನೆ ಒಂದು, ಒಂದೇ ಒಂದು
ಹನಿ ನೀರು
ಥಟ್ಟನೆಚ್ಚರ
ದಿಗ್ಭ್ರಮೆ- ಮೌನದ ಮೊಟ್ಟೆಯೊಡೆದಂತೆ
ಕ್ಷಣದ ಸ್ತಬ್ಧತೆ- ಬಳಿಕ
ನೂರಾರು ಸದ್ದಿನ ಮರಿಗಳು ಹೊರ ಹರಿದಂತೆ
ಒಂದೊಂದೇ ಇಂದ್ರಿಯಗಮ್ಯ
ಕಲಮಲದ ಆರಂಭ-
ಗದ್ದಲದ ರೆಕ್ಕೆಗಳ ಚಿಮ್ಮು

ಒಂದೊಂದಾಗಿ
ಮೃಣ್ಮಯವಾಸ್ತವದೆದುರು
ಬಯಲಾಯ್ತೆಲ್ಲ

ಎಲ್ಲ ಎಲ್ಲ
ಒಂದು ಹನಿ
ನೀರಿನಿಂದ !

ಸ. ಉಷಾ

ಈ ನೆಲದ ಹಾಡು

ನನ್ನ ತಾಯೆಂದು ಬಾಯೆಂದು
ಕೂಡ ಕೂಡಾ ಕರೆದು
ಮೊಲೆಹೀರಿ ಬೆಳೆದ
ಕೃಷ್ಣ ಸಂತಾನವೇ
ಕಾಣಲಿಲ್ಲ ನಿಮಗೆ ಮೊಲೆತೊಡೆಗಳ
ಹೊರತಾಗಿ ಇಲ್ಲೊಂದು
ನಸುಗೆಂಪು ಆಸೆಗಳ ಹೊತ್ತ ಹೃದಯ ಉಂಟೆಂದು
ತಾಯೆಂದು ಕರೆದವಳ
ಮೇಲೆರಗಿ ಸ್ಖಲಿಸಿ
ಕೊರಗುತ್ತೀರಿ ಮೈಯೆಲ್ಲ ಹೆರಿಗೆ ಮನೆ
ಮಸಣದ ಪೂತನಿಯೆಂದು

ನನ್ನ ತೊಡೆತುಂಬ ನೂರಾರು
ನೇಗಿಲಗಾಯ
ನಾನು ನನ್ನಮ್ಮ ಅವಳಮ್ಮ ಅಮ್ಮಂದಿರು
ಎಲ್ಲರನು ಮೀರಿಸಿದ ದೊಡ್ಡಮ್ಮ ಕೂಡಾ
ಸಹಿಸಿ ಒಣಗಿದ ಗಾಯ
ಗಂಡನೋ ಮಗನೋ ತಿಳಿಯದ
ಹೊಂದಾ ನೇಗಿಲಸಾಲು
ಈ ನಡುವೆ ಕಣ್ಣ ಬೆಳಕಿಗೇ
ಬೆಂಕಿ ಕಾಯಿಸುವ
ಹಾದರದ ಕಣ್ಣು ನೂರಾರು
ಮತ್ತೆ ಈ ನೆಲದ ಸಂಗ ತೊರೆದು
ಗುಹೆ ಗಹ್ವರಗಳ ಸ್ವಯಂಪ್ರಭೆಯಲ್ಲಿ
ಬದುಕುವ ಒಣ ಧಿಮಾಕು
ಹೋಗಯ್ಯ ಹೋಗು
ಎಲ್ಲಿ ಹೋಗುತ್ತೀ ನನಗೆ ಗೊತ್ತಿಲ್ಲವೇ
ನನ್ನೆದೆಗೆ ಬೇರಿಳಿದ ಕಾಲು ನಿನ್ನದು

ನನ್ನನ್ನೂ ಕರೆಯುತ್ತೆ ಕಾಣಿರೋ
ಆ ನೀಲ ಆಗಸದ
ನೂರಾರು ಬಣ್ಣಗಳು
ಹಾರೋ ಹಕ್ಕಿಗಳು
ಸುಮ್ಮನೇ ಕೊಸೆಯುತ್ತೀರಿ
ಕೆಸರು ಮಣ್ಣು ಮಾಯೆಯೆಂದು
ಹನಿ ತುಂಬಿ ಒಜೆಯಾಗಿ
ಮೋಡಗಳು ತಡಕಳ್ಳಲಾರದೇ
ಸುರಿದ ಮಹಾಪೂರವೆಲ್ಲ
ನೆಲದೊಡಲ ತಾಪಕ್ಕೆ
ಒಣಗಿ ಜಳ ಜಳಾ
ಕಾವ ಪವಾಡ
ಎಂದೂ ಕಂಡಿಲವೇ
ಹೇಳು ಗೆಳೆಯ
ನಿನಗನಿಸುವುದಿಲ್ಲವೇ
ನಿನ್ನ ಕನಸಿಗೆ ನಾನೂ
ಬಣ್ಣ ತರಬಹುದೆಂದು
ನನ್ನ ಕನಸಿನ ಹಾಡು
ಕೇಳಿ
ನೀ ಹಗುರಾಗಬಹುದೆಂದು
ಭುಜಕ್ಕೆ ಭುಜಹಚ್ಚಿ
ಕಾಡದಾರಿಗಳನೆಲ್ಲ
ನಾಡ ಬೀದಿಗಳ ಮಾಡಬಹುದೆಂದು.

ಅಯ್ಯೊ ಪುಕ್ಕ
ಮಲಗಿ ಧರಿಸಿ
ಹಲವುಳಿದು ಹೆರುವ ಮಸಣ
ಕಂಡು ಗದಗದ ನಡುಗಿ
ಹೂವಿಟ್ಟು ಪೂಜಿಸಿ
ದೂರಕ್ಕೇ ಕೈಮುಗಿದು
ಓಡಿ ಹೋಗುತ್ತೀ

ಹಾಗಿಲ್ಲ
ನನ್ನದನಿ ಉಸಿರಾಟ ಕಿರಿಚಾಟ
ಯಾವುದೂ ಕೇಳದೇ
ಕೆಡವಿ ವಿಜೃಂಭಿಸುತ್ತೀ

ಬೇಡಯ್ಯ
ನಿನ್ನ ಸಹಸ್ರಶೀರ್ಷ
ಸಹಸ್ರಪಾದ
ಸಹಸ್ರ ಬಾಹುಗಳನೆಲ್ಲ
ಕಿತ್ತಿಟ್ಟು ಬಣ್ಣ ಅಳಿಸಿಕೊಂಡು
ಬಾ ಗೆಳೆಯ
ಮೈ ಮುಟ್ಟಿ ಮನಮುಟ್ಟಿ
ಒಮ್ಮೆಯಾದರು ಮುಟ್ಟು
ಮರೆ ನಿನ್ನ ಹಳೆರೋಗ ಒಂದು ಕ್ಷಣ
ಹಡಗು ಬಂದರು
ಸವಿಗನಸುಗಳ
ನೆನೆಯೊ ನನ್ನೊಡನೆ
ನದಿಯ ಜಳಜಳ
ಬಿಸಿಲ ಕಾವು
ಅನ್ನವಿಲ್ಲದ ನೋವು
ಗರ್ಭಪಾತದ ರಕ್ತ
ಒಂದು ಕ್ಷಣ ಈ
ನೆಲದ ಕಣ್ಣೀರನಳಿಸಲು
ಕೈಯನಾದರೂ ಎತ್ತೋಣ.

ಸವಿತಾ ನಾಗಭೂಷಣ

ಹಾಡೆ.. ಹನುಮವ್ವಾ...

ಹಾಡೆ ಹನುಮವ್ವಾ...
ಕತ್ತಲೆ ಒಳಗೆ ಕರಗಿದೆ ಕೋಗಿಲೆ
ಬೆಳಕಿಗೆ ತಾರವ್ವ

ಹಳ್ಳಾ ಕೊಳ್ಳಾ
ಹರಿಯೊ ಹಾಗೆ..
ಮಾವೂ ಬೇವೂ
ಚಿಗಿಯೊ ಹಾಗೆ..
ರಂಜ ಸುರಗಿ
ಉದುರೋ ಹಾಗೆ...
ತಾಳೆ ಬಾಳೆ
ತೂಗೊ ಹಾಗೆ
ಜಾಜಿ ಮಲ್ಲಿಗೆ
ಬಿರಿಯೊ ಹಾಗೆ...
ಹಾಡೆ ಹನುಮವ್ವಾ...
ಕತ್ತಲೆ ಒಳಗೆ ಕರಗಿದೆ ಕೋಗಿಲೆ
ಬೆಳಕಿಗೆ ತಾರವ್ವ

ಕಾಳಿಯ ಕೆಚ್ಚಲು
ತುಂಬೊ ಹಾಗೆ..
ಪಾತರಗಿತ್ತಿ
ಕುಣಿಯೋ ಹಾಗೆ..
ಆಡೋ ನವಿಲು
ನಲಿಯೊ ಹಾಗೆ..
ಹಕ್ಕಿ ಚುಕ್ಕಿ
ಮರಳೊ ಹಾಗೆ..
ಹಗಲು ರಾತ್ರಿ
ಉರುಳೊ ಹಾಗೆ..
ಹಾಡೆ ಹನುಮವ್ವಾ..
ಕತ್ತಲ ಒಳಗೆ ಕರಗಿದೆ ಕೋಗಿಲೆ
ಬೆಳಕಿಗೆ ತಾರವ್ವ

ಸಾಲದ ಬಡ್ಡಿ
ಸೊರಗೊ ಹಾಗೆ...
ಕಾಳು ಬೇಳೆ
ಸುರಿಯೊ ಹಾಗೆ...

ಕಟ್ಟಿಗೆ-ಕೆಂಡ
ಉರಿಯೊ ಹಾಗೆ..
ನೀರೂ-ಪಾರೂ
ಕುದಿಯೊ ಹಾಗೆ..
ಹಸಿವು ದಾಹ
ನೀಗೊ ಹಾಗೆ...
ಹಾಡೆ ಹನುಮವ್ವಾ..
ಕತ್ತಲ ಒಳಗೆ ಕರಗಿದೆ ಕೋಗಿಲೆ
ಬೆಳಕಿಗೆ ತಾರವ್ವ

ಕಾಸಿನ ಕಾಲು
ನಡುಗೊ ಹಾಗೆ..
ಗರುವದ ಗೋಣು
ಮುರಿಯೊ ಹಾಗೆ..
ಸೇಡೂ-ಕೇಡೂ
ಕರಗೊ ಹಾಗೆ..
ಬೇನೆ-ಬೇಸರ
ಕಳೆಯೊ ಹಾಗೆ..
ಮೇಲು-ಕೀಳು
ಅಳಿಯೊ ಹಾಗೆ..
ಹಾಡೆ ಹನುಮವ್ವಾ..
ಕತ್ತಲ ಒಳಗೆ ಕರಗಿದೆ ಕೋಗಿಲೆ
ಬೆಳಕಿಗೆ ತಾರವ್ವ

ಪ್ರೇಮ-ಕರುಣೆ
ಉಕ್ಕೊ ಹಾಗೆ..
ಕನಸೊ ಕಣ್ಣು
ತೆರೆಯೊ ಹಾಗೆ..
ದೇಹ-ಜೀವ
ಮಾಗೊ ಹಾಗೆ..
ಮುಕ್ಕಣ್ಣನಿಗೆ

ಮುಟ್ಟೊ ಹಾಗೆ..

ಹಾಡೆ ಹನುಮವ್ವಾ..
ಹಾಡ ಕೇಳಿ ಕಣ್ಣಾ ಮುಚ್ಚುವೆ
ಹಾಡಿನ ಹುಚ್ಚವ್ವಾ..

ಹಾಡ ಕೇಳಿ ಕಣ್ಣಾ ಮುಚ್ಚುವೆ
ಹಾಡಿನ ಹಚ್ಚವ್ವಾ..

ಮಾತನಾಡಿಸಬೇಕು..

ಹೊರಳುತ್ತಿರುವ ಭೂಮಿಯನ್ನೂ
ಉರುಳುತ್ತಿರುವ ಸಾಗರವನ್ನೂ
ಮಾತನಾಡಿಸಬೇಕು.

ಉರಿಯುತ್ತಿರುವ ಬೆಂಕಿಯನ್ನೂ
ಮೊರೆಯುತ್ತಿರುವ ಗಾಳಿಯನ್ನೂ
ಮಾತನಾಡಿಸಬೇಕು.

ಮರಳುತ್ತಿರುವ ಹಕ್ಕಿಯನ್ನೂ
ಅರಳುತ್ತಿರುವ ಹೂವನ್ನೂ
ಮಾತನಾಡಿಸಬೇಕು.

ಚಿಗುರುತ್ತಿರುವ ಮರವನ್ನೂ
ಕರಗುತ್ತಿರುವ ಮಂಜನ್ನೂ
ಮಾತನಾಡಿಸಬೇಕು.

ಆಕಾಶ-ಕಾಯದೊಳಗೆ
ಅವಿನಾಶಿ ಸೂರ್ಯ!
ದೇವರೇ... ಇವರದ್ದು ಯಾವ ಭಾಷೆ?
ಎಂದಾದರೂ ಕೈಗೂಡುವುದೇ ಆಶೆ?

ಗಗನ ಚುಕ್ಕಿ-ಪರ್ಣಕುಟಿ

ಎಂಥ ಗೂಡಿದು ಸಖೀ
ದ್ರಾಕ್ಷಾಸುಪರ್ಣ ಕುಟಿ!
ತಗ್ಗು ಮಾಡು ನೋಡು
ಬಗ್ಗು ಕಿಟಿಕಿ.

ಸಣ್ಣ ಕ್ಷಣಗಳ ಅನ್ನ
ಬಣ್ಣ ಮಾಡದ ದುಡಿಮೆ
ಕರಿವರೆದ ಜಗಲಿ ಸಂಜೆ
.....
ಘನ ಶ್ಯಾಮ ಗಗನ ಬಲು ದೂರದಲಿ
ಒಂದು ಚುಕ್ಕಿ!
ರೆಕ್ಕೆ ಬಿಚ್ಚಿ!

ನಿಲ್ಲು ನಿಲ್ಲೆಲೆ ಚುಕ್ಕಿ
ಒಂದೆ ನಿಮಿಷ
ನಿಂತಲ್ಲೆ ನೀನು-ಆಗಸ!

ರಂಗೋಲಿ ಗುರುತಿಲ್ಲ
ರಂಗಾಂತಸ್ಥಲವಿಲ್ಲ
ರೆಕ್ಕೆ ಹರಡಲು ಎಲ್ಲೂ ಜಾಗವಿಲ್ಲ
ತೇಪೆ ಚಾವಡಿಯಲ್ಲಿ
ಹರಕು ಚಾಪೆಯ ಸುರುಳಿ
ನಿನ್ನೆಯರಳಿದ ಹೂವು-ಎಲೆಯ ಮರೆಯಲ್ಲಿ

.....!
ಪ್ರತ್ಯಕ್ಷ ಆ ಚುಕ್ಕಿ!
ನಿಂತಲ್ಲೆ ನಿಲ್ಲದೆ
ಸೀದ-ಬಾಗಿಲ ಬಳಿ!
ಎಲ್ಲಿ ಕೂಡಿಸಲೆ?

ನಿಲ್ಲು ನಿಲ್ಲೆಲೆ ಚುಕ್ಕಿ
ಒಂದೆ ನಿಮಿಷ
ಮುಗಿಸಲಿದೆ ಬೇಗ ಕೆಲ
ವಿಶೇಷ ಕೆಲಸ

* * *

ಸೆಗಣಿ ಸಾರಿಸಿ ಒರೆಸಿ ಶುದ್ಧಗೈದೆ
ಒಲೆ ಹಚ್ಚಿ ನೈವೇದ್ಯ
ಹೂ ಕಟ್ಟುತಿದ್ದಂತೆ
ಬುಡ ಹತ್ತಿದೆ!

ಮಡಿಯುಡಲು ತಿಳಿದಿಲ್ಲ
ತಲೆ ಮಿಂದು ಬಂದೆ
ಸಾಲದೆ?

ಸ್ತೋತ್ರ ತಂತ್ರಗಳೆಲ್ಲ
ಮುಗಿದ ಕೈಯೊಳಗೆ
ಎವೆ ಮುಚ್ಚಿದೆ
ಹೇಳಿಕೊಡು ನೀನೇ
ಮಂತ್ರ ಕಾಲೋಚಿತ
ಮಿನುಮಿನುಗುವ ಎಲೆ ನಕ್ಷತ್ರ!

* * *

ಮುಚ್ಚಿದ್ದ ಎವೆಯೊಳಗೆ ದೀಪ ಹಚ್ಚಿ
ಆ ಅದೇ ಚುಕ್ಕಿ
ನಿಂತಿದೆ!
ಕಣ್ಣಲ್ಲಿ ಬೆರೆವ ಅದ್ವೈತ ರೆಕ್ಕೆ ಛತ್ರಿ ಬಿಚ್ಚಿ
ಋತಂಭರಾ ಪ್ರಜ್ಞಸ್ಮಿತ
ಇಂತಿದೆ-
ಯೇ....? ಯೇ.....
!ಚುಕ್ಕಿ!
ನಿಲ್ಲುನಿಲ್ಲೆಲೆ ಇಲ್ಲೆ ಇಲ್ಲೇ
ನನ್ನ ಆಗಸ ನೀನು
ನಿಂತಲ್ಲೇ

* * *

ಬಂದೆಯಾ ಪ್ರಶ್ನಸ್ಮಿತ
ಈ ಎರಡೆಲೆಯ ಏಕಾಕಿ ಕುಟಿಗೆ?
ತೇಪೆ ಚಾವಡಿಯಲ್ಲಿ
ಇಲಿ ಹರಿದ ಚಾಪೆ ಹೊಲಿದು ಹಾಸಿದ್ದೇನೆ ಬಾ
ಕೂಡು-ಸುಪರ್ಣದ ಹೂ ಸಹಜ
ಬಾಡಿದೆ ಕೊಂಚ ಗೋಡೆಯಂಚಿಗೆ ಎಳೆದ ಸೇಡಿ
ಕಾವಿಯ ಗೀಟು

ವಾರೆಯಾಗಿದ್ದು ಎಲ್ಲ ಕಂಡೆಯ?
ಕಾಣದಿರು ಚೆನ್ನಾಗಿದೆ.
ಹೇಗಿವೆ ಗಗನಾಂತರ?
ಅಲ್ಲೆಲ್ಲ ಹೇಗೆ ಹೊಳೆ ಬೆಳೆ
ಹುಬ್ಬೇರಿಸಿದ ಮೋಡ ಕತ್ತಲೆ?
ಸುಖವೆ ಸಂಚಾರ?

ನಿರ್ವಿಚಾರದ ಚುಕ್ಕಿ
ಇನ್ನಷ್ಟು ಇನ್ನಷ್ಟು ಚುಕ್ಕಿಯಾಗಿ
ನಿರ್ಗುಣಿಯಾಗಿ ಮುನಿಯಾಗಿ
ಅಷ್ಟಪಟಿ ಮಣಿಯಾಗಿ-ಶೂನ್ಯ
ಕೋರೈಸಿತು!
ಬೆರಗು ಬಾಯ್ಕಳೆದಾಗ
ಒಳಗಿಳಿಯಿತು!

* * *

ನಾ ಚುಕ್ಕಿಯಾದೆನೆ
ಚುಕ್ಕಿ ನಾನಾಯಿತೋ
...ನಿನ್ನಲ್ಲೇ ಇರಲಿ ಸಖೀ
ನನ್ನ ಒಡಪು

ನಿಂತಲ್ಲಿ ನಿಲ್ಲದಿದು ಗಹನ ಗಗನದ ದಾರಿ
ಪೂರ್ಣವಾಗದೆ ಹೀಗೇ ಸಾಗುತಿರಬೇಕು
ಪರ್ಣಕುಟಿ ಇರುಳಿನ ಕಂದೀಲು ಕರೆಯುತಿದೆ
ಅಲ್ಲಿ ಋಣ ಬಾಕಿ ಇದೆ ಸಲ್ಲ ಬೇಕು!

ಸಧ್ಯಕ್ಕಿಷ್ಟೇ-
ತಿಳಿಸು
ಕರಿವರೆದ ಜಗಲಿಗೆ
ಎಲ್ಲ ನೆನಪು

ಎಸ್. ಮಂಜುನಾಥ

ಪೊರಕೆ

ಈಗ ಅವನ ಮುಷ್ಟಿ ಗಪ್ಪನೆ ಹಿಡಿದಿದೆ
ಪೊರಕೆಯ ದುಂಡಗಿನ ಉದ್ದ ಕೋಲನ್ನು

ಸುತ್ತ ಬಿಗಿದಿರುವ ಓಣಿ ಕತ್ತಲು
ಒತ್ತಿ ಮಡಿಸಿದೆ ಅವನ ಬೆರಳುಗಳನ್ನು

ಎಷ್ಟು ಯುಗಗಳು ಎಷ್ಟು ಜನವರ್ಗಗಳು ಎಷ್ಟು ದೇವರುಗಳು
ಈ ಕ್ಷಣ ನೆರೆದು
ನಿರಾಳ ನಿಟ್ಟುಸಿರಿಟ್ಟರು

ಯಾರನ್ನೂ ಮೋಸಗೊಳಿಸಲಿಲ್ಲ ಅವನು
ಕ್ಷಮಿಸಿದಂತೆ ಎಲ್ಲರನೂ

ನಿರ್ಧರಿಸಿ ನಿರ್ದಯದಲ್ಲಿ ಬಲಾತ್ಕರಿಸುವಂತೆ
ಒತ್ತಿ-ಬಿಟ್ಟನು
ಬೆದರಿದ ಪರಿಗೆ ನಗುವಾಗಿ ಸಿಡಿದು

ಒಲಿದು ಬಂದಿತು ಅದು ಅವನ ಹೆಣ್ಣಂತೆ
ಹಿಂಬಾಲಿಸಿತು ಅವನ ಸೋಗೆ ನವಿಲಂತೆ

ಭವದ ಕಕ್ಕಸದ ಕೆಸರು ನೀರಲ್ಲಿ
ಶಾಂತ ಹುಟ್ಟಂತಾಯಿತಯ್ಯ ಅದು ಅವನ ಕೈಯಲ್ಲಿ

ರೆಕ್ಕೆಯಂತಾಯಿತದು ಅವನು ಹಂಸದಂತಾದನು
ಈ ನರಕ ಸರೋವರದಲ್ಲಿ
ಅದು ಅವನದೇ ಸಹಜ ಕೈಯಂತಾಯಿತು

ವಸ್ತು ಸ್ತುತಿ

ವಸ್ತುಗಳಿಗೆ ನಮಸ್ಕಾರ
ಅವು ನಮ್ಮ ಹೃದಯವನು ಕೊರಡಾಗಿಸದಿರಲಿ
ಮೂಕ ಶಾಪ ಜಡತೆ ಬೆಪ್ಪು ನಿದ್ರೆ ಕೊಟ್ಟು

ನಾಣ್ಯದ ಥಳ ಥಳ ರಾಶಿಗೆ ರಾಶಿ ನಮಸ್ಕಾರ
ಕೆಣಕದಿರಲಿ ಅಣಕಿಸದಿರಲಿ ಅವು
ನಮ್ಮ ಜೇಬುಗಳಿಂದ ಮಾಯವಾಗಿ ಹೋಗಿ
ಅಂತಃಕರಣದ ಅರ್ಥ ವ್ಯರ್ಥಗೊಳಿಸದಿರಲಿ

ನಿತ್ಯಗರತಿಯರಿಗೆ ದೀರ್ಘದಂಡ ನಮಸ್ಕಾರ
ಅವರ ಹಸಿವೆಯ ಕಣ್ಣು ಹುಚ್ಚು ಪರಿಹಾಸ್ಯದ ಕಣ್ಣು
ಬಡಪಾಯಿ ನಮ್ಮ ಮೇಲೆರಗದಿರಲಿ
ಪ್ರೇಮದ ಕ್ಷೀಣ ಪರಿಮಳದ ಹಾದಿಯತ್ತ
ಕರುಣೆಯಿಟ್ಟು ನಮ್ಮನ್ನು ಕಳುಹಿಸಿಬಿಡಲಿ

ದೆವ್ವಕ್ಕೂ ದೇವರಿಗೂ ಶರಣು, ನಮಸ್ಕಾರ
ಯಾರು ಯಾರೋ ಯಾರಿಗೇನು ಗೊತ್ತು
ಗೊತ್ತೆನುವವನ ಕತ್ತು ಕ್ಷೇಮವಿರಲಿ
ಯಾರೂ ನಮ್ಮನ್ನು ತೊತ್ತಾಗಿಸದಿರಲಿ
ಬದುಕಿರುವಾಗಲೇ ಮಿತ್ತು
ನಮ್ಮನ್ನು ತುತ್ತಾಗಿಸದಿರಲಿ

ಆನಂದ ಝುಂಜರವಾಡ

'ತೃಪ್ತಿ-ರುಚಿ'

ಮನುಷ್ಯ ತೃಪ್ತಿಗಾಗಿ ತಿನ್ನುತ್ತಾನೆ
ರುಚಿಗಾಗಿ ಉಣ್ಣುತ್ತಾನೆ.
ತೃಪ್ತಿ, ಗಾಂಧೀ ಹೇಳೋ ಹಾಗೆ ಅಗತ್ಯ
ರುಚಿ-ಆಶೆ.
ಒಂದು ವೇಳೆ ಈ 'ರುಚಿ'ಯ ಕಲ್ಪನೆ

ಹುಟ್ಟಿರದೆ ಇದ್ದರೆ,
ಮನುಷ್ಯ ಏನನ್ನೂ-
ಬೇಳೀತಿರಲಿಲ್ಲ-ಕೇರತಿರಲಿಲ್ಲ-ಬೀಸತಿರಲಿಲ್ಲ-
ಹುರಿತಿರಲಿಲ್ಲ-ಕರೀತಿರಲಿಲ್ಲ-ಸುಡತಿರಲಿಲ್ಲ-ಬೇಯ್ಸಿತಿರಲಿಲ್ಲ
ಇಷ್ಟು ದೊಡ್ಡ ಪಾಕ-ಸಂಸ್ಕೃತಿ
ಬೆಳೀತಿರಲಿಲ್ಲ.
ಈಗ ನೋಡಿ,
ಇಷ್ಟು ಕ್ರಾಂತಿಗಳ ನಂತರ ಜಗತ್ತಿನಲ್ಲಿ ಎಷ್ಟು ಬದಲಾಗಿದೆ?
ಹೇಗೆ ಸುಡ್ತಾರೆ?
ಹೇಗೆ ಬೇಯ್ಸಿತಾರೆ?
ರುಚಿರುಚಿಯಾಗಿ ದುಂಡು ಟೇಬಲ್ ಮುಂದೆ ಕುಳಿತುಕೊಂಡು
ಹರಿ-ಹರಿದು, ತಿಂತಾರೆ ಈ ಜನ.
ಮನುಷ್ಯನನ್ನ!

ಒಂದು ಮರ

ಒಂದು ಮರ
ನನ್ನ ತೊಟ್ಟಿಲಾಗಿತ್ತು
ಅದಕ್ಕೆ ಯಾರು ನೀರುಣಿಸಿ ಬೆಳೆಸಿದ್ದರೋ ಗೊತ್ತಿಲ್ಲ.
ಒಂದು ಮರ
ನನ್ನ ಚಿತೆಗೆ ಒದಗಲು ಎಲ್ಲೋ ಬೆಳೆಯುತ್ತಿದೆ
ಅದಕ್ಕೆ ಯಾರು ನೀರುಣಿಸುತ್ತಿದ್ದಾರೋ ಗೊತ್ತಿಲ್ಲ.

ಎಲ್ಲರಂತೆ
ನಾನೂ ಕೆಲ ಮರಗಳಿಗೆ ನೀರೆರೆದು ಬೆಳೆಸುತ್ತಿದ್ದೇನೆ.
ಅವು ಯಾರಿಗೆ ಯಾವುದಕ್ಕೆ
ಒದಗುತ್ತವೋ ಗೊತ್ತಿಲ್ಲ.

ದೀಪಾವಳಿ

ನಕ್ಷತ್ರಗಳ ತಂದು ನೇಣಗೇರಿಸಿದವರ
ಮನೆ ಮನೆಗಳಲ್ಲಿ ತೂಗುತ್ತಿರುವ ದೀಪಾವಳಿ

ಮದ್ದಿನ ಮನೆಗಳಲಿ ದುಡಿವ ಮಕ್ಕಳ ಕಣ್ಣುಗಳನ್ನೇ ತುಂಬಿಸಿ ತಂದ
ಪಟಾಕಿಗಳ ಸುಡುವವರೆದೆಯಲ್ಲಿ ಸಿಡಿವ ದೀಪಾವಳಿ.

ಅಹಂಕಾರದ ಗೋಡೆಗಳ ಮೇಲೆ ಹಚ್ಚಿಟ್ಟ ಸಾಲು ಸಾಲು ದೀಪ
ಕತ್ತರಿಸಿ ಬಿದ್ದ ಕಾಡಿಗೆಯಲ್ಲಿ ಬಿಡಿಸಿಟ್ಟ ಚಿತ್ರ ದೀಪಾವಳಿ
ಚಳಿಯಲ್ಲಿ ಮುದುಡಿ ಮಲಗಿದ ನೇಕಾರನೆದೆಗೂಡಲ್ಲಿ
ರೇಶಿಮೆಯುಟ್ಟ ಭಾಗ್ಯದ ಲಕ್ಷ್ಮಿ ಹಚ್ಚದೇ ಉಳಿದ ಖಾಲಿ ಹಣತೆ ದೀಪಾವಳಿ.

ಸುಡುತ್ತಿರುವ ನಗರಗಳ ಸೋಡಿಯಂ ದೀಪಗಳ ಬೆಂಕಿ ನಾಲಿಗೆಯಲ್ಲಿ
ಸೀಯುತ್ತಿರುವ ದರಿದ್ರನಾರಾಯಣನ ಚಿತೆ-ದೀಪಾವಳಿ
ಘಮಘಮಿಸುವ ತಿಂಡಿ, ಸವಿಸವಿಯಾದ ಭಕ್ಷ್ಯಗಳ ಆಹುತಿಕೊಟ್ಟರೂ,
ಆರದ ಹೊಟ್ಟೆಕಿಚ್ಚಿನ ನಿಗಿನಿಗಿ ಕುಂಡದಲಿ ದೀಪಾವಳಿ.

ಮಸೀದೆ-ಮಂದಿರಗಳಲಿ, ಭಾಷೆ-ಬಣ್ಣ-ಗಡಿಗೆರೆಗಳಲಿ
ಧರ್ಮವಿಜ್ಞಾನ-ಗಳ ಪ್ರಭುತ್ವದ ಪತಾಕೆ ಮೆರೆಸುವ ಛಲದ ದೀಪಾವಳಿ
ಟೊಂಗೆಗಳ ಕಡಿವ ಕೊಡಲಿ, ಹೊಳೆಗಳಲಿ ಹರಿಯುವ ರಕ್ತ,
ಪ್ರತಿಬಿಂಬಿಸುತ್ತಿರುವ ಕತ್ತಲೆಗೆ ಕಟ್ಟಿದ ಕನ್ನಡಿಗಳ ಕೋಣೆ ದೀಪಾವಳಿ.

ಜಯಂತ ಕಾಯ್ಕಿಣಿ

ನಿಮಿತ್ತ

ಇನ್ನೂ ತೆರೆಯದ ಅಂಗಡಿಗಳ ಹೊರಗೇ ಕಾದು
ನಿದ್ದೆ ಹೋದ ಬೀದಿಗಳ ಮೇಲೆ
ಅನುಮಾನಿಸುತ್ತಿರುವಾಗ ನಸುಕು

ಕಂಪೌಂಡು ಗೇಟು ತಳ್ಳಿ ಸುಂಯೆಂದು
ಒಳ ಬಂದು ಸೈಕಲ್ ಮೇಲಿಂದಿಳಿಯುತ್ತಿದ್ದಾನೆ
ಪೇಪರ್ ಹುಡುಗ
ಇಳಿದು ಸ್ಟ್ಯಾಂಡಿನ ಮೇಲೆ ಎಳೆದು ನಿಲ್ಲಿಸುತ್ತಾನೆ
ಕರಿ ಸೈಕಲ್ಲು ಮತ್ತದರ ಕ್ಯಾರಿಯರ್ ತುಂಬ
ಅವಡುಗಚ್ಚಿದ ಕಟ್ಟು ಕಟ್ಟು ಪೇಪರು

ಒಂದೆರಡು ಪೇಪರುಗಳ ಸೆಳೆದು ಚಿಮ್ಮಿ ಓಡಿದ್ದಾನೆ
ಪಕ್ಕದ ಕಟ್ಟಡದೊಳಗೆ
ನಿದ್ರಿತ ಚಿಲಕಗಳಿಗೆ ಸಿಕ್ಕಿಸಿಡಲು.

ಗಾಳೀಪಟಗಳಿಲ್ಲದ ಮೂರ್ಖ ಆಕಾಶದ ಕೆಳಗೆ ಮಗು
ಎದ್ದು ಸರಿದರೂ ಏಳದ ತಾಯಂದಿರು ಕನವರಿಸುವಾಗ ಆ
ಕ್ಯಾರಿಯರ್ ಮೇಲಿನ ಪೇಪರುಗಳ ತುಂಬ ಇಬ್ಬನಿ ಕೋರಾ
ಬಿಸಿಶಾಯಿಯ ಉಗ್ರವಾಸನೆ।
ಹಿಡಿದರೆ ಹತ್ತುವ ಬೆರಣಿ ಮೆತ್ತುವ ಅಭಯಾರಣ್ಯ

ಈಗ ದೂರದ ಕಾಡಲ್ಲಿ ತಂತಮ್ಮ ನಾಡಿ
ರಸಬೇರು ಹಿಡಿದು ಗಟ್ಟಿ ಅಲ್ಲಾಡದೆ ನಿಂತ ಗಿಡಮರಗಳ
ನಡುವೆ ಹಾಯುತ್ತವಲ್ಲ ದೀಪಗಳಾರದ ಬಸ್ಸು
ಇಂಥದೊಂದು ಬಸ್ಸಿನಲ್ಲಿ ನುಸುಳಿ ತಿತ್ತಿರಿ ಹಾರುವ ಚಿಟ್ಟೆ
ಬಟ್ಟೆಯಿಂದ ಬಟ್ಟೆಗೆ ಹಾರುತ್ತ ಒಮ್ಮೆ ಥಕ್ಕ ಗಳಿಗೆಯಲ್ಲಿ
ಗಾಜು ಸರಿದ ಕಿಟಕಿಯಿಂದ ವೇಗ ತಪ್ಪಿ ಬೀದಿ ಪಾಲಾಗುತ್ತದಲ್ಲಾ
ಘಾಟ್ ಸೆಕ್ಷನ್ನಿನಲ್ಲಿಯೂ ಪಿನ್ ತಿರುವಿನಲ್ಲಿ ರೊಯ್ಯೆಂದು
ಹೊರಳುವ ಡೊಂಕು ಲಾರಿಗಳ ಚಾಲಕನ ಒಂದು ಕಾಲಿಗೆ ಬ್ರೇಕು
ಇನ್ನೊಂದಕೆ ವೇಗವರ್ಧಕದ ತತ್‌ಕ್ಷಣದ ಮೃತ್ಯುವೆಚ್ಚರದ ಸಾ
ರ್ಥಕ ನಿಗಾ ಉಂಟಲ್ಲಾ.

ಮೆಲ್ಲಗೆ ಸೊನ್ನೆಗೆ ತಿರುಗುತ್ತಿದೆ ಹುಡುಗನ
ಸ್ಟ್ಯಾಂಡಿನೊಳಗೇ ಇದ್ದು ಬೀದಿಗೆ ಹತ್ತದ
ಸೈಕಲ್ ಹಿಂಗಾಲಿ
ಕಳೆದ ಹಗಲಿಡೀ ಮದುವೆ
ಓಣಿ ಓಣಿಯು ಬಾಯ್ಗೆ ಖಾಯ್‌ಕೆ ಪಾನ ಬನಾರಸವಾಲಾ
ಹೊರಬಿದ್ದ ಪಯೋಧರೆಯರ ಮೈತುಂಬ
ಹಳದಿ ಕುಷ್ಠ-ಅದರಲ್ಲೂ ವಿಧ ವಿಧ-ಬಳೆಯಂತೆ ನತ್ತಂತೆ ಕೈಗಡಗ
ಅವರು ಭದ್ರವಾಗಿಟ್ಟು ಬಂದ ಮನೆಯೊಳಗುಂಟು ಖಾಲಿ
ಟೊನಿಕ್ ಬಾಟಲಿ, ತೊಳೆದಿಸ್ತ್ರಿ ಮಾಡಿಟ್ಟ ಶುಭ್ರ ಚಡ್ಡಿ.
ಮೆಹದಿಹಸನ್‌ಗೆ ಪುಸ್ತಕದಲ್ಲಿ ಸಿಕ್ಕುತ್ತದೆ ನಲ್ಲೆಯ ಒಣಹೂವು

ನೆರೂದಾಗೆ ರಸ್ತೆ ಮೇಲೆ ನೆತ್ತರು
ರುಚಿಗಟ್ಟಾದ ಖಾದ್ಯ ಕೊಡುವ ಹೋಟ್ಲುಗಳ ಒಲೆಯೆದುರು
ರೊಣೆಗೂದಲ ಮದುವೆಯಾಗದ
ಮಧ್ಯವಯಸ್ಕ ಗಂಡಸರು–ಓ ಖಾಯ್‌ಕೇ
ಪಾನ ಬನಾರಸವಾಲಾ
ಸ್ರವಿಸುವ ಆಸ್ಪತ್ರೆಯ ರಕ್ತಬಂಬಾಳ ವಸ್ತ್ರ
ಹಿಂಡಿ ಹರಿದ ನೀರು ಅಶ್ವತ್ಥವೃಕ್ಷದ ಸುತ್ತ–
ಎರಡೆಳೆ ಮಂಗಳಸೂತ್ರ.
ರೂ. ಎಪ್ಪತ್ತಕ್ಕೆ ಗರ್ಭಪಾತ.
ರಾತ್ರಿ ಪಾಳಿಯ ದಾದಿಯರ ಹಳಸಿದ ಮುಗುಳ್ನಗುವನ್ನು
ಅವರ ರೇಶನ್ ಕಾರ್ಡಿನಲ್ಲಿ ನಮೂದಿಸಿಲ್ಲಾ.

ಅಕ್ಷಾಂಶ ರೇಖಾಂಶಗಳ ನಡುವೆ ಮೈತುಂಬ
ರಾಷ್ಟ್ರಪಕ್ಷಿ ರಾಷ್ಟ್ರ ಧ್ವಜ ರಾಷ್ಟ್ರಗೀತ ಹೊತ್ತುಕೊಂಡು
ದಿಂಡುರುಳಿ ಹೋಗುತಿದೆ ಪೃಥ್ವಿ
ಆದರೀ ಗಟ್ಟಿ ಸ್ಟ್ಯಾಂಡಿನ ಮೇಲೆ ಪೆಡಲು ತೊಟ್ಟು ನಿಂತ ಸೈಕಲ್
ಅಲುಗುವುದೇ ಇಲ್ಲ ನೋಡಿ
ಎಲ್ಲಿ ಹೋದ ಹುಡುಗಾ
ಅರೇ ಹುಡುಗ ಎಲ್ಲಿ?

■

ಪ್ರತಿಭಾ ನಂದಕುಮಾರ

ನಾವು ಹುಡುಗಿಯರೇ ಹೀಗೆ....

೧

ಹೌದು ಕಣೆ ಉಷಾ
ನಾವು ಹುಡುಗಿಯರೇ ಹೀಗೆ...

ಏನೇನೋ ವಟಗುಟ್ಟಿದರೂ
ಹೇಳಬೇಕಾದ್ದನ್ನು ಹೇಳದೆ
ಏನೇನೆಲ್ಲಾ ಅನುಭವಿಸಿ ಸಾಯುತ್ತೇವೆ

ಜುಮ್ಮೆನ್ನಿಸುವ ಆಲೋಚನೆಗಳನ್ನೆಲ್ಲಾ
ಹಾಗೇ ಡಬ್ಬಿಯೊಳಗೆ ಹಿಟ್ಟು ಒತ್ತಿದಂತೆ
ಒತ್ತಿ ಒತ್ತಿ ಗಟ್ಟಿ ಮಾಡುತ್ತೇವೆ
ಹೇಳಲೇಬೇಕು ಎನಿಸಿದ್ದನ್ನು
ಹೇಳಹೋಗಿ ಹೆದರಿ ಏನೇನೋ ತೊದಲುತ್ತೇವೆ.
'ಐ ಲವ್ ಯೂ' ಅಂತ ಹೇಳಲು ಕಷ್ಟಪಟ್ಟು
ಬೇರೆ ಏನೇನೋ ದಾರಿ ಹುಡುಕಿ
ಸಂದೇಶ ಮುಟ್ಟಿಸಲು ಹೆಣಗುತ್ತೇವೆ.
ಅದನ್ನು ಅರ್ಥ ಮಾಡಿಕೊಳ್ಳಲಾರದೆ
ಹುಡುಗರು ಕೈ ತಪ್ಪಿದಾಗ
ಮುಸು ಮುಸು ಅಳುತ್ತೇವೆ.
ಕೊನೆಗೆ ಬೇರೆ ಯಾರನ್ನೋ ಮದುವೆಯಾಗಬೇಕಾದಾಗ
ನಾವೇ ದುರಂತ ನಾಯಕಿಯರೆಂದು
ಭ್ರಮಿಸಿ ಎಲ್ಲರ ಅನುಕಂಪಬಯಸುತ್ತೇವೆ.
ಗಂಡನಲ್ಲಿ 'ಅವನನ್ನು' ಹುಡುಕುತ್ತೇವೆ.
ಗಂಡಿಗೆ ಮಾತ್ರ ಅದರ ಸುಳಿವೂ ಸಿಗದಂತೆ ನಟಿಸುತ್ತೇವೆ.
ಅಷ್ಟರಲ್ಲಿ ಒತ್ತಿಟ್ಟ ಭಾವನೆಗಳೆಲ್ಲ ಹರಳಾಗಿಬಿಟ್ಟಿರುತ್ತವೆ
ಅರಳುವುದೇ ಇಲ್ಲ ಉಷಾ.....

೨

ನಾಲ್ಕು ವರ್ಷಗಳಲ್ಲಿ ವಿಪರೀತ ದಪ್ಪಗಾಗಿ
ಕೈಗೊಂದು ಕಾಲಿಗೊಂದು ಮಕ್ಕಳಾಗಿ
ಏದುಸಿರು ಬಿಡುತ್ತಾ ತರಕಾರಿ ಕೊಳ್ಳುವಾಗ
'ಅವನು' ಸಿಗುತ್ತಾನೆ
ನಮ್ಮ ಇಂದಿನ ಅವಸ್ಥೆಗೆ ಇವನೇ ಕಾರಣ
ಅಂತ ರೋಷ ತಾಳುತ್ತೇವೆ.
ಆದರೆ ಮೇಲೆ ನಗುನಗುತ್ತಾ 'ಅವನ'
ಹೆಂಡತಿ ಮಕ್ಕಳ ಯೋಗಕ್ಷೇಮ ವಿಚಾರಿಸುತ್ತೇವೆ.
ಯಾಕೆಂದರೆ ಅವಳದೂ ಅದೇ ಕಥೆಯಲ್ಲವೇ?

ನಾವು ಹುಡುಗಿಯರೇ ಹೀಗೆ.......

■

ಚಂದ್ರಶೇಖರ ತಾಳ್ಯ

ಅಳತೆ

ನಿನ್ನಳತೆಯೇ ಬೇರೆ
ಕವಿ ಅಳೆದದ್ದು ಹೂವುಗಳ
ಹೂಮುಡಿದ ಚಂಚಲೆಯರ
ಅವರ ಕಣ್ಣೊಳಗಿನ ಸಾಗರ
ಕಣಿವೆ ದಾಟಿ, ಕಾಡು ದಾಟಿ
ಮೇಲಾಕಾಶ

ಆಚೆ ಕಾಣದ ಲಕ್ಷ ಹಾದಿ
ಸೂರ್ಯ ಓಡಾಡುವ ಹಾದಿಗಿಂತ ದೊಡ್ಡದು
ಅದರಾಚೆ ಅದರಾಚೆ
ಏನಿದ್ದೀತು ಅಳತೆ

ಅಳತೆಯೇ ಇರದ ಅಳತೆಗಳು
ಅಗ್ನಿ ಮಥಿಸಿ, ಕಾಸಿ, ಕರಗಿಸಿ
ಎರಕ,ಎರಕ ಮೀರುವ ಅಳತೆ

ಹುಚ್ಚಾಟವೆಂದು ನಕ್ಕು
ಝಣಗುಡುವ ಹಣವ ಎಣಿಸಿದೆ.
ಜರಿಸುತ್ತಿದಹೆಣದ ಮೇಲಿದ್ದ ಹೊನ್ನು
ಅದ ಹೂಳುವ ಮಣ್ಣು
ಲೆಕ್ಕವಿಟ್ಟು ಅಳೆದೆ
ವಿಮಾನ ಏರಿ ಸುತ್ತಿ ಬಂದೆ
ಲೆಕ್ಕಕ್ಕೇ ಇರದ ಕವಿ
ನಗುತ್ತಾ ಸಾವನಳೆಯಲು ಹೊರಟ
ಸಾವಿಗ್ಯಾವ ಅಳತೆ
ಸವಿಸೊಲ್ಲುಗಳ ಸಾವು
ಬೃಹತ್ ಮೌನದಲ್ಲಿ
ತನ್ನ ಸಣ್ಣ ಅಳತೆಬಟ್ಟಿನ ಹಾಡೊಂದ ಬಿಟ್ಟು

ಕವಿ ಅಳತೆಗೂ ದಕ್ಕದೆ ಎಲ್ಲೋ ಹೋತು
ನೀನೂ ಹೋದೆ
ಉಳಿದದ್ದು ಮೌನ
ಅಳೆಯಲು ಯಾವ ಮಾನ

ಕ್ರಿಯಾಪದವೆಂದರೆ

ಕ್ರಿಯಾಪದವೆಂದರೆ
ಕ್ರಿಯೆಯಲ್ಲ
ಪದ ಮಾತ್ರ

ಅಕ್ಕಿ ಗೋಧಿ ಹಾಲು ಜೇನು
ಹೂವು ಹಣ್ಣು
ಇವೆಲ್ಲ ಪದ-
ನಾಮ.
'ತಿಂದೆ'ನು ಎಂಬುದು ಕ್ರಿಯಾಪದ
ತಿಂದಾಗ ಮಾತ್ರ ಪದಾರ್ಥ
ತಿನ್ನದಿದ್ದರೆ
'ಹಾಲು', 'ಜೇನು' ಎಂಬುವು
ಪದಮಾತ್ರ
ಪದವೆಂದರೆ
ಅಕ್ಷರ ಸಮೂಹ
ಸಮೂಹ ಸೇರಿ
ಹಣ್ಣುತಿಂದು, ಹಾಲು ಕುಡಿದು
ಅರ್ಥಪೂರ್ಣವಾದರೆ
ಪದವೂ ಹೌದು
ಪದಾರ್ಥವೂ ಹೌದು
ಅಲ್ಲದೆ
ಕ್ರಿಯೆಯೂ ಹೌದು
ಹಾಗೇ
ಕ್ರಿಯಾಪದವೆಂದರೆ
ಪದಮಾತ್ರ ■

ಶಂಕರ ಕಟಗಿ

ಇದಿಮಾಯಿ ತಾಯಿ ಹಾಡು

ಇದಿಮಾಯಿ ತಾಯಿ ಇದಿಮಾಯಿ।
ಹುಣಸಿಮರ ನಿನ್ನ ಮುದಿಹರೆಯು ತಾಯಿ॥

ಜೊಲ್ಲು ಸುರಿಸಿದರೆಂದು ತರಲೆ ಮಾಡಿದಿಯವ್ವ
ನಿನ್ನುಖದ ಮೊಡವೆಗಳು ಕಂದತ್ತಿದ ಹೂವ।
ದಾರಿ ದಾಹದ ಮ್ಯಾಲ ಹುಡುಗರ ಹಯವದನ
ಸೊಕ್ಕು ಚಲ್ಲಿದರದಕ ಜೊಲ್ಲೆನ್ನುದೇನಃ ತಾಯಿ॥

ಸುಖ ಸಿಗದ ತುಟಿಗಳಿಗೆ ಎಂಜಲ್ಹೀರಿದ ನೆನಪ
ಬಯಕೆ ಬೆಚ್ಚದೊಳಗ ನೂರೆಂಟು ಹಾದರವ।
ಸಖನೆಂದು ಬಂದಾನು ತೊಡೆತುಂಬ ನಿಂದಾನೆಂದು
ಮಾಸಿದ ಸರಗೊಳಗ ನೂಸಿದ ನರಗಳ ನೆಯ್ದೆಃತಾಯಿ॥

ಹೈದರ ಬಗಲಾಗ ಅಚ್ಚ ಬೆವರಿನ ವಾಸ ಹಡದಿ
ಕಾಲನ ಲೋಳೆ ರಸಕ ಕೆಳ ತುಟಿಯ ಪಕಳಿಸಿದಿ।
ಚಕಳಿ ಬಣ್ಣದ ಹೆಂಟ ಎದಿಮ್ಯಾಗ ಹೊತ್ತೀದಿ
ಕುಂಚಗಳ ಕಚಗುಳಿಗೆ ತಕರಾರು ಮಾಡಿದೀ ತಾಯಿ॥

ಚಾಂದನಿಗೆ ಸುಖಕೊಡಲು ಎಣ್ಣೆ ತೀರಿಸಿಕೊಂಡು
ರಾತ್ರಿ ನಂಜಿನ ನೆತ್ತಿಯಲುರಿವ ಪಣತಿಯಾದಿಯವ್ವ।
ಚುಕ್ಕಿಗಳ ಹಿಂಡಿಂದ ಛೀಮಾರಿ ಹಾಕಿಸಿಕೊಂಡು
ಹಯದ ಲಾಳದ ಕೆಳಗ ನೀ ಕಿರ್ರಗುಡುತ್ತೀ ತಾಯಿ॥

ಏಳು ಸಾಗರದಾಗ ವಿಷದ ಜೋಡು ನಾಲಿಗೆ ಎಳದಿ
ಹಾವು ಹೆಡೆಗಳ ಥಳಕು ನಿನ್ನುಡಿಯ ಮಾಲಿಯವ್ವ।
ತೊಗಟೆ ತೊಗಲಿನ ಸುತ್ತ ಕೆಂಜಗದ ಹುಡದಿ
ಹಿಮಪಾತದ ಮೊದಲು ಹುತ್ತ ಬಿಟ್ಟು ಬಾರಃ ತಾಯಿ॥

ಹರಿನಾಮ ಹಚಗೊಂಡು ಇಲ್ಲೊಬ್ಬ ದಾಸಯ್ಯ
ತಾಪದ ನಿನ್ನೊಳಗ ನಿಂತು ತತ್ವದ ಪದ ಹಾಡಿದನವ್ವ।
ಕಾಡಿನ್ಹೊಕ್ಕುಳದಾಗ ಕಣಗೀಲೆ ಹುರಿಯೊಳಗ
ಕೋಗಿಲೆ ಕೂಜನದಾಗ ಕಿನ್ನುರಿ ನುಡಿಸಿದನಽ ತಾಯಿ॥

ಬೆಳಗು ರಂಗೋಲಿ ಮತ್ತು ಮಗಳು

೧

ಠಪ್ಪಂತ ಚಿಪ್ಪೊಡೆದು ಇರುಳು ಚೆಲ್ಲಾಪಿಲ್ಲಿ
ಮುಗಿಲ ನೆತ್ತರ ಸೆರಗು;
ಆ ಸೆರಗ ಧಮನಿಯಲಿ ಧಗಧಗಿಸುವ ಜೀವ
ಸೂರ್ಯಕಾಂತಿಯ ಹೂವ; ಬೆಳಗಾಗುವುದು

ಹೊಂಗೆ ಮರ ಪರಿಮಳಕೆ
ಹಕ್ಕಿಗಳ ಕಲರವಕೆ ಎಚ್ಚರಾಗುವ ಮಗಳು
ಲುಟುಪುಟನೆ ಹೊರಡುವಳು
ಪಾದ ಪಕಳೆಯ ಗುರುತ...
ಮೂಡಿಸುವಳು ಮನೆ ಅಂಗಳ ತುಂಬ

ಈ ಕೂಸ ಗ್ಯಾಣಕೆ ಹೊಳೆ-
ಹೊಳೆದ ಹಾಗೆ; ತೊಯ್ದು
ಬೆಳಗಿನಂಗಳಕೆ ರಂಗೋಲಿ ಬಿಡಿಸುತ್ತಾಳೆ.

"ಅಪ್ಪಾಽಽ......
ಪಾರೋಳ ಬರದೇನಿ ನೋಡ್ ಬಾಽಽ-"

ತೊದಲು ನುಡಿ ತೂಗಿತು
ಎಳೆ ತುಟಿಯ ಎಸಳಿನಲಿ;
ಆ ಮುದ್ದು ಮುಖವು
ಮಂಜು ಮುಂಜಾವು
ಜಾಜಿ ಮಲ್ಲಿಗೆ ನಗುವು

ಸಂವಾದ ನವಂಬರ್ ೯೩-ಫೆಬ್ರುವರಿ ೯೪ ಶಂಕರ ಕಟಗಿ/೧೪೩

೨

ಬೊಟ್ಟು ಕೂಸು ಬರೆದ
ಬೆರಳಗೆರೆ ಆಕಾರವದು

ಆ ಆಕಾರದೊಳಗಡಗಿದ್ದು;
ಭೂಮಿ ನಡುಗಿದ ಸಾವೊ...
ಚಂದನ ಗೊಂಬೆಗಳ ಹಸಿವೊ...
ಹೆಪ್ಪುಗಟ್ಟಿದ ನದಿಯೋ...
ಸಾಗರದ ವೇದನೆಯೋ...
ಬಲ್ಲವರಾರು ಹಕ್ಕಿಯ ತವನಿಧಿಯ?

ಮಗಳು ಹಟಮಾರಿ
ಗುಟುರು ಹಾಕಲು
ಗರಿಗೆದರಿ ಮರ ಸೇರಲು
ಬಿಡಿಸಿದಾಕಾರಕ್ಕೆ ಪ್ರೇರೇಪಿಸುತ್ತಾಳೆ

ಹಾರಬಹುದೇ ಆ ಆಕಾರವು
ಗುಟುರು ಹಾಕಬಹುದೇ...
ಗೂಡೊಳಗೆ ಗುಟಿಕುಡಿವ ಮರಿಹಕ್ಕೀ ಹಾಗೆ

೩

ತುದಿ ಮೂಗಿನಲ್ಲೇ ಸಿಟ್ಟು
ಈ ತುದಿಗಾಲ ಹುಡಿಗಿಗೆ

ಕರಕಮಲದೊಳಗಿದ್ದ
ತನ್ನ ಕನಸಿನ ಶಿಖರ
ಕೆಂಪು ಬಿಳಿ ಹಳದಿಯನು ಅಂಗಳಕ್ಕೆರಚುತ್ತಾಳೆ

ಜೀವ ವೃಕ್ಷದ ಮೆಳೆಯು
ಆ ರಂಗು ಹರಡಿದ ಜಾಗ

ನೂರು ಪ್ರತಿಮೆಗಳ ತಪ್ಪಲಲಿ
ಹೊಡೆ ಹೂವ ಬೆಳಗಿನಲಿ
ಅವಿತಿದ್ದ ಜೀವಧ್ವನಿ-ಸ್ಪರ್ಶ...
ಮಗಳು ಹುಡುಕುತ್ತಾಳೆ
ಹೊತ್ತು ನೆತ್ತಿಗೇರುವ ತನಕ.

ಕೆ.ಬಿ. ಸಿದ್ದಯ್ಯ

ಬಕಾಲ

.....
ಹೆತ್ತವರೊಡಲಿಗೆ ಕೆಂಡವಸುರಿದು
ಗಗನ ಚಂದ್ರನ ಮನೆಗೆಳೆತಂದು
ನಿಂತ ನಿಲುವಿಗೆ ಕೊಂದು ತಿಂದಂಥ
ತಂದೆಯರೇ;
ಬಸಿರ ಕಡಲೊಡೆಯುವ ಮುಂಚೆ
ತುಂಬಿದ ತಣ್ಣೀರ ಗಡಿಗೆಯೊಡೆದು
ಮಡದಿ ಕನಸಿನ ಆನಂದವತಿಯರು
ಬಣ್ಣ ಬಣ್ಣದ ಕುಲಾವಿಗಳ್ಹಿಡಿದು
ಸರತಿಸಾಲಾದ ಬಾಣ್ತೀ
ತಾಯಂದಿರೇ,
ನನ್ನ ಅಂಗೈಯಲ್ಲಾಡುವ
'ಮುಟ್ಟಬಾರದ' ಕೂಸಿಗೊಂದು
ಹೆಸರ ಕೊಡಿ, ಹೆಸರ ಕೊಡಿ,
ಸೀಳುಕ್ಕೆಯಲಿ ಬಿದ್ದಂಥ ಬೀಜವೆ
ದಟ್ಟಡವಿಯ ನಡುನೆತ್ತಿಯ ಮೊಳಕೆ
ಹುಟ್ಟಿದ ಬೆತ್ತಲಗಿಡಬಾಲೆ
ನೆಗೆಯುತ್ತ, ನಲಿಯುತ್ತ, ಕುಣಿಯುತ್ತ
ನನ್ನೆದೆಯ ಕಣಿವೆಯಲ್ಲಿ ಜುಳಜುಳ
ಹರಿಯುತ್ತ
ಬಿಟ್ಟಂಥ ತೊಗಲ ಗಾಳೀಪಟಕೆ

ಕರುಳ ಬಾಲಂಗೋಚಿ
ಹಾರುತಿದೆ-ಹಾರುತಿದೆ
ನೀನುಟ್ಟ ಹಸಿರ ಸೀರೆಯಸೆರಗು
ಅರಬ್ಬೀ ಸಮುದ್ರದಗಲ
ಅಂಗೈಯಲ್ಲಾಡುವ ಕೂಸ
ಕಿರುಬೆರಳಿನುಂಗುರದಾಸೆಗೆ
ಬೆರಳ ಕತ್ತರಿಸಿದರು,
ಕಡಲ ಕೊಕ್ಕರೆ ಬಂದು
ಉಂಗುರವ ನುಂಗಿತ್ತು
ಎತ್ತಬಾರದ ಕಲ್ಲು
ಎತ್ತಬಾರದೆ ತಾಯಿ?
ನಡೆಯ ಬಾರದ ಹಾದಿ
ನಡೆಯಬಾರದೆ ತಾಯಿ?
ಹೂವಿರದ ಗಿಡವೊಂದು
ಬಿದ್ದು ಬೀಳಾಯ್ತಲ್ಲ!
ಬಿದ್ದ ಬೀಳಿಗೆ ಅದೆಷ್ಟು ಹದ್ದುನಾಯಿಗಳು
ತಾಯಿ;
ಬಯಲ ಕುಸುಮದ
ಮೇಲೊಂದಾಲಯದ
ದುಂಬಿ ಬಂದೆರೆಗಿತ್ತು,
ಪಾತಾಳ ಪಕ್ಷಿಗೆ ಬಿದ್ದೊ
ಗಾವುದ ಗಾವುದ ಕನಸುಗಳು
ರೆಕ್ಕೆ ತೆಕ್ಕೆಯ ಅಮಲಿನಲೆದ್ದೊ
ಬೆಚ್ಚಾವುಗಳು,
ಗೋಣಿ, ಆಲವ, ಅರಸಿ ಆಕಾಶಕೆ
ತಾನುಂಡ ಫಲವನು ತನ್ನ ಬಳಗವು
ಭೂಸೂತಕದಲಿ ಮಹಾಭಾರತವು
ಸ್ತ್ರೀಸೂತಕದಲ್ಲಿ ರಾಮಾಯಣವು
ಅಕಾಲ-ಬಕಾಲ ಮುನಿಯೇ
ನಿನ್ನೆಡ ತೊಡೆ ಮಾಂಸದಲಿ
ಮಲವೆ ಫಲವು

ಫಲವೇ ವೃಕ್ಷವು
ಆಕಾಶದಗಲ-ಸಮುದ್ರದಗಲ
ಭೂಮಿ ಆಕಾಶವೆಂಬೆರಡು ಘನವು
ನಿನ್ನೆದೆಯ ಜಲಗಣ್ಣಿನಲಿ ಅರಳಿದಂಥ
ಹಾಲುಗುಸುಮಗಳು
ಬಕಾಲ ಮುನಿಯೇ ಬಾ
ಬಯಲ ಕುಸುಮವ ತಾ ॥

('ಬಕಾಲ' ಖಂಡಕಾವ್ಯದ ಒಂದನೇ ಪಾದದ ಭಾಗ)

ಎಚ್.ಎಸ್. ಮುಕ್ತಾಯಕ್ಕ

ಹೀಗೇಕಾಯಿತು?

ಹೀಗೇಕಾಯಿತು?
ನನ್ನ ನಿನ್ನ ನಡುವೆ?

ಕಮಲದ ಮೇಲಿನ ನೀರಿನ
ಹನಿಯಂತೆ? ನಮ್ಮ
ಎದೆಗಳ ನಡುವಿನ ಬಿಸಿಯುಸಿರು ತಣ್ಣಗಾಗಿ
ನರಳಿದ್ದು ಏಕೆ?
ಕೈ ಕೈಗಳ ಬೆಸುಗೆಯಲ್ಲಿ
ಬೆಂಕಿ ಹರಿದು ಸಡಲಿದ್ದು ಏಕೆ?
ಕೊರತೆಯೊಂದು ಕೊರೆ
ಕೊರೆದು ಇಬ್ಬರಿದ್ದೂ ನಾವು
ಒಬ್ಬೊಬ್ಬರೇ ಆದದ್ದು ಹೇಗೆ?
ನಮ್ಮ ಬಂಧನವು ಸರಳುಗಳಾಗಿ ಬೆಳೆದು
ಕಂಬಿಯೆಣಿಸುತ್ತ ದಿನವ
ಕಳೆಯುವಂತಾದುದೇಕೆ?

ಈಚೆಯ ಗುಡ್ಡದಿಂದ ನಾ
ಕೂಗಿದಾಗ ನೀನು ಕೇವಲ

ಪ್ರತಿಧ್ವನಿಯಾದದ್ದು ಏಕೆ?
ಮೈಮಸೆತದಲ್ಲಿ ನನ್ನ
ಪ್ರೀತಿ ಸಿಕ್ಕು ಅರೆಜೀವವಾಗಿ
ಈ ನನ್ನ ಆತ್ಮ ಅಲ್ಲಿಂದ ದೂರ ಹಾರಿದ್ದು ಏಕೆ?
ಎಂಬ ನನ್ನ ಪ್ರಶ್ನೆಗೆ ಉತ್ತರ
ನಿನ್ನ ನಿಶ್ಚಿಂತೆಯ ಉಸಿರು!
ನಾನು ಸುಂಟರ ಗಾಳಿಯಲ್ಲಿ
ಸಿಕ್ಕು ತಿರುಗವ
ಒಣಗಿದ ಎಲೆ! ಹೌದು
ಒಣಗಿದ ಎಲೆ ಮಾತ್ರ!

ಮುತ್ತಿನ ಹನಿಗಳು

ಹನಿ-೧

ವಸಂತ ನಿಸರ್ಗದೊಡನೆ
ಮಾಡುವುದನೇ ನೀನು
ನನ್ನೊಡನೆ ಮಾಡಿದಿ.
ಆಗ ಬಯ್ಯದ ಜನ
ಈಗೇಕೆ ಬಯ್ಯುವರೋ!

ಹನಿ-೨

ಸತ್ತವರನ್ನ, ಗೋರಿಗಳನ್ನ
ನೋಡಿದಾಗೊಮ್ಮೆ ನಾನು
ನಿನ್ನನ್ನು ತೀವ್ರವಾಗಿ
ಪ್ರೀತಿಸತೊಡಗುತ್ತೇನೆ.

ಹನಿ-೩

ಕಾದು ಕೆನೆಗಟ್ಟಿದ
ನನ್ನ ಲಜ್ಜೆಯನ್ನು
ಕಾಮಿ-ಬೆಕ್ಕು ನೆಕ್ಕುತ್ತ ಹೋದಂತೆ
ನನ್ನೊಡಲ ತುಂಬೆಲ್ಲ
ಹಾಲು ಹರಿಯುವದು.

ಹೇಮಾ ಪಟ್ಟಣಶೆಟ್ಟಿ

ಹೊಸ ಹುಟ್ಟು

ಬಾನಿನಲ್ಲಿ ಕಾಳಕತ್ತಲೆ
ಯಲ್ಲಿ ಪುಟ್ಟ ಪುಟ್ಟ ತಾರೆ
ನಗುತ್ತವೆ ಕುಲು ಕುಲು
ನನ್ನ ಮೈತುಂಬ ನನ್ನವನ
ನನ್ನ ಮಕ್ಕಳ ಕಚಗುಳಿ.

ಪುಟ್ಟ ತಾರೆಗಳೆಂದರೆ
ನಾನು
ಪಟ್ಟ ಚಿಕ್ಕ ಚೊಕ್ಕ ನೋವ ಕಲೆಗಳು
ನನ್ನ ಕನಸ ಹೊದಿಕೆಗಳು
ಬಣ್ಣ ಬಣ್ಣದ ಮಧುರ ಕುಣಿತಗಳು.

ಚಿಕ್ಕೆಗಳು ನಭದಲ್ಲಿ
ಬಗೆ-ಬಗೆಯ ನಗೆಗಳು
ಮಗುವಿನಗಲ ಹಣೆ ಮೇಲೆ ತುಟಿ
ಕಣ್ಣುಗಳ ಮೇಲೆ
ನನ್ನ ತಾಯ್ತನದ ಜೀವೋನ್ಮೇಷಕ ವಿಸ್ತಾರದಲ್ಲಿ
ಹೀಗೆ ನಕ್ಕಿದ್ದನ್ನು
ನಲಿದದ್ದನ್ನು
ಕಂಡು ನಾನೀಗ ಸಂಕೋಚಗೊಂಡು
ತಾಯಿ
ಮಗುವಾಗುತ್ತಿದ್ದೇನೆ
ಮಗುವಿನಿಂದ ನಗು
ಗುರುತ್ವದಿಂದ ಲಘುತ್ವ ಹೊಂದಿ
ಬೆಳೆಯುತ್ತ ಇಳಿವು ಕಾಣುತ್ತಿದ್ದೇನೆ.
ಇದು ಉಳಿವೇ? ಅಥವಾ
ನಾ ಸಮೀಪಿಸುತ್ತಿರುವ ಅಜ್ಞಾತ ಮಹಿಮೆ.

ಇಲ್ಲ
ನನಗೀಗ ತಡಕಾಟವಿಲ್ಲ ತೊಳಲಾಟ
ಹೊಯ್ದಾಟದ ನೆತ್ತಿಯೇರಿ ನರ್ತಿಸುವ ಸಮುದ್ರ
ದ ಒಡಲಲ್ಲೂ ಶಾಂತಿಯಿದೆ.
ಗುಡುಗುಡಿಸುವ ಮೋಡಗಳ ಹಾದಿಯಲ್ಲಿ
ನಡೆದು ಬರುವ
ಸೂರ್ಯನ ಶಾಖಕ್ಕೂ ದೀಪ್ತಿಯಿದೆ.
ಭೋರ್ಗರೆಯುವ ನದಿ ನದಗಳ
ಕಿರುಚಾಟಕ್ಕೂ ಇದೆ
ಹೊಂದಿಕೊಳ್ಳುವ ತೃಪ್ತ ಕಾಮನೆ.

ಈ ತಾರೆ ಮಗು ನಗೆ
ನೀರು ನಭ ಬೆಂಕಿ
ನನ್ನ ನೆಲದಲ್ಲಿ
ಹವೆಯಾಗಿ ಹೂವಾಗಿ ನಿತ್ಯ
ಸಂಚರಿಸತೊಡಗಿವೆ
ಈಗ
ನಾ ನಿಸರ್ಗ
ದ ಹೊಚ್ಚ ಹೊಸ ಉದ್ಗಾರ.

ಒಂದು ಹುಣ್ಣಿಮೆ ರಾತ್ರಿ

ಗೊತ್ತಿಲ್ಲ
ಮೊನ್ನೆ ಹುಣ್ಣಿಮೆ ರಾತ್ರಿ
ನನ್ನ ತೊಡೆದಿಂಬ ಮೇಲಿರಿಸಿ
ತನ್ನ
ತಲೆ
ಬಹಳ ಹೊತ್ತಿನ ತನಕ ಅದು ಇದು
ಮಾತಾಡಿ ಆಡಿ ಹಾಡಿ ಕಾಡಿ
ನಿಶ್ಚಿಂತ ಒರಗಿದೀತನ
ರೆಪ್ಪೆಯಂಗಳದ ಮೇಲೆ

ಅತ್ತೊಮ್ಮೆ ಇತ್ತೊಮ್ಮೆ
ನತ್ತು ಚಿಮುಕಿಸುತ
ನಕ್ಕವಳು ನಲಿದವಳು
ಗತ್ತಿನಲಿ ಕುಣಿದವಳು
ಯಾರು
ಗೊತ್ತಿಲ್ಲ ನನಗೆ.

ನನ್ನ ಕೈ ಹಿಡಿದು
ಬೆಟ್ಟದ ಮೆಟ್ಟಿಲೊಂದೊಂದೆ
ಏರಿ ನನ್ನ ಏರು ದಾರಿಗಳನ್ನು
ಬಯಲ ಬಾಂದಳದಲ್ಲಿ
ಗಂಗೆಯಾಗಿಸಿದವಳು ಯಾ
ರು ಗೊತ್ತಿಲ್ಲ ನನಗೆ.

ಉಸಿರು ಉಸಿರಿನ ಕೂಡ
ತರುಣನಾಗುತ್ತಾನೆ
ದಣಿವು ಕಡಿಯುತ್ತಾನೆ
ಇವನ ನರ-ನರದಲ್ಲಿ ಆಗ
ಸುಖದ ಆಸವ ಹರಿಸಿದಾ ಸಖಿ
ಯಾರೆಂದು
ಕೇಳಿದರೆ ಹೇಳುತ್ತಾನೆ-
ಗೊತ್ತಿಲ್ಲ ನನಗೆ.

ನನಗೊಂದು ಹೆಸರುಂಟು. ಆದರೆ
ಇವನು ಕರೆದಿದ್ದಾನೆ:
ಬೆಳಕಂತೆ ಕತ್ತಲದಲ್ಲಿ
ಸುಖವಂತೆ ದುಃಖದಲ್ಲಿ
ಉತ್ಸಾಹದರಗಿಣಿಯಂತೆ
ಇವನ ಮನಸ ಕಾಡಲ್ಲಿ
ಹೀಗೆ ನೂರು ಹೆಸರಿಟ್ಟು....
ಯಾಕೆ ಕರೆಯುತ್ತಾನೆ
ಗೊತ್ತಿಲ್ಲ ನನಗೆ.

ಎಚ್.ಎಸ್. ಭೀಮನಗೌಡರ

ಹೋಮಾ ಎಂಬ ಪಕ್ಷಿ *

ಪಕ್ಷಿ ಎಂದ ಮೇಲೆ ಆಗಸದಲ್ಲಿ
ಹಾರಾಡುವದು ಏರಾಡುವದು, ಸ್ವಾಭಾವಿಕ.
ನೆಲಕ್ಕೆ ಇಳಿಯುವುದೆಂದರೆ?

ಅಂತರಿಕ್ಷವನ್ನು ಗೂಡುಮಾಡಿ
ಮಂಜು-ಮೋಡದ ಅಮೃತಹೀರಿ
ಚಂದ್ರಲೋಕ-ಇಂದ್ರಲೋಕ ವಿಹರಿಸಿ
ಅಲೌಕಿಕ ಆನಂದದಲ್ಲಿ ಓಲಾಡುವದು

ಅಧೋಲೋಕದ ಕೋಳಿ ಬಳಗಕ್ಕೇನು ಬಂತು?
ದಿನ ನಿತ್ಯ ಕಚ್ಚಾಡುತ್ತ ಕಾಳಿಗಾಗಿ
ತಿಪ್ಪೆ ಕೆದರುವದು ತಪ್ಪಿಯೇ ಇಲ್ಲ.
ಯುಗಾಂತರದಲ್ಲಿ ಕೇಳಿದ ಆಗಸವಾಣಿಯಿಂದ
ಮಹಾತ್ಮರು ಅವತರಿಸಿರಬಹುದು
ವ್ಯಾಸ ವಾಲ್ಮೀಕಿ ವಶಿಷ್ಠರ ಸೃಷ್ಟಿಯಾಗಿರಬಹುದು
ಅಜಂತಾ-ಎಲ್ಲೋರಾ, ಕಾಶಿ-ಕೇದಾರ
ನಿರ್ಮಾಣವಾಗಿರಬಹುದು

ಹುಟ್ಟಿದ ಮಣ್ಣುಹುಳದ ಸಮುದಾಯ
ಹೊತ್ತು ಹೋದದ್ದು ಮರೆತುಬಿಡಬೇಕೆ?
ನಿಷ್ಠೆಯಿಂದ ಹೊಟ್ಟೆಹೊರೆಯುವ ಇರುವೆ ಬಳಗ
ಯಾವದೋ ಸರ್ಪದ ತುತ್ತಾಗಬೇಕೆ?
ದೂರದ ಬರಿ ನಿರ್ಲಿಪ್ತನೋಟದಿಂದ
ಉದ್ಧಾರವಾದರೆ ಯಾಕೆ ಈ
ಮುಳ್ಳು ಕಲ್ಲುಗಳ ಮಧ್ಯ ನಡೆಯುವ ಕಷ್ಟ?
ಏಕಾಂತದ ಹಾದಿಯಲ್ಲಿ ಆತ್ಮ
ದಿವ್ಯಾತ್ಮ, ಪರಮಾತ್ಮ ಸಾಧಿಸಿದರೆ
ಪರರ ಆತ್ಮ ಆಗಬೇಕಲ್ಲ!

ಮಣ್ಣೊಳಗಿನ ಬೀಜ ಮೊಳೆತು
ಮೇಲೆದ್ದು ಆಕಾಶದ ಕಡೆಗೆ ಹರಡುವದು
ನೀರುಕಾಯ್ದು ಪಕ್ಷಿಯಂತೆ ಹಾರುವದು
ಸೂರ್ಯ-ಚಂದ್ರರ ಕೃಪೆಯಲ್ಲವೆ?

ನಿರಾಕಾರದ ಪ್ಲೇಟೋರಾಜ್ಯದ ಈ ಪಕ್ಷಿ
ಭೌತಿಕ ಕವಚದಿಂದ ಬಂದಿಲ್ಲವೇ?
ಅದನ್ನು ಕಳಚುವದೂ ಒಂದು ಹಂತದಲ್ಲಿ ಮಾತ್ರ.

ಬೆಚ್ಚನೆಯ ಜಡನೆಲದ ನಂಟಿನಲ್ಲಿ
ಪಕ್ಷಿ ಸಂಕುಲದ ನವಿರು ನೆನಪಿನಲ್ಲಿ
ದಿನಗಳೆ ಕಾಯಬೇಕು
ಆಗ ಹುಟ್ಟೀತು ಮರಿ

ಇರುಳಿನ ನೋವಿನಲ್ಲಿ ಹಗಲು ಮೂಡಿದಂತೆ.
ಹೀಗೇ ನೆಲ-ಮುಗಿಲಿಗೆ ಆತಂಕ
ತಗುಲದಿದ್ದರೆ ಕಪ್ಪೆಗಳಿಗೆ
ರೆಕ್ಕೆ ಮೂಡಬಹುದು
ಈ ವಿಕಾಸಪಥದಲ್ಲಿ ಮುಂದೆ
ಮಣ್ಣಲ್ಲಿ ತೆಪ್ಪಗೆ ಬಿದ್ದ ಗೊಣ್ಣೆಹುಳ
ಕೋಗಿಲೆಯಂತೆ ಹಾಡಬಹುದು

ಹಾಗಾಗುವವರೆಗೂ
ಈ ಕುರಿ-ಕಲ್ಪನೆಯ ತೋಳ
ಪಾರಿವಾಳ ರೂಪದ ಗಿಡುಗ
ಸಹಿಸಬೇಕಾದ ಪ್ರಮೇಯ.
ವಿಶ್ವಾಮಿತ್ರನ ಕೃತ್ರಿಮ ನಾಗರಿಕ ಸೃಷ್ಟಿ
ಸಂತತಿ ಹೊಂದುವ ಸನ್ಯಾಸತ್ವ
ಮತ್ತು
ಪದ್ಯವೆಂಬ ಈ ಗದ್ಯ

 ಎಚ್.ಎಸ್. ಭೀಮನಗೌಡರ/೧೬೩

ಮಧ್ಯ
ಅನಿವಾರ್ಯ ಅವಸ್ಥೆ.

(*ಆಗಸವಾಸಿ ಈ ಪಕ್ಷಿಯ ತತ್ತಿ ನೆಲದತ್ತ ಬೀಳುವಾಗ ಮಧ್ಯದಲ್ಲಿಯೆ ಮರಿಯಾಗಿ ಕಣ್ಣುತೆರೆದಾಗ ಪೃಥ್ವಿಕಂಡು ಸಾವಿನ ಭೀತಿ ಹುಟ್ಟಿ ಮೇಲಕ್ಕೆ ತಾಯಿಯ ಕಡೆಗೆ ಆಗಸಕ್ಕೆ ಹಾರುವುದಂತೆ)

ಎಂ.ಆರ್. ಕಮಲ

"ರಿಪಬ್ಲಿಕ್ ನರ್ಸಿಂಗ್ ಹೋಂ"ನ ಲೇಬರ್ ವಾರ್ಡ್

ಗಡಿಯಾರದ ಮುಳ್ಳು ನಿಂತು ನಿಂತೂ ಸಾಗುತ್ತಿದೆ;
ಬಿಟ್ಟು ಬಿಟ್ಟು ಬರುವ ನೋವಂತೆ,

ನಾನಿಲ್ಲಿ ಬಂದದ್ದು ಎಂದು?
ಯುಗಯುಗಾಂತರದ ಹಿಂದೆ.
ನಿತ್ಯ ನೋವಿನ ಸರಪಳಿಗೆ
ಇಲ್ಲಿ ಮತ್ತೊಂದು ಕೊಂಡಿ.

ಕಿಟಕಿಯಗಲಕ್ಕೂ ಕೆಂಪು ತಲೆಗೆದರಿ
ನಿಂತಿದೆ ಗುಲ್‌ಮೊಹರ್.
ಜೂನ್ ತಿಂಗಳಲ್ಲವೆ?-ಮುಂಗಾರಿನ ಮುದ.

'ಅಮ್ಮಾ!'
ನೋವು, ಕೂಗಿಬಿಡಲೆ?
ಇಲ್ಲ, ತುಟಿ ಕಚ್ಚಬೇಕು.
'ಹೆಣ್ಣೆಂದರೆ ನೋವ ಮುಕ್ಕಬೇಕು
ಬಿಕ್ಕದೆ ನುಂಗಬೇಕು'
ಅಂದಿದ್ದಳು ಅಮ್ಮ, ಒಳಬರುವ ಮುನ್ನ.
'ಇನ್ನೂ ಎಷ್ಟು ಹೊತ್ತು? ಅತ್ತಿಗೆ,
ಇನ್ನೂ ಎಷ್ಟು, ಎಷ್ಟು ಹೊತ್ತು?'
ದೇವತೆಯಂತೆ ಡಾಕ್ಟರ್ ಅತ್ತಿಗೆಯ ಅಭಯ-

"ಇನ್ನು ಸ್ವಲ್ಪವೇ ಹೊತ್ತು, ಮುಗಿಯುತ್ತದೆ ನೋವು!
ಬಿಮ್ಮಗೆ ಬಿಗಿದ ಆಕಾಶ
ಸುರಿಸುತ್ತದೆ ಸುರಿಮಳೆ–"

ಮುಗಿಯುವುದೆಲ್ಲಿ ನೋವು
ಪಕ್ಕದ ವಾರ್ಡಿನಲ್ಲೀಗ ಕೇಳುತ್ತಿದೆ ಚೀರಾಟದ ದನಿ,
ಸರಪಳಿಯ ಮತ್ತೊಂದು ಕೊಂಡಿ?
ಗುಡುಗು, ಬರಸಿಡಿಲು,
ಮಂದ್ರಮಧ್ಯದ ಮಳೆ ತಾರಕಕ್ಕೇರಿ
ಗುಲ್‌ಮೊಹರ್ ರಾಮಾ! ರಕ್ತಮಯ.
ಕಿಟಕಿಗಾಜಿನಾಚೆ ಈಗೆಲ್ಲ
ಅಸ್ಪಷ್ಟ, ಕ್ಷಣಾರ್ಧದಲ್ಲಿ ಎಲ್ಲ ಸ್ತಬ್ಧ.

೨

ತೆರೆದ ಕಿಟಕಿಯಲ್ಲೀಗ ನೀರೆರೆದು
ಕೊಂಡು ತಲೆ ತುಂಬ ಕೆಂಪು ಹೂಮುಡಿದ ಹುಡುಗಿ
ತೊಡೆಯಮೇಲೆ ಬೆಚ್ಚಗಿನ ಸ್ಪರ್ಶಳ ಸ್ಪರ್ಶ–

'ಮಗೂ, ಹೌದು ಹೆಣ್ಣೆಂದರೆ ನೋವು ನುಂಗಬೇಕು
ಬಿಕ್ಕದೆ ಮುಕ್ಕಬೇಕು.
ಆದರೂ ಜೀವನಸೃಷ್ಟಿಯ ಹರ್ಷ
ಈ ಸ್ಪರ್ಶ ಗಂಡಿಗೆಲ್ಲಿ ದಕ್ಕಬೇಕು!'

■

ಸರಜೂ ಕಾಟ್ಕರ್

ಶಬ್ದಗಳು

ಶಬ್ದಗಳು ಪಕ್ಷಿಗಳಾಗಬೇಕು
ಪಕ್ಷಿಗಳು ಆಗಸಕ್ಕೆ ಹಾರಿ
ಆಗಸವೆಲ್ಲ ಕವಿತೆಯಾಗಬೇಕು
ಶಬ್ದಗಳು ಚಂದ್ರ ಆಗಬೇಕು
ಚಂದ್ರ ಭೂಮಿಗೆ ಬಂದು

ಭೂಮಿಗೆಲ್ಲ ಬೆಳದಿಂಗಳು ನೀಡಬೇಕು
ಶಬ್ದಗಳು ರಾತ್ರಿಯಾಗಬೇಕು
ರಾತ್ರಿ ಅನಂತತೆಯನ್ನು ವ್ಯಾಪಿಸಿ
ಜಗತ್ತಿಗೆಲ್ಲ ರೋಮಾಂಚನ ಹುಟ್ಟಿಸಬೇಕು
ಶಬ್ದಗಳು ಮುತ್ತಾಗಬೇಕು
ಮುತ್ತುಸಮುದ್ರದಿಂದ ಹೊರಬಂದು
ನೊಂದವರ ಮನಕ್ಕೆ ಸಂತಸ ನೀಡಬೇಕು.

ಅವರು

ನೀವೇ ಹಚ್ಚಿದ ಬೆಂಕಿಯಲ್ಲಿ
ನಿಗಿ ನಿಗಿ ಕೆಂಡವಾಗಿ ಅವರು ಹೊರಬಂದಿದ್ದಾರೆ
ನೀವೇ ಸೃಷ್ಟಿಸಿದ ಬರಡು ನೆಲದಲ್ಲಿ
ಸಮಾನತೆಯ ಬೆಳೆಯನ್ನು ಅವರು ಬಿತ್ತಿದ್ದಾರೆ

ತಾವೇ ಒಪ್ಪಿದ್ದ ಗುಲಾಮಗಿರಿಯನ್ನು
ಒದ್ದು ಈಗವರು ನಿರಾಕರಿಸುತ್ತಿದ್ದಾರೆ
ನಿಮ್ಮ ಕೈಯಲ್ಲಿಯ ಶಸ್ತ್ರಗಳೆಲ್ಲ
ಅವರ ಒಕ್ಕಟ್ಟಿನಿಂದ ಉದುರಿ ಬೀಳುತ್ತಿವೆ

ಅವರ ಬೆನ್ನಿಗೆ ಹಾಕಿದ ಚೂರಿಗಳೆಲ್ಲ
ಈಗ ನಿಮ್ಮ ಎದೆಗೇ ನುಗ್ಗಿ ಬರುತ್ತಿವೆ.

ಅಹಲ್ಯೆ

ಅಹಲ್ಯೆ ನೀನು
ಕಲ್ಲಾಗಿದ್ದಾಗ ಕತೆಯಾಗಿದ್ದೆ
ಕವಿತೆಯಾಗಿದ್ದೆ ಕಾದಂಬರಿಯಾಗಿದ್ದೆ
ಗಂಡಸರ ಅಹಂಕಾರಕ್ಕೊಂದು ಸಾಕ್ಷಿಯಾಗಿದ್ದೆ

ನಿನಗೆ ಪುನರ್ಜನ್ಮ ಬಂದಾಗ
ನೀನು ಇಂದ್ರನ ವಿರುದ್ಧ
ಗೌತಮನ ವಿರುದ್ಧ ನಿರಂತರವಾಗಿ

ಗಂಡಸರ ಅನ್ಯಾಯದ ವಿರುದ್ಧ
ಬಂಡಾಯದ ಧ್ವಜ ಹಾರಿಸಬಹುದೆಂದು ಯೋಚಿಸಿದ್ದೆ

ಆದರೆ ಅಹಲ್ಯೆ
ಕಲ್ಲಿನಿಂದ ಹೆಣ್ಣಾಗಿ ನೀನು
ಮತ್ತೆ ಗೌತಮನ ದಾಸಿಯಾಗಿ
ಏನನ್ನೂ ಯೋಚಿಸದೇ
ಆತನ ಆಶ್ರಮವನ್ನು ಹೊಕ್ಕು ಬಿಟ್ಟೆ

ನೀನು ಕಲ್ಲಾಗಿದ್ದಾಗ ಅಹಲ್ಯೆ ಜೀವಂತವಾಗಿದ್ದೆ
ಮತ್ತೆ ಹೆಣ್ಣಾದಾಗ ಸತ್ತುಹೋದೆ

■

ಚಿಂತಾಮಣಿ ಕೊಡ್ಲೆಕೆರೆ

ಮರದ ಗಟ್ಟಿತನ

ಮರದ ಗಟ್ಟಿತನ
ಸುಮ ಕೋಮಲತೆ
ಬಂದುದು ಎಲ್ಲಿಂದ?
ಒಳಗಿನ ನಿಲುವು
ಪ್ರಾಕೃತಿಕತೆಯೇ
ಬದುಕಿನ ನಿಜಬಂಧ

ಬಾನಿಗೆ ಬಾಗು
ಕಾಯಿಗೆ ಮಾಗು
ಸಹಜವು ಹುಟ್ಟು ಗುಣ
ಒಳಗಿನ ಒರತೆ
ಕಾಣಲು ಮರೆತೆ
ಅದಕೇ ಆದೆ ಒಣ

ಗೆಳತೀ ಬಾರೆ
ಈ ಮಿತಿ ಮೇರೆ
ಮೀರದೆ ಬದುಕಿಲ್ಲ
ಸಹಜದ ಪಲ್ಲವಿ
ಅನುರಣಿಸಲಿ ಈ
ಸಾಯುವ ಬದುಕೆಲ್ಲ

ಗರುಡನಿಗೆ

ಕದ್ರು
ದಾಸಿಯನ್ನಾಗಿ
ಮಾಡಿಕೊಂಡಿದ್ರೂ

ವಿನತೆ
ಕಾಪಾಡಿಕೊಂಡಳು
ಘನತೆ

ಘನತೆ ಉಳಿಸಿದವ ಗರುಡ
ವಿನತೆ
ಮಕ್ಕಳನ್ನು ಪಡೆದರೂ ಎರಡೇ ಎರಡ

ಒಬ್ಬನಾದನು ಸೂರ್ಯನಿಗೆ ಸಾರಥಿ
ಆತ ಆರತಿಯಾದರೆ ಗರುಡನು ಕೀರುತಿ

ಗರುಡನಿಗೆ ಆಹಾರ ಕದ್ರುವಿನ ಮಕ್ಕಳು
ತೀರದ ದ್ವೇಷಕ್ಕೆ ತಾಯಿ
ನೋವಲ್ಲಿ ನಕ್ಕಳು

ದ್ವೇಷ ಕಳೆದು ಅಮೃತ
ತಾರೋ ಗರುಡ
ಮೋಸ ಮರೆತು ಅದ್ಭುತ
ತೋರೋ ಹುಡುಗ

ಎಚ್. ಡುಂಡಿರಾಜ

ಕವಿತೆ V/S ಹೆಂಡತಿ

ಸವತಿಯ ಹಾಗೆ ನೋಡಬೇಡ ಪ್ರಿಯೆ
ಗೆಳತಿಯಂತೆ ಕಾಣು.
ವಿನಾಕಾರಣ ದೂಷಿಸಬೇಡ
ನನ್ನ ಕವಿತೆಯನ್ನು.

ಏನೂ ಮಾಡದು ಪಾಪದ ಕವಿತೆ
ನಿರುಪದ್ರವಿ ಪ್ರಾಣಿ.
ಸ್ಪರ್ಧಿಸಲಾರದು ನಿನ್ನೊಂದಿಗೆ ಅದು
ನನ್ನಂತೇ ನಿತ್ರಾಣಿ!

ಬರುತ್ತಾರೆ ನಿಜ, ಹಲವು ಹುಡುಗಿಯರು
ನನ್ನ ಕವನದಲ್ಲಿ.
ದೇವರಾಣೆಗೂ ನೀನೊಬ್ಬಳೆ ಕಣೆ
ನಿಜ ಜೀವನದಲ್ಲಿ.

ಅರ್ಧಾಂಗೀ! ಅರ್ಧವೇಕೆ? ತಗೊ
ಇಡೀ ದೇಹ ನಿನಗೆ.
ತಲೆಯ ಮೂಲೆಯಲಿ ತುಸು ಜಾಗ ಬೀಡು
ಇರಲು ಕವಿತೆಗಳಿಗೆ

ಇದ್ದಿರಲಿಲ್ಲವೆ ಪರಮೇಶ್ವರನಿಗೆ
ಮುಡಿಯ ಒಳಗೆ ಗಂಗೆ?
ಮಡದಿ ಪಾರ್ವತಿ ಸುಮ್ಮನಿದ್ದಳು
ಇರು ನೀನೂ ಹಾಗೆ.

■

ಸ. ರಘುನಾಥ

ಬರಲಾರೆ ಅನ್ನದಿರು

ಬೇಸಗೆ ಅಬ್ಬಬ್ಬ! ಉರಿ ಬಿಸಿಲು
ಬರಲಾರೆ ಅನ್ನದಿರು
ಸುರಿವ ಬೆವರೊರೆಸಿ ಹಾಕುವೆ
        ಬೀಸಣಿಗೆ, ಬಂದು ಬಿಡು

ಮಳೆಗಾಲ, ಅಯ್ಯಪ್ಪ! ಬಿಡದ ಜಡಿ
        ಬರಲಾರೆ ಅನ್ನದಿರು

ಹಾ.ಮ. ಕನಕ

ಮೂರನೆಯ ಜನುಮ ಬೇಡ

ಮೊದಲಿಗೆ
ಈ ಗಂಡಿನೊಂದಿಗೆ ಬೆತ್ತಲೆ ಮಲಗಿದಾಗ
ಬುಗುಡಿ ಇರಲಿಲ್ಲ. ಕೆನ್ನೆ ಸರಪಣಿ ಇರಲಿಲ್ಲ.
ನಾನೂ ಇರಲಿಲ್ಲ. ನೀನೂ ಇರಲಿಲ್ಲ.

ಪ್ರೀತಿಸಿದ ಗಂಡು ಗಂಡನಾದರೆ
ಬೇಸರಾದಾಗ ಮುನಿದು ಮಾತು ಕಲಿತ, "ಕೋರ್ಟು" "ಲಾಯರು"
"ತಲಾಕ್", "ತಲಾಕ್", "ತಲಾಕ್"
ಗಿಣಿಪಾಠ ಇನ್ನು-

ನಟಿಸಿ ಕಾಡುವ ಗಂಡ
ಬೆಣ್ಣೆಯಲ್ಲೂ ಕಲ್ಲು ಕಂಡ
ಮುಚ್ಚಿಟ್ಟು ಭಾವನೆ ಸತ್ಯವಾದರೂ
ಸುಳ್ಳು ಹಠಕ್ಕೇ ಜೋತು ಬಿದ್ದ ಪೆದ್ದ
ಕಿಚ್ಚು ಹತ್ತಿದರೂ ರಾತ್ರಿ
ಕಸುಬು ಮರೆತಂತಿದ್ದ. ತಿಳಿದಿದ್ದರೂ-

ಕಣ್ಣಿನ ಮುತ್ತು ಕೆನ್ನೆಗಿಳಿದಾಗ
ಕೈಗಳಿನ್ನೂ
ರೊಟ್ಟಿ ತಟ್ಟುವುದನ್ನು ನಿಲ್ಲಿಸಿರಲಿಲ್ಲ.
ದೂರದ
ಗೆಳೆಯನಿಗೂ ಕೂಗು ಕೇಳಿಸಲಿಲ್ಲ.
ಸುದ್ದಿ
ಕೇಳಿದ ಸುಳ್ಳು ಮಿಂಡ
ಸಮಾಧಾನಕ್ಕೂ ಸಂತೈಸಲಿಲ್ಲ. ಓಡಿಹೋದ.

* * *

ರಣರಣ ಬಿಸಿಲಲ್ಲಿ ಅಲೆದದ್ದು

ಯಾವ ಮಂಜಿಲ್ ಮುಟ್ಟಲೆಂದು?
ಬಾಯೊಣಗಿ ನೀರು ಬೇಡಿದರೆ
ತೊಟ್ಟು
ಹನಿಯೂ ದಕ್ಕಲಿಲ್ಲ.

ಅವಘಡದ ರಾತ್ರಿ ಕಳೆದು
ಮರುದಿನ ಮುಂಜಾನೆ ಸೂರ್ಯನೆದ್ದಾಗ ಮೂರನೆಯ ಜನುಮ

ಬ್ಬೇಡ.

ಎಲ್.ಎನ್ ಮುಕುಂದರಾಜ್

ನನ್ನದೆಂಬ ಧಾವಂತ

ದೇಶ ಕೋಶ ದಾಸವಾಳ
ಸಿಂಧು ಕಣಿವೆ ಕೈಲಾಸ ಗಿರಿಯು ನನ್ನದು.

ಹರಿಹರಿಯುವ ನೀರಕಣ
ಮೇಲೆ ನಗುವ ಬಾನಂಗಣ
ಹಸಿರು ತ್ತೊಟ್ಟ ವಣ್ಣಕಣ, ಹಾರಾಡುವ
ಹಕ್ಕಿಗಣ ಹೊಳೆ ಹೊಳೆಯುವ ಚುಕ್ಕಿಗಣ
ಎಲ್ಲ ನನ್ನದು.

ನಗೆ ಚೆಲ್ಲುವ ಮಲ್ಲಿಗೆ ಹೂ ದಳವು
ಬಗೆ ಬಗೆಯ ತೆಂಗು ತಾಳೆ, ಕಡಲ
ತಿರುವು ಕಾಡ ಹೊಳೆ
ಹೊಗೆಯುಗುಳುವ ಕಾರ್ಖಾನೆ
ಕಂಗೊಳಿಸುವ ಬೃಂದಾವನವೂ ನನ್ನದು.
ಕಿವಿಯ ಮೊರೆವ ಮೇಘದೂತ, ಕರುಳಿರಿವ ಕುರುಕ್ಷೇತ್ರ
ವ್ಯಾಸಭಾಸ ಕಾಳಿದಾಸ ಬುದ್ಧ ಬಸವ ಕನಕದಾಸ
ರಾಮಕೃಷ್ಣ ಪರಮಹಂಸ ಮಧುಕೇಶವ ನೀಲಹಂಸ
ತಾಯ ಮಡಿಲ ಮುಗುಳುನಗೆ ಕೋಟಿ ತುಟಿಯ ಮಂದಹಾಸ

ದೇಶ ಕೋಶ ದಾಸವಾಳ
ಸಿಂಧು ಕಣಿವೆ ಕೈಲಾಸ ಎಲ್ಲ ಎಲ್ಲ ಎಲ್ಲ ಎಲ್ಲ ಎಲ್ಲ ನನ್ನದು.

ಹೊಸ ಪುಸ್ತಗಳು

೧. ಕಣ್ಣುಗಳಲಿ ಕನಸು ತುಂಬಿ (ಕವನಗಳು)-೧೯೯೩
ಲೇ: ಹೇಮಾ ಪಟ್ಟಣಶೆಟ್ಟಿ
ಪ್ರ : ಅನನ್ಯ ಪ್ರಕಾಶನ, ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ, ಧಾರವಾಡ ೫೮೦ ೦೦೪
ಪುಟ: ೮೦ ಬೆಲೆ : ರೂ ೨೪/-

೨. ಸುಡುವಭೂಮಿ (ಕವನ ಸಂಕಲನ)-೧೯೯೪
ಲೇ : ಚಂದ್ರಶೇಖರ ತಾಳ್ಯ.
ಪ್ರ : ಯುವವಹಿರಿಯ ವಿದ್ಯಾರ್ಥಿಸಂಘ, ಎಂ. ಬಸವಯ್ಯ ವಸತಿ ವಿದ್ಯಾಲಯ, ಸಿರಿಗೆರೆ
ಪುಟ: ೧೧೦ ಬೆಲೆ: ರೂ. ೩೫/-

೩. ವಸುಂಧರಾ (ಕವನಗಳು)-೧೯೯೪
ಲೇ : ಮಲ್ಲು ಸಿ. ಕೊತ್ನೂರ್
ಪ್ರ : ಸಂಬಂಧ, ಮೈಸೂರು ೫೭೦ ೦೦೬
ಪುಟ : ೭೦ ಬೆಲೆ: ನಮೂದಿಸಿಲ್ಲ.

೪. ಗುಂಡಮ್ಮನ ಹಾಡು (ಗೇಯಕವನಗಳು) ೧೯೯೪
ಲೇ : ಚಂದ್ರಶೇಖರ ಪಾಟೀಲ
ಪ್ರ : ಸಂಕ್ರಮಣ ಪ್ರಕಾಶನ ಧಾರವಾಡ
ಪು. : ೮೦ ಬೆಲೆ : ರೂ. ೨೨/-

೫. ಬಸವಣ್ಣ ಮತ್ತು ಬಂಡಾಯ ಪ್ರಜ್ಞೆ-೧೯೯೩
ಲೇ : ವೈ.ಬಿ. ಹಿಮ್ಮಡಿ
ಪ್ರ : ಸಂಘರ್ಷ ಸಾಹಿತ್ಯ ಕೂಟ ರಾಯಬಾಗ

೬. ಗಂಧರ್ವಗಿರಿ (ಕವನಗಳು)-೧೯೯೪
ಲೇ : ಎಂ.ಸಿ. ಜಯಪ್ಪ
ಪ್ರ : ಪೂರ್ಣಿಮ ಪ್ರಕಾಶನ ಮುಳ್ಳೂರ, ಸಿದ್ದಿ ಅಂಚೆ ೫೭೧ ೨೩೫
ಪುಟ. ೪೦. ಬೆಲೆ: ರೂ. ೧೦/-

೭. ಎ.ಕೆ. ರಾಮಾನುಜನ್-ಹೆಜ್ಜೆಗುರುತು-೧೯೯೩
ಸಂ : ಡಿ.ವಿ. ಪ್ರಹ್ಲಾದ ಮತ್ತು ಎನ್.ಎಸ್. ಶ್ರೀಧರಮೂರ್ತಿ
ಪುಟ. ೪೮. ಬೆಲೆ: ರೂ. ೧೫/-

೮. ಕ್ರಿಯೆ ಪ್ರತಿಕ್ರಿಯೆ (ವಿಮರ್ಶೆ)-೧೯೯೨
ಲೇ : ಡಾ|| ಕೆ. ಕೇಶವಶರ್ಮ
ಪ್ರ : ಅನ್ವೇಷಣೆ ಪ್ರಕಾಶನ ಬೆಂಗಳೂರು ೫೬೦ ೦೪೦
ಪುಟ : ೧೫೬. ಬೆಲೆ : ರೂ. ೩೦/-

೯. ಪ್ರತಿಸಂಸ್ಕೃತಿ (ವಿಮರ್ಶೆ)-೧೯೯೩
ಲೇ : ಡಾ|| ರಹಮತ್ ತರೀಕೆರೆ.
ಪ್ರ : ಕನ್ನಡ ಸಂಘ ಕ್ರೈಸ್ಟ್ ಕಾಲೇಜ್ ಬೆಂಗಳೂರು-29
ಪುಟ . ೨೧೬ ಬೆಲೆ: ರೂ. ೪೫/-

೧೦. ಕಿಚ್ಚಿಲ್ಲದ ಬೇಗೆ (ಕವನಗಳು)-೧೯೯೩
ಲೇ : ಎಸ್.ಜಿ. ಸ್ವಾಮಿ
ಪ್ರ : ಅನನ್ಯ ಪ್ರಕಾಶನ, ಶ್ರೀದೇವಿನಗರ ವಿದ್ಯಾಗಿರಿ ಧಾರವಾಡ 580 004
ಪು : ೭೩ ಬೆಲೆ ರೂ. ೨೪

ಇಲ್ಲಿನ ಲೇಖಕರ ವಿಳಾಸ

○ ಟಿ.ಎಲ್. ನಾಗಭೂಷಣ ಸ್ವಾಮಿ, ಕನ್ನಡ ವಿಶ್ವ ವಿದ್ಯಾಲಯ, ಹಂಪಿ. ○ ಪ್ರೊ॥ ಕೃಷ್ಣ ರಾಯನ್, ೬, ಓಂ ಶಾಂತಿ, ೧೬ನೇ ರೋಡ್, ಸಾಂತಾಕ್ರುಝ್ ಪಶ್ಚಿಮ, ಮುಂಬಯಿ-೫೪. ○ ಎಸ್. ಮಂಜುನಾಥ, ಕೆ.ಆರ್. ನಗರ, ಮೈಸೂರು ಜಿಲ್ಲೆ. ○ ಡಾ॥ ಡಿ.ಆರ್. ನಾಗರಾಜ, ಪ್ರಾಧ್ಯಾಪಕ, ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು-೫೬. ○ ಡಾ॥ ಶಾಂತಿನಾಥ ದೇಸಾಯಿ, ಸಾವಿತ್ರಿ, ಶ್ರೀಗಾಂವಕರ್ ಸೊಸೈಟಿ, ರಾಜಾರಾಮಪುರಿ, ಕೊಲ್ಹಾಪುರ- ೪೧೬ ೦೦೮. ○ ಡಾ॥ ರಾಜೀವ ತಾರಾನಾಥ, ೧೦೮, ೩ನೇ ಕ್ರಾಸ್, ೭ನೇ ಮೇನ್, ಎರಡನೇಬ್ಲಾಕ್, ಜಯನಗರ, ಬೆಂಗಳೂರು-೧೧. ○ ಎ.ಎಸ್. ಮುಕುಂದ, ಅಸಿಸ್ಟಂಟ್ ಇಂಜಿನಿಯರ್, ನಂ. ೩, ಕೆ.ಇ.ಬಿ. ಕಾಲನಿ, ಹೊಸತಿಪ್ಪಸಂದ್ರ ಅಂಚೆ, ಬೆಂಗಳೂರು-೭೫.. ○ ಡಾ॥ ರಾಜಾರಾಮ ಹೆಗಡೆ, .ಇತಿಹಾಸ ಪ್ರಾಕ್ತನ ಶಾಸ್ತ್ರ ಪ್ರಾಧ್ಯಾಪಕರು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ, ಬಿ.ಆರ್. ಪ್ರಾಜೆಕ್ಟ್, ೫೭೭ ೧೧೫. ○ ಜಿ.ಎಸ್. ಮಲ್ಲಿಕಾರ್ಜುನಪ್ಪ, ವಾಣಿಜ್ಯಶಾಸ್ತ್ರ ಅಧ್ಯಾಪಕರು, ಸರ್ಕಾರೀ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಚಿತ್ರದುರ್ಗ. ○ ಎಂ.ಜಿ. ಎಸ್. ಶಾಸ್ತ್ರಿ,.ಪೋಸ್ಟ್ ಮಾಸ್ಟರ್, ಸಾಗರ, ಶಿವಮೊಗ್ಗ ಜಿಲ್ಲೆ. ○ ಡಾ॥ ಕೆ.ವಿ. ತಿರುಮಲೇಶ್, ಡಿಪಾರ್ಟಮೆಂಟ್ ಆಫ್ ಲಿಂಗುಯಿಸ್ಟಿಕ್ಸ್, ಸಿಐಇಎಫ್‌ಎಲ್, ಹೈದರಾಬಾದ- ೫೦೦ ೦೦೭ ○ ಡಾ॥ ಎಚ್.ಎಸ್. ವೆಂಕಟೇಶಮೂರ್ತಿ, ೨೬/೨; ೨ನೇ ಕ್ರಾಸ್ . ಸಿಂಡಿಕೇಟ ಬ್ಯಾಂಕ್ ಕಾಲನಿ, ಬನಶಂಕರಿ ೩ನೇ ಹಂತ, ಬೆಂಗಳೂರು-೮೫. ○ ಸುಬ್ರಾಯ ಚೊಕ್ಕಾಡಿ, ಸುಮನಸ ಚೊಕ್ಕಾಡಿ ಅಂಚೆ, ದ.ಕ. ಜಿಲ್ಲೆ. ○ ಜಯಂತ್ ಕಾಯ್ಕಿಣಿ,.೨-ಡಿ, ೫೭, ವೈಶಾಲಿ ನಗರ, ಬಾಲರಾಜೇಶ್ವರ ರೋಡ್ ಮುಳುಂದ (ವೆಸ್ಟ್), ಮುಂಬಯಿ- ೪೦೦ ೦೮೦. ○ ಬಿ. ಆರ್. ಲಕ್ಷ್ಮಣರಾವ್, ಮಾರುತಿ ಸ್ಟುಡಿಯೋ ಕೆ.ಆರ್. ಬಡಾವಣೆ, ಚಿಂತಾಮಣಿ ಕೋಲಾರ ಜಿಲ್ಲೆ. ೫೬೩ ೧೨೫. ○ ವೈದೇಹಿ,೪೬, ಹೀರಾಬಾಗ್ ಉಡುಪಿ - ೫೭೬ ೧೦೩. ○ ಸವಿತಾನಾಗಭೂಷಣ, ಅಂಚೆ ಅಧೀಕ್ಷಕರ ಕಚೇರಿ, ಮಡಿಕೇರಿ. ○ ಆನಂದ ಝುಂಜರವಾಡ, ಸ್ನೇಹದೀಪ, ಚಂದನಶಿವ ನಿವೇಶನಗಳು, ಆನಂದನಗರ, ಮುಧೋಳ ೫೮೭೩೧೩.○ ಚಂದ್ರಶೇಖರ ತಾಳ್ಯ, ಪಲ್ಲವಿ, ಕಾಲೇಜು ಪಕ್ಕದ ನಿವೇಶನಗಳು, ಹೊಳಲ್ಕೆರೆ, ಚಿತ್ರದುರ್ಗ ಜಿಲ್ಲೆ. ○ ಚಿಂತಾಮಣಿ ಕೊಡ್ಲೆಕೆರೆ, ಸಿ-೨-೨, ಡಬ್ಲು . ಎಂ. ಎಸ್. ಕಾಂಪೌಂಡ್, ಜಯನಗರ ೫ನೇ ಬ್ಲಾಕ್, ಬೆಂಗಳೂರು-೪೧..○ ಸರಜೂ ಕಾಟ್ಕರ್, ಕಾವ್ಯ, ಮಹಾಂತೇಶನಗರ, ಬೆಳಗಾವಿ ೫೯೦ ೦೧೬. ○ ಶಂಕರ ಕಟಗಿ, ಇಂಗ್ಲಿಷ್ ಅಧ್ಯಾಪಕರು, ಸರ್ಕಾರೀ ಪದವಿಪೂರ್ವಕಾಲೇಜು, ಗುಡಗೇರಿ, ಧಾರವಾಡ ಜಿಲ್ಲೆ. ○ ಜಿ.ಪಿ. ಬಸವರಾಜು, ಎಲ್.ಐ.ಜಿ., ೧/೮; ಇಮತ್ತು ಎಫ್ ಬ್ಲಾಕ್, ರಾಮಕೃಷ್ಣನಗರ, ಮೈಸೂರು-೨೩. ○ ಡಾ॥ ಸಿದ್ದಲಿಂಗಯ್ಯ, ಪ್ರಾಧ್ಯಾಪಕ ಕನ್ನಡ ಅಧ್ಯಯನಕೇಂದ್ರ, ಬೆಂಗಳೂರು-೫೬. ○ ಎಚ್.ಎಸ್. ಶಿವಪ್ರಕಾಶ್, ಇಂಗ್ಲಿಷ್ ಅಧ್ಯಾಪಕರು ಹೋಂಸ್ಟೈನ್ಸ್ ಕಾಲೇಜು, ಶೇಷಾದ್ರಿ ರಸ್ತೆ,

ಬೆಂಗಳೂರು-೯. ○ ಸ. ಉಷಾ, ಕನ್ನಡ ಅಧ್ಯಾಪಕಿ, ಹೊಯ್ಸಳೇಶ್ವರ ಕಾಲೇಜು, ಅರಸೀಕೆರೆ, ಹಾಸನ ಜಿಲ್ಲೆ. ○ ಪ್ರತಿಭಾನಂದಕುಮಾರ.೬೮, ಎ, ೪ನೇ ಭಾಲಕ್, (ಪಶ್ಚಿಮ) ಜಯನಗರ, ಬೆಂಗಳೂರು-೧೧. ○ ಕೆ.ಬಿ. ಸಿದ್ಧಯ್ಯ, ೧೧೧೫, ಷ್ಯೆಮರಿಶಾಲೆ ಹಿಂಭಾಗ, ಉಪ್ಪಾರಹಳ್ಳಿ, ತುಮಕೂರು- ೫೭೨ ೧೦೨. ○ ಲಕ್ಷ್ಮೀಶ್ ತೊಳ್ಪಾಡಿ, ಶಾಂತಿಗೋಡು ಅಂಚೆ, ದ.ಕ ೫೭೪ ೨೦೨. ○ ಎಚ್. ಡುಂಡಿರಾಜ,.ಮ್ಯಾನೇಜರ್, ಕಾರ್ಪೊರೇಶನ್ ಬ್ಯಾಂಕ್, ಉಡುಪಿ ೫೭೬೧೦೧. ○ ಎಲ್. ಎಸ್. ಮುಕುಂದರಾಜ್.ಕನ್ನಡ ಅಧ್ಯಾಪಕ, ಸರ್ಕಾರಿ ಪದವಿ ಪೂರ್ವ ಕಾಲೇಜು, ಕೆ.ಆರ್. ಪುರಂ ಬೆಂಗಳೂರು ○ ಹಾ.ಮ. ಕನಕ,.ನಂ. ೪೦೯ ಇನ್‌ಲ್ಯಾಕ್ಸ್ ಪಾರ್ಕ್, ಯಾರಿರೋಡ್, ವೆರ್ಸೋವಾ, ಅಂಧೇರಿ (ಪಶ್ಚಿಮ) ಮುಂಬಯಿ- ೪೦೦ ೦೬೧. ○ ಎಚ್.ಎಸ್. ಭೀಮನಗೌಡರ.,ಕುರಣಕರ ಚಾಳ, ಸಂಕೇಶ್ವರ, ಬೆಳಗಾವಿ ೫೯೧ ೩೧೩. ○ ಎಂ. ಆರ್. ಕಮಲ, ೪೦೫, ಉಮಾಶಂಕರ, ೧-ಎನ್ ಬ್ಲಾಕ್, ೧೯ ಜಿ ಮೇನ್, ರಾಜಾಜಿನಗರ, ಬೆಂಗಳೂರು-೧೦ ○ ಸ.ರಘುನಾಥ, .ಅಧ್ಯಾಪಕರು, ಗೌನಿಪಲ್ಲಿ ಶ್ರೀನಿವಾಸಪುರ ತಾಲೂಕು ಕೋಲಾರ ಜಿಲ್ಲೆ ೫೬೩ ೧೩೫. ○ ಡಾ॥ ಆರ್ಕೆ ಮಣಿಪಾಲ, ೧೧೮, ಎಂ.ಐ.ಜಿ. ಮನೆಗಳು, ಹುಡ್ಕೊ, ಮಣಿಪಾಲ ೫೭೬೧೧೯, ○ ಎಚ್. ಎಸ್. ಮುಕ್ತಾಯಕ್ಕ, ಅಧ್ಯಾಪಕರು, ಮಹಿಳಾಕಾಲೇಜು, ರಾಯಚೂರು. ○ ಹೇಮಾ ಪಟ್ಟಣಶೆಟ್ಟಿ, ಹೂಮನೆ, ಯಾಲಕ್ಕಿ ಶೆಟ್ಟರ ಕಾಂಪೌಂಡ್, ವಿದ್ಯಾಗಿರಿ, ವಿದ್ಯಾನಗರ ಧಾರವಾಡ.

ಸಂವಾದ ಪ್ರಕಾಶನ

ಮಲ್ಲಾಡಿಹಳ್ಳಿ-೫೭೭ ೫೩೧ (ಚಿತ್ರದುರ್ಗ ಜಿಲ್ಲೆ)

ನಮ್ಮ ಪ್ರಕಟಣೆಗಳು :

೧. **ನವನೀಘರೂಪಿ** (ಕನ್ನಡ ಕಾವ್ಯ ಉದ್ಯಾನದಲ್ಲಿ ಒಂದು ಸಂಚಾರ)
ಸಂ : ರಾಘವೇಂದ್ರ ಪಾಟೀಲ ಪುಟ : ೧೭೬ ಬೆಲೆ : ರೂ. ೪೮

೨ **ಮುಡಿ ಮಲ್ಲಿಗೆ** (ಕನ್ನಡ ಮಹಿಳಾ ಸಾಹಿತ್ಯ ಸ್ಪಂದನ)
ಸಂ : ಸವಿತಾ ನಾಗಭೂಷಣ ಪುಟ : ೪ + ೧೬೦ ಬೆಲೆ : ರೂ. ೩೬

೩. **ವಾಗ್ವಾದ** (ಸಾಹಿತ್ಯಿಕ-ಸಾಂಸ್ಕೃತಿಕ ಲೇಖನಗಳು)
ಲೇ : ರಾಘವೇಂದ್ರ ಪಾಟೀಲ ಪುಟ : ೪ + ೧೪೪ ಬೆಲೆ : ರೂ. ೩೩

೪. **ಮಾಸ್ತಿ ಸಾಹಿತ್ಯ : ಸಮಗ್ರ ದರ್ಶನ**
ಸಂ : ಡಿ. ಎಸ್. ನಾಗಭೂಷಣ, ರಾಘವೇಂದ್ರ ಪಾಟೀಲ. ಸ. ಉಷಾ
ಪುಟ ೮ + ೨೦೦ ಬೆಲೆ : ರೂ. ೬೦

೫. **ಚಂದ್ರನನ್ನು ಕರೆಯಿರಿ ಭೂಮಿಗೆ** (ಕವನ ಸಂಕಲನ)
ದ್ವಿತೀಯ ಮುದ್ರಣ : ೧೯೯೩
ಲೇ : ಸವಿತಾ ನಾಗಭೂಷಣ ಪುಟ : ೮೪ ಬೆಲೆ : ರೂ. ೩೦

೬. **ಅಜ್ಞಾತ ಮುಂಬೈ** (ಪ್ರವಾಸ ಕಥೆ)
ಲೇ : ರಾಘವೇಂದ್ರ ಪಾಟೀಲ ಪುಟ : ೧೦ + ೯೪ ಬೆಲೆ : ರೂ. ೧೦

೭. **ಗಮನ** (ವಿಚಾರ-ವಿಮರ್ಶೆ)
ಲೇ : ಡಿ. ಎಸ್. ನಾಗಭೂಷಣ ಪುಟ : ೮ + ೧೫೨ ಬೆಲೆ : ರೂ. ೩೩

೮. **ಕಾಡಿನ ಹುಡುಗ ಕೃಷ್ಣ** (ಶ್ರೀ ಕೃಷ್ಣ ಆಲನಹಳ್ಳಿ ನೆನಪಿನ ಸಂಪುಟ)
ಸಂ : ಡಿ. ಎಸ್. ನಾಗಭೂಷಣ, ರಾಘವೇಂದ್ರ ಪಾಟೀಲ. ಸ. ಉಷಾ
ಪುಟ : ೮ + ೧೩೦ ಬೆಲೆ : ರೂ. ೫೦

೯. **ಹೆಜ್ಜೆ ಮೂಡಿದ ಹಾದಿ** (ಕಥಾ ಸಂಕಲನ)
ಲೇ : ಬಾನು ಮುಷ್ತಾಕ್

೧೦. **ಈ ನೆಲದ ಹಾಡು** (ಕವನ ಸಂಕಲನ)
ಲೇ : ಸ. ಉಷಾ ಪುಟ : ೭ + ೫೦ ಬೆಲೆ : ರೂ. ೧೫

೧೧ **ಸಿಂಧೂ ನದಿಯ ದಂಡೆಯ ಮೇಲೆ** (ಕವನಗಳು)
ಲೇ : ಚಂದ್ರಶೇಖರ ತಾಳ್ಯ

೧೨ **ನಾ ಕವಿತಾ ಬರೆದಿಲ್ಲ** (ಕವಿತೆಗಳು)
ಲೇ : ಶಂಕರ ಪಾಟೀಲ

ಈಗೊಂದು ಅಲೆ ಇರುತ್ತೈತಿ–ಶಬ್ದದ್ದೋ. ಬೆಳಕಿನದೋ : ಎರಡು ಅಲೆಗಳ ನಡುವಿನ ಶಿಖರಗಳ ನಡುವೆ ಒಂದು ಪ್ರಪಾತ ಇರುತ್ತೈತಿ. ಒಂದು ಕಣ ಒಂದು ಶಿಖರದಿಂದ ಕೆಳಗ ಇಳೀತು ಅಂದರ ಅದು ಪ್ರಪಾತದ ತಳಮುಟ್ಟಿ ಮ್ಯಾಲಕ್ಕ ಏರಬೇಕಾಗತ್ತೈತಿ. ಇದರೊಳಗ ಇನ್ನೊಂದು ವಿಶೇಷ ಏನು ಅಂದರ, ಎಷ್ಟು ಪ್ರಯತ್ನಿಸಿದ್ರೂ ಆ ಕಣ ತಾನು ಜಾರಿದ ಶಿಖರಕ್ಕ ಬರಲಾಗದು. ಹಂಗ ಬಂತು ಅಂದರ ಆಗ ಮೂಲವಸ್ತುವೇ ನಷ್ಟವಾಗತ್ತೈತಿ. ಆ ಮೂಲ ವಸ್ತು ಬೆಳಕು ಇದ್ರ ಅದು ನಷ್ಟವಾಗಿ ಕತ್ತಲ ಆಗತ್ತೈತಿ, ಶಬ್ದ ಇದ್ರ ನಿಶ್ಯಬ್ದ ಆಗತ್ತೈತಿ. ಈ ಶಿಖರ ಮತ್ತು ಪ್ರಪಾತಗಳ ನಡುವ ಒಂದು ಸಮಪಾತಳಿ ಗೆರಿ ಇರತ್ತೈತಿ ನೋಡ್ರಿ–ಅದs ನಮಗ ಅಲೆಯ ತೀವ್ರತೆ (frequency) ಅಳತೀ ಮಾಡೋದಕ್ಕ ಸಾಕ್ಷಿಯಾಗಿ ಇರತ್ತೈತಿ.

ಕಾವ್ಯ, ಒಂದು ಅಲೆಯ ಶಿಖರ ಮತ್ತು ಪಾತ್ರಗಳನ್ನ ಅಳತೀ ಮಾಡ್ಲಿಕ್ಕೆ ಸಹಾಯ ಆಗೂ ಸಮಪಾತಳಿ ರೇಖಿ ಇದ್ದಂಗ ಇರಬೇಕು. ಒಬ್ಬ ಮನಶಾನ ಹಂತೇಕ ಪಾಶವೀ ಮತ್ತು ದೈವಿಕ ಅಂಶಗಳೆರಡೂ ಇರತಾವು. ಕಾವ್ಯಾಭ್ಯಾಸದಿಂದ ಒಬ್ಬ ಮನಶಾ ತನ್ನಲ್ಲಿರೋ ಪಾಶವೀ ಮನೋವೃತ್ತಿಗಳನ್ನು ತಿಳಕೊಂಡು ಅವುಗಳನ್ನ ಒಂದೊಂದಾಗಿ ನಿವಾರಿಸಿಕೊಂಡು ದೈವತ್ವದ ಶಿಖರದ ಪಾವಟಗೀ ಹತ್ತಲಿಕ್ಕೆ ಸಹಾಯ ಆತೂ ಅಂದರ ಆಗ ಆ ಕಾವ್ಯದ ಉದ್ದೇಶದ ಸಾಧನೆ ಆದಂಗ. ಬೆಳಕಿನತ್ತ ಹೋಗೋ ಮನಶಾ ಕತ್ತಲದಾಗ ತಡಕಾಡಿ ಬೀಳದ್ಹಾಂಗ ಕೈ ಹಿಡದು ನಡಸೂದೇ ಕಾವ್ಯದ ಗುರಿ ಆಗಬೇಕಂತ ನನಗ ಅನಸತ್ತೈತಿ....

ಡಾ॥ ದ. ರಾ. ಬೇಂದ್ರೆ
(ಸಂದರ್ಶನ ಒಂದರಲ್ಲಿ)